ಸಂಪುಟ: 67 **ಸಂಚಿಕೆ:** 142 **ಪುಟಗಳು:** 12 **ಪ್ರಧಾನ ಸಂಪಾದಕ:** ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸಿಯಾಚಿನ್‌ಗೆ ರಾಷ್ಟ್ರಪತಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ವಿಶ್ವದ ಅತ್ಯಂತ ಎತ್ತರದ ಸಮರ ನೆಲೆಯಾದ ಸಿಯಾಚಿನ್ ಬೇಸ್ ಕ್ಯಾಂಪ್‌ಗೆ ಭೇಟಿ ಸೈನಿಕರು ಮತ್ತು ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು. ಕಲಾಂ ಮತ್ತು ರಾಮನಾಥ್ ಕೋವಿಂದ್ ಬಳಿಕ ಇಲ್ಲಿಗೆ ಭೇಟಿ ನೀಡಿದ ಮೂರನೇ ರಾಷ್ಟ್ರಪತಿ ಎಂಬ ಹೆಗ್ಗಳಿಕೆ ಮುರ್ಮು ಅವರದ್ದಾಗಿದೆ.

ಪುಟ ತೆರೆದಂತೆ...

ಮನೆ ಮಂತ್ರಾಲಯವಾದರಷ್ಟೇ ಮನ ದೇವಾಲಯವಾದೀತು

ಶಿಶಿರಕಾಲ
ಶಿಶಿರ್ ಹೆಗಡೆ

ಸಂ.ಪುಟ | 6

ಗಡ್ಡೆ ಗೆಣಸುಗಳ ನಾಡಿನಲ್ಲಿ ಒಂದು ಸುತ್ತು

ಶಶಾಂಕಣ
ಶಶಿಧರ ಹಾಲಾಡಿ

ಸಂ.ಗಮ | 7

ಮಾತಂದ್ರೆ ಮಾತು

ದೇಶದಲ್ಲಿ ಉದ್ಯೋಗ ವ್ಯವಸ್ಥೆಯನ್ನು ಪ್ರಧಾನಿ ನರೇಂದ್ರ ಮೋದಿ ವ್ಯವಸ್ಥಿತವಾಗಿ ಕಿತ್ತುಹಾಕುತ್ತಿದ್ದಾರೆ. ಜಾತಿಗಣತಿ ವಿಷಯದಲ್ಲಿ ಬಿಜೆಪಿ ಜನರನ್ನು ಎತ್ತಿಕಟ್ಟಿದ್ದು, ಹರ್ಯಾಣ ರಾಜ್ಯವನ್ನು ಹಾಳುಮಾಡಿದೆ. ರಾಜ್ಯದಲ್ಲಿ ಉದ್ಯೋಗಾವಕಾಶ ಸಿಗದ ಕಾರಣ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಯುವಕರು ಕಷ್ಟಪಟ್ಟು ಅಮೆರಿಕ ಹಾಗೂ ಇತರ ದೇಶಗಳಿಗೆ ಹೋಗುವಂತಾಗಿದೆ.

ರಾಹುಲ್ ಗಾಂಧಿ
ಪ್ರತಿಪಕ್ಷ ನಾಯಕ

ದಾರಿದೀಪೋಕ್ತಿ

ನೀವು ಮಾಡುವ ಕೆಲಸ ನಿಮ್ಮಲ್ಲಿ ಅಪರಾಧಿ ಭಾವ ಮೂಡಿಸದಿದ್ದರೆ ಅಥವಾ ನಿಮಗೆ ಸಂಪೂರ್ಣ ನೆಮ್ಮದಿ ನೀಡಿದರೆ, ಆ ಕೆಲಸವನ್ನು ಮಾಡಲು ಬೇರೆಯವರ ಸಲಹೆ, ಅಭಿಪ್ರಾಯ ಕೇಳಬೇಕಿಲ್ಲ. ಅದನ್ನು ಧೈರ್ಯದಿಂದ ಮಾಡಲು ಮುಂದಾಗಬಹುದು.

ವಕ್ರತುಂಡೋಕ್ತಿ

ವಾರದ ಎಲ್ಲ ಏಳೂ ದಿನಗಳೂ ವೀಕೆಂಡ್ ಥರ ಭಾವನೆ ಮೂಡಬೇಕೆಂದು ಬಯಸಿದರೆ ನೀವು ನಿವೃತ್ತರಾಗಬಹುದು.

ರಾಜ್ಯಪಾಲರ ಸರಣಿ ಪತ್ರಕ್ಕೆ ಸರಕಾರ ತಿರುಗೇಟು, ಸಿಎಸ್ ಉತ್ತರಕ್ಕೆ ಸಂಪುಟದ ಅನುಮತಿ ಕಡ್ಡಾಯ

ಗವರ್ನರ್‌ಗೆ ಸ್ಪೀಡ್ ಬ್ರೇಕ್

ಸರಕಾರ-ರಾಜ್ಯಪಾಲರ ನಡುವಿನ ಸಂಘರ್ಷ ಮತ್ತೊಂದು ಹಂತಕ್ಕೆ

ಬೆಂಗಳೂರು: ರಾಜಭವನ ಹಾಗೂ ಸರಕಾರದ ನಡುವಿನ ತಿಕ್ಕಾಟ ಇದೀಗ ಮತ್ತೊಂದು ಹಂತಕ್ಕೆ ತಲುಪಿದ್ದು, ರಾಜ್ಯಪಾಲರು ಯಾವುದೇ ಸ್ಪಷ್ಟೀಕರಣ ಕೇಳಿ ಪತ್ರ ಬರೆದರೂ, ಮುಖ್ಯ ಕಾರ್ಯದರ್ಶಿ ಸಚಿವ ಸಂಪುಟದ ಒಪ್ಪಿಗೆ ಇಲ್ಲದೇ ಉತ್ತರಿಸುವಂತಿಲ್ಲ ಎನ್ನುವ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಇತ್ತೀಚಿನ ದಿನದಲ್ಲಿ ಸರಕಾರದ ದೈನಂದಿನ ಪ್ರಕ್ರಿಯೆಗಳಲ್ಲಿಯೂ ರಾಜ್ಯಪಾಲರು ಹಸ್ತ ಕ್ಷೇಪ ಮಾಡುತ್ತಿದ್ದಾರೆ. ಪ್ರತಿಯೊಂದಕ್ಕೂ ಸ್ಪಷ್ಟನೆ ನೀಡುವಂತೆ ಮುಖ್ಯಕಾರ್ಯದರ್ಶಿ ಹಾಗೂ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಗಳಿಗೆ ಪತ್ರ ಬರೆಯುತ್ತಿದ್ದಾರೆ. ಈ ರೀತಿ ಪದೇ ಪದೆ ಪತ್ರ ಬರೆದರೆ ಸರಕಾರಕ್ಕೆ ಭಾರಿ ಸಮಸ್ಯೆಯಾಗುತ್ತ ದೆಂಬ ಅಸಮಾಧಾನವನ್ನು ಹಲವು ಹಿರಿಯ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಂದೆ ವ್ಯಕ್ತಪಡಿಸಿದ್ದರು. ಕಳೆದ ಎರಡು ತಿಂಗಳ ಅವಧಿಯಲ್ಲಿಯೇ ವಿಧೇಯಕಗಳಿಗೆ ಕೇಳಿರುವ ಸ್ಪಷ್ಟೀಕರಣ ಹೊರತುಪಡಿಸಿ ಎಂಟತ್ತು ಪತ್ರಗಳನ್ನು ರಾಜ್ಯಪಾಲರು ಸಿಎಸ್‌ಗೆ ಬರೆದಿ ದ್ದಾರೆ ಎನ್ನಲಾಗಿದೆ. ಆದ್ದರಿಂದ ರಾಜ್ಯಪಾಲರ 'ಮಧ್ಯಪ್ರವೇಶ'ಕ್ಕೆ ತಡೆವೊಡ್ಡಬೇಕು ಎಂದು ಹಲವು ಸಚಿವರು ಒತ್ತಡ ಹೇರಿದ್ದರು. ಇದರ ಭಾಗವಾಗಿ ಗುರು ವಾರದ ಸಂಪುಟ ಸಭೆಯಲ್ಲಿ, ಇನ್ನು ಮುಂದೆ ರಾಜ್ಯಪಾಲರ ಯಾವುದೇ ಪತ್ರಕ್ಕೆ ಉತ್ತರಿಸುವ ಮೊದಲು ಸಚಿವ ಸಂಪುಟದಲ್ಲಿ ಅನುಮೋದನೆ ಪಡೆಯಬೇಕು ಎನ್ನುವ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಸಂಪುಟದ ಗಮನಕ್ಕೆ ತಂದೇ ಉತ್ತರಿಸಿ

ಈ ಬಗ್ಗೆ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್, ರಾಜ್ಯಪಾಲರ ಕಚೇರಿಯಿಂದ ಸರಕಾರದ ಮುಖ್ಯ ಕಾರ್ಯದರ್ಶಿ ಅಥವಾ ಸರಕಾರದ ಯಾವುದೇ ಅಧಿಕಾರಿಗೆ ಸ್ವೀಕೃತ ವಾಗುವ ಪತ್ರಗಳ ವಿಲೇವಾರಿ ಕೈಗೊಳ್ಳುವ ಮುನ್ನ ಸಚಿವ ಸಂಪುಟದ ಗಮನಕ್ಕೆ ತರಬೇಕು. ನಂತರ ಮುಖ್ಯ ಕಾರ್ಯದರ್ಶಿಯವರು ರಾಜಭವನಕ್ಕೆ ಉತ್ತರಿಸಬೇಕು ಎಂದು ತೀರ್ಮಾ ನಿಸಲಾಗಿದೆ ಎಂದರು.

ಮುಂದಿನ ದಿನದಲ್ಲಿ ಅಗತ್ಯವಿದ್ದರಷ್ಟೇ ಉತ್ತರಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ರಾಜ್ಯಪಾಲರು ಅಸಹನೆಯ ರೀತಿ ಯಲ್ಲಿ ಪತ್ರ ಬರೆಯುತ್ತಿದ್ದಾರೆ. → 4

- 2 ತಿಂಗಳಲ್ಲಿ 8-10 ಸ್ಪಷ್ಟನೆ ಕೇಳಿದ ಗವರ್ನರ್
- ಮುಖ್ಯಕಾರ್ಯದರ್ಶಿ, ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಪತ್ರ
- ಹಲವು ವಿಧೇಯಕಗಳ ಬಗ್ಗೆ ಮಾಹಿತಿ ಕೇಳಿರುವ ಅಧಿಕಾರಿಗಳು

ಇತರೆ ತೀರ್ಮಾನಗಳು

- ಎಂಎಲ್‌ಸಿ ನಾಮನಿರ್ದೇಶನ ಸಿಎಂಗೆ ಅಧಿಕಾರ
- ಬಿಎಂಟಿಸಿಯಿಂದ 30 ಕೋಟಿ ರು. ವೆಚ್ಚದಲ್ಲಿ 76 ಎಲೆಕ್ಟ್ರಿಕ್ ಬಸ್ ಖರೀದಿ
- 189 ಸರಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಮತ್ತು ಇಂಟರ್‌ನೆಟ್ ಸೌಲಭ್ಯ

ಸಂಘರ್ಷಕ್ಕೆ ಮುನ್ನ ಪತ್ರಕ್ಕೆ ತಡೆ

ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳದಲ್ಲಿ ಈಗಾಗಲೇ ರಾಜ್ಯಪಾಲರು ಹಾಗೂ ರಾಜಭವನದ ನಡುವೆ ಬಹುದೊಡ್ಡ ಪ್ರಮಾಣದಲ್ಲಿ ಸಂಘರ್ಷ ಆರಂಭವಾಗಿದೆ. ಕರ್ನಾಟಕದಲ್ಲಿಯೂ ಇದೀಗ ಶುರುವಾಗುವುದು ಮುನ್ಸೂಚನೆ ಸಿಕ್ಕಿದೆ. ಆದ್ದರಿಂದ ಆರಂಭಿಕ ಹಂತದಲ್ಲಿಯೇ ಈ ಪತ್ರ ವ್ಯವಹಾರಗಳಿಗೆ ತಡೆಹಾಕುವ ಉದ್ದೇಶದಿಂದ ರಾಜ್ಯ ಸರಕಾರ ಈ ತೀರ್ಮಾನ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ.



ಯಾವುದೇ ಮಾಹಿತಿ ಮುಚ್ಚಿಡಬೇಕು ಎನ್ನುವ ಉದ್ದೇಶ ರಾಜ್ಯ ಸರಕಾರಕ್ಕಿಲ್ಲ. ಆದರೆ ರಾಜ್ಯಪಾಲರು ಮೇಲಿಂದ ಮೇಲೆ ಅಸಹನೆ ವರ್ತನೆಯಲ್ಲಿ ಪತ್ರ ಬರೆಯುತ್ತಿದ್ದಾರೆ. ಮಾಹಿತಿಯನ್ನು ತಕ್ಷಣ ಕಳಿಸಬೇಕು ಎಂದು ಸೂಚನೆ ಕೊಡುತ್ತಿದ್ದಾರೆ. ಹೀಗಾಗಿ ನಿಯಮಾವಳಿ ಪರಿಶೀಲಿಸಿ, ಉತ್ತರಿಸುವ ಮೊದಲು ಸಂಪುಟದ ಒಪ್ಪಿಗೆ ಪಡೆಯಬೇಕು ಎನ್ನುವ ನಿರ್ಣಯ ಕೈಗೊಳ್ಳಲಾಗಿದೆ.

– **ಎಚ್.ಕೆ. ಪಾಟೀಲ್,** ಕಾನೂನು - ಸಂಸದೀಯ ವ್ಯವಹಾರಗಳ ಸಚಿವ

ಕಸ್ತೂರಿ ರಂಗನ್ ವರದಿಗೆ ತಿರಸ್ಕಾರ

ರಾಷ್ಟ್ರ ಮಟ್ಟದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಕಸ್ತೂರಿ ರಂಗನ್ ವರದಿ ಯನ್ನು ಸಾರಸಗಟಾಗಿ ತಿರಸ್ಕರಿಸುವ ಮಹತ್ವದ ತೀರ್ಮಾನವನ್ನು ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರಕಾರ ಕೈಗೊಂಡಿದೆ. ಡಾ. ಕೆ. ಕಸ್ತೂರಿ ರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯನಿರತ ತಂಡ ನೀಡಿರುವ ವರದಿಯನ್ನು ಆಧರಿಸಿ ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಸಂಬಂಧ ಪ್ರದೇಶಗಳೆಂದು ಕೇಂದ್ರ ಹೊರಡಿಸಿರುವ ಕರಡು ಅಧಿಸೂಚನೆಗೆ ಕರ್ನಾಟಕ ಸರಕಾರದ ಅಭಿಪ್ರಾಯ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದು, ಕಸ್ತೂರಿ ರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ನಿರ್ಧರಿಸಲಾಗಿದೆ.

ರಾಜಭವನದಿಂದ ಮಾಹಿತಿ ಸೋರಿಕೆ?

ತಾವು ಸರಕಾರಕ್ಕೆ ಬರೆದ ಪತ್ರದ ಮಾಹಿತಿ ಸೋರಿಕೆಯಾಗಿದೆ ಎಂದು ರಾಜ್ಯಪಾಲರು ಇತ್ತೀಚೆಗೆ ದೂರಿದ್ದರು. ಇದಕ್ಕೆ ಸ್ಪಷ್ಟನೆ ನೀಡಿರುವ ಎಚ್.ಕೆ. ಪಾಟೀಲ್ ಅವರು, 2024ರ ಸೆಪ್ಟೆಂಬರ್ ಆರರಂದು ಡಿಜಿ ಮಟ್ಟದ ಅಧಿಕಾರಿ ರಾಜಭವನ ಕಚೇರಿಗೆ ಪತ್ರ ಬರೆದಿದ್ದಾರೆ. ರಾಜಭವನ ಕಾರ್ಯದರ್ಶಿ ಕಚೇರಿಯಿಂದ ಮಾಧ್ಯಮಗಳಿಗೆ ಸೋರಿಕೆ ಆಗಿರುವುದು ತನಿಖೆಯಿಂದ ತಿಳಿದು ಬಂದಿದೆ. ರಾಜಭವನಕ್ಕೆ ಈ ಬಗ್ಗೆ ಮಾಹಿತಿ ನೀಡಲಾಗಿದೆ ಎಂದರು.

ಮುಕ್ತ ತನಿಖೆಗೆ ನೀಡಿದ್ದ ಅನುಮತಿ ವಾಪಸ್

ಸಿಬಿಐಗೆ ಮೂಗುದಾರ

ಬೆಂಗಳೂರು: ಮುಡಾ ಪ್ರಕರಣದಲ್ಲಿ ಸಿಬಿಐ ಮಧ್ಯಪ್ರವೇಶಿಸುವ ಮಾತುಗಳು ಕೇಳಿಬರುತ್ತಿರುವ ಬೆನ್ನಲ್ಲೇ ಸಚಿವ ಸಂಪುಟ ಮಹತ್ವದ ತೀರ್ಮಾನ ಕೈಗೊಂಡಿದೆ. 'ಸಂಪುಟದ ಅನುಮತಿಯಿಲ್ಲದೇ, ಸ್ವಯಂಪ್ರೇರಿತ'ವಾಗಿ ಸಿಬಿಐ ತನಿಖೆ ಆರಂಭಿಸುವಂತಿಲ್ಲ ಎನ್ನುವ ತೀರ್ಮಾನ ಕೈಗೊಳ್ಳಲಾಗಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯಪಾಲರ ಸ್ಪಷ್ಟನೆಗಳಿಗೆ ಉತ್ತರ ನೀಡುವುದಕ್ಕೆ ಸಂಪುಟ ಕಡ್ಡಾಯದೊಂದಿಗೆ ಈ ಮಹತ್ವದ ತೀರ್ಮಾನವನ್ನು ಕೈಗೊಂಡಿದೆ. ಪ್ರಮುಖವಾಗಿ ಭವಿಷ್ಯದಲ್ಲಿ ಮುಡಾ ನಿವೇಶನ ಹಂಚಿಕೆ ಪ್ರಕರಣ ಹಾಗೂ ವಾಲ್ಮೀಕಿ ನಿಗಮದ ಅವ್ಯವಹಾರವನ್ನು ಮುಂದಿಟ್ಟುಕೊಂಡು ಸಿಬಿಐ ತನಿಖೆ ನಡೆಸಲು ಮುಂದಾದರೆ ಎಂಬ ಲೆಕ್ಕಾಚಾರದಲ್ಲಿ ಮಹತ್ವದ ನಿರ್ಧಾರಕ್ಕೆ ಬರಲಾಗಿದೆ. ಈ ಮೂಲಕ ಮುಂದಿನ ದಿನದಲ್ಲಿ ಕರ್ನಾಟಕದಲ್ಲಿ ಯಾವುದೇ ತನಿಖೆಯನ್ನು ಸಿಬಿಐ ಕೈಗೆತ್ತಿಕೊಳ್ಳಬೇಕಾದರೂ, ಸಂಪುಟ ಸಭೆಯ ಅನುಮತಿ ಕಡ್ಡಾಯವಾಗಲಿದೆ.

ಈ ಹಿಂದೆ ರಾಜ್ಯದಲ್ಲಿ ಅಪರಾಧ ಪ್ರಕರಣದ ತನಿಖೆ ನಡೆಸಲು ಸಿಬಿಐಗೆ ಮುಕ್ತ ಅವಕಾಶ ನೀಡುವ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಆದರೆ ಇದೀಗ ವಾಪಸ್ ಪಡೆಯಲಾಗಿದೆ. ಸಿಬಿಐ ಅಥವಾ ಕೇಂದ್ರ ಸರಕಾರ ಕಾನೂನಾತ್ಮಕವಾಗಿ ನಡೆದುಕೊಳ್ಳುತ್ತಿಲ್ಲ, ಆದ್ದರಿಂದ ಅಧಿಸೂಚನೆಯನ್ನು ಹಿಂಪಡೆಯಲಾಗಿದೆ ಎಂದು ಹೇಳಲಾಗಿದೆ. → 4

ಸಚಿವ ಸಂಪುಟದ ಅನುಮತಿ ಕಡ್ಡಾಯ

- ಕರ್ನಾಟಕದಲ್ಲಿ ಯಾವುದೇ ಪ್ರಕರಣವನ್ನು ತನಿಖೆ ನಡೆಸಬೇಕು ಎಂದರೂ ರಾಜ್ಯ ಸರಕಾರ (ಸಚಿವ ಸಂಪುಟ)ದ ಅನುಮತಿ ಕಡ್ಡಾಯ
- ಪ್ರತಿ ಪ್ರಕರಣದ ಅರ್ಹತೆ ಆಧಾರದಲ್ಲಿ ತನಿಖೆ ನಡೆಸಲು ಸಿಬಿಐ ತನಿಖಾ ಸಂಸ್ಥೆಗೆ ಅನುಮತಿ ನೀಡಲು ಸಂಪುಟ ಪರಿಶೀಲನೆ.
- ಕೋರ್ಟ್ ನಿರ್ದೇಶನದಂತೆ ಸಿಬಿಐ ತನಿಖೆ ಆರಂಭವಾದರೆ ಸರಕಾರದ ಅನುಮತಿ ಅಗತ್ಯವಿಲ್ಲ.

ಹಿಂಪಡೆಯಲು ಕಾರಣಗಳೇನು?

- ರಾಜಕೀಯ ವಿರೋಧಿಗಳನ್ನು ಹೆದರಿಸಲು ಸಿಬಿಐ ದುರ್ಬಳಕೆ
- ಸಿಬಿಐಗೆ ನೀಡಿರುವ ಅನೇಕ ಪ್ರಕರಣಗಳಲ್ಲಿ ವರ್ಷ ಕಳೆದರೂ ಕ್ರಮವಿಲ್ಲ
- ಸಿಬಿಐ ಪೂರ್ವಗ್ರಹಪೀಡಿತವಾಗಿ ಕೆಲಸ ಮಾಡುತ್ತಿದೆ
- ಕೇಂದ್ರ ತನಿಖಾ ಸಂಸ್ಥೆ ತಪ್ಪುದಾರಿ ಹಿಡಿಯುವುದನ್ನು ತಪ್ಪಿಸಲು ಈ ಕ್ರಮ

ಜಗನ್ ತಿರುಮಲ ಭೇಟಿ ಷರತ್ತು ವಿಧಿಸಿದ ಟಿಡಿಪಿ

ಅಮರಾವತಿ: ತಿರುಪತಿ ಕಳಪೆ ಲಡ್ಡು ವಿಚಾರವಾಗಿ ವೈಸ್‌ಆರ್‌ಸಿಪಿ ಮತ್ತು ಟಿಡಿಪಿ ನಡುವೆ ಜಟಾಪಟಿ ಜೋರಾಗಿದೆ. ಚಂದ್ರಬಾಬು ನಾಯ್ಡು ಸುಳ್ಳು ಆರೋಪ ಮಾಡಿ ದೇಗುಲದ ಪಾವಿತ್ರ್ಯ ಹಾಳುಮಾಡಿದ್ದು, ಪ್ರಾಯಶ್ಚಿತ್ತಕ್ಕಾಗಿ ಸೆ. 28ರಂದು ಎಲ್ಲ ದೇವಾಲಯಗಳಲ್ಲಿ ಪೂಜೆ ಸಲ್ಲಿಸುವಂತೆ ಆಂಧ್ರ ಮಾಜಿ ಸಿಎಂ ಜಗನ್ಮೋಹನ ರೆಡ್ಡಿ ಕರೆ ನೀಡಿದ್ದಾರೆ. ತಿರುಮಲಕ್ಕೆ ಭೇಟಿ ನೀಡುವುದಾಗಿ ಪ್ರಕಟಿಸಿದ್ದಾರೆ. ಆದರೆ, ಕ್ರೈಸ್ತರಾಗಿರುವ ನೀವು ಹಿಂದೂ ಧರ್ಮದ ನಂಬಿಕೆ ಕುರಿತಂತೆ ಘೋಷಣಾ ಪತ್ರಕ್ಕೆ ಸಹಿಹಾಕಬೇಕೆಂದು ಟಿಡಿಪಿ ಷರತ್ತು ವಿಧಿಸಿದೆ.

ಮಕ್ಕಳೊಂದಿಗೆ ಕೆರೆಗೆ ಹಾರಿ ತಾಯಿ ಆತ್ಮಹತ್ಯೆ

ಮಧುಗಿರಿ: ಸಂಸಾರದ ಕಲಹದಿಂದ ಬೇಸತ್ತು ತಾಯಿ ತನ್ನ ಇಬ್ಬರು ಮಕ್ಕಳೊಂದಿಗೆ ಮಧುಗಿರಿ ತಾಲೂಕಿನ ಸಿದ್ದಾಪುರ ಕೆರೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಗುರುವಾರ ಮಧ್ಯಾಹ್ನ ನಡೆದಿದೆ. ಮಧುಗಿರಿಯ ಮೊಹಮ್ಮದ್ ಶಫೀಕ್ ಪಾಷಾ ಪತ್ನಿ ಹಸೀನಾ(26), ಮಕ್ಕಳಾದ ಅಲ್ಫಿಯಾ ಕೊನೆನ್ (04) ಹಾಗೂ ಆಫಿಯಾ ಕೊನೆನ್ (08) ಮೃತರು. ಶಾಲಾ ಸಮವಸ್ತ್ರದಲ್ಲೇ ಇರುವ ಮಕ್ಕಳ ಶವಗಳನ್ನು ಪೊಲೀಸ್ ಸಿಬ್ಬಂದಿ ಹೊರ ತೆಗೆದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಗುಣಮಟ್ಟದ ಪರೀಕ್ಷೆಯಲ್ಲಿ ಪ್ಯಾರಸೆಟಮಾಲ್ ಸೇರಿ ಹಲವು ಔಷಧಿಗಳು ವಿಫಲ

ಸುದ್ದಿ



ಕ್ವಿನ್ ಸಿಟಿ ಯೋಜನೆಗೆ ಸಿಎಂ, ಡಿಸಿಎಂ ಚಾಲನೆ

ಬೆಂಗಳೂರಿನ ಹೊರವಲಯದಲ್ಲಿ ಕ್ವಿನ್ ಸಿಟಿ ಯೋಜನೆಯ ಮೊದಲ ಹಂತದ ಉದ್ಘಾಟನೆ ವೇಳೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತ ಸಮಾಲೋಚನೆ.

ಬೆಂಗಳೂರು: ರಾಜ್ಯದ ಹೆಗ್ಗುರುತಾಗಲಿರುವ ಮಹತ್ವಾಕಾಂಕ್ಷಿ ಕ್ವಿನ್ ಸಿಟಿ ಯೋಜನೆಯ ಮೊದಲ ಹಂತಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ. ಈ ಯೋಜನೆ ಯಿಂದ 40 ಸಾವಿರ ಕೋಟಿ ಹೂಡಿಕೆ ಹಾಗೂ ಒಂದು ಲಕ್ಷ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆಯಿದೆ. 40 ಸಾವಿರ ಕೋಟಿ ರು. ವೆಚ್ಚದಲ್ಲಿ ಜ್ಞಾನ, ಆರೋಗ್ಯ ಮತ್ತು ಸಂಶೋಧನೆ (Knowledge, Wellbeing, and Innovation City) ಯನ್ನು ಸಮಗ್ರವಾಗಿ ಸಂಯೋಜಿಸಲಿರುವ ಈ ನಗರ ದಾಬಸ್‌ಪೇಟೆ ಮತ್ತು ದೊಡ್ಡಬಳ್ಳಾಪುರ ಮಧ್ಯೆ ಅಸ್ತಿತ್ವಕ್ಕೆ ಬರಲಿದೆ. ಈ ನಗರದಲ್ಲಿ ವಿಶ್ವದರ್ಜೆಯ ಶಿಕ್ಷಣ ಸಂಸ್ಥೆಗಳು, ಆಧುನಿಕ ಆರೋಗ್ಯ ಸೇವಾ ಸೌಲಭ್ಯ, ಅತ್ಯಾಧುನಿಕ ಸಂಶೋಧನಾ ಕೇಂದ್ರಗಳು, ನವೋದ್ಯಮಗಳು ತಲೆಎತ್ತಲಿದೆ. ವಿವರಪುಟ → 3

ಬಿಹಾರದಲ್ಲಿ ದೀರ್ಘಾಯುಷ್ಯಕ್ಕಾಗಿ ಪುತ್ರಿಕಾ ಸ್ನಾನ, ಸರಣಿ ಸಾವು

ಪವಿತ್ರಸ್ನಾನಕ್ಕಿಳಿದ 46 ಜನ ನೀರುಪಾಲು

ಪಟನಾ: ಮಕ್ಕಳ ದೀರ್ಘಾಯುಷ್ಯಕ್ಕಾಗಿ ತಾಯಂದಿರು ಮಾಡುವ ಜೀವಿತಾ ಪುತ್ರಿಕಾ ವ್ರತದ ಸಂದರ್ಭ ಸಾಮೂಹಿಕ ಪುಣ್ಯಸ್ನಾನಕ್ಕೆಂದು ನೀರಿಗಿಳಿದ ವೇಳೆ ರಾಜ್ಯದ ಬೇರೆ ಬೇರೆ ಕಡೆ 46 ಮಂದಿ ನೀರುಪಾಲಾದ ಹೃದಯ ವಿದ್ರಾವಕ ಘಟನೆ ಘಟನೆ ಬಿಹಾರದಲ್ಲಿ ನಡೆದಿದೆ.

ಬಿಹಾರ, ಜಾರ್ಖಂಡ್‌ನಾದ್ಯಂತ ಈ ಜೀವಿತ ಪುತ್ರಿಕಾ ವಿಶೇಷ ಆಚರಣೆ ಬುಧವಾರ ನಡೆದಿತ್ತು. ಅಪಾಯವನ್ನೂ ಲೆಕ್ಕಕ್ಕಿಡದೇ ಪವಿತ್ರಸ್ನಾನಕ್ಕಾಗಿ ಗಂಗಾ ನದಿಗಿಳಿದವರಲ್ಲಿ 37 ಮಕ್ಕಳು ಮತ್ತು ಆರು ತಾಯಂದಿರು ಬಿಹಾರದ ವಿವಿಧೆಡೆ ನೀರುಪಾಲಾಗಿದ್ದಾರೆ. 15 ಜಿಲ್ಲೆಗಳಲ್ಲಿ ದುರಂತಗಳ ಸರಮಾಲೆ ಸಂಭವಿಸಿದ್ದು, ರಾಜ್ಯದ ಪಾಲಿಗೆ ಕರಾಳದಿನವಾಗಿ ಮಾರ್ಪಟ್ಟಿದೆ. ಔರಂಗಾಬಾದ್ ಜಿಲ್ಲೆಯೊಂದರಲ್ಲೇ ಕೆರೆಗೆ ಸ್ನಾನಕ್ಕಿಳಿದ 6 ಬಾಲಕಿಯರು ಸೇರಿ 8 ಮಂದಿ ನೀರುಪಾಲಾಗಿದ್ದಾರೆ. ಕೈಮೂರ್ ಪ್ರದೇಶದಲ್ಲಿ ನದಿಸ್ನಾನಕ್ಕೆ ತೆರಳಿದ್ದ ಐವರು ಸಾವನ್ನಪ್ಪಿದ್ದಾರೆ. ಸರನ್ ಜಿಲ್ಲೆಯಲ್ಲಿ ಕುಟುಂಬದವರ ಜತೆ ನದಿಗಿಳಿದ 3 ಮಕ್ಕಳು ನೀರಿನಲ್ಲಿ ಮುಳುಗಿದ್ದಾರೆ. ಮೋತಿಹಾರಿಯಲ್ಲಿ ಐವರು, ಬಿಹ್ಟಾ ಪ್ರದೇಶದಲ್ಲಿ ಮುಳುಗುತ್ತಿದ್ದ ಬಾಲಕಿ ರಕ್ಷಣೆಗೆ ಹೋದ ಜಲಸಮಾಧಿಯಾಗಿದ್ದಾರೆ. ನಾಪತ್ತೆಯಾಗಿರುವವರಿಗಾಗಿ ಶೋಧನೆ ಮುಂದುವರಿದಿದೆ..

ಸಿಎಂ ಸಂತಾಪ : ಈ ದುರಂತದ ಬಗ್ಗೆ ಬಿಹಾರ ಸಿಎಂ ನಿತೀಶ್ ಕುಮಾರ್ ಸಂತಾಪ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ತಲಾ ನಾಲ್ಕು ಲಕ್ಷ ರು. ಪರಿಹಾರ ಪ್ರಕಟಿಸಿದ್ದಾರೆ.

ಹಿಜ್ಬುಲ್ಲಾ ಸರ್ವನಾಶವೇ ಗುರಿ ಎಂದ ನೆತನ್ಯಾಹು

ಕದನ ವಿರಾಮಕ್ಕೆ ನಕಾರ : ಇಸ್ರೇಲ್ ದಾಳಿ ತೀವ್ರ

ಜೆರುಸಲೇಮ್ : ಫ್ರಾನ್ಸ್, ಅಮೆರಿಕ ಸೇರಿ ಹಲವು ರಾಷ್ಟ್ರಗಳ ಒತ್ತಡದ ನಡುವೆಯೂ ಲೆಬನಾನ್ ಮೇಲೆ ದಾಳಿ ನಿಲ್ಲಿಸಲು ಇಸ್ರೇಲ್ ನಿರಾಕರಿಸಿದೆ. ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವೆ 21 ದಿನಗಳ ಕದನ ವಿರಾಮಕ್ಕೆ ಜಾಗತಿಕ ರಾಷ್ಟ್ರಗಳು ಕರೆ ನೀಡಿವೆ. ಆದರೆ ಇಸ್ರೇಲ್ , ದಾಳಿ ನಿಲ್ಲಿಸಲು ಸಾಧ್ಯವೇ ಇಲ್ಲ ಎಂದು ಸ್ಪಷ್ಟಪಡಿಸಿದೆ. ಇನ್ನೊಂದೆಡೆ ಲೆಬನಾನ್ ಕದನ ವಿರಾಮ ಪ್ರಸ್ತಾಪ ಸ್ವಾಗತಿಸಿದೆ. ಇರಾನ್ ಬೆಂಬಲಿತ ಹಿಜ್ಬುಲ್ಲಾ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. → 4

ರಾಕೆಟ್ ದಾಳಿ ತೀವ್ರ

ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ಸಂಘರ್ಷದಲ್ಲಿ ರಾತ್ರಿ ಹಗಲೆನ್ನದೇ ರಾಕೆಟ್ ದಾಳಿಗಳು ನಡೆಯುತ್ತಿವೆ. ಲೆಬನಾನ್ ದಕ್ಷಿಣ ಮತ್ತು ಬೈರೂತ್‌ನಲ್ಲಿ ಹಿಜ್ಬುಲ್ಲಾ ಕಮಾಂಡರ್‌ಗಳ ನೆಲೆಗಳ ಮೇಲೆ ಇಸ್ರೇಲ್ ಟಾರ್ಗೆಟ್ ದಾಳಿ ನಡೆಸುತ್ತಿದೆ. ಲೆಬನಾನ್‌ನಲ್ಲಿ ಸಾವಿನ ಸಂಖ್ಯೆ 650ಕ್ಕೂ ಅಧಿಕ ಎಂದು ವರದಿಯಾಗಿದೆ.

ಅಮೆರಿಕದಲ್ಲಿ ಮತ್ತೊಂದು ಹಿಂದೂ ಮಂದಿರ ಅಪವಿತ್ರ

ಕ್ಯಾಲಿಫೋರ್ನಿಯ: ಅಮೆರಿಕದ ಕ್ಯಾಲಿಫೋರ್ನಿಯದಲ್ಲಿನ ಸ್ಯಾಕ್ರಮೆಂಟೊ ಪ್ರದೇಶದ ಬಿಎಪಿಎಸ್ ಸ್ವಾಮಿ ನಾರಾಯಣ ಮಂದಿರವನ್ನು ಕಿಡಿಗೇಡಿಗಳು ಬುಧವಾರ ರಾತ್ರಿ ಅಪವಿತ್ರಗೊಳಿಸಿದ್ದಾರೆ. ನ್ಯೂಯಾರ್ಕ್‌ನ ಸ್ವಾಮಿ ನಾರಾಯಣ ಮಂದಿರದಲ್ಲಿ ವಿಧ್ವಂಸಕ ಕೃತ್ಯ ನಡೆದ 10 ದಿನಗಳ ನಂತರ ಅಂತಹುದೇ ಕಿಡಿಗೇಡಿ ಕೃತ್ಯ ಕ್ಯಾಲಿಫೋರ್ನಿಯದಲ್ಲೂ ನಡೆದಿದೆ. ದೇಗುಲದ ಗೋಡೆಗಳ ಮೇಲೆ 'ಹಿಂದೂ ಗಳೇ ಭಾರತಕ್ಕೆ ಹೊರಡಿ' ಎಂಬ ಆಕ್ಷೇಪಾರ್ಹ ಬರಹಗಳು ಕಂಡುಬಂದಿವೆ.

ದರ್ಶನ್‌ಗೆ ಐಟಿ ಡ್ರಿಲ್

ಬಳ್ಳಾರಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಳ್ಳಾರಿ ಜೈಲುವಾಸ ಅನುಭವಿಸುತ್ತಿರುವ ನಟ ದರ್ಶನ್ ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ರೇಣುಕಾಸ್ವಾಮಿ ಕೊಲೆ ನಡೆದ ನಂತರ ಆರೋಪಿಗಳ ಮಧ್ಯೆ ನಡೆದ ಹಣದ ವ್ಯವಹಾರ ಸಂಬಂಧ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಗುರುವಾರ ಜೈಲಿನಲ್ಲಿ ನಟನ ವಿಚಾರಣೆ ನಡೆಸಿದ್ದಾರೆ. ಸಂದರ್ಶಕರ ಕೊಠಡಿಯಲ್ಲಿ ವಿಚಾರಣೆ ನಡೆಸುತ್ತಿದ್ದು, ಶುಕ್ರವಾರವೂ ದರ್ಶನ್ ವಿಚಾರಣೆ ಮುಂದುವರಿಯಲಿದೆ.

ಫಿರಂಗಿ ಸದ್ದು ಕವಾಯತು

ಮೈಸೂರು : ನಾಡಹಬ್ಬ ದಸರಾ ಹಿನ್ನೆಲೆಯಲ್ಲಿ ವಿಜಯದಶಮಿಯ ವೈಭವ ಸಾರುವ ಕುಶಾಲತೋಪುಗಳ ಪ್ರಾಯೋಗಿಕ ಪರೀಕ್ಷೆ ಗುರುವಾರ ಗಜಪಡೆ ಸಮ್ಮುಖದಲ್ಲಿ ನಡೆಯಿತು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ನಡೆದ ಮೊದಲ ಹಂತದ ತಾಲೀಮಿನಲ್ಲಿ ಹೊರಹೊಮ್ಮಿದ ಕಿವಿಗಡಚಿಕ್ಕುವ ಶಬ್ದಕ್ಕೆ ಗಜಪಡೆ ಹಾಗೂ ಅಶ್ವರೋಹಿದಳ ಹೆದರದೇ ನಿಂತವು. ಆದರೆ, ಆನೆಗಳ ಪೈಕಿ ಹಿರಣ್ಯ ಮತ್ತು ಏಕಲವ್ಯ ಆನೆಗಳು ಸ್ವಲ್ಪ ವಿಚಲಿತವಾದವು.

ಪರಮರುದ್ರ, ಸೂಪರ್ ಕಂಪ್ಯೂಟರ್‌ಗೆ ಚಾಲನೆ



ಪುಣೆ: ಪರಮರುದ್ರ ಸೂಪರ್ ಕಂಪ್ಯೂಟರ್ ವ್ಯವಸ್ಥೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಗುರುವಾರ ಚಾಲನೆ ನೀಡಿದ್ದಾರೆ. ಇದು ತಾಂತ್ರಿಕ ಪ್ರಗತಿ ಮತ್ತು ಸ್ವಾವಲಂಬನೆಯತ್ತ ಭಾರತದ ಯಾನದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಸಿ-ಡ್ಯಾಕ್ ಅಭಿವೃದ್ಧಿಪಡಿಸಿದ ಅತ್ಯಾಧುನಿಕ ಸೌಲಭ್ಯವು ದೇಶದ ಉನ್ನತ ಕಾರ್ಯಕ್ಷಮತೆಯ ಕಂಪ್ಯೂಟಿಂಗ್ ಸಾಮರ್ಥ್ಯಗಳಿಗೆ ಉತ್ತೇಜನ ನೀಡಿದೆ.ಶಿವನ ಉಗ್ರ ಅವತಾರದ ಹೆಸರಿನಿಂದ ಕರೆಯಲ್ಪಡುವ ಪರಮರುದ್ರವನ್ನು ವೈಜ್ಞಾನಿಕ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಸಂಕೀರ್ಣ ಲೆಕ್ಕಾಚಾರದ ಸವಾಲುಗಳನ್ನು ನಿಭಾಯಿಸಲು ವಿನ್ಯಾಸಗೊಳಿಸಲಾಗಿದೆ.

ವಿಶ್ವ ಪ್ರವಾಸೋದ್ಯಮ ದಿನ ವಿಶೇಷ | 30 ಎಕರೆಯಲ್ಲಿ ಇಲ್ಲಿ ಪ್ರವಾಸಿಗ್ರಾಮ ಆರಂಭಕ್ಕೆ ಯೋಜನೆ: ಎಂ. ಶ್ರೀನಿವಾಸ್

ರೋರಿಕ್ ಎಸ್ಟೇಟ್‌ನಲ್ಲಿ ಟೂರಿಸಂ ಹಬ್

ಸಂದರ್ಶನ: ರಂಜಿತ್ ಎಚ್. ಅಶ್ವತ್ಥ

ಬೆಂಗಳೂರು: ಕರ್ನಾಟಕವು ಪ್ರವಾಸೋದ್ಯಮದ ತವರೂರು. ಮರಳುಗಾಡು ಬಿಟ್ಟರೆ, ಕರ್ನಾಟದಲ್ಲಿ ಎಲ್ಲ ರೀತಿಯ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ವಿದೇಶದಲ್ಲಿ ಏಕಶಿಲೆ ಯಲ್ಲಿ ಒಂದು ಸಿಂಹವನ್ನು ಕೆತ್ತಿದ್ದಾರೆ ಎನ್ನುವ ಮಾತ್ರಕ್ಕೆ, ನಿತ್ಯ ಲಕ್ಷಾಂತರ ಮಂದಿ ಭೇಟಿ ನೀಡುತ್ತಾರೆ. ಆದರೆ ರಾಜ್ಯದಲ್ಲಿ ಏಕಶಿಲೆಯಲ್ಲಿ ಇಡೀ ಮಂಟಪವನ್ನೇ ಕಟ್ಟಿರುವ ಉದಾಹರಣೆ ಗಳಿವೆ. ಪ್ರವಾಸೋದ್ಯಮದಲ್ಲಿ ಅದ್ಭುತ ಪರಂಪರೆಯನ್ನು ಹೊಂದಿರುವ ಕರ್ನಾಟಕದ ತಾಣಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಪ್ರಚುರಪಡಿಸಬೇಕಿದೆ ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ಶ್ರೀನಿವಾಸ್ ಅಭಿಪ್ರಾಯಪಟ್ಟರು.

'ವಿಶ್ವ ಪ್ರವಾಸೋದ್ಯಮ' ದಿನದ ಅಂಗವಾಗಿ 'ವಿಶ್ವವಾಣಿ' ಯೊಂದಿಗೆ ಮಾತನಾಡಿದ ಕೆಎಸ್‌ಟಿಡಿಸಿ ಅಧ್ಯಕ್ಷ ಎಂ. ಶ್ರೀನಿವಾಸ್ ಅವರು, ರಾಜ್ಯದ ಪ್ರವಾಸಿ ತಾಣಗಳ ಅಭಿ ವೃದ್ಧಿ, ಕೆಎಸ್‌ಟಿಡಿಸಿ ಮುಂದಿರುವ ಯೋಜನೆಗಳು, ಮಯೂರ ಹೋಟೆಲ್‌ಗಳ ಅಭಿವೃದ್ಧಿ ಸೇರಿದಂತೆ ವಿವಿಧ ವಿಷಯಗಳನ್ನು ಹಂಚಿಕೊಂಡರು. ಸಂದರ್ಶನದ ಪೂರ್ಣಪಾಠ ಇಲ್ಲಿದೆ.

- ಪ್ರಮುಖ ಪ್ರವಾಸಿ ತಾಣದಲ್ಲಿ ಮಯೂರ ಹೋಟೆಲ್‌ಗಳ ಅಭಿವೃದ್ಧಿಗೆ ಒತ್ತು
- ನಂದಿಬೆಟ್ಟಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕೆ ಹೆಚ್ಚುವರಿ ಕಿಯಾಕ್ಸ್ ಹಾಗೂ ಶೌಚಾಲಯಗಳ ನಿರ್ಮಾಣ
- ಹೆದ್ದಾರಿ ಬದಿಯಲ್ಲಿ ವಿಶ್ರಾಂತಿ ತಾಣಗಳ ನಿರ್ಮಾಣಕ್ಕೆ ಸರಕಾರದ ಬಳಿ ಮನವಿ
- ರಾಜ್ಯದ ಪ್ರವಾಸೋದ್ಯಮದ ಅಭಿವೃದ್ಧಿ ಸರಕಾರದಿಂದ ಇನ್ನಷ್ಟು ಸಹಾಯದ ಅಗತ್ಯವಿದೆ
- ಬಜೆಟ್ ಪ್ರವಾಸ ಬಯಸುವವರಿಗೆ ಕೆಎಸ್‌ಟಿಡಿಸಿಯ ಹೋಟೆಲ್‌ಗಳು ಸಹಕಾರಿ



ಕರ್ನಾಟಕದ ಪ್ರವಾಸೋದ್ಯಮದ ತವರೂರು. ಜನರು ಮೊದಲು ರಾಜ್ಯದಲ್ಲಿರುವ ಪ್ರವಾಸಿತಾಣಗಳಿಗೆ ಭೇಟಿ ನೀಡಿದಂತೆ ಹಲವು ಆಕರ್ಷಕ ಸ್ಥಳಗಳನ್ನು ಆಸ್ವಾದಿಸಬೇಕು. ರಾಜ್ಯದ ಬಹುತೇಕ ಪ್ರವಾಸಿ ತಾಣಗಳ ಸುತ್ತಮುತ್ತ ಕೆಎಸ್‌ಟಿಡಿಸಿಯ ಉತ್ತಮ ಗುಣಮಟ್ಟದ ವಾಸ್ತವ್ಯ ಪಡೆಯಬಹುದು.

– **ಎಂ. ಶ್ರೀನಿವಾಸ್,** ಅಧ್ಯಕ್ಷರು, ಕೆಎಸ್‌ಟಿಡಿಸಿ

- **ರಾಜ್ಯದ ಪ್ರವಾಸೋದ್ಯಮದ ಅಭಿವೃದ್ಧಿ ಯಾವ ರೀತಿ ಮಾಡಬಹುದು?**
- ಕರ್ನಾಟಕದಲ್ಲಿ ಎಲ್ಲ ಮಾದರಿಯ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ಪಾರಂಪರಿಕ ಸ್ಥಳ, ಸಮುದ್ರ ಕಿನಾರೆಗಳು, ಅರಣ್ಯ, ಶಿಲ್ಪಕಲೆ, ದೇವಾಲಯ ಸೇರಿದಂತೆ ಎಲ್ಲ ರೀತಿ ಯ ಪ್ರವಾಸೋದ್ಯಮ ನಮ್ಮಲ್ಲಿದೆ. ವಿದೇಶಗಳಿಗೆ ಹೋದರೂ ಸಿಗದ ಅದೆಷ್ಟೋ ಅದ್ಭುತ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕದಲ್ಲಿವೆ.

ಇವುಗಳನ್ನು ಹುಡುಕಿ ಕೊಂಡು ವಿದೇಶಿಗರು ನಮ್ಮ ರಾಜ್ಯಕ್ಕೆ ಬರುತ್ತಾರೆ. ಆದರೆ ನಮ್ಮಲ್ಲಿರುವ ಪ್ರವಾಸಿ ತಾಣಗಳ ಬಗ್ಗೆ ರಾಜ್ಯದ ಜನರಿಗೆ ಗೊತ್ತಿಲ್ಲ. ಆದ್ದರಿಂದ ಪ್ರವಾಸೋದ್ಯಮದ ಅಭಿವೃದ್ಧಿಗೆ ಮೊದಲು ನಮ್ಮಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕಿದೆ. → 4

ಹೆದ್ದಾರಿಗಳಲ್ಲಿ ವಿಶ್ರಾಂತಿ ತಾಣ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಆರಂಭಕ್ಕೂ ಮೊದಲು ಈ ಹೆದ್ದಾರಿಯಲ್ಲಿ ಹಲವು ಹೋಟೆಲ್‌ಗಳಿದ್ದವು. ಆದರೀಗ ಒಂದೇ ಒಂದು ಹೋಟೆಲ್‌ಗಳಿಲ್ಲ. ಆದ್ದರಿಂದ ಬೆಂಗಳೂರು-ಮೈಸೂರು ಮಧ್ಯದಲ್ಲಿ ಒಂದು ವಿಶ್ರಾಂತಿ ತಾಣವನ್ನು ಆರಂಭಿಸುವ ಆಲೋಚನೆಯಿದೆ. ವಿದೇಶದಲ್ಲಿರುವ ರೀತಿಯಲ್ಲಿಯೇ ಇಲ್ಲಿಯೂ ವಿಶ್ರಾಂತಿ ತಾಣದಲ್ಲಿ ಹೋಟೆಲ್, ಪೆಟ್ರೋಲ್ ಬಂಕ್, ಶೌಚಾಲಯ, ವಿಶ್ರಾಂತಿ ಕೊಠಡಿಯನ್ನು ಆರಂಭಿಸುವ ಚಿಂತನೆಯಿದೆ. ಪ್ರಮುಖ ಹೆದ್ದಾರಿಗಳಲ್ಲಿ ಈ ರೀತಿಯ ವಿಶ್ರಾಂತಿತಾಣಗಳನ್ನು ನಿರ್ಮಿಸುವ ಬಗ್ಗೆ ಸರಕಾರದೊಂದಿಗೆ ಚರ್ಚಿಸಿ ಅಂತಿಮಗೊಳಿಸುತ್ತೇವೆ.

ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಬಿಜೆಪಿ ಪ್ರತಿಭಟನೆ

ರಾಜಕೀಯ ಪ್ರೇರಿತವಾಗಿದ್ದರೆ ಕೋರ್ಟ್ ಏಕೆ ತೀರ್ಪು ನೀಡುತ್ತಿದ್ದವು? | ಸಿಎಂ ಸಿದ್ದರಾಮಯ್ಯನವರ ರಾಜೀನಾಮೆಗೆ ಆಗ್ರಹ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ರಾಜ್ಯ ಬಿಜೆಪಿ ವತಿಯಿಂದ ವಿಧಾನಸೌಧದ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಪ್ರತಿಪಕ್ಷ ನಾಯಕ ಆರ್. ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿದ್ದರಾಮಯ್ಯ ವಿರುದ್ಧ ಹಾಗೂ ರಾಜ್ಯ ಸರಕಾರದ ವಿರುದ್ಧ ಘೋಷಣೆ ಕೂಗಿದರು. ಇದರೊಂದಿಗೆ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿದರು.

ನಂತರ ದಿಢೀರ್ ವಿಧಾನಸೌಧ ಮುತ್ತಿಗೆ ನಿರ್ಧಾರ ಪ್ರಕಟಿಸಿದ ಪ್ರತಿಪಕ್ಷ ನಾಯಕ ಆರ್.ಅಶೋಕ್ ಪ್ರತಿಭಟನಾನಿರತ ಎಲ್ಲ ಶಾಸಕರು, ಸಂಸದರು ಮುಖಂಡರ ಜತೆ ಪಾದಯಾತ್ರೆ ಮೂಲಕ ಕೆಂಗಲ್ ಗೇಟ್ ದ್ವಾರದತ್ತ ತೆರಳಿದರು. ವಿಧಾನಸೌಧ ಮುತ್ತಿಗೆ ಹಾಕಲು ಮುಂದಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಪೊಲೀಸರು ಎಲ್ಲ ನಾಯಕರನ್ನು ವಶಕ್ಕೆ ಪಡೆದರು.

ಈ ವೇಳೆ ಮಾತಿನ ಚಕಮಕಿ ನಡೆಯುತ್ತಿದ್ದಾಗ ನುಸುಳಿಕೊಂಡು ಓಡಿದ ಶಾಸಕ ಅರವಿಂದ ಬೆಲ್ಲದ್ ದ್ವಾರಕ್ಕೆ ಬೀಗ ಜಡಿಯುವ ಪ್ರಯತ್ನ ನಡೆಸಿದರು. ಆದರೆ ಇದರ ಸುಳಿವು ಅರಿತ ಪೊಲೀಸರು ಗೇಟ್ ಮುಚ್ಚಿ ಶಾಸಕರ ಪ್ರಯತ್ನ ವಿಫಲಗೊಳಿಸಿದರು. ನಂತರ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಪ್ರತಿಭಟನಾನಿರತ ಎಲ್ಲ ಶಾಸಕರು, ಸಂಸದರು, ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ವಿಧಾನಸೌಧದಿಂದ ಹೊರಗಡೆ ಕರೆದೊಯ್ದರು.

ಪ್ರತಿಭಟನೆ ವೇಳೆ ಮಾತನಾಡಿದ ಆರ್. ಅಶೋಕ, ಕಾಂಗ್ರೆಸ್ ಪಕ್ಷದೊಳಗೆ ಈಗ ಮುಖ್ಯಮಂತ್ರಿ ಯಾರಾಗಬೇಕೆಂದು ಚರ್ಚೆ ನಡೆಯುತ್ತಿದ್ದು, ಸಿದ್ದರಾಮಯ್ಯ ರಾಜೀನಾಮೆ ನೀಡದಿದ್ದರೆ ಪಕ್ಷದಲ್ಲಿ ಅನೇಕರು ದಂಗೆ ಏಳಲಿದ್ದಾರೆ. ಹೀಗಾಗಿ ರಾಜೀನಾಮೆ ನೀಡುವುದು ಸೂಕ್ತ. ಹೈಕೋರ್ಟ್‌ನಿಂದ ತೀರ್ಪು ಬಂದ ನಂತರವೂ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಿಲ್ಲ. ಬಿ.ಎಸ್.ಯಡಿಯೂರಪ್ಪ ಮೇಲೆ ಆರೋಪ ಬಂದಾಗ ಇವರೇ ರಾಜೀನಾಮೆಗೆ ಒತ್ತಾಯಿಸಿದ್ದರು. ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದೂ ಹೇಳಿದ್ದರು. ಹಾಗಾಗಿ ಈಗ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಿದೆ. ಕೆ.ಎಸ್.ಈಶ್ವರಪ್ಪ ಮೇಲೆ ಆರೋಪ ಬಂದಾಗಲೂ ಇದೇ ರೀತಿ ವಿಧಾನಸಭೆಯಲ್ಲಿ ಪ್ರತಿಭಟಿಸಿದ್ದರು. ಸಚಿವರಾಗಿದ್ದ ಬಿ.ನಾಗೇಂದ್ರ ಮೇಲೆ ಆರೋಪ ಬಂದು ರಾಜೀನಾಮೆ ನೀಡಿದ್ದಾರೆ. ಆದರೆ ಸಿಎಂ ಮಾತ್ರ ರಾಜೀನಾಮೆ ನೀಡುತ್ತಿಲ್ಲ ಎಂದು ಟೀಕಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ರಾಜ್ಯ ಬಿಜೆಪಿ ವತಿಯಿಂದ ವಿಧಾನಸೌಧದ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು. ಪ್ರತಿಪಕ್ಷ ನಾಯಕ ಆರ್. ಅಶೋಕ್, ಉಪ ನಾಯಕ ಅರವಿಂದ ಬೆಲ್ಲದ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ, ಸಂಸದರು, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಭಾಗವಹಿಸಿದ್ದರು.

ದಿನಕ್ಕೊಂದು ಹಗರಣಕ್ಕೆ ಈ ಸರಕಾರ ಸಾಕ್ಷಿಯಂತಿದೆ. ವಾಲ್ಮೀಕಿ ನಿಗಮದ ಹಗರಣ, ಪ್ರವಾಸೋದ್ಯಮ ಇಲಾಖೆಯಲ್ಲಿ ಹಗರಣ, ಕಾರ್ಮಿಕರ ಇಲಾಖೆಯಲ್ಲಿ 5 ಸಾವಿರ ಕೋಟಿ ರು. ಹಗರಣ, ಮುಡಾ ಹಗರಣಗಳು ನಡೆದಿವೆ. ಮುಡಾ ಹಗರಣದ ರೂವಾರಿ ಸಿದ್ದರಾಮಯ್ಯನವರು.

- ಅರವಿಂದ ಬೆಲ್ಲದ
ವಿಧಾನಸಭೆ ವಿಪಕ್ಷದ ಉಪ ನಾಯಕ

ಅರ್ಕಾವತಿ ಹಗರಣ ತಾವು ಬಿಳಿಬಟ್ಟೆಯಂತಿಲ್ಲ ಎಂಬುದನ್ನು ತೋರಿಸುತ್ತದೆ. ಸಿದ್ದರಾಮಯ್ಯನವರು ರೀಡೂ ಹೆಸರಿನಲ್ಲಿ 880 ಎಕರೆಯನ್ನು ರಿಯಲ್ ಎಸ್ಟೇಟ್ ಬ್ರೋಕರ್‌ಗಳಿಗೆ ಡೀನೋಟಿಫಿಕೇಷನ್ ಮಾಡಿದ್ದಾರೆ.

-ಸಿ.ಟಿ.ರವಿ
ವಿಧಾನಪರಿಷತ್ ಸದಸ್ಯ

ಸಮಾಚಾರ ಸಣ್ಣದಲ್ಲ

ಎನ್‌ಐಎನಿಂದ ಶಂಕಿತ ಉಗ್ರನ ಬಂಧನ

ಆನೇಕಲ್: ತಾಲೂಕಿನ ಜಿಗಣಿ ಕೈಗಾರಿಕಾ ಪ್ರದೇಶದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಶಂಕಿತ ಉಗ್ರನೋರ್ವನನ್ನು ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ. ಅಸ್ಸಾಂ ಮೂಲದ 23 ವರ್ಷದ ಗಿರೀಶ್ ಬೊರವ್ ಎಂಬಾತನೇ ಶಂಕಿತ ಉಗ್ರ ಎಂದು ಗುರುತಿಸಲಾಗಿದೆ. ಆಗಸ್ಟ್ 10ರಂದು ಇಲ್ಲಿನ ಕಂಪನಿಯೊಂದರಲ್ಲಿ ಸೆಕ್ಯುರಿಟಿಯಾಗಿ ಕೆಲಸಕ್ಕೆ ಸೇರಿದ್ದ ಎಂದು ಮೂಲಗಳು ತಿಳಿಸಿವೆ. ಶಂಕಿತ ಉಗ್ರನು ಅಸ್ಸಾಂನ ಲಕ್ಷ್ಮಿಪುರ ಬೊಕಾಂಡಿ ಮೂಲದವನು ಎಂದು ತಿಳಿದುಬಂದಿದೆ.

ಭೋವಿ ನಿಗಮ ಪ್ರಕರಣ ತನಿಖಾಧಿಕಾರಿ ಅಮಾನತು

ಬೆಂಗಳೂರು: ಭೋವಿ ನಿಗಮದಲ್ಲಿ ಕೋಟ್ಯಂತರ ರುಪಾಯಿ ಅಕ್ರಮ ಆರೋಪ ಪ್ರಕರಣಕ್ಕೆ ಸಂಬಂಧಿಸಿ ತನಿಖಾಧಿಕಾರಿ ಎ.ಡಿ.ನಾಗರಾಜ್ ಅವರನ್ನು ಅಮಾನತು ಮಾಡಿ ಸಿಐಡಿ ಡಿಜಿ ಸಲೀಂ ಅವರು ಆದೇಶ ಹೊರಡಿಸಿದ್ದಾರೆ.

ಭೋವಿ ನಿಗಮದಲ್ಲಿ ಕೋಟ್ಯಂತರ ಹಣ ಅಕ್ರಮ ನಡೆದಿರುವ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ಸರಕಾರ ಸಿಐಡಿ ತನಿಖೆಗೆ ಆದೇಶ ಮಾಡಿತ್ತು. ಈ ವೇಳೆ ಎ.ಡಿ. ನಾಗರಾಜಪ್ಪ ಹಾಗೂ ಲೀಲಾವತಿ ಸೇರಿ ಹಲವರನ್ನು ಬಂಧಿಸಲಾಗಿತ್ತು.

बैंक ऑफ़ बड़ौदा
Bank of Baroda

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಕ್ಯಾಂಪಸ್ ಶಾಖೆ
ಜಾನ್ ನಗರ, ಕೋರಮಂಗಲ, ಬೆಂಗಳೂರು–560034.
ದೂ. ಸಂ :+91–080–25530145, 25535348
ಇ–ಮೇಲ್: stjohn@bankofbaroda.com

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ ಬ್ಯಾಂಕ್ ಆಫ್ ಬರೋಡಾ, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಕ್ಯಾಂಪಸ್ ಶಾಖೆ, ಬೆಂಗಳೂರಿನಲ್ಲಿ ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಕ್ಯಾಂಪಸ್

ಸಾಲಗಾರರ ಹೆಸರು	ಲಾಕರ್ ವಿಧ	ಲಾಕರ್ ಸಂಖ್ಯೆ	ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
ತುಳಸೈಮಲ ಉದಯ ಕುಮಾರ್	A	0521AX0118	ರೂ. 12,679/–	11.10.2024 ಮಧ್ಯಾಹ್ನ 1.00

ದಿನಾಂಕ: 26.09.2024
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಎಂ.ಆರ್.ಎನ್ ಭೀಮ ಶುಗರ್ ಆ್ಯಂಡ್ ಪವರ್ ಪ್ರೈವೇಟ್ ಲಿಮಿಟೆಡ್
(ಹಿಂದೆ ಎಂ.ಆರ್.ಎನ್ ಶ್ರೀರಾಮ ಶುಗರ್ ಮತ್ತು ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

CIN: U15400KA2020PTC137369
ಇ-ಮೇಲ್: md@niranigroups.com
ದೂರವಾಣಿ: +91 94821 90000
GSTIN: 27AANCM6973G1ZV

ಸಾರ್ವಜನಿಕ ಸೂಚನೆ
ಫಾರ್ಮ್ ಸಂಖ್ಯೆ: INC-26
[ಕಂಪನಿಗಳ (ಸಂಯೋಜನೆ) ನಿಯಮಗಳು, 2014ರ ನಿಯಮ 30ಕ್ಕೆ ಅನುಸಾರವಾಗಿ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಲಾಗುವುದು.

ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 13 (4) ಮತ್ತು ಕಂಪನಿಗಳ (ನಿಗಮ) ನಿಯಮಗಳು, 2014ರ ರೂಲ್ 30 (5)(ಎ)
ಮತ್ತು
ಎಂ.ಆರ್.ಎನ್ ಭೀಮ ಶುಗರ್ ಆ್ಯಂಡ್ ಪವರ್ ಪ್ರೈವೇಟ್ ಲಿಮಿಟೆಡ್‌ಗೆ ಸಂಬಂಧಿಸಿದಂತೆ ಅದರ ನೋಂದಾಯಿತ ಕಛೇರಿ ಸರ್ವೇ ನಂ-166, ಕುಳಲಿ ಕ್ರಾಸ್, ಜಮಖಂಡಿ ಮುಧೋಳ ರಸ್ತೆ, ಬಾಗಲಕೋಟೆ, ಕರ್ನಾಟಕ-587313, ಭಾರತ
..........................ಅರ್ಜಿದಾರ

ಆಗಸ್ಟ್ 30, 2024 ರಂದು ಶುಕ್ರವಾರ ನಡೆದ ಎಕ್ಸ್ಟ್ರಾ ಆರ್ಡಿನರಿ ಜನರಲ್ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಶನ್‌ನ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಕಂಪನಿಯು ಪ್ರಸ್ತಾಪಿಸಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ನೀಡಲಾಗಿದೆ. ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "ಬೆಂಗಳೂರು ರಾಜ್ಯ"ದಿಂದ ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕದ ವ್ಯಾಪ್ತಿಯೊಳಗೆ, ಕಂಪನಿಗಳ ರಿಜಿಸ್ಟ್ರಾರ್, ಪುಣೆಯ ವ್ಯಾಪ್ತಿಗೆ "ಮಹಾರಾಷ್ಟ್ರ ರಾಜ್ಯ " ಎಂದು ಬದಲಾಯಿಸಲು ಅನುವು ಮಾಡಿಕೊಡುತ್ತದೆ.

ನೋಂದಾಯಿತ ಕಛೇರಿಯ ಪ್ರಸ್ತಾಪಿತ ಬದಲಾವಣೆಯ ಬಗ್ಗೆ ಆಕ್ಷೇಪಣೆ ಇರುವ ಯಾವುದೇ ವ್ಯಕ್ತಿಯು MCA-21 ಪೋರ್ಟಲ್‌ನಲ್ಲಿ (www.mca.gov.in) ಹೂಡಿಕೆದಾರರ ದೂರು ನಮೂನೆಯನ್ನು ರೀಜನಲ್ ಡೈರೆಕ್ಟರ್ ಸೌತ್ ಈಸ್ಟ್ ರೀಜನ್, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿ ಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ, ರಂಗರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ, ಅವರಿಗೆ ಪರ ಮತ್ತು ವಿರೋಧದ ಕಾರಣಗಳನ್ನು ಸೂಚಿಸುವ ಅಫಿಡವಿಟ್ನಿಂದ ಕೂಡಿದ ಆಕ್ಷೇಪಣೆಗಳನ್ನು ಅರ್ಜಿದಾರರ ಪ್ರತಿಯೊಂದಿಗೆ ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಂಪನಿಯು ತನ್ನ ನೋಂದಾಯಿತ ಕಛೇರಿಯಲ್ಲಿ ನಮೂದಿಸಿದ ವಿಳಾಸ: "ಸರ್ವೆ ನಂ-166, ಕುಳಲಿ ಕ್ರಾಸ್, ಜಮಖಂಡಿ ಮುಧೋಳ ರಸ್ತೆ, ಬಾಗಲಕೋಟೆ, ಕರ್ನಾಟಕ - 587313 ಭಾರತ"ಕ್ಕೆ ಸಲ್ಲಿಸುವ ಮೂಲಕ ಅಥವಾ ತಲುಪಿಸುವ ಮೂಲಕ ಅಥವಾ ಕಳುಹಿಸುವ ಮೂಲಕ ಕಾರಣವನ್ನು ನೀಡಬಹುದು.

ಅರ್ಜಿದಾರರ ಪರವಾಗಿ
ಎಂ.ಆರ್.ಎನ್ ಭೀಮ ಶುಗರ್ ಆ್ಯಂಡ್ ಪವರ್ ಪ್ರೈವೇಟ್ ಲಿಮಿಟೆಡ್
ಹೆಸರು: ಬಸವರಾಜ ಶಂಕ್ರಪ್ಪ ಗೋಸರ್
ಹುದ್ದೆ: ನಿರ್ದೇಶಕ
DIN: 06692689
ದಿನಾಂಕ: 26/09/2024
ಸ್ಥಳ: ಮುಧೋಳ

ಎಸ್.ವಿ.ಸಿ. ಕೋ – ಆಪರೇಟಿವ್ ಬ್ಯಾಂಕ್ ಲಿ.
ವಸೂಲಾತಿ ವಿಭಾಗ : ಎಸ್.ವಿ.ಸಿ. ಟವರ್, ಜವಹರ್‌ಲಾಲ್ ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ – 400055.
ಪ್ರಾದೇಶಿಕ ಕಛೇರಿ: 2ನೇ ಮಹಡಿ, ನಂ.1, ಸೆಂಟ್ರಲ್ ಬ್ಯಾಂಕ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ಫೋನ್: 080–71231027 ರಿಂದ 32.

ಸುರಕ್ಷಿತ ಠೇವಣಿ ಲಾಕರ್ ಹೊಂದಿರುವವರು

ಕ್ರ ಸಂ	ಬಾಡಿಗೆದಾರರ ಹೆಸರು	ಶಾಖೆ	ಲಾಕರ್ ನಂ.	ಲಾಕರ್ ಬಾಡಿಗೆ ಈ ದಿನಾಂಕದಿಂದ ಬಾಕಿ ಇದೆ	ಲಾಕರ್‌ನ್ನು ಈ ದಿನಾಂಕದಿಂದ ಕಾರ್ಯಾಚರಣೆ ಮಾಡಿತ್ತಿರುವುದಿಲ್ಲ
1	ಮೊನೊಜಿತ್ ಬ್ಯಾನರ್ಜಿ	ಮಲ್ಲೇಶ್ವರಂ	G-161	01.04.2021	30.03.2015
2	ಶ್ರೀ ಲಕ್ಷ್ಮೀ ಶಾಂತ / ಶ್ರೀಮತಿ ನಿರ್ಮಲಾ ಎನ್	ಮೈಸೂರು ರಸ್ತೆ	F-7	01.03.2021	17.12.2019
3	ಶ್ರೀ ಕೆ ಪ್ರಕಾಶ್/ಸಿ ಸುಧಾ	ಮೈಸೂರು ರಸ್ತೆ	F-33	24.06.2021	29.12.2013
4	ಮಲ್ಲಿಕಾರ್ಜುನ ಎಂ ವಿ, ಮಮತಾ ವಿ	ವಿಜಯನಗರ	B0063	2015	20.09.2013
5	ಜೋಶುವಾ ಚಿಂತಾ, ಮಾಲತಿ ಕೆ	ಆರ್.ಟಿ. ನಗರ ಶಾಖೆ	F0104	2020	05.11.2020
6	ಶ್ರೀಧರ ಪಿ ಸರಳಾಯ, ಪಿ ಮುರಳೀಧರ್ ಸರಳಾಯ	ಮಂಗಳೂರು	A0036	01-06-2020	19-04-1993
7	ಫಣೀಂದ್ರ. ಎಂ.ಎಚ್ ಭಾವನಾಶ್ರೀ ಎಂ ಪಿ	ಸರಸ್ವತಿಪುರಂ, ಮೈಸೂರು	B00007	March 2019	28.09.2018

ನಮ್ಮ ಶಾಖೆಗಳ ಈ ಮೇಲೆ ನಮೂದಿಸಿರುವ ವ್ಯಕ್ತಿಗಳಿಗೆ ಮತ್ತು ಗ್ರಾಹಕರಿಗೆ ಸೂಚಿಸುವುದೇನೆಂದರೆ 3 ವರ್ಷ ಮತ್ತು ಅದಕ್ಕಿಂತಲೂ ಹೆಚ್ಚಿನ ಲಾಕರ್ ಗಳ ಬಾಕಿ ಇರುವ ಬಾಡಿಗೆಗಳನ್ನು ಪಾವತಿಸಲು ವಯಕ್ತಿಕ ನೋಟೀಸ್ ಮತ್ತು ತದನಂತರ ಲಾಕರ್ ಗಳನ್ನು ಬ್ರೇಕ್ ಓಪನ್ ಮಾಡುವ ಅಂತಿಮ ನೋಟೀಸ್ ಗಳನ್ನು ನೀಡಿದ ಹೊರತಾಗಿಯೂ, ಲಾಕರ್ ಗಳನ್ನು ಕಾರ್ಯಗತಗೊಳಿಸಲು/ ಒಪ್ಪಿಸಲು / ನಿರ್ದಿಷ್ಟಪಡಿಸಿದ ದಿನಗಳೊಳಗೆ ಬಾಕಿ ಉಳಿದಿರುವ ಬಾಡಿಗೆಯನ್ನು ಪಾವತಿಸುವ ಬ್ಯಾಂಕ್‌ಗಳ ಸೂಚನೆಗೆ ಪ್ರತಿಕ್ರಿಯಿಸಲು ನೀವು ವಿಫಲರಾಗಿದ್ದೀರಿ. ಇನ್ನು ಕೆಲವು ಪ್ರಕರಣಗಳಲ್ಲಿ ಬ್ಯಾಂಕ್ ಕಳುಹಿಸಿದ ನೋಟೀಸ್/ಪತ್ರಗಳು ಬಟವಾಡೆಯಾಗದೇ ಅಂತಿಮವಾಗಿ ಹಿಂದಿರುಗಿವೆ ಮತ್ತು ಲಾಕರ್ ಬಾಡಿಗೆದಾರರನ್ನು ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ ಎಂದು ಸಹ ಗಮನಿಸಲಾಗಿದೆ. ಲಾಕರ್ ಅನ್ನು ಬಾಡಿಗೆ ಪಡೆಯುವ ನಿಯಮಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಲಾಕರ್ ಬಾಡಿಗೆದಾರರು ಲಾಕರ್ ಅನ್ನು ಪಡೆಯಲು 'ಜ್ಞಾಪಕ ಪತ್ರ'ವನ್ನು ಕಾರ್ಯಗತಗೊಳಿಸುವ ಮೂಲಕ ಸರಿಯಾಗಿ ಸ್ವೀಕರಿಸಿರುವುದರಿಂದ ಭದ್ರತಾ ಕಾರಣಗಳಿಗಾಗಿ ಅದರಲ್ಲಿರುವ ವಸ್ತುಗಳನ್ನು ಪರಿಶೀಲಿಸಲು ಮತ್ತು ಬಾಕಿಗಳು, ಶುಲ್ಕಗಳು ಹಾಗೂ ವೆಚ್ಚಗಳ ವಸೂಲಾತಿಗಾಗಿ ಭಾಗಶ: ಅಥವಾ ಸಂಪೂರ್ಣವಾಗಿ ಲಾಕರ್ ನಲ್ಲಿರುವ ವಸ್ತುಗಳನ್ನು ಖಾಸಗಿ /ಸಾರ್ವಜನಿಕವಾಗಿ ಮಾರಾಟಮಾಡಬಹುದು, ಮತ್ತು ಮಾರಾಟದ ಪ್ರಕ್ರಿಯೆಗಳು ಅಥವಾ ಉಳಿದ ವಸ್ತುಗಳನ್ನು ಸಂಪೂರ್ಣವಾಗಿ ಬಾಡಿಗೆದಾರನ ಅಪಾಯ ಮತ್ತು ಜವಾಬ್ದಾರಿಯಲ್ಲಿ ಹಿಡಿದಿಟ್ಟುಕೊಳ್ಳುವುದು, ಮತ್ತು ಲಾಕರ್ ಗಳನ್ನು ಬಾಡಿಗೆ ಪಡೆಯುವ ವ್ಯವಸ್ಥೆಯಡಿ ಪ್ರದತ್ತವಾದ ಅಧಿಕಾರಗಳಿಗೆ ಅನುಸಾರ 3 ವರ್ಷ ಮತ್ತು ಅದಕ್ಕೂ ಹೆಚ್ಚಿನ ಅವಧಿಯ ಬಾಕಿ ಬಾಡಿಗೆಯನ್ನು, ಅನ್ವಯಿಸುವ ದಂಡದ ಮೊತ್ತದೊಂದಿಗೆ ಈ ಸೂಚನೆ ಪ್ರಕಟಣೆ ದಿನಾಂಕದಿಂದ 3 ತಿಂಗಳಒಳಗೆ ಪಾವತಿಸದಿದ್ದರೆ ಅಂತಹ ಬಾಡಿಗೆದಾರರ ಲಾಕರ್ ಗಳನ್ನು ಬ್ಯಾಂಕು ಒಡೆದು ತೆರೆಯಬಹುದು / ಒಡೆದು ಮರು ಸ್ವಾಧೀನ ಪಡಿಸಿಕೊಳ್ಳಬಹುದು.
ಹೆಚ್ಚಿನ ಮಾಹಿತಿ / ಪ್ರಶ್ನೆಗಳಿದ್ದಲ್ಲಿ ನಿಮ್ಮ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸಿ

ದಿನಾಂಕ : 27.09.2024
ಸ್ಥಳ : ಬೆಂಗಳೂರು

ಸಹಿ/–
ಎಸ್.ವಿ.ಸಿ. ಕೋ–ಆಪರೇಟಿವ್ ಬ್ಯಾಂಕ್ ಲಿ.

ಧರಣಿ ಗೈರು; ಬಂಡಾಯ ಸಭೆ

ಬೆಂಗಳೂರು: ವಿಜಯೇಂದ್ರ ವಿರೋಧಿ ಬಣ ಮತ್ತೊಮ್ಮೆ ಸೆಡ್ಡು ಹೊಡೆದಿದ್ದು, ಬಿಜೆಪಿ ವತಿಯಿಂದ ಕರೆ ನೀಡಿದ್ದ ಪ್ರತಿಭಟನೆಗೆ ಗೈರಾಗೋ ಮೂಲಕ ಎಲ್ಲವೂ ಸರಿ ಇಲ್ಲ ಎಂದು ಮತ್ತೊಮ್ಮೆ ಸಾಬೀತಾಗಿದೆ.

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ವಿಧಾನಸೌಧ ಮುತ್ತಿಗೆ ಹಾಕಿ ಪ್ರತಿಭಟನೆಯಲ್ಲಿ ನಾಯಕರು ತೊಡಗಿದ್ದರೆ ಮತ್ತೊಂದೆಡೆ ವಿಜಯೇಂದ್ರ ವಿರೋಧಿ ಬಣ ಬಂಡಾಯ ಸಭೆ ನಡೆಸುವ ಮೂಲಕ ವಿಜಯೇಂದ್ರ ವಿರುದ್ಧ ಮತ್ತೊಮ್ಮೆ ಅಸಮಾಧಾನ ಹೊರಹಾಕಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ, ಸಂಘ ಪರಿವಾರದ ನಾಯಕರ ಸಂಧಾನದ ನಡುವೆಯೂ ಅಸಮಾಧಾನ ಶಮನಗೊಂಡಿಲ್ಲ ಎನ್ನುವ ಅನುಮಾನಕ್ಕೆ ಪುಷ್ಟಿ ನೀಡಿದೆ. ಇತ್ತೀಚೆಗಷ್ಟೇ ಮಾಜಿ ಸಚಿವ ಈಶ್ವರಪ್ಪ ನಿವಾಸದಲ್ಲಿ ಸಭೆ ನಡೆಸಿದ್ದ ಯತ್ನಾಳ್ ತಂಡ ಇದೀಗ ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಸಭೆ ಸೇರಿ ರಾಜ್ಯ ನಾಯಕತ್ವದ ವಿರುದ್ಧ ಪರೋಕ್ಷ ಸೆಡ್ಡು ಹೊಡೆದಿದೆ.

ಸದಾಶಿವನಗರದ ಮಾಜಿ ಸಚಿವ ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಬಿಜೆಪಿಯ ಕೆಲ ನಾಯಕರು ಸಭೆ ಸೇರಿ ನಾಯಕತ್ವದ ವಿರುದ್ಧ ಪರೋಕ್ಷ ಸೆಡ್ಡು ಹೊಡೆದಿದ್ದಾರೆ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಜಿ.ಎಂ. ಸಿದ್ದೇಶ್ವರ್, ಚಂದ್ರಪ್ಪ, ಬಿಪಿ ಹರೀಶ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ವಿಜಯದಶಮಿ ಬಳಿಕ ಪಾದಯಾತ್ರೆ?: ಮಾಜಿ ಸಚಿವ ಈಶ್ವರಪ್ಪರನ್ನು(ಘರ್ ವಾಪಸಿ) ಮತ್ತೆ ಬಿಜೆಪಿ ಪಕ್ಷಕ್ಕೆ ಸೇರಿಸಿಕೊಳ್ಳುವುದು ಸೇರಿದಂತೆ ವಾಲ್ಮೀಕಿ ಹಗರಣದ ವಿರುದ್ಧ ಹೋರಾಟಕ್ಕೆ ಹೈಕಮಾಂಡ್‌ನಿಂದ ಪ್ರತಿಕ್ರಿಯೆ ಬಾರದಿರುವ ಬಗ್ಗೆ ಚರ್ಚೆಯಾಗಿದೆ. ಅಲ್ಲದೇ ವಿಜಯದಶಮಿ ಬಳಿಕ ಬಂಡಾಯ ಪಾದಯಾತ್ರೆ ಕೈಗೊಳ್ಳುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ತಿಳಿದುಬಂದಿದೆ.

ಈ ವೇಳೆ ಪ್ರತಿಕ್ರಿಯಿಸಿರುವ ಬಸನಗೌಡ ಪಾಟೀಲ್ ಯತ್ನಾಳ್, ನನಗೆ ಬೈಲಹೊಂಗಲದಲ್ಲಿ ಕಾರ್ಯಕ್ರಮ ನಿಗದಿಯಾಗಿದೆ. ಹಾಗಾಗಿ ಅಲ್ಲಿಗೆ ಹೋಗಬೇಕಾದ ಕಾರಣಕ್ಕೆ ಬಿಜೆಪಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ಕುಮಾರ್ ಬಂಗಾರಪ್ಪ ನಿವಾಸದಲ್ಲಿ ಊಟಕ್ಕೆ ಸೇರಿದ್ದೆವು, ಹಾಗೆಯೇ ಅನೌಪಚಾರಿಕ ಮಾತುಕತೆ ನಡೆಸಿದ್ದೇವೆ ಎಂದರು.

ಈಶ್ವರಪ್ಪರನ್ನು ಸಿಎಂ ಮಾಡಬೇಕು ಎಂದು ನಾನು ಹೇಳಿಲ್ಲ. ಆದರೆ ನಾವೆಲ್ಲ ಒಂದಾಗಬೇಕು ಎಂದಿದ್ದೇನೆ. ಸಿಎಂ ಯಾರಾಗಬೇಕು ಎಂದು ಪಕ್ಷದ ಹೈಕಮಾಂಡ್ ಹಾಗೂ ಜನ ತೀರ್ಮಾನ ಮಾಡಲಿದ್ದಾರೆ. ಆದರೆ ಕಾಂಗ್ರೆಸ್‌ನ ಕಡೆಯ ಸಿಎಂ ಸಿದ್ದರಾಮಯ್ಯ. ಅವರ ರಾಜೀನಾಮೆ ನಂತರ ಕಾಂಗ್ರೆಸ್ ರಾಜ್ಯದಲ್ಲಿ ನಿರ್ನಾಮವಾಗಲಿದೆ.

- ಬಸನಗೌಡ ಪಾಟೀಲ್ ಯತ್ನಾಳ್ ಶಾಸಕ

ಪೆನ್‌ಡ್ರೈವ್: ಪ್ರೀತಂ ಗೌಡ ವಿರುದ್ಧ ತನಿಖೆ ಮುಂದುವರಿಸಲು ಹೈ ಆದೇಶ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ಹಗರಣದ ಆರೋಪಕ್ಕೆ ಸಂಬಂಧಿಸಿದ ಪೆನ್ ಡ್ರೈವ್‌ಗಳನ್ನು ಹಂಚಿಕೆ ಮಾಡಿದ ಆರೋಪದಡಿ ಮಾಜಿ ಶಾಸಕ ಬಿಜೆಪಿಯ ಪ್ರೀತಂ ಗೌಡ ಅವರ ವಿರುದ್ಧದ ಕ್ರಿಮಿನಲ್ ಪ್ರಕರಣದ ತನಿಖೆ ಮುಂದುವರಿಯಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ಬೆಂಗಳೂರಿನ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿರುವ ದೂರು ಮತ್ತು ನಂತರದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಪ್ರೀತಂ ಗೌಡ ಸಲ್ಲಿಸಿರುವ ಅರ್ಜಿಯನ್ನು, ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಈ ಕುರಿತಂತೆ ಆದೇಶಿಸಿದರು.

ವಿಚಾರಣೆ ವೇಳೆ ಪ್ರೀತಂ ಗೌಡ ಪರ ವಕೀಲ ಸಂದೀಪ್ ಎಸ್.ಪಾಟೀಲ್, ಅರ್ಜಿಯನ್ನು ದಸರಾ ರಜೆಯ ಬಳಿಕ ವಿಚಾರಣೆಗೆ ತೆಗೆದುಕೊಳ್ಳಬೇಕು. ಬುಧವಾರ ಪ್ರೀತಂ ಗೌಡ ಎಸ್‌ಐಟಿಯ ಮುಂದೆ ಹೇಳಿಕೆ ದಾಖಲಿಸಿದ್ದಾರೆ ಎಂದು ಮನವಿ ಮಾಡಿದರು. ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ಇದು ಡಿಜಿಟಲ್ ಅಪರಾಧ. ವಿಡಿಯೋಗಳಿಗೆ ಸಂಬಂಧಿಸಿದಂತೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗೆ ಕಾಯಲಾಗುತ್ತಿದೆ ಎಂದರು.

ಅ.24ಕ್ಕೆ ವಿಚಾರಣೆ ನಿಗದಿ

ನ್ಯಾಯಪೀಠ ಪ್ರತಿಕ್ರಿಯಿಸಿ, ತನಿಖೆ ಮುಂದುವರಿಯಬೇಕು ಮತ್ತು ಇದಕ್ಕೆ ಪ್ರೀತಂ ಗೌಡ ಸಹಕರಿಸಬೇಕು. ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ನಿಗದಿಗೊಳಿಸಲಾಗುವುದು. ಅಷ್ಟರಲ್ಲಿ ಎಫ್‌ಎಸ್‌ಎಲ್ ವರದಿ ಬರಬಹುದು. ಅಲ್ಲಿಯವರೆಗೂ ಅರ್ಜಿದಾರರಿಗೆ ಬಂಧನದಿಂದ ರಕ್ಷಣೆ ನೀಡಿರುವ ಮಧ್ಯಂತರ ಆದೇಶ ಮುಂದುವರಿಯಲಿದೆ ಎಂದು ತಿಳಿಸಿತು. ಮುಂದಿನ ವಿಚಾರಣೆ ವೇಳೆಗೆ ಪ್ರಕರಣದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸಿ ಎಂದು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 24ಕ್ಕೆ ಮುಂದೂಡಿತು.

ಅತಿಥಿ ಉಪನ್ಯಾಸಕರ ಹುದ್ದೆಗೆ ಯುಜಿಸಿ ನಿಯಮ ಅಗತ್ಯ

ಬೆಂಗಳೂರು: ಅತಿಥಿ ಉಪನ್ಯಾಸಕರ ಹುದ್ದೆಗೆ ಯಾವುದೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೊದಲು ಯುಜಿಸಿ ನಿಯಮಾವಳಿ 2018ರಲ್ಲಿ ಯುಜಿಸಿ ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಸಂಪೂರ್ಣವಾಗಿ ಪಾಲಿಸುವಂತೆ ಕರ್ನಾಟಕ ಹೈಕೋರ್ಟ್ ಉನ್ನತ ಶಿಕ್ಷಣ ಇಲಾಖೆ ಮತ್ತು ಕಾಲೇಜು ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡಿದೆ.

ಎಚ್.ಸಂಜೀವಯ್ಯ ಮತ್ತು ಇತರ ಮೂವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಆರ್.ನಟರಾಜ್ ನಿರ್ದೇಶನ ನೀಡಿದರು. ರಾಜ್ಯ ಅರ್ಹತಾ ಪರೀಕ್ಷೆ ಹಾಗೂ ರಾಷ್ಟ್ರೀಯ ಅರ್ಹತಾ ಪರೀಕ್ಷೆ ಹಾಗೂ ಪಿಎಚ್‌ಡಿ ಪರೀಕ್ಷೆಗಳನ್ನು ಒತ್ತಾಯಿಸದೆ ಸ್ನಾತಕೋತ್ತರ ಪದವೀಧರರನ್ನು ಮಾತ್ರ ಪರಿಗಣಿಸುವ ಆಗಸ್ಟ್ 24, 2024 ರ ಅಧಿಸೂಚನೆಯನ್ನು ಅರ್ಜಿದಾರರು ಪ್ರಶ್ನಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಯುಜಿಸಿ ನಿಯಮ, 2018 ಮತ್ತು ಯುಸಿಜಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇಡೀ ಮೊದಲ ಸುತ್ತಿನ ಕೌನ್ಸೆಲಿಂಗ್ ಅನ್ನು ಕಟ್ಟುನಿಟ್ಟಾಗಿ ಮರು ಹೊಂದಿಸಲು ಮತ್ತು ನಂತರ ನೇಮಕಾತಿಗಳನ್ನು ಮಾಡಲು ಅರ್ಜಿದಾರರು ನಿರ್ದೇಶಿಸಿದ್ದಾರೆ. ಯುಜಿಸಿ ನಿಯಮಗಳು ಮತ್ತು 2024–25ರ ಶೈಕ್ಷಣಿಕ ವರ್ಷ ಮತ್ತು ನಂತರದ ಶೈಕ್ಷಣಿಕ ವರ್ಷಗಳ ಮಾರ್ಗಸೂಚಿಗಳ ಪ್ರಕಾರ ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಆಯ್ಕೆ ಮಾಡಲು ನಿರ್ದೇಶನ ನೀಡುವಂತೆ ಅವರು ಕೋರಿದ್ದಾರೆ. ವಿಚಾರಣೆ ನಡೆಸಿದ ಹೈಕೋರ್ಟ್ ಯುಜಿಸಿ ಅನುಸಾರ ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರದ ಯಾವುದೇ ಅಭ್ಯರ್ಥಿಯನ್ನು ಇಲಾಖೆಗಳು ಆಯ್ಕೆ ಮಾಡದಂತೆ ಆದೇಶ ನೀಡಿದೆ.

ಗುತ್ತಿಗೆ ನೌಕರರ ಒಪ್ಪಂದ ರದ್ದತಿಗೆ ಮುನ್ನ ಅಹವಾಲು ಆಲಿಸಿ

ಬೆಂಗಳೂರು: ಗುತ್ತಿಗೆ ನೌಕರರೊಂದಿಗೆ ಒಪ್ಪಂದ ಅಂತಿಮಗೊಳಿಸುವ ಮುನ್ನ ಸ್ವಾಭಾವಿಕ ನ್ಯಾಯದ ತತ್ವದಂತೆ ಅಹವಾಲುಗಳನ್ನು ಆಲಿಸಬೇಕು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಎಚ್‌ಎಎಲ್ ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ನ್ಯಾ. ಅನು ಸಿವರಾಮನ್ ಮತ್ತು ನ್ಯಾ. ಜಿ. ಬಸವರಾಜ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ. ಪ್ರಕರಣ ಸಂಬಂಧ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದ ಕರ್ನಾಟಕ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಕಾನೂನಿನ ಪ್ರಕಾರ ಸಮಗ್ರ ಒಪ್ಪಂದವನ್ನು ಪರಿಷ್ಕರಿಸಿ ಅದರ ಪ್ರತಿಯನ್ನು ಎಚ್‌ಎಎಲ್ ಗುತ್ತಿಗೆ ನೌಕರರ ಸಂಘಕ್ಕೆ ನೀಡುವಂತೆ ಆದೇಶಿಸಿದೆ. ಎಚ್‌ಎಎಲ್ ಸಂಸ್ಥೆ ಗುತ್ತಿಗೆ ಸಂಬಂಧದ ಒಪ್ಪಂದದ ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕು, ಬಾಧಿತರಾಗುವವರು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು. ಆ ಆಕ್ಷೇಪಣೆ ಪರಿಗಣಿಸಿದ ನಂತರ ಅಂತಿಮ ಅಧಿಸೂಚನೆಗೆ ನಿರ್ಧಾರ ಕೈಗೊಳ್ಳಬೇಕು ಎಂದು ಆದೇಶದಲ್ಲಿ ಸೂಚನೆ ನೀಡಿದೆ. ಸಮಗ್ರ ಗುತ್ತಿಗೆ ಒಪ್ಪಂದ ಅಂತಿಮಗೊಳಿಸುವ ಮುನ್ನ ಗುತ್ತಿಗೆ ಕಾರ್ಮಿಕರಿಗೆ ಅಥವಾ ಪ್ರತಿವಾದಿ ಕಾರ್ಮಿಕರ ಒಕ್ಕೂಟಗಳ ಪ್ರತಿನಿಧಿಗಳಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಎಚ್‌ಎಎಲ್ ಸಂಸ್ಥೆಗೆ ನಿರ್ದೇಶಿಸಿದೆ.

ಮಹಾಲಕ್ಷ್ಮೀ ಕೊಲೆ ಪ್ರಕರಣ: ಅಬೇಟೆಡ್ ಚಾರ್ಜ್‌ಶೀಟ್‌ಗೆ ಸಿದ್ಧತೆ

ಬೆಂಗಳೂರು: ರಾಜಧಾನಿ ಬೆಂಗಳೂರನ್ನು ಬೆಚ್ಚಿಬೀಳಿಸಿದ್ದ ಒಂಟಿ ಮಹಿಳೆ ಮಹಾಲಕ್ಷ್ಮೀ ಕೊಲೆ ಪ್ರಕರಣದ ಹಂತಕ ಆತ್ಮಹತ್ಯೆ ಮಾಡಿಕೊಂಡ ಹಿನ್ನೆಲೆ ಪೊಲೀಸರು ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ ಎಂದು ವರದಿಯಾಗಿದೆ.

ಪ್ರಕರಣ ತನಿಖಾ ಹ'ಂತ'ದ'ಲ್ಲಿ'ರು'ವಾ'ಗ ಆರೋಪಿ ಮೃತನಾದರೆ ಪ್ರಕರಣ ತಾರ್ಕಿಕ ಅಂತ್ಯಗೊಳಿಸಲು ನ್ಯಾಯಾಲಯಕ್ಕೆ ಸಲ್ಲಿಸುವುದೇ ಅಬೇಟೆಡ್ ಚಾರ್ಜ್ ಶೀಟ್‌ಯಾಗಿದೆ. ಬಂಧನ ಭೀತಿಯಿಂದ ತಲೆಮರೆಸಿಕೊಂಡು ಓಡಾಡುತ್ತಿದ್ದ ಒಡಿಶಾ ಮೂಲದ ಮುಕ್ತಿರಂಜನ್ ಪ್ರತಾಪ್ ರಾಯ್ ಬಂಧಿಸಲು ನಗರ ಪೊಲೀಸರು ಆತನ ತವರೂರಿಗೆ ತೆರಳಿ ಶೋಧ ಕಾರ್ಯ ನಡೆಸುತ್ತಿದ್ದರು. ಈ ಮಧ್ಯೆ ಬುಧವಾರ ಬೆಳಗ್ಗೆ ಭದ್ರಕ್ ಜಿಲ್ಲೆಯ ಭೂನಿಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಆರೋಪಿಯ ಶವ ಪತ್ತೆಯಾಗಿತ್ತು. ಸದ್ಯ ಘಟನಾ ಸ್ಥಳದಲ್ಲಿ ಬೀಡುಬಿಟ್ಟಿರುವ ಪೊಲೀಸರು, ಮೃತನ ರಕ್ತದ ಮಾದರಿ ಹಾಗೂ ಫಿಂಗರ್ ಪ್ರಿಂಟ್ಸ್ ಸ್ಯಾಂಪಲ್‌ಗಳನ್ನ ತೆಗೆದುಕೊಂಡಿದ್ದಾರೆ.

ರಕ್ತದ ಮಾದರಿ ಲುಮಿನಾರ್ ಟೆಸ್ಟ್‌ಗೆ

ಕೃತ್ಯದ ಸ್ಥಳದಲ್ಲಿ ಪತ್ತೆಯಾದ ರಕ್ತದ ಮಾದರಿಯನ್ನು ಲುಮಿನಾರ್ ಟೆಸ್ಟ್‌ಗೆ ಕಳುಹಿಸಲಿದ್ದಾರೆ. ಆರೋಪಿ ಸಹೋದರನ 164 ಹೇಳಿಕೆ ಹಾಗೂ ಸಾಂದರ್ಭಿಕ ಸಾಕ್ಷ್ಯಗಳ ಹೇಳಿಕೆ ಎಲ್ಲವನ್ನು ''ಅಬೇಟೆಡ್ ಚಾರ್ಜ್ ಶೀಟ್''ನಲ್ಲಿ ಉಲ್ಲೇಖಿಸಲಾಗುತ್ತದೆ. ಕೃತ್ಯದ ನಂತರ ಮೃತದೇಹ ತುಂಡರಿಸಿ ಪರಾರಿಯಾಗುವ ವೇಳೆ ಯಾರಾದರೂ ಆರೋಪಿಗೆ ಸಹಕರಿಸಿರುವುದು ಕಂಡುಬಂದರೆ ಅವರನ್ನು ಬಂಧಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಬೇಟೆಡ್ ಚಾರ್ಜ್ ಶೀಟ್ ಸಲ್ಲಿಕೆ ಮಾಡುವ ಮೊದಲು ಪ್ರಕರಣ ಸಂಬಂಧ ಎಲ್ಲಾ ರೀತಿಯ ಸಾಕ್ಷ್ಯಗಳನ್ನು ಪೊಲೀಸರು ಕಲೆಹಾಕಲಿದ್ದಾರೆ. ಇದಕ್ಕೂ ಮುನ್ನ ಒಡಿಶಾದ ಸ್ಥಳೀಯ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ಆರೋಪಿ ಮೊಬೈಲ್ ವಶಕ್ಕೆ ಪಡೆದು ಎಫ್‌ಎಸ್‌ಎಲ್ (ವಿಧಿ ವಿಜ್ಞಾನ ಪ್ರಯೋಗಾಲಯ)ಗೆ ರವಾನಿಸಬೇಕಿದೆ.

ಬಿಬಿಎಂಪಿ ಅಧಿಕಾರಿಗಳಿಬ್ಬರು ಲೋಕಾ ಬಲೆಗೆ

ವಾಣಿಜ್ಯ ಕಟ್ಟಡದ ತೆರಿಗೆ ಮೊತ್ತ ಕಡಿಮೆ ಮಾಡಲು 4.50 ಲಕ್ಷ ರು. ಲಂಚ ಸ್ವೀಕಾರ

ಬೆಂಗಳೂರು: ನಗರದಲ್ಲಿ ವಾಣಿಜ್ಯ ಕಟ್ಟಡದ ತೆರಿಗೆ ಮೊತ್ತ ಕಡಿಮೆ ಮಾಡುವ ಸಂಬಂಧ ಮಾಲೀಕರಿಂದ 4.50 ಲಕ್ಷ ಲಂಚ ಸ್ವೀಕರಿಸುತ್ತಿದ್ದಾಗಲೇ ಇಬ್ಬರು ಬಿಬಿಎಂಪಿ ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಯಶವಂತಪುರ ಬಿಬಿಎಂಪಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ರಾಜೇಂದ್ರ ಪ್ರಸಾದ್ ಹಾಗೂ ತೆರಿಗೆ ಮೌಲ್ಯಮಾಪಕ ಪ್ರಕಾಶ್ ಲೋಕಾಯುಕ್ತ ಅಧಿಕಾರಿಗಳಿಗೆ ಸಿಕ್ಕಿಬಿದ್ದವರು. ಇವರನ್ನು ಬಂಧಿಸಿ ಹೆಚ್ಚಿನ ವಿಚಾರಣೆಗೊಳಪಡಿಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಯಶವಂತಪುರದಲ್ಲಿ ವಾಸವಾಗಿರುವ ದೂರುದಾರ ಚಂದ್ರಶೇಖರ್ ಎಂಬವರಿಗೆ ಕರೆ ಮಾಡಿ, ವಾಣಿಜ್ಯ ಕಟ್ಟಡವೊಂದರ ತೆರಿಗೆ ಪಾವತಿಸಬೇಕಿದೆ. ತೆರಿಗೆ ಹಣ ಕಡಿತಗೊಳಿಸಲು 4.5 ಲಕ್ಷ ರು.ಗಳಿಗೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ದೂರುದಾರರು ಮಾಹಿತಿ ನೀಡಿದ ಮೇರೆಗೆ, ಇಂದು 4.5 ಲಕ್ಷ ರು. ಲಂಚ ಪಡೆಯುವಾಗ ರೆಡ್ ಹ್ಯಾಂಡ್ ಆಗಿ ಅಧಿಕಾರಿಗಳು ಸಿಕ್ಕಿಬಿದ್ದಿದ್ದಾರೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ತನಿಖೆ ವೇಳೆ ಬಯಲು

ತೆರಿಗೆ ಬಾಕಿಯಿಲ್ಲದಿದ್ದರೂ ಹೆಚ್ಚು ತೆರಿಗೆ ಬಾಕಿಯಿರುವುದಾಗಿ ಕರೆ ಮಾಡಿ ತಿಳಿಸುತ್ತಿದ್ದ ಆರೋಪಿಗಳು ಅವರನ್ನು ಯಶವಂತಪುರದ ಬಿಬಿಎಂಪಿ ಕಚೇರಿಗೆ ಕರೆಯಿಸಿಕೊಳ್ಳುತ್ತಿದ್ದರು. 70 ಲಕ್ಷ ರುಪಾಯಿ ತೆರಿಗೆ ಉಳಿಸಿಕೊಂಡಿದ್ದು, ಕೂಡಲೇ ಟ್ಯಾಕ್ಸ್ ಕಟ್ಟಬೇಕು. ಚೆಕ್ ಮೂಲಕ ಪಾವತಿಸಿ ಎಂದು ಸೂಚಿಸಿದ್ದ ಆರೋಪಿಗಳು ಇನ್ನುಳಿದ ಹಣವನ್ನು ನಗದು ರೂಪದಲ್ಲಿ ಹಣ ನೀಡಬೇಕು ಎಂದು ಹೇಳುತ್ತಿದ್ದರು. ಇದೇ ರೀತಿಯ ತಂತ್ರ ಅನುಸರಿಸಿ ಹಲವರಿಂದ ಲಂಚ ಪಡೆದ ಗುಮಾನಿಯಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ದೂರುದಾರ ಚಂದ್ರಶೇಖರ್ ಅವರನ್ನು ಕರೆಯಿಸಿಕೊಂಡು ತೆರಿಗೆ ಹಣ ಕಡಿತ ಮಾಡುತ್ತೇವೆ. ಇದಕ್ಕೆ 4.5 ಲಕ್ಷ ಲಂಚ ನೀಡುವಂತೆ ತಾಕೀತು ಮಾಡಿದ್ದರು. ಇದರಂತೆ ಲಂಚ ಸ್ವೀಕರಿಸುವಾಗ ತಮ್ಮ ಕೈಗೆ ಆರೋಪಿತರು ಸಿಕ್ಕಿಬಿದ್ದಿದ್ದಾರೆ ಎಂದು ಲೋಕಾಯುಕ್ತರು ಮಾಹಿತಿ ನೀಡಿದ್ದಾರೆ.

ವಿಧಾನಸೌಧದಲ್ಲಿ ಅತ್ಯಾಚಾರ; ಶಾಸಕ ಮುನಿರತ್ನ ವಿರುದ್ಧ ಮತ್ತೊಂದು ಆರೋಪ

ಬೆಂಗಳೂರು: ಜಾತಿ ನಿಂದನೆ ಹಾಗೂ ಕೊಲೆ ಬೆದರಿಕೆ ಆರೋಪದಲ್ಲಿ ಜೈಲು ಸೇರಿ ಅತ್ಯಾಚಾರದ ಆರೋಪವನ್ನು ಎದುರಿಸುತ್ತಿರುವ ಶಾಸಕ ಮುನಿರತ್ನ ವಿರುದ್ಧ ಮತ್ತೊಂದು ಗಂಭೀರ ಆರೋಪವನ್ನು ಮಹಿಳೆ ಮಾಡಿದ್ದಾಳೆ.

ಮೊದಲ ಎರಡು ಪ್ರಕರಣದಲ್ಲಿ ಜಾಮೀನು ಸಿಕ್ಕರೂ ಅತ್ಯಾಚಾರ ಪ್ರಕರಣದಲ್ಲಿ ಜೈಲಿನಲ್ಲಿರುವ ಮುನಿರತ್ನ ವಿರುದ್ಧ ದೂರು ನೀಡಿದ್ದ ಮಹಿಳೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದು, 'ಮುನಿರತ್ನ ಅವರು ತಮ್ಮನ್ನು ವಿಧಾನಸೌಧ, ವಿಕಾಸಸೌಧ ಹಾಗೂ ಸರಕಾರಿ ವಾಹನದಲ್ಲಿ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿದ್ದಾರೆ.

ಮುನಿರತ್ನ ಅತ್ಯಾಚಾರ ಪ್ರಕರಣ ಸಂಬಂಧ ಗುರುವಾರ ಪೊಲೀಸರು ಸಂತ್ರಸ್ತ ಮಹಿಳೆಯನ್ನು ವಿಚಾರಣೆ ನಡೆಸಿದ್ದು, ವಿಧಾನಸೌಧದೊಳಗೆ, ವಿಕಾಸಸೌಧದಲ್ಲಿ ಅಷ್ಟೇ ಅಲ್ಲದೆ, ಸರಕಾರಿ ವಾಹನದಲ್ಲೂ ಕೂಡ ಶಾಸಕ ಮುನಿರತ್ನ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಸಂತ್ರಸ್ತೆ ಪೊಲೀಸರ ಮುಂದೆ ಹೇಳಿಕೆ ದಾಖಲಿಸಿರುವುದಾಗಿ ತಿಳಿದು ಬಂದಿದೆ. ಈಗಾಗಲೇ ಅತ್ಯಾಚಾರ ಪ್ರಕರಣದಲ್ಲಿ ಬಂಧನದಲ್ಲಿರುವ ರಾಜರಾಜೇಶ್ವರಿ ನಗರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ಸಂತ್ರಸ್ತೆಯ ಅಚ್ಚರಿ ಹೇಳಿಕೆ ಮತ್ತಷ್ಟು ಸಂಕಷ್ಟ ತಂದೊಡ್ಡಿದಂತಾಗಿದೆ. ಅಲ್ಲದೆ, ರಾಜಕೀಯ ಹಾಗೂ ಸಾರ್ವಜನಿಕ ವಲಯವನ್ನು ಬೆಚ್ಚಿಬೀಳಿಸಿದೆ. ಈ ಕುರಿತು ಕಗ್ಗಲಿಪುರ ಠಾಣಾ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸೆ. 28ಕ್ಕೆ ಚೆಸ್ ಚಾಂಪಿಯನ್‌ಶಿಪ್

ಬೆಂಗಳೂರು: ಅಖಿಲ ಭಾರತ ಚೆಸ್ ಫೆಡರೇಷನ್ ವತಿಯಿಂದ ಅಂಧರಿಗಾಗಿ ಸೆ. 27 ರಿಂದ ಅ. 7ರವರೆಗೆ ನಗರದ ದಿ ಚಾನ್ಸರಿ ಪೆವಿಲಿಯನ್‌ನಲ್ಲಿ ವಿಶ್ವ ಜೂನಿಯರ್ ಮತ್ತು ಮಹಿಳಾ ಚೆಸ್ ಚಾಂಪಿಯನ್‌ಶಿಪ್ ಸ್ಪರ್ಧೆ ಆಯೋಜಿಸಲಾಗಿದ್ದು, ಈ ಸ್ಪರ್ಧೆ ಸೆ. 28 ರಂದು ಬೆಳಗ್ಗೆ 10.30ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಫೆಡೆರೇಷನ್‌ನ ಪ್ರಧಾನ ಕಾರ್ಯದರ್ಶಿ ಮನೀಶ್ ಟಾಲ್ ತಿಳಿಸಿದರು.

ಉಚಿತ ಆಯುರ್ವೇದ ಶಿಬಿರ, ಸಮಾಲೋಚನೆ

ಬೆಂಗಳೂರು: ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘ ಹಾಗೂ ಶ್ರೀಶಾರದಾ ಆಯುರ್ವೇದ ಹಾಸ್ಪಿಟಲ್ ಸಹಯೋಗದಲ್ಲಿ ಉಚಿತ ಆಯುರ್ವೇದ ಶಿಬಿರ ಹಾಗೂ ಅನುಭವಿ ವೈದ್ಯರಿಂದ ಸೆ.28ರ ಶನಿವಾರ ಸಮಾಲೋಚನೆ ಏರ್ಪಡಿಸಲಾಗಿದೆ. ಹೊಸಕೆರೆಹಳ್ಳಿ ಕ್ರಾಸ್‌ನಲ್ಲಿರುವ ಶ್ರೀ ಶಕ್ತಿ ಗಣಪತಿ ಸೇವಾ ಮಂಡಳಿ ಟ್ರಸ್ಟ್ ಆವರಣದಲ್ಲಿ ಅಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಅಗತ್ಯ ಇರುವವರಿಗೆ ಉಚಿತವಾಗಿ ಔಷಧವನ್ನು ನೀಡಲಾಗುವುದು ಎಂದು ಬ್ರಾಹ್ಮಣ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಅ.1ರಿಂದ 3ನೇ ಬಾರಿಗೆ ಬಿಯರ್ ದರ ಏರಿಕೆ:

ಬೆಂಗಳೂರು: ರಾಜ್ಯದಲ್ಲಿ ವರ್ಷದೊಳಗೆ ಮೂರನೇ ಬಾರಿಗೆ ಬಿಯರ್ ದರ ಏರಿಕೆ ಮಾಡಲು ರಾಜ್ಯ ಸರಕಾರ ಮುಂದಾಗಿದೆ. ಅ.1ರಂದು ರಾಜ್ಯದಲ್ಲಿ ಬಿಯರ್ ದರ ಪ್ರತಿ ಬಾಟಲಿಗೆ 10ರಿಂದ 15 ರು. ಹೆಚ್ಚಿಸಲು ತೀರ್ಮಾನಿಸಿದೆ. 15 ದಿನಗಳ ಹಿಂದೆ ಪ್ರೀಮಿಯಂ ವಿಸ್ಕಿ ದರವನ್ನು ಕಡಿಮೆ ಮಾಡಿತ್ತು. ಬಿಯರ್ ದರ ಏರಿಕೆ ಮಾಡಿ ಮದ್ಯ ಪ್ರಿಯರಿಗೆ ಶಾಕ್ ನೀಡಿದೆ. ಪ್ರೀಮಿಯಂ ಬ್ರ್ಯಾಂಡ್ ಬಿಯರ್‌ಗಳ ಎಂಆರ್‌ಪಿ ದರ 175 ರು. ತಲುಪಬಹುದು. ರಾಜ್ಯ ಸರಕಾರ 15 ತಿಂಗಳಲ್ಲಿ ಎರಡು ಬಾರಿ ಬಿಯರ್ ದರ ಏರಿಕೆ ಮಾಡಿದೆ. ಈಗ 3ನೇ ಬಾರಿಗೆ ಏರಿಕೆ ಮಾಡಲು ಮುಂದಾಗಿದೆ. ಹೊಸ ದರ ಅ.1ರಿಂದಲೇ ರಾಜ್ಯದಲ್ಲಿ ಜಾರಿಗೆ ಬರುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಬಳಸದ ಅನುದಾನ: 318 ಪಿಡಿಒ ಅಮಾನತು

ಬೆಂಗಳೂರು: ಸ್ವಚ್ಛ ಭಾರತ ಮಿಷನ್‌ನಲ್ಲಿ ಕಾಲಮಿತಿಯೊಳಗೆ ಶೌಚಾಲಯ ನಿರ್ಮಾಣಕ್ಕೆ ಅನುದಾನ ಬಳಕೆ ಮಾಡದ 318 ಪಿಡಿಒಗಳನ್ನು ಅಮಾನತು ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ರಾಜ್ಯದ 318 ಪಂಚಾಯಿತಿಗಳಲ್ಲಿ ಆಗಸ್ಟ್ ಅಂತ್ಯದವರೆಗೆ ಒಂದು ಶೌಚಾಲಯವನ್ನು ನಿರ್ಮಿಸದೇ ಅನುದಾನವನ್ನು ಉಳಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಈ ಕ್ರಮವಹಿಸಲಾಗಿದೆ. ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಿಟಿಜನ್ ಪೋರ್ಟಲ್ ಮೂಲಕ ಸಲ್ಲಿಕೆಯಾದ ಬೇಡಿಕೆಗಳ ಆಧಾರದಲ್ಲಿ ಪ್ರತಿ ಪಂಚಾಯಿತಿವಾರು ಪಟ್ಟಿಗಳನ್ನು ಸಿದ್ಧಪಡಿಸಲಾಗಿದೆ. 4.85 ಲಕ್ಷ ಶೌಚಾಲಯ ನಿರ್ಮಾಣಕ್ಕೆ ಬೇಡಿಕೆ ಬಂದಿದ್ದು, 3.60 ಲಕ್ಷ ಶೌಚಾಲಯಗಳಿಗೆ ಅನುದಾನ ಬಿಡುಗಡೆ ಮಾಡಲಾಗಿತ್ತು. ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಅರ್ಜಿ ಸಲ್ಲಿಸುವ ಸಾಮಾನ್ಯ ವರ್ಗ, ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತ ಸಮುದಾಯದ ಪ್ರತಿ ಕುಟುಂಬಕ್ಕೂ ಸ್ವಚ್ಛ ಭಾರತ್ ಯೋಜನೆಯಲ್ಲಿ ಕೇಂದ್ರ ಸರಕಾರ 7,200 ರು, ರಾಜ್ಯ ಸರಕಾರ 4,800 ರು. ಸೇರಿ 12 ಸಾವಿರ ರು. ಸಹಾಯಧನ ನೀಡುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ 15 ಸಾವಿರ ನಿಗದಿ ಮಾಡಲಾಗಿದೆ. ಈ ಅನುದಾನವನ್ನು ನಿಗದಿತ ಅವಧಿಯೊಳಗೆ ಖರ್ಚು ಮಾಡದಿರುವುದರಿಂದ ಈ ಕ್ರಮವಹಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ಅ.1ಕ್ಕೆ ಪಡಿತರ ವಿತರಕ ಸಂಘದ ತುರ್ತು ಸಭೆ

ಬೆಂಗಳೂರು: ರೇಷನ್ ಕಾರ್ಡ್‌ಗೆ ಆಧಾರ್ ಜೋಡಣೆ (ಇಕೆವೈಸಿ) ಮಾಡಿದ್ದಕ್ಕಾಗಿ ಅಂಗಡಿ ಮಾಲೀಕರಿಗೆ ನೀಡಬೇಕಿದ್ದ ಕಮಿಷನ್ ಹಣ 7 ವರ್ಷಗಳಿಂದ ಕೊಟ್ಟಿಲ್ಲ. ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದು ರಾಜ್ಯ ಸರಕಾರಿ ಪಡಿತರ ವಿತರಕರ ಸಂಘದ ಟಿ.ಕೃಷ್ಣಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣ ಬದಲು 5 ಕೆಜಿ ಅಕ್ಕಿ, ಆದಾಯ ಪ್ರಮಾಣ ಪತ್ರದ ಆಧಾರದಲ್ಲಿ ಕಾರ್ಡ್ ರದ್ದತಿಗೆ ಆಹಾರ ಇಲಾಖೆ ಮುಂದಾಗಿದ್ದು, ಈ ಎಲ್ಲ ಸಮಸ್ಯೆ ಬಗೆಹರಿಸಲು ಮಂಗಳವಾರ (ಅ.1)ರಂದು ಖಾಸಗಿ ಹೋಟೆಲ್‌ನಲ್ಲಿ ತುರ್ತು ಸಭೆ ಕರೆಯಲಾಗಿದೆ ಎಂದು ತಿಳಿಸಿದ್ದಾರೆ. ಕಾರ್ಡ್‌ದಾರರಿಗೆ ಉಚಿತವಾಗಿ 5 ಕೆಜಿ ಆಹಾರ ಪದಾರ್ಥ ನೀಡಲಾಗುತ್ತಿದೆ. ಆಹಾರ ಇಲಾಖೆ ನಡೆಸಿದ್ದ ಸಮೀಕ್ಷೆಯಲ್ಲಿ ಹಣ ಬದಲು ಅಕ್ಕಿ ಅಥವಾ ದಿನಬಳಕೆ ವಸ್ತು ನೀಡುವಂತೆ ಶೇ.90ರಷ್ಟು ಕಾರ್ಡುದಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದರು.

{ ಕೃಷ್ಣ ಬೈರೇಗೌಡ } ಸಚಿವ

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಿದಾಗ ಮಾತ್ರ ನಮ್ಮ ಕೆಲಸ ಸಾರ್ಥಕವಾಗುತ್ತದೆ. ಆ ನಿಟ್ಟಿನಲ್ಲಿ ಶಿಕ್ಷಕರ ಮೇಲೆ ಹೆಚ್ಚಿನ ಜವಾಬ್ದಾರಿ ಇದ್ದು, ಸರಕಾರಿ ಶಾಲೆಯಲ್ಲಿ ಓದಿದ ಮಕ್ಕಳೂ ನಾಳೆ ದೊಡ್ಡ ಉದ್ಯಮಿಗಳಾಗಿ ಸಮಾಜಕ್ಕೆ ಹಾಗೂ ಎಲ್ಲ ಶಿಕ್ಷಕರಿಗೂ ಮತ್ತಷ್ಟು ಪ್ರೇರಣೆಯಾಗಲಿ. ಪ್ರತಿಯೊಬ್ಬರೂ ಸರಕಾರಿ ಶಾಲೆಗಳಲ್ಲಿ ಮತ್ತಷ್ಟು ಗುಣಮಟ್ಟದ ಶಿಕ್ಷಣ ಲಭ್ಯವಾಗುವಂತೆ ನೋಡಿಕೊಳ್ಳಬೇಕಿದೆ.

5800 ಎಕರೆ ವ್ಯಾಪ್ತಿಯಲ್ಲಿ ಕ್ವಿನ್ ಸಿಟಿ ಆರಂಭ | ಕರ್ನಾಟಕದಲ್ಲಿ ವಿಜ್ಞಾನ, ತಂತ್ರಜ್ಞಾನವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಲಾಗುವುದು

ಜ್ಞಾನ, ಆರೋಗ್ಯ, ಸಂಶೋಧನಾ ನಗರಕ್ಕೆ ಚಾಲನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿರುವ ಕ್ವಿನ್ ಸಿಟಿಯ ಮೊದಲ ಹಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದ್ದು, ಈ ಮಹತ್ವಾಕಾಂಕ್ಷೆ ಯೋಜನೆಯಿಂದ 40 ಸಾವಿರ ಕೋಟಿ ಹೂಡಿಕೆ ಹಾಗೂ ಒಂದು ಲಕ್ಷ ಉದ್ಯೋಗ ಸೃಷ್ಟಿಯ ಸಾಧ್ಯತೆಯಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಾಬಸಪೇಟೆ ಮತ್ತು ದೊಡ್ಡಬಳ್ಳಾಪುರದ ನಡುವೆ, ಸ್ಯಾಟ್‌ಲೈಟ್ ಟೌನ್ ರಿಂಗ್ ರಸ್ತೆಯ ಸಮೀಪ ಅಭಿವೃದ್ಧಿಪಡಿಸಲಿರುವ ಕ್ವಿನ್ ಸಿಟಿ (ಜ್ಞಾನ, ಆರೋಗ್ಯ ಮತ್ತು ಸಂಶೋಧನಾ ನಗರ) ಯೋಜನೆಯ ಮೊದಲನೆಯ ಹಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಚಾಲನೆ ನೀಡಿದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕರ್ನಾಟಕ ದೇಶದ ಜ್ಞಾನಾಧಾರಿತ ಆರ್ಥಿಕತೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಕ್ವಿನ್ ಸಿಟಿಯು ಕರ್ನಾಟಕ ಮತ್ತು ಭಾರತದ ಪಾಲಿಗೆ ಹೊಸ ಭಾಷ್ಯ ಬರೆಯಲಿದೆ. ಇಲ್ಲಿ ಜಾಗತಿಕ ಮಟ್ಟದ ಸಹಭಾಗಿತ್ವ ಮತ್ತು ನಾವೀನ್ಯತೆಗಳಿಗೆ ಆದ್ಯತೆ ಇರಲಿದ್ದು, 'ಸ್ಮಾರ್ಟ್ ಲಿವಿಂಗ್' ಪರಿಕಲ್ಪನೆಗೆ ಒತ್ತು ಕೊಡಲಾಗುವುದು. ಇಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು, ಸುಸ್ಥಿರ ಬೆಳವಣಿಗೆ ಸಾಧಿಸಲಾಗುವುದು' ಎಂದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಕ್ವಿನ್ ಸಿಟಿ ಯೋಜನೆಯ ಮೊದಲನೆ ಹಂತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಸೇರಿದಂತೆ ಸಚಿವ ಸಂಪುಟದ ಹಲವು ಸಚಿವರು ಉಪಸ್ಥಿತರಿದ್ದರು.

ದೇಶದಲ್ಲಿಯೇ ವಿಶಿಷ್ಟ ಯೋಜನೆ

ಸಚಿವ ಎಂ.ಬಿ ಪಾಟೀಲ ಮಾತನಾಡಿ, ಒಟ್ಟು 5,800 ಎಕರೆಯಲ್ಲಿ ಕ್ವಿನ್ ಸಿಟಿಯನ್ನು ಅಭಿವೃದ್ಧಿಪಡಿಸುವ ಉದ್ದೇಶವಿದ್ದು, ಮೊದಲ ಹಂತದಲ್ಲಿ 2,000 ಎಕರೆಯಲ್ಲಿ ಆರಂಭಿಸಲಾಗುವುದು. ಐದು ಲಕ್ಷ ಜನವಸತಿಯ ಗುರಿಯುಳ್ಳ ವಿನೂತನ ನಗರದ ಪರಿಧಿಯಲ್ಲಿ ಶೇ 40ರಷ್ಟು ಜಾಗವನ್ನು ಉದ್ಯಾನಗಳಿಗೆ ಮೀಸಲಿಡಲಾಗಿದೆ. ಇದರೊಂದಿಗೆ 0.69 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಕ್ಕೆ 465 ಎಕರೆ, ವರ್ಷಕ್ಕೆ ಏಳು ಸಾವಿರ ಟನ್ ಹಣ್ಣು-ತರಕಾರಿ ಬೆಳೆಯಲು 200 ಎಕರೆ, ಶೇಕಡ 50ರಿಂದ 70ರಷ್ಟು ಜಲ ಮರುಪೂರಣ ವ್ಯವಸ್ಥೆ ಇರಲಿದೆ' ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ ಪಾಟೀಲ, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್, ಚೆಲುವರಾಯಸ್ವಾಮಿ, ಡಾ.ಎಂ ಸಿ ಸುಧಾಕರ್, ಲಕ್ಷ್ಮೀ ಹೆಬ್ಬಾಳ್ಕರ್, ಕೆ ಎನ್ ರಾಜಣ್ಣ, ಮಧು ಬಂಗಾರಪ್ಪ ಸೇರಿದಂತೆ ಅನೇಕರಿದ್ದರು.

ಉದ್ದೇಶಿತ ನಗರದಲ್ಲಿ ಮೊದಲಿಗೆ ಅತ್ಯುತ್ತಮ ಗುಣಮಟ್ಟದ ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಗುವುದು. ಜತೆಗೆ ಜಗತ್ತಿನ ಅಗ್ರ 500 ವಿಶ್ವವಿದ್ಯಾಲಯಗಳ ಕ್ಯಾಂಪಸ್ ತೆರೆಯಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಉತ್ಕೃಷ್ಟ ದರ್ಜೆಯ ಆಸ್ಪತ್ರೆಗಳು, ವೈದ್ಯಕೀಯ ಸಂಶೋಧನಾ ಸಂಸ್ಥೆಗಳು ಮತ್ತು ವೈದ್ಯಕೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಾಗುವುದು.

-ಎಂ.ಬಿ ಪಾಟೀಲ, ಕೈಗಾರಿಕಾ ಸಚಿವ

ಬೆಂಗಳೂರಿನ ಕೈಗಾರಿಕಾ ಬೆಳವಣಿಗೆಗೆ ಹೇರಳ ಅವಕಾಶಗಳಿದ್ದು, ಇದನ್ನು ಸಾಧಿಸಲು ಸರಕಾರ ಬದ್ಧವಾಗಿದೆ. ಎರಡು ವಾರಗಳಲ್ಲಿ ಕಾವೇರಿ 5ನೇ ಹಂತದ ಕುಡಿವ ನೀರು ಪೂರೈಕೆ ಆರಂಭವಾಗಲಿದ್ದು, 20 ವರ್ಷಗಳ ಕಾಲ ನೀರಿನ ಕೊರತೆ ಇರುವುದಿಲ್ಲ. ಹಾಗೆಯೇ, ಇಲ್ಲಿ ವಿದ್ಯುತ್ ತೊಂದರೆ ಕೂಡ ಇಲ್ಲ. ಸಂಚಾರ ವ್ಯವಸ್ಥೆಯಲ್ಲಿ ತುಸು ಸಮಸ್ಯೆ ಇರುವುದು ನಿಜ. ಅದನ್ನು ಕ್ಷಿಪ್ರಗತಿಯಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು.

- ಡಿ ಕೆ ಶಿವಕುಮಾರ್, ಉಪ ಮುಖ್ಯಮಂತ್ರಿ

ಏನಿದು ಕ್ವಿನ್ ಸಿಟಿ?

ಕ್ವಿನ್ ಸಿಟಿ-ಯು ಅಭಿವೃದ್ಧಿಗಿಂತ ಹೆಚ್ಚಿನದಾಗಿದೆ. ಇದು ಭವಿಷ್ಯದ ಕಡೆಗಿನ ಒಂದು ದಿಟ್ಟ ಹೆಜ್ಜೆಯಾಗಿದೆ. ಶಿಕ್ಷಣ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನೆಗಾಗಿ ವಿಶ್ವ ದರ್ಜೆಯ ಕೇಂದ್ರವನ್ನು ನಿರ್ಮಿಸಲಿದೆ. ಕ್ವಿನ್ ಸಿಟಿ ಅಂದರೆ ಜ್ಞಾನ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನೆ. ಇವುಗಳ ನಡುವಣ ಸಮನ್ವಯತೆಯು ಆರ್ಥಿಕ ಬೆಳವಣಿಗೆ ಉತ್ತೇಜಿಸುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಮುನ್ನಡೆಸಲಿದೆ. ಭವಿಷ್ಯದ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ವಿಶೇಷ ವಿನ್ಯಾಸ ಮಾಡಿರುವ ಈ ಕ್ವಿನ್ ಸಿಟಿ-ಯು ಸುಸ್ಥಿರತೆ, ಮನೆ, ಕೆಲಸದ ಸ್ಥಳ ಮತ್ತು ಅತ್ಯಾಧುನಿಕ ನಗರ ಸೇರಿದಂತೆ ಬದುಕಿನ ವಿವಿಧ ಸಂಗತಿಗಳಲ್ಲಿ ತಂತ್ರಜ್ಞಾನದ ನೆರವಿನಿಂದ ದಕ್ಷತೆ ಹಾಗೂ ಅನುಕೂಲತೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಸುಧಾರಿಸುವ ಸ್ಮಾರ್ಟ್ ಲಿವಿಂಗ್ ಪರಿಕಲ್ಪನೆ ಕಾರ್ಯರೂಪಕ್ಕೆ ತರಲು ದಾಬಾಸ್‌ಪೇಟೆ ಮತ್ತು ದೊಡ್ಡಬಳ್ಳಾಪುರ ಮಧ್ಯೆ ಅಸ್ತಿತ್ವಕ್ಕೆ ಬರಲಿದೆ. ಒಟ್ಟಿನಲ್ಲಿ 40 ಸಾವಿರ ಕೋಟಿ ಹೂಡಿಕೆಯ ಯೋಜನೆಯಿಂದ ಒಂದು ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ.

ಮೆಟ್ರೋ: ತಲೆ ತಿರುಗಿ ಬಿದ್ದ ಯುವತಿ

ಬೆಂಗಳೂರು: ನೇರಳೆ ಮಾರ್ಗದ ಮೆಟ್ರೋ ರೈಲಿನಲ್ಲಿ ಜನದಟ್ಟಣೆಯಿಂದಾಗಿ ಯುವತಿಯೊಬ್ಬಳು ತಲೆ ತಿರುಗಿಬಿದ್ದ ಘಟನೆ ವರದಿಯಾಗಿದೆ.

ನೇರಳೆ ಮಾರ್ಗದಲ್ಲಿ ವೈಟ್‌ಫೀಲ್ಡ್-ಕೆಂಪೇಗೌಡ ಇಂಟರ್‌ಚೇಂಜ್ ಮೆಟ್ರೋ ನಿಲ್ದಾಣಕ್ಕೆ ತೆರಳುತ್ತಿದ್ದ ಮೆಟ್ರೋ ರೈಲು ಜನರಿಂದ ತುಂಬಿಹೋಗಿ ದ್ದರಿಂದ ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಈ ವೇಳೆ ಯುವತಿ ತಲೆ ತಿರುಗಿ ಬಿದ್ದಿದ್ದು, ಕೂಡಲೇ ಸಹ ಪ್ರಯಾಣಿಕರು ಅವರನ್ನು ರಕ್ಷಣೆ ಮಾಡಿ, ನೀರು ಕೊಟ್ಟಿದ್ದಾರೆ. ಸಂಜೆ 6 ಗಂಟೆ ಸುಮಾರಿಗೆ ಕೆ.ಆರ್ ಪುರ ಮೆಟ್ರೋ ನಿಲ್ದಾಣದಲ್ಲಿ ರೈಲು ಹತ್ತಿದ್ದೆ. ಈ ವೇಳೆ ರೈಲು ಪ್ರಯಾಣಿಕರಿಂದ ತುಂಬಿ ತುಳುಕುತ್ತಿತು. ಮೆಟ್ರೋ ದಲ್ಲಿ ನಿಂತಿದ್ದ ಮಹಿಳೆಯೊಬ್ಬರು ಇದ್ದಕ್ಕಿದ್ದಂತೆ ಬಿದಿದ್ದು, ಸ್ಥಳದಲ್ಲಿದ್ದವರು ಅವರಿಗೆ ಆಸನವನ್ನು ಬಿಟ್ಟುಕೊಟ್ಟು, ನೀರು ಕೊಟ್ಟರು. ಅಷ್ಟರಲ್ಲಿ ರೈಲು ಸ್ವಾಮಿ ವಿವೇಕಾನಂದ ರಸ್ತೆಯ ಮೆಟ್ರೋ ನಿಲ್ದಾಣ ತಲುಪಿತು. ನಿಲ್ದಾಣದಲ್ಲಿದ್ದ ಸಿಬ್ಬಂದಿಯನ್ನು ಸಹಾಯಕ್ಕಾಗಿ ಕರೆಯಲಾದರೂ ಕೂಡಾ ಆ ವ್ಯಕ್ತಿ ಪ್ರತಿಕ್ರಿಯಿಸಲಿಲ್ಲ. ಬಳಿಕ ಮೆಟ್ರೋ ಬಾಗಿಲು ಮುಚ್ಚಿತು. ಮತ್ತೆ ರೈಲು ಸಂಚರಿಸಲು ಆರಂಭಿಸಿತು. ಬಳಿಕ ತನ್ನ ಜತೆಗೆ ಬಂದಿದ್ದ ವ್ಯಕ್ತಿ ಯೊಂದಿಗೆ ಯುವತಿ ಹಲಸೂರು ಮೆಟ್ರೋ ನಿಲ್ದಾಣದಲ್ಲಿ ಇಳಿದು ಹೋದರು.

ನೆರವಿಗೆ ಎಮರ್ಜೆನ್ಸಿ ಬಟನ್ : ಈ ಘಟನೆಗೆ ಮೆಟ್ರೋ ಪ್ರತಿಕ್ರಿಯಿಸಿದ್ದು, ಪ್ರತಿ ಬೋಗಿಯಲ್ಲಿಯೂ ಎಮರ್ಜೆನ್ಸಿ ಬಟನ್ ಇರುತ್ತದೆ. ಯಾವುದೇ ಸಮಸ್ಯೆಯಾದರೂ ಜನರು ಆ ಬಟನ್ ಒತ್ತಿದರೆ, ಅದು ಲೋಕೋ ಪೈಲಟ್‌ಗೆ ಸಂದೇಶ ನೀಡುತ್ತದೆ. ಸಿಸಿಟಿವಿ ಮೂಲಕ ಪರಿಸ್ಥಿತಿಯನ್ನು ಅರಿತು, ನೆರವಿಗೆ ಧಾವಿಸಲಾಗುತ್ತದೆ. ಲೋಕೋ ಪೈಲಟ್ ಪರಿಸ್ಥಿತಿ ಅವಲೋಕಿಸಿ ತುರ್ತು ಪರಿಸ್ಥಿತಿ ನಿಜವಾಗಿದ್ದರೆ ಕೂಡಲೇ ರೈಲು ನಿಲ್ಲಿಸಿ ಪರಿಹಾರ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿದೆ.

ವಿಶ್ವವಾಣಿ ಪತ್ರಿಕೆಯ ವರದಿಗೆ ಸ್ಪಂದಿಸಿದ ಸರಕಾರ

ವನ ಸಂರಕ್ಷಣೆಗೆ ಸೂಕ್ತ ಕ್ರಮ

ಬೆಂಗಳೂರು: ಬಸವಕಲ್ಯಾಣದ ಹರಳಯ್ಯ ವೃತ್ತದ ಪಕ್ಕದಲ್ಲಿರುವ ಬಸವ ವನ ಸೂಕ್ತ ಸಂರಕ್ಷಣೆ ಹಾಗೂ ನಿರ್ವಹಣೆ ಇಲ್ಲದೆ ಅವ್ಯವಸ್ಥೆಯ ಆಗರವಾಗಿದೆ ಎಂಬ ವಿಶ್ವವಾಣಿ ಪತ್ರಿಕೆಯ ವರದಿಗೆ ಸರಕಾರ ಸ್ಪಂದಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಬಸವಕಲ್ಯಾಣ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬಸವ ವನದ ನಿರ್ವಹಣೆ ಕಾರ್ಯವು ಪ್ರಗತಿಯಲ್ಲಿದ್ದು, ಉದ್ಯಾನವನ ನಿರ್ವಹಣೆ ಹಾಗೂ ಸಂರಕ್ಷಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ನಮ್ಮ ವರದಿ ಫಲಶ್ರುತಿ

ವಿಶ್ವವಾಣಿ ವರದಿಯನ್ನು ಗಮನಿಸಿದ ಮುಖ್ಯಮಂತ್ರಿಗಳ ಕಚೇರಿಯ ಕುಂದು ಕೊರತೆ ವಿಭಾಗದ ವಿಶೇಷ ಕರ್ತವ್ಯಾಧಿಕಾರಿ ಡಾ.ವೈಷ್ಣವಿ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ್ದರು. ಇದರಿಂದ ಎಚ್ಚೆತ್ತುಕೊಂಡಿರುವ ತೋಟಗಾರಿಕಾ ಅಧಿಕಾರಿಗಳು ಬಸವ ಕಲ್ಯಾಣ ಅಭಿವೃದ್ಧಿಯ ಆಯುಕ್ತರಿಗೆ ಪತ್ರ ಬರೆದು ಮುಂದಿನ ದಿನದಲ್ಲಿ ಬಸವ ವನ ಸಂರಕ್ಷಿಸುವುದಾಗಿ ತಿಳಿಸಿದ್ದಾರೆ.

ಬಸವೇಶ್ವರ ಪ್ರತಿಮೆ ಅನಾವರಣ ಪ್ರಧಾನಿ ಮೋದಿಗೆ ಆಹ್ವಾನ

ಬೆಂಗಳೂರು: ಯುನೈಟೆಡ್ ಕಿಂಗ್‌ಡಮ್‌ನ ಲ್ಯಾಂಬೆತ್ ಬಸವೇಶ್ವರ ಪ್ರತಿಷ್ಠಾನದಿಂದ ಸ್ಥಾಪಿಸಲಾದ ಬಸವೇಶ್ವರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಯು.ಕೆ ಪ್ರಧಾನಿ ಕೇರ್ ಸ್ಟಾರ್ಮರ್‌ಗೆ ಆಹ್ವಾನಿಸಲಾಗಿದೆ.

ಈ ಕುರಿತು ಪತ್ರ ಬರೆದಿರುವ ಲ್ಯಾಂಬೆತ್‌ನ ಮಾಜಿ ಮೇಯರ್ ನೀರಜ್ ಪಾಟೀಲ್ 12ನೇ ಶತಮಾನದಲ್ಲಿ ವಿಶಿಷ್ಟ ಭಾರತೀಯ ತತ್ವಜ್ಞಾನಿ, ರಾಜನೀತಿತಜ್ಞ, ಮತ್ತು ಜಗತ್ತಿನಲ್ಲಿ ಪ್ರಜಾಸತ್ತಾತ್ಮಕ ಆದರ್ಶಗಳಿಗೆ ಅಡಿಪಾಯ ಹಾಕಿದ ಬಸವೇಶ್ವರರು ಸಮಾಜ ಸುಧಾರಕರಾಗಿದ್ದರು ಎಂದು ತಿಳಿಸಿದ್ದಾರೆ. ಜಗತ್ತಿನಾದ್ಯಂತ ಭಾರತೀಯರಿಂದ ವ್ಯಾಪಕವಾಗಿ ಗೌರವಿಸಲ್ಪಟ್ಟಿರುವ ಬಸವೇಶ್ವರರು, ಜಾತಿ ವ್ಯವಸ್ಥೆ ಮತ್ತು ಗುಲಾಮಗಿರಿ ವಿರುದ್ಧ ಹೋರಾಡಿದ್ದರು. ಪುರುಷರು, ಮಹಿಳೆಯರು ಮತ್ತು ವಿವಿಧ ಸಾಮಾಜಿಕ-ಆರ್ಥಿಕ ವ್ಯಕ್ತಿಗಳಿಗೆ ಸಮಾನ ಪ್ರಾತಿನಿಧ್ಯ ನೀಡಿದ್ದರು. ಹೀಗಾಗಿ ವಿಶ್ವಾದ್ಯಂತ ಲಕ್ಷಾಂತರ ಭಾರತೀಯರಿಗೆ ಸ್ಫೂರ್ತಿಯಾಗಿರುವ ಬಸವೇಶ್ವರ ಪ್ರತಿಮೆ ಅನಾವರಣ ಸಮಾರಂಭದಲ್ಲಿ ನಿಮ್ಮ ಉಪಸ್ಥಿತಿಯಿಂದ ಬ್ರಿಟೀಷ್ ಭಾರತೀಯರಿಗೂ ಹೆಮ್ಮೆ ಹಾಗೂ ಭಗವಾನ್ ಬಸವೇಶ್ವರರಿಗೂ ಗೌರವ ನೀಡಿದಂತಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹದೇವಪುರ ವಿಧಾನಸಭಾ ಕ್ಷೇತ್ರದ ಕಾಡುಬೀಸನಹಳ್ಳಿಯ ನ್ಯೂ ಹಾರಿಜನ್ ಕಾಲೇಜಿನಲ್ಲಿ ಬಿಬಿಎಂಪಿ ವತಿಯಿಂದ ಆಯೋಜಿಸಿದ್ದ ಸ್ವಭಾವ್ ಸ್ವಚ್ಛತಾ ಸಂಸ್ಕಾರ್ ಸ್ವಚ್ಛತಾ ಕಾರ್ಯಕ್ರಮದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ ಭಾಗವಹಿಸಿದ್ದರು. ಈ ವೇಳೆ ಜಂಟಿ ಆಯುಕ್ತ ದಾಕ್ಷಾಯಣಿ, ಮಹದೇವಪುರ ಜಲಶಕ್ತಿ ಕಾರ್ಯಪಡೆಯ ಅಧ್ಯಕ್ಷ ಮನೋಹರರೆಡ್ಡಿ, ಮಾಜಿ ಕಾರ್ಪೊರೇಟರ್ ಸುರೇಶ್ ಇದ್ದರು.

ಬೆಂಗಳೂರಿನ ನಯನ ಸಭಾಂಗಣದಲ್ಲಿ ರಂಗಭೂಮಿಯ ಹಿರಿಯ ಕಲಾವಿದೆ ಜಯಲಕ್ಷ್ಮಿ ಪಾಟೀಲ ಅವರ ಬಣ್ಣದ ಬದುಕಿನ ಕುರಿತು ಗಣೇಶ ಅಮೀನಗಡ ಅವರು ನಿರೂಪಿಸಿದ 'ರಂಗ ಬಾನಾಡಿ' ಕೃತಿಯನ್ನು ಡಾ.ಉಮಾಶ್ರೀ ಬಿಡುಗಡೆಗೊಳಿಸಿದರು. ರಂಗಕರ್ಮಿಗಳಾದ ಹೆಲನ್, ರಾಜು ತಾಳಿಕೋಟಿ, ಶ್ರೀನಿವಾಸ್ ಜಿ ಕಪ್ಪಣ್ಣ, ನಾಗರಾಜಮೂರ್ತಿ, ಡಾ.ನಾ.ದಾಮೋದರ ಶೆಟ್ಟಿ, ಜಯಲಕ್ಷ್ಮಿ ಪಾಟೀಲ, ಅನ್ನಪೂರ್ಣ ಸಾಗರ, ಗಿರಿಜಾ ಲೋಕೇಶ್, ರಾಮ್ ಜೆ, ಕೆಎಸ್‌ಡಿಎಲ್ ಚಂದ್ರು, ಗಣೇಶ ಅಮೀನಗಡ ಇದ್ದಾರೆ

ಜನತಾ ನ್ಯಾಯಾಲಯ ಆದೇಶ ಪ್ರಶ್ನಿಸಲು ಚರ್ಚೆ

ಕಾನೂನು ತಜ್ಞರೊಂದಿಗೆ ಸಿಎಂ ಸಮಾಲೋಚನೆ

ಮೇಲ್ಮನವಿ: ಇಂದು ತೀರ್ಮಾನ?

ಬೆಂಗಳೂರು: ಮುಡಾ ಪ್ರಕರಣದಲ್ಲಿ ತನಿಖೆಗೆ ಆದೇಶಿಸಿರುವ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶವನ್ನು ಪ್ರಶ್ನಿಸಿ ಯಾವ ರೀತಿಯಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಶುಕ್ರವಾರ ತೀರ್ಮಾನಿಸುವ ಸಾಧ್ಯತೆಯಿದೆ.

ಹೈಕೋರ್ಟ್ ಆದೇಶ ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯ ನೀಡಿರುವ ಆದೇಶಕ್ಕೆ ತಡೆ ಕೋರಿ ರಾಜ್ಯ ಹೈಕೋರ್ಟ್‌ನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸುವ ಸಂಬಂಧ ಅಧಿಕೃತ ನಿವಾಸ ಕಾವೇರಿಯಲ್ಲಿ ಕಾನೂನುತಜ್ಞರು ಹಾಗೂ ಕೆಲ ಸಚಿವರ ಜತೆ ಸಭೆ ನಡೆಸಿ ಮುಂದಿನ ಕಾನೂನು ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ ನಡೆಸಿದರು. ಬಹುತೇಕರು ಮೇಲ್ಮನವಿ ಸಲ್ಲಿಸುವ ಕುರಿತಂತೆ ಸಲಹೆ ನೀಡಿದ್ದು, ಈ ಹಿನ್ನೆಲೆಯಲ್ಲಿ ಶುಕ್ರವಾರ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಆದೇಶಕ್ಕೆ ತಡೆ ನೀಡಲು ಮನವಿ ಮಾಡಿಕೊಳ್ಳಲಿದ್ದಾರೆ ಎಂದು ಹೇಳಲಾಗಿದೆ.

ಸಿಎಂ ಬೆನ್ನಿಗೆ ನಿಂತ ಸಚಿವರು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶಿಸಿರುವ ಜನಪ್ರತಿನಿಧಿಗಳ ನ್ಯಾಯಾಲಯದ ತೀರ್ಪು ಹಾಗೂ ರಾಜ್ಯಪಾಲರ ಪ್ರಾಸಿಕ್ಯೂಷನ್ ಅನುಮತಿಯನ್ನು ಎತ್ತಿಹಿಡಿದ ಹೈಕೋರ್ಟ್ ತೀರ್ಪಿನ ಬಗ್ಗೆಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲೂ ಚರ್ಚೆ ನಡೆಸಲಾಗಿದ್ದು, ಸಭೆಯಲ್ಲಿ ಭಾಗಿಯಾಗಿದ್ದ ಎಲ್ಲ ಸಚಿವರು, ಕಾನೂನು ಹೋರಾಟ ನಡೆಸಿ ನಾವು ನಿಮ್ಮ ಬೆನ್ನಿಗಿದ್ದೇವೆ ಎಂಬ ಅಭಯ ನೀಡಿದ್ದಾರೆ. ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವ ಅಗತ್ಯವಿಲ್ಲ. ಯಾವುದಕ್ಕೂ ಕುಗ್ಗಬೇಡಿ ಎಂದಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿಗಳ ಸಭೆಯಲ್ಲಿ ಗೃಹ ಸಚಿವ ಡಾ. ಜಿ. ಪರಮೇಶ್ವರ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ ಪಾಟೀಲ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಮಾಜಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ ಸೇರಿದಂತೆ ಹಲವು ಪ್ರಮುಖ ಮುಖಂಡರು ಭಾಗಿಯಾಗಿದ್ದರು.

ದಸರಾ ಉದ್ಘಾಟನೆಗೆ ಹಂಪನಾಗೆ ಅಧಿಕೃತ ಆಹ್ವಾನ

ಹಿರಿಯ ಸಾಹಿತಿ, ಸಂಶೋಧಕ ಪ್ರೊ.ಹಂಪ ನಾಗರಾಜಯ್ಯ ಅವರನ್ನು ಮೈಸೂರು ಜಿಲ್ಲಾಡಳಿತ ಮೈಸೂರು ದಸರಾ ಉದ್ಘಾಟನೆಗೆ ಅಧಿಕೃತವಾಗಿ ಆಹ್ವಾನ ನೀಡಿತು.

ಬೆಂಗಳೂರು: ಹಿರಿಯ ಸಾಹಿತಿ, ಸಂಶೋಧಕ ಪ್ರೊ.ಹಂಪ ನಾಗರಾಜಯ್ಯ ಅವರನ್ನು ಮೈಸೂರು ಜಿಲ್ಲಾಡಳಿತ ಮೈಸೂರು ದಸರಾ ಉದ್ಘಾಟನೆಗೆ ಅಧಿಕೃತವಾಗಿ ಆಹ್ವಾನ ನೀಡಿತು. ಕ್ರಸೆಂಟ್ ರಸ್ತೆಯ ಅಮೆರಿಕನ್ ಕಾಲೋನಿಯಲ್ಲಿರುವ ಹಂಪನಾ ಅವರ ನಿವಾಸಕ್ಕೆ ತೆರಳಿದ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಂಡ ಹಂಪನಾ ಅವರಿಗೆ ಅಹ್ವಾನ ಪತ್ರ ನೀಡಿ ದಸರಾ ಉದ್ಘಾಟನೆಗೆ ಬರುವಂತೆ ಮನವಿ ಮಾಡಿತು. ಇದೇ ವೇಳೆ ಅವರಿಗೆ ಮೈಸೂರು ಪೇಟ, ಶ್ರೀಗಂಧದ ಹಾಗೂ ಗಂಧದ ಮರದಿಂದ ಕೆತ್ತನೆ ಮಾಡಿದ ಕಲಾಕೃತಿ ನೀಡಿ ಗೌರವಿಸಿದರು. ಮೈಸೂರು ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಎಎಸ್ಪಿ ವಿಷ್ಣುವರ್ಧನ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಚಾಮುಂಡಿ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಮತ್ತು ಸ್ವಾಗತ ಸಮಿತಿಯ ಎಲ್ಲ ಅಧಿಕಾರಿಗಳು ಇದ್ದರು.

ವಿಜ್ಞಾನಿ, ಎಂಜಿನಿಯರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮತ

ವಿಜ್ಞಾನಿಗಳ ಸಾಧನೆ ಯುವ ಪೀಳಿಗೆಗೆ ಆದರ್ಶ

ಬೆಂಗಳೂರು : ಬೆಂಗಳೂರು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ ಆಗಿದೆ ಎಂದರೆ ಇದರಲ್ಲಿ ಹಲವು ವಿಜ್ಞಾನಿಗಳ, ತಂತ್ರಜ್ಞರ ಕೊಡುಗೆ ಇದ್ದು, ವಿಜ್ಞಾನದ ಬೆಳವಣಿಗೆಯಿಂದ ಮಾತ್ರ ದೇಶದ ಸರ್ವತೋಮುಖ ಪ್ರಗತಿ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಭಾರತೀಯ ವಿಜ್ಞಾನ ಮಂದಿರ ಸಂಸ್ಥೆಯ ಜೆ.ಎನ್. ಟಾಟಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ 2022 ಮತ್ತು 2023 ನೇ ಸಾಲಿನ ವಿಜ್ಞಾನಿ ಮತ್ತು ಎಂಜಿನಿಯರ್‌ಗೆ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ವಿಜ್ಞಾನದ ಆಸಕ್ತಿ ಹೆಚ್ಚಿ, ವಿಜ್ಞಾನಿಗಳ ಸಂಖ್ಯೆ ಹೆಚ್ಚಾದರೆ ದೇಶದ ಬೆಳವಣಿಗೆ ಸಾಧ್ಯ. ಸಮಾಜದ ತಾರತಮ್ಯ ಅಳಿಯಬೇಕಾದರೆ ಎಲ್ಲಾ ಜಾತಿ, ಧರ್ಮ, ವರ್ಗಗಳಿಗೆ ಸಮಾನ ಅವಕಾಶಗಳು ಸಿಗುವಂತಾಗಬೇಕು ಎಂದರು.

ಸಿಎನ್‌ಆರ್ ಹೆಮ್ಮೆಯ ಸಾಧನೆ

ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳ ಸಾಧನೆ ಯುವ ಪೀಳಿಗೆಗೆ ಆದರ್ಶ. ಇವರ ಸಾಧನೆ ವಿಜ್ಞಾನ-ತಂತ್ರಜ್ಞಾನದಲ್ಲಿ ಯುವ ಪೀಳಿಗೆ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಲು ಅನುಕೂಲ ಆಗುತ್ತದೆ. ಸಿ.ಎನ್.ರಾವ್ ಅವರ ಸಾಧನೆ ಇಡಿ ಮನುಷ್ಯ ಕುಲದ ಹೆಮ್ಮೆ. ವಿಜ್ಞಾನದ ಬೆಳವಣಿಗೆಗೆ ಅವರ ತುಡಿತ ಶ್ಲಾಘನೀಯ.

ಭಾರತೀಯ ವಿಜ್ಞಾನ ಮಂದಿರ ಸಂಸ್ಥೆಯ ಜೆ.ಎನ್.ಟಾಟಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ 2022 ಮತ್ತು 2023 ನೇ ಸಾಲಿನ ವಿಜ್ಞಾನಿ ಮತ್ತು ಎಂಜಿನಿಯರ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿದರು. ಸಚಿವ ಎನ್.ಎಸ್.ಬೋಸರಾಜು, ಭಾರತ ರತ್ನ ಪ್ರೊ.ಸಿ.ಎನ್.ಆರ್.ರಾವ್ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ವಿಜ್ಞಾನ-ತಂತ್ರಜ್ಞಾನ ಮತ್ತು ಸಂಶೋಧನೆಯಲ್ಲಿ ನಂಬರ್ ಒನ್ ಇದ್ದೇವೆ. ಈ ವಿಜ್ಞಾನ ತಂತ್ರಜ್ಞಾನದ ಫಲ ಜನಸಾಮಾನ್ಯರಿಗೆ ತಲುಪಬೇಕು. ಗ್ರಾಮೀಣ ಭಾಗದ ಹಲವರು ವಿಜ್ಞಾನಿಗಳಾಗಿ ಪ್ರಶಸ್ತಿ ಪುರಸ್ಕೃತರಾಗಿರುವುದು ಖುಷಿಯ ವಿಚಾರ. ಪ್ರತಿಭೆ ಅನುವಂಶೀಯ ಅಲ್ಲ. ಅವಕಾಶ ಮತ್ತು ನಿರಂತರ ಶ್ರಮದಿಂದ ಪ್ರತಿಭೆ ವಿಸ್ತಾರಗೊಳ್ಳುತ್ತದೆ ಎಂದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ಬಹಳಷ್ಟು ಆದ್ಯತೆ ನೀಡಿದ್ದು, ಭಾರತೀಯ ವಿಜ್ಞಾನ ಸಂಸ್ಥೆಯ ಸಹಯೋಗದಲ್ಲಿ ರಾಜ್ಯದ ಅಭಿವೃದ್ಧಿಗೆ ಪೂರಕವಾಗುವ ಹಾಗೂ ರೈತ ಸಮುದಾಯಕ್ಕೆ ನೆರವಾಗುವ ತಂತ್ರಜ್ಞಾನ ಆಧಾರಿತ ಯೋಜನೆ ರೂಪಿಸುವತ್ತ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಮುಂದಾಗಬೇಕು.

ಎನ್ ಎಸ್ ಬೋಸರಾಜು,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್: ಸಿಎಂಗೆ ಅಭಿನಂದನೆ



ಬೆಂಗಳೂರು: ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಕೊಡಬೇಕು ಎನ್ನುವುದು ಮೂರು ದಶಕಗಳ ಹೋರಾಟ. ಈ ಹೋರಾಟಕ್ಕೆ ಮನ್ನಣೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರಕಾರ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡುವ ಆದೇಶವನ್ನು ಹೊರಡಿಸಿದ್ದು, ಅದಕ್ಕಾಗಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವು ಅಭಿನಂದಿಸುತ್ತದೆ.

ದಾವಣಗೆರೆಯಲ್ಲಿ ನಡೆದ 38ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ)ದ ಹಕ್ಕೊತ್ತಾಯ ಪರಿಗಣಿಸಿ, ಬಜೆಟ್‌ನಲ್ಲಿಯೇ ಉಚಿತ ಬಸ್ ಪಾಸ್ ೋಷಣೆ ಮಾಡುವುದಾಗಿ ಭರವಸೆ ನೀಡಿದ್ದರು. ಅಂತೆಯೇ ಬಜೆಟ್‌ನಲ್ಲಿಯೂ ಘೋಷಿಸಿದ್ದರು. ಈಗ ಉಚಿತ ಬಸ್ ಪಾಸ್ ಸೌಲಭ್ಯ ನನಸಾಗುವಂತೆ ಮಾಡಿರುವುದು ಶ್ಲಾಘನೀಯ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರತಿಕ್ರಿಯಿಸಿದ್ದಾರೆ.

ಉಚಿತ ಬಸ್ ಪಾಸ್‌ಗೆ 15.66 ಕೋಟಿ ಹಣವನ್ನು ಮೀಸಲಿರಿಸಿ ಯೋಜನೆಗೆ ಅನುಮತಿ ಪಡೆಯಲು ವಾರ್ತಾ ಇಲಾಖೆ ಮತ್ತು ಹಣಕಾಸು ಇಲಾಖೆಯಲ್ಲಿ ನಿರಂತರವಾಗಿ ಕೆಯುಡಬ್ಲ್ಯೂಜೆ ಮಾಡಿದ ಹೋರಾಟದ ಫಲವಾಗಿ ಯೋಜನೆ ಸಕಾರಗೊಳ್ಳಲು ಸಾಧ್ಯವಾಗಿದೆ. ಇದಕ್ಕೆ ಸಹಕಾರ ನೀಡಿದ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರ ಪ್ರಯತ್ನವೂ ಮಹತ್ವದ್ದು ಎಂದು ತಗಡೂರು ತಿಳಿಸಿದ್ದಾರೆ.

ನುಡಿದಂತೆ ನಡೆದು, ಉಚಿತ ಬಸ್ ಪಾಸ್ ಜಾರಿಗೆ ಬರಲು ಕಾರಣರಾದ ಸಿಎಂ ಸಿದ್ದರಾಮಯ್ಯ, ಈ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಹಕಾರ ನೀಡಿದ ಸಿಎಂ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತರಾದ ಹೇಮಂತ ನಿಂಬಾಳ್ಕರ ಸೇರಿದಂತೆ ಸಹಕಾರ ಕೊಟ್ಟ ಎಲ್ಲರಿಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕೃತಜ್ಞತೆಗಳು ಸಲ್ಲುತ್ತವೆ ಎಂದು ಅವರು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ರಫೀಕ್ ಕೊಲೆ ಪ್ರಕರಣ: 4 ಆರೋಪಿಗಳು ಖುಲಾಸೆ

ಮಂಗಳೂರು: ಕಾಲಿಯ ರಫೀಕ್ ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ನಿರಾಪರಾಧಿ ಎಂದು ಘೋಷಿಸಿ ದಕ್ಷಿಣ ಕನ್ನಡ 1ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶ ಮಲ್ಲಿಕಾರ್ಜುನ ಸ್ವಾಮಿಯವರು ಆದೇಶಿಸಿದ್ದಾರೆ. 2017 ಫೆ.14 ರಂದು ಉಳ್ಳಾಲ ಠಾಣೆ ವ್ಯಾಪ್ತಿಯ ಪೆಟ್ರೋಲ್ ಪಂಪ್ ಮುಂಭಾಗ ರಫೀಕ್ ಮತ್ತು ಆತನ ಸ್ನೇಹಿತರು ಬರುತ್ತಿದ್ದಾಗ ಸಂಚು ರೂಪಿಸಿ ಅಪಘಾತ ಮಾಡಲಾ ಗಿತ್ತು. ಈ ವೇಳೆ ಪೆಟ್ರೋಲ್ ಪಂಪ್ ಕಡೆಗೆ ಓಡಿದ ರಫೀಕ್‌ನನ್ನು ಆರೋಪಿಗಳು ಬೆನ್ನಟ್ಟಿ ಪಿಸ್ತೂಲಿನಿಂದ ಗುಂಡು ಹಾರಿಸಿ, ತಲವಾರಿನಿಂದ ತೀವ್ರ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. **ಒಳಸಂಚು ದೋಷಾರೋಪಣೆ:** ಆರೋಪಿಗಳು ರಫೀಕ್‌ನನ್ನು ಕೊಲೆ ಮಾಡುವ ಬಗ್ಗೆ ಕೇರಳದ ಮಂಜೇಶ್ವರ ತಾಲೂಕಿನ ಹಿದಾಯತ್ ನಗರ ಎಂಬಲ್ಲಿರುವ ಕ್ಲಬ್‌ವೊಂದರಲ್ಲಿ ಸೇರಿ ಒಳಸಂಚು ನಡೆಸಿದ್ದರು. ಈ ಆರೋಪಗಳನ್ನು ಸಾಬೀತುಪಡಿ ಸಲು ಸರ್ಕಾರದ ಪರವಾಗಿ ಅಭಿಯೋಜಕರು 31 ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು, 68 ದಾಖಲೆ ಗಳನ್ನು ಕೋರ್ಟ್‌ಗೆ ಸಲ್ಲಿಸಲಾಗಿತ್ತು. ವಾದ-ಪ್ರತಿ ವಾದ ಆಲಿಸಿದ ನ್ಯಾಯಧೀಶರಾದ ಮಲ್ಲಿಕಾರ್ಜುನ ಸ್ವಾಮಿಯವರು, ಈ ಮೇಲೆ ನಮೂದಿಸಿದ ಆರೋಪಿಗಳ ವಿರುದ್ಧ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ವಿಫಲವಾಗಿದೆ ಎಂದು ಅಭಿಪ್ರಾಯ ಪಟ್ಟು ಆರೋಪಿಗಳನ್ನು ಬಿಡುಗಡೆ ಮಾಡಿದ್ದಾರೆ.

ರೋರಿಕ್ ಎಸ್ಟೇಟ್‌ನಲ್ಲಿ ಟೂರಿಸಂ ಹಬ್

← ಮೊದಲಪುಟದಿಂದ

ಇನ್ನು ರಾಜ್ಯದಲ್ಲಿರುವ ಪ್ರವಾಸೋದ್ಯಮದ ಅಭಿವೃದ್ಧಿಗೆ ಮೊದಲು ಸ್ಥಳಗಳಿಗೆ ಸೂಕ್ತ ರಸ್ತೆ ಸಂಪರ್ಕ, ವಾಸ್ತವ್ಯಕ್ಕೆ ಹೋಟೆಲ್ ಸೇರಿದಂತೆ ಮೂಲಸೌಕರ್ಯಗಳನ್ನು ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರ ಇನ್ನಷ್ಟು ಅನುದಾನವನ್ನು ನೀಡಬೇಕು.

- **ಮಯೂರ ಹೋಟೆಲ್‌ಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಯೋಚಿಸಿಲ್ಲವೇ?**
- ಕೆಎಸ್‌ಟಿಡಿಸಿ ವತಿಯಿಂದ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 27 ಮಯೂರ ಹೋಟೆಲ್‌ಗಳಿವೆ. ಈ ಎಲ್ಲವೂ 'ಬಜೆಟ್ ಫ್ರೆಂಡ್ಲಿ' ಆಗಿರುವುದರಿಂದ ಜನರನ್ನು ಆಕರ್ಷಿಸುತ್ತಿವೆ. ಆದರೆ ಹಾಲಿ ಇರುವ ಹೋಟೆಲ್‌ಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸುವುದರೊಂದಿಗೆ ವಿವಿಧ ಪ್ರವಾಸಿ ತಾಣದಲ್ಲಿ ಹೊಸ ಹೋಟೆಲ್‌ಗಳನ್ನು ಆರಂಭಿಸಬೇಕಿದೆ. ಈ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಚಿಂತನೆ ನಡೆಸಲಾಗಿದೆ. ಪಿಪಿಪಿ ಮಾದರಿಯಲ್ಲಿ ಮಾಡಬೇಕೋ ಅಥವಾ ಸರಕಾರದ ಲಭ್ಯ ಅನುದಾನವನ್ನು ಬಳಸಿಕೊಂಡು ಕೆಎಸ್‌ಟಿಡಿಸಿಯಿಂದಲೇ ಆರಂಭಿಸಬೇಕೋ ಎನ್ನುವ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಈ ಬಗ್ಗೆ ಸರಕಾರದೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.
- **ವಿದೇಶಿಗರಿಗೆ ಗೈಡ್‌ಗಳನ್ನು ಹೆಚ್ಚಿಸುವುದು ಸೂಕ್ತವಲ್ಲವೇ?**
- ಕೆಎಸ್‌ಟಿಡಿಸಿಯಲ್ಲಿರುವ ಗೈಡ್‌ಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಇತ್ತೀಚೆಗಷ್ಟೇ ನಡೆದ ರಾಷ್ಟ್ರೀಯ ಮಟ್ಟದ ಗೈಡ್‌ಗಳ ಸಮಾವೇಶದಲ್ಲಿಯೂ ಕರ್ನಾಟಕದ ಗೈಡ್‌ಗಳು ಅತ್ಯುತ್ತಮ ಎನ್ನುವ ಮಾತುಗಳನ್ನು ಆಡಿದ್ದಾರೆ. ವಿದೇಶಿ ಪ್ರವಾಸಿಗರು ರಾಜ್ಯಕ್ಕೆ ಬಂದರೆ, ಅವರೂ ಕೆಎಸ್‌ಟಿಡಿಸಿ ಗೈಡ್‌ಗಳನ್ನು ಪಡೆಯುತ್ತಾರೆ. ಮುಂದಿನ ದಿನದಲ್ಲಿ ಅಗತ್ಯವೆನಿಸಿದರೆ ಗೈಡ್‌ಗಳ ಸಂಖ್ಯೆ ಹೆಚ್ಚಿಸುವ ಅಥವಾ ಇನ್ನಷ್ಟು ತರಬೇತಿ ನೀಡುವುದನ್ನು ಮಾಡಲು ಚಿಂತನೆ ನಡೆಸುತ್ತೇವೆ.
- **ನೂತನ ಯೋಜನೆಗಳೇನು?**
- ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಮುಂದಿನ ದಿನದಲ್ಲಿ ನೂತನ ಬಸ್ ಸೇವೆಗಳು, ಪ್ಯಾಕೇಜ್ ಟೂರ್‌ಗಳನ್ನು ಆರಂಭಿಸುವ ಬಗ್ಗೆ ಚಿಂತನೆ ನಡೆಸಿದೆ. ಇದರೊಂದಿಗೆ ನಂದಿಬೆಟ್ಟದಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವಂತೆ ಶೌಚಾಲಯ, ಕಿಯಾಕ್ಸ್‌ಗಳ ಆರಂಭ, ಬೇಲೂರು-ಹಳೇಬೀಡು ಭಾಗದಲ್ಲಿ ಇನ್ನಷ್ಟು ಹೋಟೆಲ್‌ಗಳನ್ನು ನಿರ್ಮಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ. ಈ ಎಲ್ಲದರೊಂದಿಗೆ ಬೆಂಗಳೂರು ಹೊರವಲಯದಲ್ಲಿರುವ ರೋರಿಕ್ ಎಸ್ಟೇಟ್‌ನಲ್ಲಿ 30 ಎಕರೆ ವಿಸ್ತೀರ್ಣದಲ್ಲಿ ಟೂರಿಸಂ ಹಬ್ ಮಾಡುವ ಆಲೋಚನೆಯಿದೆ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗಿದ್ದು, ಪಿಪಿಪಿ ಮಾದರಿಯಲ್ಲಿ ಅಥವಾ ಸರಕಾರದ ಅನುದಾನದಲ್ಲಿ ಈ ಹಬ್ ನಿರ್ಮಿಸಲಾಗುವುದು.
- **ರೋರಿಕ್ ಎಸ್ಟೇಟ್‌ನಲ್ಲಿ ಏನೆಲ್ಲ ಸೌಲಭ್ಯಗಳಿರಲಿವೆ?**
- ರೋರಿಕ್ ಎಸ್ಟೇಟ್ ಸುಮಾರು 400 ಎಕರೆ ವಿಸ್ತೀರ್ಣದಲ್ಲಿದೆ. ಇದರಲ್ಲಿ ಅರಣ್ಯಭೂಮಿ ಹೊರತುಪಡಿಸಿ ಕೆಎಸ್‌ಟಿಡಿಸಿಗೆ 30 ಎಕರೆ ಸಿಗಲಿದೆ. ಇಲ್ಲಿ ಮನರಂಜನಾ ಪಾರ್ಕ್, ವಾಟರ್ ಗೇಮ್ಸ್ ಹಾಗೂ ಪ್ರವಾಸಿ ಗ್ರಾಮವನ್ನು ಆರಂಭಿಸಲು ಚಿಂತನೆ ನಡೆಸಲಾಗಿದೆ. ಅಮ್ಯೂಸ್‌ಮೆಂಟ್ ಪಾರ್ಕ್, ವಾಟರ್ ಪಾರ್ಕ್‌ನೊಂದಿಗೆ ಈ ಗ್ರಾಮದಲ್ಲಿ ಎಲ್ಲ ರಾಜ್ಯದ ಪ್ರವಾಸೋದ್ಯಮ ಇಲಾಖೆಗೆ ಕೌಂಟರ್ ಒಂದನ್ನು ಆರಂಭಿಸಲು ಆಹ್ವಾನ ನೀಡಲಾಗುವುದು. ಈ ಕೌಂಟರ್‌ನಲ್ಲಿ ಅವರವರ ರಾಜ್ಯದ ಕರಕುಶಲ ವಸ್ತುಗಳ ಮಾರಾಟ, ಪ್ರವಾಸಿ ಸ್ಥಳಗಳ ಮಾಹಿತಿ, ಬುಕ್ಕಿಂಗ್‌ಗಳಿಗೆ ಅವಕಾಶ ನೀಡಲಾಗುವುದು. ಈ ರೀತಿ ಮಾಡುವುದರಿಂದ ಬೆಂಗಳೂರಿನ ಸುತ್ತಮುತ್ತಲಿರುವ ಜನರಿಗೆ ವಾರಾಂತ್ಯದ ಪಿಕ್‌ನಿಕ್ ಸ್ಪಾಟ್ ಸಿಗುತ್ತದೆ. ಇದರೊಂದಿಗೆ ಒಂದೇ ಸೂರಿನಲ್ಲಿ ಇಡೀ ದೇಶದ ಪ್ರವಾಸಿ ಸ್ಥಳಗಳ ಮಾಹಿತಿಯೂ ಸಿಗುತ್ತದೆ.

ಗವರ್ನರ್‌ಗೆ ಸ್ಪೀಡ್ ಬ್ರೇಕ್

← ಮೊದಲಪುಟದಿಂದ

ತಕ್ಷಣ ಅಥವಾ ಇವತ್ತೇ ಮಾಹಿತಿ ಕಳುಹಿಸಿ ಎಂದು ರಾಜ್ಯಪಾಲರು ಸೂಚಿಸುತ್ತಿದ್ದಾರೆ. ಆದ್ದರಿಂದ ಈ ಎಲ್ಲದರ ಬಗ್ಗೆ ಚರ್ಚಿಸಿ ಈ ತೀರ್ಮಾನಕ್ಕೆ ಬರಲಾಗಿದೆ. ಮಾಹಿತಿಯನ್ನು ಕಳಿಸುವ ಮೊದಲು ಸಂಪುಟ ಸಭೆಯ ನಿರ್ಣಯ ಪಾಲಿಸಬೇಕು ಎಂದು ಸಚಿವ ಪಾಟೀಲ್ ಸ್ಪಷ್ಟಪಡಿಸಿದರು.

ಈಗಿರುವ ಪತ್ರಗಳಿಗೂ ಅನ್ವಯ: ಈ ನಿಯಮ ಮುಂದೆ ರಾಜ್ಯಪಾಲರು ಬರೆಯಬಹುದಾದ ಪತ್ರಗಳಿಗೆ ಮಾತ್ರವಲ್ಲದೇ, ಈಗಾಗಲೇ ಬರೆದಿರುವ ಪತ್ರಗಳಿಗೂ ಅನ್ವಯವಾಗಲಿದೆ. ಆದ್ದರಿಂದ ಮುಖ್ಯ ಕಾರ್ಯದರ್ಶಿಗಳಿಂದ ಸ್ಪಷ್ಟೀಕರಣ ಕೇಳಿ ಬರೆದಿರುವ ಪತ್ರಗಳಿಗೂ ಈ ನಿಯಮ ಅನ್ವಯವಾಗಲಿದೆ. ಸಂಪುಟದ ಈ ತೀರ್ಮಾನದಿಂದ ಈಗಾಗಲೇ ಬಾಕಿಯಿರುವ ಪತ್ರಗಳಿಗೂ ಉತ್ತರಿಸುವ ಮೊದಲು ಸಂಪುಟದ ಅನುಮತಿ ಪಡೆಯುವುದು ಕಡ್ಡಾಯವಾಗಲಿದೆ.

ಸಿಬಿಐಗೂ ಮುಗುದಾರ

← ಮೊದಲಪುಟದಿಂದ

ಪೂರ್ವಗ್ರಹಪೀಡಿತ ಸಿಬಿಐ: ಈ ಬಗ್ಗೆ ಮಾತನಾಡಿದ ಸಚಿವ ಎಚ್.ಕೆ.ಪಾಟೀಲ್, ಸಂಪುಟ ಕೈಗೊಂಡಿರುವ ತೀರ್ಮಾನ ಸ್ಪಷ್ಟವಾಗಿದೆ. ಈ ತೀರ್ಮಾನಕ್ಕೂ ಮುಡಾ, ವಾಲ್ಮೀಕಿ ಪ್ರಕರಣಕ್ಕೂ ಸಂಬಂಧವಿಲ್ಲ. ರಾಜ್ಯ ಸರಕಾರ ಸಿಬಿಐಗೆ ವಹಿಸಿದ ಕೆಲವು ಪ್ರಕರಣಗಳಲ್ಲಿ ವರ್ಷ ಕಳೆದರೂ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿಲ್ಲ. ಆದ್ದರಿಂದ ಸಿಬಿಐ ಪೂರ್ವಗ್ರಹಪೀಡಿತವಾಗಿ ಕೆಲಸ ಮಾಡಿದ್ದು ನೋಡಿದ್ದೇವೆ. ಚುನಾವಣೆ ಸಂದರ್ಭದಲ್ಲಿಯೂ ಹೇಗೆ ನಡೆದುಕೊಂಡಿತೆಂದು ನೋಡಿದ್ದೇವೆ. ಆದ್ದರಿಂದ ಈ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಸಿಬಿಐಗೆ ಸಹಜವಾದ ಪೂರ್ವಾಗ್ರಹ ಇದೆ ಎಂಬುದು ಇತ್ತೀಚಿನ ದಿನಗಳಲ್ಲಿ ದೃಢಪಡುತ್ತಿರುವ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಸಿಬಿಐಗೆ ಮುಕ್ತ ಅವಕಾಶ ಇರಬಾರದೆಂದು ರಾಜ್ಯ ಸರಕಾರ ತೀರ್ಮಾನಿಸಿದೆ.
– ಎಚ್.ಕೆ.ಪಾಟೀಲ್ ಕಾನೂನು ಸಚಿವ

ಕಾರ್ಯಪಾಲಕ ಅಭಿಯಂತರವರ ಕಛೇರಿ
ಲೋಕೋಪಯೋಗಿ ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು
Ph: 080 22112809, Email: pwdelediv1@gmail.com

ಸಂ. ಕಾ.ಇಂ(ಎ)/ಲೋ.ಇ/ವಿದ್ಯುತ್/1566/2024-25 ದಿನಾಂಕ: 26.09.2024

ಟೆಂಡರ್ ನೋಟಿಫಿಕೇಶನ್

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-1 STD ಷರತ್ತುಗೊಳಪಟ್ಟಂತೆ ಟೆಂಡರ್‌ನ ಮೊದಲನೆ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿದೆ.

Sl.No.	NAME OF WORK	Work Value (Rs. in Lakhs)
1.	Design, Supply, Errection, Testing and Commissioning of 1 No. of 8 Passengers, MRL, SS Finish, 2 Stops Elevator in Anna Dasoha Bhavana of Banashankari Amma Temple, S Kariyappa Road, Bengaluru. PWD/2024-25/EL/WORK_INDENT15615	19.05

ಮೇಲಿನ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್: https://kppp.karnataka.gov.in ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: 20.09.2024 ರಿಂದ 05.10.2024 ರ 16.00 ಗಂಟೆಯವರೆಗೆ ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ 05.10.2024 ರಂದೆ 16.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು
ವಾಸಸಂಇ/ಸಿಪಿ/ಎಎಎ/2213/2024-25

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/ಭೂ.ಪ-ಆನ್‌ಲೈನ್/37/2024-25 ದಿನಾಂಕ: 25.09.2024

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಶ್ರೀ. ಯೋಗೇಶ್ ಎಸ್.ಕೆ ಲೇಟ್ ಕೃಷ್ಣಪ್ಪ., ರವರು ಆನೇಕಲ್ ತಾಲ್ಲೂಕು, ಅತ್ತಿಬೆಲೆ-1 ಹೋಬಳಿ, ಅತ್ತಿಬೆಲೆ ಗ್ರಾಮದ ಸ.ನಂ.260/4ರಲ್ಲಿ 00-01 ಗುಂಟೆ, 260/5ರಲ್ಲಿ 0-1¼ ಗುಂಟೆ, 260/6ರಲ್ಲಿ 0-2¼ ಗುಂಟೆ, 260/3ರಲ್ಲಿ 0-01 ಗುಂಟೆ, 402/7ರಲ್ಲಿ 0-02½ ಗುಂಟೆ ಮತ್ತು 402/8ರಲ್ಲಿ 0-02½ ಗುಂಟೆ ವಿಸ್ತೀರ್ಣದ ಜಮೀನುಗಳನ್ನು **ಶೈಕ್ಷಣಿಕ ಸಂಸ್ಥೆ (ಶಾಲೆ/ಕಾಲೇಜು)** ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರ, ಮಹಾನಗರ ಆಯುಕ್ತರವರ ಕಛೇರಿ, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052. ಬೆಂಗಳೂರು ಜಿಲ್ಲೆ ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ವಾ.ಸಾ.ಸಂ.ಇ/2224/ಆಕಾರ್/2024-25

ಸಿದ್ದು ವಿರುದ್ಧ ಸುಳ್ಳು ಆರೋಪ

ದಾವಣಗೆರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಟಾರ್ಗೆಟ್ ಮಾಡಿರುವ ಬಿಜೆಪಿ, ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರವನ್ನು ಪತನಗೊಳಿಸುವ ಹುನ್ನಾರ ನಡೆಸಿದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜಭವನದ ದುರ್ಬಳಕೆ ಮಾಡಿಕೊಳ್ಳುವ ಮೂಲಕ ಬಿಜೆಪಿ ವಿರೋಧ ಪಕ್ಷಗಳ ಸರಕಾರ ವನ್ನು ಹಣಿಯುವ ಸಂಚು ಮಾಡುತ್ತಿದೆ. ರಾಜ್ಯದಲ್ಲಿಯೂ ರಾಜಭವನವನ್ನು ದುರ್ಬಳಕೆ ಮಾಡಿಕೊಂಡು ಸಿದ್ದರಾಮಯ್ಯ ನವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಸರಕಾರವನ್ನು ಅಸ್ಥಿರಗೊಳಿಸುವ ಹುನ್ನಾರ ನಡೆಸಿದೆ ಎಂದರು.

ಸಿದ್ದರಾಮಯ್ಯ ಅವರ ಜನಪರ ಆಡಳಿತ ಸಹಿಸದ ಬಿಜೆಪಿಯವರು ಅವರನ್ನು ಅಧಿಕಾರ ದಿಂದ ಕೆಳಗಿಳಿಸಲು ಷಡ್ಯಂತ್ರ ಮಾಡುತ್ತಿದ್ದಾರೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಪಾತ್ರವೇನೂ ಇಲ್ಲ ಎಂಬುದು ಸ್ವತಃ ಬಿಜೆಪಿ ನಾಯಕರಿಗೇ ಗೊತ್ತಿದೆ. ಆದರೂ ಸಹ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರೆ ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವುದು ಸಾಧ್ಯ ಇಲ್ಲವೆಂದು ಅವರ ಮೇಲೆ ಭ್ರಷ್ಟಾಚಾರದ ಆರೋಪ ಹೊರೆಸುತ್ತಿದ್ದಾರೆ. ಸಿದ್ದರಾಮಯ್ಯನವರ ಪರ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮತ್ತು ಶಾಸಕರಿದ್ದಾರೆ. ರಾಜ್ಯದ ಜನರ ಆಶೀರ್ವಾದವಿದ್ದು ಮುಂದಿನ ದಿನಗಳಲ್ಲಿ ಬಿಜೆಪಿಗರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಮಳಖೇಡ ಕೋಟೆಯ ಗೋಡೆ ಮತ್ತೆ ಕುಸಿತ

ಕಲಬುರಗಿ: ಜಿಲ್ಲೆಯಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ನಿರಂತರವಾಗಿ ಸುರಿತ್ತಿರುವ ಮಳೆಗೆ ಜಿಲ್ಲೆಯ ಸೇಡಂ ತಾಲೂಕಿನ ಐತಿಹಾಸಿಕ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿದ್ದ ಮಳಖೇಡ ಕೋಟೆಯ ಗೋಡೆ ಮತ್ತೊಮ್ಮೆ ಕುಸಿದು ಬಿದ್ದಿದೆ.



ಇದೇ ತಿಂಗಳ ಮೊದಲ ವಾರದಲ್ಲಿ ಮಳಖೇಡ್ ಕೋಟೆಯ ಗೋಡೆ ಕುಸಿದು ಬಿದ್ದಿತ್ತು. ಇದಾದ 15 ದಿನ ಕಳೆಯುವಷ್ಟರಲ್ಲಿ ಮತ್ತೊಮ್ಮೆ ಕೋಟೆಯ ಗೋಡೆ ಕುಸಿದು ಬಿದ್ದಿದ್ದು, ಒಂದೇ ತಿಂಗಳಲ್ಲಿ ಎರಡನೇ ಬಾರಿಗೆ ಗೋಡೆ ಕುಸಿತದಿಂದ ಸುತ್ತಮುತ್ತಲಿನ ಜನರಲ್ಲಿ ಆತಂಕ ಸೃಷ್ಟಿಸಿದೆ.

ಗೋಡೆ ಕುಸಿತದ ದೃಶ್ಯ ಸ್ಥಳೀಯರ ಮೊಬೈಲ್ ನಲ್ಲಿ ಸೆರೆ ಹಿಡಿದ್ದಿದ್ದಾರೆ. ಸೇಡಂ ತಾಲೂಕಿನ ಮಳಖೇಡ ಗ್ರಾಮದಲ್ಲಿ ರಾಷ್ಟ್ರ ಕೂಟರ ಕಾಲದಲ್ಲಿ ನಿರ್ಮಿಸಿದ್ದ ಈ ಕೋಟೆಯ ನವೀಕರಣ ಕಾಮಗಾರಿಗೆ ರಾಜ್ಯ ಸರಕಾರ 5 ಕೋಟಿ ವೆಚ್ಚದಲ್ಲಿ ಖರ್ಚು ಮಾಡಿತ್ತು. ಸತತ ಮಳೆಯಿಂದಾಗಿ ನವೀಕರಣ ಕಾಮಗಾರಿ ಮಾಡಿದ ಸ್ಥಳದಲ್ಲೆ ಗೋಡೆ ಕುಸಿಯುತ್ತಿದ್ದು, ಕಾಮಗಾರಿ ಕಳಪೆ ಮಟ್ಟದಿಂದ ಕೂಡಿದೆ ಎಂದು ಮಳಖೇಡ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕದನ ವಿರಾಮಕ್ಕೆ ನಕಾರ: ಇಸ್ರೇಲ್ ದಾಳಿ ತೀವ್ರ

← ಮೊದಲಪುಟದಿಂದ

ಈ ಬಗ್ಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಚೇರಿ ಪ್ರತಿಕ್ರಿಯಿಸಿದ್ದು, 'ಕದನ ವಿರಾಮ ಸಾಧ್ಯವೇ ಇಲ್ಲ. ಹಿಜ್ಬುಲ್ಲಾ ಸರ್ವನಾಶದ ಬಳಿಕವೇ ದಾಳಿ ನಿಲ್ಲಲಿದೆ' ಎಂದ ಸಾರಿದೆ.. ಈ ಮೂಲಕ ಇಸ್ರೇಲ್ ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸುವ ಸೂಚನೆ ನೀಡಿದೆ.

ಈಗಾಗಲೇ ನೇರ ದಾಳಿಯತ್ತ ಇಸ್ರೇಲ್ ಸಿದ್ಧತೆ ನಡೆಸುತ್ತಿದೆ ಎಂಬ ಸುದ್ದಿ ಕೂಡ ಹರಿದಾಡುತ್ತಿದ್ದು ಕದನ ವಿರಾಮಕ್ಕೂ ಒಪ್ಪಿಗೆ ಸೂಚಿಸದೇ ಹಿಜ್ಬುಲ್ಲಾ ಮೇಲೆ ಬಲ ಪ್ರಯೋಗ ಹೆಚ್ಚಿಸಲು ಮುಂದಾಗಿದೆ. ಈಗಾಗಲೇ 90 ಸಾವಿರ ಜನರು ಮನೆ ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ. ಸಿರಿಯಾ ಗಡಿ ದಾಟುವವರ ಸಂಖ್ಯೆಯೂ ಅಧಿಕವಾಗಿದೆ. ಭಾರತ ಸೇರಿ ಹಲವು ರಾಷ್ಟ್ರಗಳು ತಮ್ಮ ಪ್ರಜೆಗಳಿಗೆ ಲೆಬನಾನ್ ತೊರೆಯುವಂತೆ ಸೂಚನೆ ನೀಡಿದ್ದು ಸಹಾಯವಾಣಿಗಳನ್ನು ತೆರೆದಿದೆ.

ಕರ್ನಾಟಕ ಸರಕಾರ
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಬಸವನ-ಬಾಗೇವಾಡಿ. ಜಿ: ವಿಜಯಪುರ

ಟೆಂಡರ್ ಸಂಖ್ಯೆ: ತಾಆಬಬಾ/ನಾಕ್ಲಿಸೇ/2024-25 ದಿನಾಂಕ: 20.08.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: 2024-25 ನೇ ಸಾಲಿಗೆ ನಮ್ಮ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ "ಡಿ" ಸಿಬ್ಬಂದಿಯನ್ನು ಒದಗಿಸಲು ಇ-ಪ್ರಕ್ಯುರಮೆಂಟ್ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ.

2024-25 ನೇ ಸಾಲಿನಲ್ಲಿ 100 ಹಾಸಿಗೆ ತಾಲೂಕಾ ಆಸ್ಪತ್ರೆ ಬಸವನ ಬಾಗೇವಾಡಿ ಕ್ಲಿನಿಕಲ್ ಸೇವೆಗಳ ನಿರ್ವಹಣೆಗೆ 13 ಜನ ಹೊರಗುತ್ತಿಗೆ ಸಿಬ್ಬಂದಿಯನ್ನು ಒದಗಿಸಲು ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವವರು ಇ-ಪ್ರಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಟೆಂಡರ್ ಇ.ಎಂ.ಡಿ ಮೊತ್ತ ರೂ. 39,450/- ಮಾತ್ರವನ್ನು ಇ-ಸಂಗ್ರಹಣೆ ಕರ್ನಾಟಕ ಸರ್ಕಾರ ಇವರ ಹೆಸರಿಗೆ ಪಾವತಿಸತಕ್ಕದ್ದು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕೆಲಸದ ಅವಧಿಯಲ್ಲಿ ಕಾರ್ಯಾಲಯದಲ್ಲಿ ಪಡೆಯಬಹುದು.

ಟೆಂಡರ್ ವಿವರ: 1) ಟೆಂಡರ್‌ನ್ನು ಇ-ಪೋರ್ಟಲ್ ಮೂಲಕ ಅಪ್ಲೋಡ್ ಮಾಡುವ ದಿನಾಂಕ: 20.09.2024 ಬೆಳಿಗ್ಗೆ 11.00 ಘಂಟೆ.
2) ಇ-ಪೋರ್ಟಲ್ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 04.10.2024 ಸಂಜೆ 17.00 ಘಂಟೆ.
3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.10.2024 ಬೆಳಿಗ್ಗೆ 11.00 ಘಂಟೆ.
4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.10.2024 ಬೆಳಿಗ್ಗೆ 11.00 ಘಂಟೆ.

ಸಹಿ/-ಆಡಳಿತ ವೈದ್ಯಾಧಿಕಾರಿಗಳು, ತಾಲೂಕಾ ಆಸ್ಪತ್ರೆ, ಬಸವನ ಬಾಗೇವಾಡಿ
ವಾಸಾಸಂಇ/ವಿಜಯಪುರ/274/ಕೆಎಸ್‌ಎಂಸಿಎ/2024-25

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜಪೇಟೆ
ಸಂಖ್ಯೆ:ಕೃಉಮಾಸ(ಕೃ)/320/2024-2025 ದಿ:24-09-2024

ಟೆಂಡರ್ ಪ್ರಕಟಣೆ (ಇ-ಪೋರ್ಟಲ್ ಮೂಲಕ)

ಕೆ.ಆರ್.ಪೇಟೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2024-25 ನೇ ಸಾಲಿಗೆ ಅನ್ವಯವಾಗುವಂತೆ ಆಸ್ತಿಗಳನ್ನು ಸಂರಕ್ಷಿಸಲು 06 ಜನ ಭದ್ರತಾ ಸಿಬ್ಬಂದಿಗಳು, ಕಂಪ್ಯೂಟರ್ ಆಪರೇಟರ್ 01 ಜನ, ವಾಹನ ಚಾಲಕ 01 ಜನ, ಒಟ್ಟು 08 ಜನರ ಸೇವೆಯನ್ನು ದಿನಾಂಕ: 31-05-2025 ರ ಅವಧಿಯವರೆಗೆ ಪಾಳಿಯಲ್ಲಿ 24 ಗಂಟೆಗಳ ಕಾಲ ಭದ್ರತಾ ಸೇವೆಗಾಗಿ ಸಮಿತಿಯ ಸ್ಥಿರ ಮತ್ತು ಚರಾಸ್ತಿಗಳ ರಕ್ಷಣೆ, ಭದ್ರತೆ, ತನಿಖಾ ಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿ ಕಾರ್ಯನಿರ್ವಹಣೆ ಸೇರಿ ಒಟ್ಟು 08 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ಹಾಗೂ ಇಡೀ ರಾಜ್ಯದ ಅಥವಾ ಮಂಡ್ಯ ಜಿಲ್ಲೆಗೆ ಅನ್ವಯವಾಗುವಂತೆ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ (ಇಂಟರ್‌ಲ್ ಸೆಕ್ಯೂರಿಟಿ ಡಿವಿಜನ್) ಬೆಂಗಳೂರು ರವರಿಂದ ಲೈಸನ್ಸ್ ಪಡೆದ (ಮಂಡ್ಯ ಜಿಲ್ಲೆ ಒಳಗೊಂಡಿರತಕ್ಕದ್ದು) ಭದ್ರತಾ ಏಜೆನ್ಸಿಗಳಿಂದ ಕನಿಷ್ಠ ವೇತನ ದರಗಳಿಗನುಗುಣವಾಗಿ ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಭದ್ರತಾ ಸೇವೆ ಟೆಂಡರ್‌ಗೆ ಇ.ಎಂ.ಡಿ. ರೂ. 50,000/- ಇ-ಪೋರ್ಟಲ್ ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:14.10.2024 ಸಂಜೆ 5.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 16.10.2024 ಸಂಜೆ 5.00 ಗಂಟೆಗೆ. ಯಶಸ್ವಿಯಾದ ಗುತ್ತಿಗೆದಾರರು 1 ತಿಂಗಳ ಗುತ್ತಿಗೆ ಮೊತ್ತವನ್ನು ಇಡುಗಂಟನ್ನಾಗಿ (SECURITY DEPOSIT) ಪಾವತಿಸಿ ಕಾರ್ಯಾದೇಶ ಪಡೆಯತಕ್ಕದ್ದು. ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ (ಕನಿಷ್ಠ ವೇತನದಂತೆ) ಚಾಲ್ತಿಯಲ್ಲಿರುವ ಕನಿಷ್ಟ ವೇತನ ದರಗಳಿಗೆ ಅನುಗುಣವಾಗಿ ದರ ನಮೂದಿಸತಕ್ಕದ್ದು. ಇ.ಎಸ್.ಐ., ಪಿ.ಎಫ್. ಜಿ.ಎಸ್.ಟಿ., ವೃತ್ತಿ ತೆರಿಗೆ ಇಲಾಖೆಯಲ್ಲಿ ನೊಂದಾಯಿಸಿರತಕ್ಕದ್ದು. ವಿವರವಾದ ಟೆಂಡರ್ ಪ್ರಕಟಣೆಯನ್ನು ಹಾಗೂ ಟೆಂಡರ್ ಷರತ್ತು-ವಾ-ನಿಬಂಧನೆಗಳನ್ನುಇ-ಪೋರ್ಟಲ್ ವೆಬ್‌ಸೈಟ್ https://www.kppp.karnataka.gov.in. ನಲ್ಲಿ ಅಥವಾ ಈ ಕಛೇರಿಯಿಂದ ಪಡೆಯಬಹುದು.

ಸಹಿ/-ಕಾರ್ಯದರ್ಶಿ, ಕೃ.ಉ.ಮಾ.ಸ., ಕೆ.ಆರ್.ಪೇಟೆ
ಸಹಿ/-ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.. ಕೆ.ಆರ್.ಪೇಟೆ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/339/2024-25

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ-2)/2024-25/13968 ದಿನಾಂಕ: 23.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಮೈಸೂರು ತಾಲ್ಲೂಕಿನಲ್ಲಿ 11 ಕಿ ವೋ ದರ್ಜೆಯ 250 / 500ಕೆವಿಎ ಸಾಮರ್ಥ್ಯದ 3, 4 &5 ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವುದು	ಸಿ2-5874/ 04-09-2024

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 27.09.2024ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ 080-46010000/ 22631200/68948777ಗೆ ಅಥವಾ ಇ-ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/- ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿನಿ., ಮೈಸೂರು
DIPR/DDMYS-622/KSMCA-415/2024-25

ಲಾರಿ-ಕಾರು ನಡುವೆ ಡಿಕ್ಕಿ: ನಾಲ್ವರ ಸಾವು

ಬಾಗಲಕೋಟೆ: ಲಾರಿ-ಕಾರು ಮುಖಾಮುಖಿ ಡಿಕ್ಕಿ ಹೊಡೆದು ನಾಲ್ವರು ಸ್ಥಳದಲ್ಲಿಯೇ ಸಾವನ್ನಪ್ಪಿದ ಘಟನೆ ಹುನಗುಂದ ತಾಲೂಕಿನ ಧನ್ನೂರ ಟೋಲ್ ಬಳಿ ನಡೆದಿದೆ. ಬೆಳಗಿನಜಾವ ನಡೆದ ದುರ್ಘಟನೆಯಲ್ಲಿ ಲಕ್ಷ್ಮಣ ವಡ್ಡರ (55), ಬೈಲಪ್ಪ ಬಿರಾದಾರ (45), ರಾಮಣ್ಣ ನಾಯಕಮಕ್ಕಳ (50) ಮತ್ತು ಕಾರು ಚಾಲಕ ಮಹಮ್ಮದ ರಫೀಕ ಗುಡ್ನಾಳ (25) ಮೃತಪಟ್ಟಿದ್ದಾರೆ. ಮೃತರು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಮೂಲದವರು. ಹೊಸಪೇಟೆಯ ಹುಲಿಗೆಮ್ಮ ದೇವಿ ದರ್ಶನ ಮಾಡಿಕೊಂಡು ಮುದ್ದೇಬಿಹಾಳಕ್ಕೆ ತೆರಳುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಹುನಗುಂದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ:ಲೋ.ಇ./ಬೆವಿ/ತಾಂಸ/ಸ.ಇಂ/ಗುತ್ತಿಗೆ/2024-25/3567 ದಿನಾಂಕ:25.09.2024

-: ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ-1, 2 & 4 ರಲ್ಲಿ ಲೆಕ್ಕ ಶೀರ್ಷಿಕೆ: 3054-ರಾಜ್ಯ ಹೆದ್ದಾರಿಗಳ ರಸ್ತೆಗಳ ನಿರ್ವಹಣೆ, 3054 ರಾಜ್ಯ ಹೆದ್ದಾರಿಗಳ ಸೇತುವೆಗಳ ನಿರ್ವಹಣೆ, 3054-ರಾಜ್ಯ ಹೆದ್ದಾರಿಗಳ ಸೇತುವೆಗಳ ನಿರ್ವಹಣೆ-ನಿರ್ವಹಣಾ ವೆಚ್ಚ (ಅತೀವೃಷ್ಠಿ), 3054-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ, 3054- ಜಿಲ್ಲಾ ಮುಖ್ಯ ರಸ್ತೆಗಳು ನಿರ್ವಹಣೆ-ನಿರ್ವಹಣಾ ವೆಚ್ಚ (ಅತೀವೃಷ್ಠಿ), 3054-ಜಿಲ್ಲಾ ಮುಖ್ಯ ರಸ್ತೆಗಳ ಸೇತುವೆಗಳ ನಿರ್ವಹಣೆ-ನಿರ್ವಹಣಾ ವೆಚ್ಚ (ಅತೀವೃಷ್ಠಿ), 2216 ವಸತಿ ಗೃಹಗಳು ಹಾಗೂ ನ್ಯಾಯಾಂಗ ವಸತಿ ಗೃಹಗಳ ದುರಸ್ತಿ/ ನಿರ್ವಹಣೆ ಹಾಗೂ 8443 ಠೇವಣಿ ವಂತಿಕೆ ಒಟ್ಟು 15 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ 13.19 ಲಕ್ಷಗಳು ಹಾಗೂ 126.75 ಲಕ್ಷಗಳು ಇದ್ದು, ಮುಂಗಡ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಮೊತ್ತವು ಅನುಕ್ರಮವಾಗಿ ರೂ. 20,500/- ಹಾಗೂ 1,90,200/- ಇರುತ್ತದೆ. ಭಾಗ-1: ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 04-10-2024ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ 05-10-2024 ಸಂಜೆ 4.45 ಗಂಟೆಯ ನಂತರ, ಭಾಗ-2: ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 16-10-2024ರ ಸಂಜೆ 4.30 ಘಂಟೆಯರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ 18-10-2024 ಸಂಜೆ 4.45 ಗಂಟೆಯ ನಂತರ, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ:25-09-2024 ರ ನಂತರ ಪಡೆಯಬಹುದು. (ಒಂದು ವೇಳೆ ಬೀಡ್ ಸ್ವೀಕೃತವಾಗದಿದಲ್ಲಿ 3 ದಿನಗಳ ಸಂಯಮ ಚಾಲೀತ ಸಕ್ರೀಯಗೊಳಿಸಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-877/KSMCA/2024-25

ಜಿಲ್ಲಾ ಪಂಚಾಯತ್ ಧಾರವಾಡ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಚೇರಿ, ವಿಶ್ವೇಶ್ವರಯ್ಯ ಮಾರ್ಗ, ಧಾರವಾಡ
ದೂ: 0836-2442316, 0836-2749018 ಇ: zpeddwd@rediffmail.com

ಕ್ರ.ಸಂ. ಪಂ.ರಾ.ಇಂ.ವಿ.ಧಾ/ಸ.ಇಂ.-2/ವಿವಿಧ ಲೆಕ್ಕಶೀರ್ಷಿಕೆ/2024-2025/1633
ದಿನಾಂಕ: 26-09-2024.

ಟೆಂಡರ್ ಪ್ರಕಟಣೆ - 09/2024-25 (ಇ-ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರಿ ಆದೇಶ ಸಂಖ್ಯೆ: **No.FD 876 Exp-12/2017, Bangalore, dated: 15-09-2017** ರನ್ವಯ ವಿವಿಧ ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳ ಐಟಂವಾರು ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್ಸ್ **KW-1 & KW-2** ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯುರಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರಗಳನ್ನು ಸಲ್ಲಿಸಬಹುದು.

Indent No General: 9212, 9061, 9075, 8657, 8647, 8637, 8642, 8607, 8639, 8954
SC Category: 8672 ST Category: 8646

ಕ್ಯಾಲೆಂಡರ್ ಆಫ್ ಇವೆಂಟ್ಸ್: 1) ಟೆಂಡರ್ ದಾಖಲೆಗಳನ್ನು ದಿನಾಂಕ: 27-09-2024 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 14-10-2024 ರ ಸಂಜೆ 4.00 ಘಂಟೆಯವರೆಗೆ ಟೆಂಡರಗಳನ್ನು ಸಲ್ಲಿಸಬಹುದು. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15-10-2024 ರ ಸಂಜೆ 4.30 ಘಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಕಾಮಗಾರಿಯ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮ / ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ / EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು. ಟೆಂಡರಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಆರ್.ಎಂ.ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ.
ವಾ.ಸಾ.ಇ./ಧಾರವಾಡ/433/ಮಣಿಪಾಲ್/2024-25

ನಗರಸಭಾ ಕಾರ್ಯಾಲಯ, ಸಾಗರ-577401.
Web: www.sagaracity.mrc.gov.in Phone: 08183-226021
Email: itstaff_ulb_sagar@yahoo.com

ನ.ಸ.ಸಾ/ಆ.ವಿ/ಕ್ರ.ಸಂ.28/2024-25 ದಿನಾಂಕ: 13.09.2024

ಟೆಂಡರ್ ಪ್ರಕಟಣೆ (Kppp ಮುಖಾಂತರ)

ಸಾಗರ ನಗರಸಭೆಗೆ 2024-25 ನೇ ಸಾಲಿಗೆ ಅವಶ್ಯವಿರುವ ಮಾನವ ಸಂಪನ್ಮೂಲ ಸರಬರಾಜು ಮಾಡಲು ಈ ಕೆಳಕಂಡಂತೆ ಟೆಂಡರ್ ಅಹ್ವಾನಿಸಲಾಗಿದೆ.ಆಸಕ್ತರು ಸದರಿ ಟೆಂಡರ್ ಗಳಲ್ಲಿ ಆಹ್ವಾನಿಸಲು ಕೋರಿದೆ. ಸದರಿ ಬಿಡ್ ಗಳ ಬಗ್ಗೆ ಬಿಡ್ ಪೂರ್ವ ಸಭೆಯನ್ನು ದಿನಾಂಕ:19/09/2024 ರ ಬೆಳಿಗ್ಗೆ 11.30 ಕ್ಕೆ ನಗರಸಭಾ ಕಛೇರಿಯಲ್ಲಿ ನಡೆಸಲಾಗುವುದು. ಟೆಂಡರ್ ಕುರಿತಾಗಿ ದಿನಾಂಕ: 27/09/2024 ರ ಸಂಜೆ 5.30 ಘಂಟೆ ಬಿಡ್ಡು ಸಲ್ಲಿಕೆಗೆ ಅಂತಿಮ ದಿನವಾಗಿದ್ದು ದಿನಾಂಕ: 30/09/2024 ರ ಬೆಳಿಗ್ಗೆ 11.30 ಕ್ಕೆ ಬಿಡ್ಡು ತೆರೆಯಲಾಗುವುದು ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕದಂದು ತೆರೆಯಲಾಗುವುದು. ನಿಗಧಿತ ಮತ್ತು ಅನ್ವಯಿಸುವ ಷರತ್ತುಗಳ ಬಗ್ಗೆ Kppp ವೆಬ್ ಸೈಟ್ ನಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ. ಹಾಗೂ ಸಾಗರ ನಗರಸಭೆಯ ಆರೋಗ್ಯ ವಿಭಾಗದಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ.	ಇಂಡೆಂಟ್ ನಂ.	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ ರೂ. ಗಳಲ್ಲಿ
1	DMA/2024-25/SE3310/CALL-2	39.00	97500=00
2	DMA/2024-25/SE3312/CALL-2	35.50	88750=00
3	DMA/2024-25/SE3313/CALL-2	35.50	88750=00

ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ www.Kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ Kppp ನಲ್ಲಿ ಪ್ರಚುರ ಪಡಿಸಲಾಗುವುದು

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ ಸಾಗರ
ಸಹಿ/- ಪೌರಾಯುಕ್ತರು, ನಗರಸಭೆ, ಸಾಗರ.
ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24-25/162/09/771

ಕರ್ನಾಟಕ ಸರ್ಕಾರ - ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಹೊಸನಗರ ಅರಣ್ಯ ವಿಭಾಗ, ಹೊಸನಗರ
ಜಿಲ್ಲೆ: ಶಿವಮೊಗ್ಗ, ತಾಲ್ಲೂಕು: ಹೊಸನಗರ,
ಇ.ಮೇಲ್ ಸಂದೇಶ ಐಡಿನಂ, acfhnr@gmail.com

ನಂ:ACF/HNR/CAMPA/CA/TENDER/CR/245/24-25 ದಿ:16.09.2024

ಇ-ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಸಾಗರ ಪ್ರದೇಶಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಕಾಂಪಾ (ಸಿಎ) ಯೋಜನೆಯಡಿ, 2024-25ನೇ ಸಾಲಿನಲ್ಲಿ ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನುಸಾರ, 2024-25ನೇ ಸಾಲಿನಲ್ಲಿ ಕೈಗೊಳ್ಳುವ ಹೊಸ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಆಸಕ್ತ ಗುತ್ತಿಗೆದಾರರುಗಳಿಂದ ದ್ವಿಲಕೋಟೆ (Technical bid and Financial bid) ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಮುಂದಿನಂತೆ ಇ-ಟೆಂಡರ್ ಆಹ್ವಾನಿಸಲು ಈ ಕೆಳಗಿನಂತೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ.

Sl. No.	Indent No.	Late Date and time for receipt of tenders
1	14064	01-10-2024, 16:30:00
2	14063	01-10-2024, 16:30:00
3	14062	01-10-2024, 16:30:00
4	14061	01-10-2024, 16:30:00
5	14060	01-10-2024, 16:30:00
6	14059	01-10-2024, 16:30:00
7	14058	01-10-2024, 16:30:00

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಇ-ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹೊಸನಗರ ಉಪ ವಿಭಾಗ, ಹೊಸನಗರ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/157/09/762

ಟ್ವೀಟಾ-ಖಾರಾ

ಬಿಜೆಪಿ, ಕರ್ನಾಟಕ

ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಇಷ್ಟು ದಿನ ಸಮರ್ಥಿಸುತ್ತಿದ್ದ ಕರ್ನಾಟಕ ಕಾಂಗ್ರೆಸ್ ನಾಯಕರು ಇದೀಗ ನ್ಯಾಯಾಲಯದ ಆದೇಶದ ನಂತರ ತಮ್ಮ ವರಸೆ ಬದಲಿಸಿದ್ದಾರೆ. ಅನಕ್ಷರಸ್ಥ ಸಚಿವ ಮಧು ಬಂಗಾರಪ್ಪ ಅವರು ಮುಡಾ ಹಗರಣ ನಡೆದಿದೆ ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

ನಾಗಭೂಷಣ್, ಬೆಂಗಳೂರು

ಚುನಾವಣೆಗೂ ಸಾಕಷ್ಟು ಮುಂಚೆಯೇ ಕಾಂಗ್ರೆಸ್ಸಿನ ನಾಯಕರು ಶೇ.40 ಸರಕಾರ ಎಂದು ಆರೋಪ ಮಾಡಿದಾಗ, ಸುಳ್ಳು ಆರೋಪ ಎಂದು ಕೇಸ್ ಹಾಕಿ ಕ್ರಮ ಕೈಗೊಳ್ಳದೇ , ಅತ್ತ ಆರೋಪಕ್ಕೆ ಸರಿಯಾದ ಉತ್ತರವನ್ನೂ ಕೊಡದೇ, ಸುಮ್ಮನೆ ಕುಳಿತು ಈಗ ಅಧಿಕಾರ ಕಳೆದುಕೊಂಡ ಮೇಲೆ ಉತ್ತರಕುಮಾರನ ಹಾಗೇ ವರ್ತಿಸುತ್ತಿದ್ದೀರಿ. ಅಧಿಕಾರ ರಕ್ಷಿಸಿಕೊಳ್ಳದ ನಾಯಕರು ನೀವು..!

ಪಶ್ಚಿಮ ಘಟ್ಟದ ಜನರ ವಿವಾದ ಹಿನ್ನೆಲೆ ವರದಿ ಒಪ್ಪದಿರಲು ಸಚಿವ ಸಂಪುಟ ತೀರ್ಮಾನ

ಕಸ್ತೂರಿರಂಗನ್ ವರದಿಗೆ ಕೊಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಷ್ಟ್ರ ಮಟ್ಟದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದ್ದ ಕಸ್ತೂರಿ ರಂಗನ್ ವರದಿಯನ್ನು ಸಾರಸಗಟಾಗಿ ತಿರಸ್ಕರಿಸುವ ಮಹತ್ವದ ತೀರ್ಮಾನವನ್ನು ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರಕಾರ ಕೈಗೊಂಡಿದೆ.

ವಿಧಾನಸೌಧದಲ್ಲಿ ನಡೆದ ಸಂಪುಟ ಸಭೆ ಈ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ. ಡಾ. ಕೆ. ಕಸ್ತೂರಿ ರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯನಿರತ ತಂಡ ನೀಡಿರುವ ವರದಿಯನ್ನು ಆಧರಿಸಿ ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಸಂಬಂಧ ಪ್ರದೇಶಗಳೆಂದು ಕೇಂದ್ರ ಸರಕಾರ ಹೊರಡಿಸಿರುವ ಕರಡು ಅಧಿಸೂಚನೆಗೆ ಕರ್ನಾಟಕ ಸರಕಾರದ ಅಭಿಪ್ರಾಯ ನೀಡುವ ಬಗ್ಗೆ ಗುರುವಾರದ ಸಭೆಯಲ್ಲಿ ಚರ್ಚೆ ಮಾಡಿದ್ದು, ಡಾ. ಕೆ. ಕಸ್ತೂರಿ ರಂಗನ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಮಾನವನ ಹಸ್ತಕ್ಷೇಪ ಮಾಡುತ್ತಿರುವುದರಿಂದಾಗಿ ಪರಿಸರಕ್ಕೆ ಧಕ್ಕೆ ಉಂಟಾಗುತ್ತಿದೆ. ಆ ಮೂಲಕ ಜೀವ ಸಂಕುಲಕ್ಕೂ ಅಪಾಯ ಎದುರಾಗಲಿದೆ ಎನ್ನುವುದು ಪರಿಸರ ತಜ್ಞರ ಆತಂಕಕ್ಕೆ ಕಾರಣವಾಗಿತ್ತು. ಆದ್ದರಿಂದ ಕಸ್ತೂರಿ ರಂಗನ್ ವರದಿಯನ್ನು ಸಿದ್ಧಪಡಿಸಲಾಗಿತ್ತು. ಈ ವರದಿಗೆ ಪಶ್ಚಿಮ ಘಟ್ಟ ಭಾಗದ ಜನರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಸಂಪುಟ ಸಭೆಯಲ್ಲಿ ವರದಿಯನ್ನು ತಿರಸ್ಕಾರ ಮಾಡಲಾಗಿದೆ.

ಕಸ್ತೂರಿ ರಂಗನ್ ಸಮಿತಿ ವರದಿಯಲ್ಲಿ ಏನಿದೆ?: ಕಸ್ತೂರಿ ರಂಗನ್ ಸಮಿತಿಯು ಪಶ್ಚಿಮಘಟ್ಟ ವ್ಯಾಪ್ತಿಯ 59,949 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶ ಅಂದರೆ ಶೇ. 36.4ರಷ್ಟು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಒಳಪಡುತ್ತದೆ ಎಂದು ಗುರುತಿಸಿದೆ. ಈ ಪ್ರದೇಶಗಳಲ್ಲಿ ಗಣಿಗಾರಿಕೆ, ಜಲವಿದ್ಯುತ್, ಕ್ವಾರಿ, ಮರಳುಗಾರಿಕೆ ಪರಿಸರ ವಿರೋಧಿ ಕೈಗಾರಿಕೆ, ಪವನ ವಿದ್ಯುತ್ ಯೋಜನೆಗಳನ್ನು ಸಂಪೂರ್ಣ ನಿಷೇಧಿಸಬೇಕು. 20,000 ಚ,ಮೀ, ಬೃಹತ್ ಆದ ಯಾವುದೇ ಕಟ್ಟಡ ನಿರ್ಮಿಸುವ ಹಾಗಿಲ್ಲ. ಇಎಸ್‌ಎನಿಂದ 10ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ನಡೆಸುವುದಾದರೇ ಪರಿಸರ ಇಲಾಖೆ, ಸ್ಥಳೀಯ ಗ್ರಾಮಸಭೆ ಅನುಮತಿ ಪಡೆಯಬೇಕು. ಈ ಪ್ರದೇಶದಲ್ಲಿ ಸಿಮೆಂಟು, ಕಲ್ಲು, ರಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಯಾವುದೇ ಅವಕಾಶವಿಲ್ಲ.

ಒಂದೇ ವೇಳೆ ಕಸ್ತೂರಿ ರಂಗನ್ ವರದಿ ಅನುಷ್ಠಾನವಾದರೆ ಪಶ್ಚಿಮ ಘಟ್ಟ ಮತ್ತು ಮಲೆನಾಡು ಸೂಕ್ಷ್ಮ ಪರಿಸರ ವಲಯವಾಗಿ ಪರಿವರ್ತನೆಯಾಗುತ್ತದೆ. ಅಲ್ಲಿ ಮಾನವ ಹಸ್ತಕ್ಷೇಪ ಮಾಡುವಂತಿಲ್ಲ. ಇಡೀ ಭೂ ಭಾಗ ರಾಜ್ಯದ ನಿಯಂತ್ರಣದಿಂದ ಕೇಂದ್ರದ ಸುಪರ್ದಿಗೆ ಹೋಗುತ್ತದೆ. ಆಗ ಅಲ್ಲಿ ವಾಸಿಸುತ್ತಿರುವ ಆದಿವಾಸಿಗಳನ್ನು ಒಕ್ಕಲು ಎಬ್ಬಿಸಬೇಕಾಗುತ್ತದೆ. ಹಾಗಾಗಿ ಈ ಎಲ್ಲಾ ವಿಚಾರಗಳಿಂದ ಕಸ್ತೂರಿ ರಂಗನ್ ವರದಿಗೆ ಭಾರಿ ವಿರೋಧ ವ್ಯಕ್ತವಾಗಿತ್ತು.

ಸಿಖ್ ಸಮುದಾಯದ ವಿವಾಹ ಸಮಾರಂಭದ ಸಿಂಧುತ್ವದ ಬಗ್ಗೆ ಸಂದೇಹಗಳನ್ನು ನಿವಾರಿಸಲು ಕೇಂದ್ರ ಸರಕಾರವು ದ ಆನಂದ್ ಮ್ಯಾರೇಜ್ಸ್ ಕಾಯಿದೆಯನ್ನು ಜಾರಿಗೊಳಿಸಿದೆ. ಸಿಖ್ ಸಮುದಾಯದ ವಿವಾಹಗಳು ಹಿಂದೂ ವಿವಾಹ ಕಾಯಿದೆಯ ಪ್ರಕಾರ ನೋಂದಣಿಯಾಗುತ್ತಿದ್ದು, ವಿವಾಹ ಪ್ರಮಾಣ ಪತ್ರದಲ್ಲಿ ಹಿಂದು ಧರ್ಮವೆಂದು ನಮೂದಿಸಿರುವುದರಿಂದ ಹೊರದೇಶಕ್ಕೆ ಪ್ರಯಾಣಿಸುವಾಗ ಗೊಂದಲ ಸೃಷ್ಟಿಯಾಗುತ್ತಿದೆ. ಅದಕ್ಕಾಗಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಶಿಫಾರಸ್ಸಿನನ್ವಯ ಸೂಕ್ತ ನಿಯಮಗಳನ್ನು ಅನುಮೋದಿಸಲಾಗಿದೆ.

ಸಂಪುಟದ ಇತರೆ ಪ್ರಮುಖಾಂಶ

- ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಿದುರುಗೂಡು ಗ್ರಾಮದಿಂದ ರಾಜ್ಯ ಹೆದ್ದಾರಿ - 57ಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು 29.35 ಕೋಟಿ ಅಂದಾಜು ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯ ಹ್ಯಾಟ್ - ಹಿಲ್‌ನಲ್ಲಿ ನಿರ್ಮಿಸಿರುವ ನ್ಯಾಯಾಂಗ ಅಧಿಕಾರಿಗಳ ವಸತಿ ನಿಲಯ ಕಟ್ಟಡಗಳ ನಿರ್ಮಾಣದ 11.70 ಕೋಟಿಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ.
- ಶಹಾಪುರ ನಗರಸಭೆ ವ್ಯಾಪ್ತಿಯಲ್ಲಿರುವ ನಿವೇಶನ ಸಂಖ್ಯೆ: 823/3 ರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ 3000 ಚ. ಮೀ. ಅಳತೆಯ ನಿವೇಶನವನ್ನು ವೀರಶೈವ ಸಮಾಜದ ವಸತಿ ನಿಲಯ ಹಾಗೂ ಸಾಂಸ್ಕೃತಿಕ ಭವನ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಮಂಜೂರು
- ರಾಜ್ಯ ವಿಪತ್ತು ಉಪಶಮನ ನಿಧಿಯಲ್ಲಿ ಕೈಗೆತ್ತಿಕೊಳ್ಳುವ ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ/ ಶಾಶ್ವತ ಪರಿಹಾರ ಹಾಗೂ ಪೋಲಾಗಿ ಹರಿದು ಹೋಗುವ ನೀರಿನ ಸದ್ಬಳಕೆ ಯೋಜನೆಯ 200 ಕೋಟಿ ರು. ಅಂದಾಜು ಮೊತ್ತದ ಯೋಜನೆಗೆ ಅನುಮೋದನೆ ನೀಡಲಾಗಿದೆ.
- 189 ಸರಕಾರಿ ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಮತ್ತು ಇಂಟರ್‌ನೆಟ್ ಸೌಲಭ್ಯಗಳನ್ನು 14.97 ಕೋಟಿ ಮೊತ್ತದ ಟೆಂಡರ್‌ಗೆ ಅನುಮೋದನೆ.

ಬಿಎಂಟಿಸಿಯಿಂದ ಎಲೆಕ್ಟ್ರಿಕ್ ಬಸ್ ಖರೀದಿ

ಬಿಎಂಟಿಸಿ 15ನೇ ಹಣಕಾಸು ಆಯೋಗದ 30 ಕೋಟಿ ಅನುದಾನದಿಂದ 76 ಹವಾನಿಯಂತ್ರಣ ರಹಿತ ಎಲೆಕ್ಟ್ರಿಕ್ ಬಸ್‌ಗಳನ್ನು ಪ್ರತಿ ಕಿ. ಮೀಗೆ 41 ರು. ದರದಲ್ಲಿ ಜಿಸಿಸಿ ಆಧಾರದ ಮೇಲೆ ಕಾರ್ಯಾಚರಣೆ ಮಾಡಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಇದೇ ರೀತಿ 15ನೇ ಹಣಕಾಸು ಆಯೋಗದ 25 ಕೋಟಿ ಅನುದಾನದಿಂದ 51 ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಅನುಮೋದನೆ. ಇದರೊಂದಿಗೆ ಬಿಎಂಟಿಸಿ ನಗರ ಭೂ ಸಾರಿಗೆ ನಿರ್ದೇಶನಾಲಯದ ರಾಜ್ಯ ನಗರ ಸಾರಿಗೆ ನಿಧಿಯಲ್ಲಿ ಮಂಜೂರಾಗಿರುವ 29.13 ಕೋಟಿ ರು. ಅನುದಾನದಿಂದ 21 ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಅನುಮೋದನೆ.

ಎಂಎಲ್‌ಸಿ ನಾಮನಿರ್ದೇಶನ ಸಿಎಂಗೆ ಅಧಿಕಾರ



ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಸಚಿವ ಎಚ್. ಕೆ. ಪಾಟೀಲ್, ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಉಪ ಚುನಾವಣೆ, 2024 ಅನ್ವಯ ಕುರಿತು ಮಾದರಿ ನೀತಿ ಸಂಹಿತೆ, ಭಾರತ ಸಂವಿಧಾನದ ಅನುಚ್ಛೇದ 171(3)(ಇ) ಅನುಸಾರ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿಗೆ ರಾಜ್ಯಪಾಲರಿಂದ ಇಬ್ಬರು ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವ ಬಗ್ಗೆ ಪರಿಶೀಲಿಸಿ ಸಿಎಂಗೆ ಅಧಿಕಾರ ಕೊಡಲಾಗಿದೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಸಿಎಂ ಸಿದ್ದು

ಗಾಜಿನ ಮನೆಯಲ್ಲಿ ಕೂತು ಕಲ್ಲು ಹೊಡಿಬೇಡಿ : ಸಿದ್ದರಾಮಯ್ಯ

ಬಿಜೆಪಿ ಮನೆಯೊಂದು ನೂರು ಬಾಗಿಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯ ಕಾಂಗ್ರೆಸ್‌ನಲ್ಲಿ ಆಂತರಿಕ ಕಲಹವಿದೆ ಎನ್ನುವ ಮಾತಿಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಗಾಜಿನ ಮನೆಯಲ್ಲಿ ಕೂತು ಕಲ್ಲು ಹೊಡಿಬೇಡಿ ಎಂದು ಟೀಕಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದ ಕಾಂಗ್ರೆಸ್‌ನಲ್ಲಿ ಕಲಹ ನಡೆಯುತ್ತಿದೆ ಎಂದು ಗಾಳಿಯಲ್ಲಿ ಗುಂಡು ಹೊಡೆದಿದ್ದಾರೆ. ಬಹುಶಃ ಪ್ರಧಾನಿಯವರು ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳಲ್ಲಿ ಉಲ್ಲೇಖಗೊಳ್ಳುತ್ತಲಿರುವ ಪಕ್ಷಗಳ ಹೆಸರಲ್ಲಿ ಗೊಂದಲ ಮಾಡಿಕೊಂಡು, ಬಿಜೆಪಿ ಬದಲಿಗೆ ಕಾಂಗ್ರೆಸ್ ಎಂದು ತಿಳಿದುಕೊಂಡು ಈ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಈ ಗೊಂದಲ ನಿವಾರಣೆಗಾಗಿ ಅವರು ತಕ್ಷಣ ಸ್ಪಷ್ಟೀಕರಣ ನೀಡಬೇಕೆಂದು ಮನವಿ ಮಾಡುತ್ತೇನೆ ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿಯ ರಕ್ತದಲ್ಲಿ ಹೇಗೆ ಕೋಮುವಾದ ಸೇರಿಕೊಂಡಿದೆಯೋ, ಅದೇ ರೀತಿ ಅಂತಃ ಕಲಹವೂ ಸೇರಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಬಿಜೆಪಿ ನಾಯಕರು ಪರಸ್ಪರ ಕೆಸರೆರಚಾಟ ಮಾಡಿಕೊಳ್ಳದ ದಿನವೇ ಸಿಗಲಾರದು. ಪ್ರತಿನಿತ್ಯ ಬಿಜೆಪಿ ನಾಯಕರು ಆರೋಪ - ಪ್ರತ್ಯಾರೋಪ, ಪರಸ್ಪರ ದೂಷಣೆ- ನಿಂದನೆಯ ಧಾರಾವಾಹಿ ಮೂಲಕ ಜನರನ್ನು ರಂಜಿಸುತ್ತಿದ್ದಾರೆ. ಸನ್ಮಾನ್ಯ ನರೇಂದ್ರ ಮೋದಿ ಅವರೇ, ದಯವಿಟ್ಟು ತಾವು ಬೆಳಗ್ಗೆ ಎದ್ದು ಕರ್ನಾಟಕದಿಂದ ಪ್ರಕಟವಾಗುವ ಪತ್ರಿಕೆಗಳ ಮೇಲೆ ಕಣ್ಣಾಡಿಸಿದರೆ ನಿಮ್ಮ ಪಕ್ಷದಲ್ಲಿ ನಡೆಯುವ ಅಂತಃ ಕಲಹದ ಒಂದು ಅಂದಾಜು ಸಿಗಬಹುದು. ಇದರ ನಂತರವಾದರೂ ನೀವು ನಮ್ಮ ಪಕ್ಷದ ಕಡೆ ಬೊಟ್ಟು ಮಾಡುವುದನ್ನು ನಿಲ್ಲಿಸಿ, ನಿಮ್ಮ ಪಕ್ಷದ ಅಂತಃಕಲಹದ ಬೆಂಕಿಯನ್ನು ಶಮನ ಮಾಡಲು ಪ್ರಯತ್ನ ನಡೆಸಬಹುದು ಎಂದು ಟೀಕಿಸಿದ್ದಾರೆ.

ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಬೆಳಗ್ಗೆ ಎದ್ದ ಕೂಡಲೇ ಯಡಿಯೂರಪ್ಪ ಮತ್ತು ಅವರ ಮಕ್ಕಳ ವಿರುದ್ಧ ಸಾವಿರಾರು ಕೋಟಿ ರುಪಾಯಿಗಳ ಭ್ರಷ್ಟಾಚಾರ ಆರೋಪ ಮಾಡುತ್ತಿದ್ದಾರೆ. ಇವರ ಆರೋಪಗಳಿಗೆ ಶಾಸಕರಾದ ರಮೇಶ್ ಜಾರಕಿಹೊಳಿ, ಸಿ.ಟಿ.ರವಿ ಮೊದಲಾದವರು ದನಿಗೂಡಿಸಿ ಅಪ್ಪ-ಮಕ್ಕಳ ವಿರುದ್ಧ ಬಗೆಬಗೆಯ ಆರೋಪಗಳನ್ನು ಮಾಡಿದ್ದಾರೆ. ಇದೀಗ ಉಚ್ಚಾಟಿತ ಬಿಜೆಪಿ ನಾಯಕ ಈಶ್ವರಪ್ಪನವರ ಮನೆಯಲ್ಲಿಯೇ ಕೂತು ಭಿನ್ನಮತೀಯ ಶಾಸಕರು ಸಭೆ ನಡೆಸಿದ್ದಾರೆ. ಇದನ್ನು ಅಂತಃಕಲಹ ಎಂದು ಕರೆಯದೆ ಪ್ರೇಮಸಲ್ಲಾಪ ಎನ್ನೋಣವೇ? ಎಂದು ಪ್ರಶ್ನಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರೇ, ಗಾಜಿನ ಮನೆಯಲ್ಲಿ ಕೂತು ಕಲ್ಲು ಹೊಡೆಯಲು ಹೋಗಬೇಡಿ. ನಮ್ಮ ಪಕ್ಷದ ಅಂತಃಕಲಹದ ಬಗ್ಗೆ ಚಿಂತೆ ಮಾಡಬೇಡಿ. ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗೆಲ್ಲ ಪೂರ್ಣಾವಧಿಯನ್ನು ಮುಗಿಸಿದ್ದೇವೆ. ದೇವರಾಜ ಅರಸು ನಂತರ ಪೂರ್ಣ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ನಾನು ಇದೀಗ ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ನಮ್ಮೊಳಗೆ ಜಗಳ ಹುಟ್ಟುಹಾಕುವ ನಿಮ್ಮೆಲ್ಲರ ನಿರಂತರ ಪ್ರಯತ್ನದ ಹೊರತಾಗಿಯೂ ನಾವೆಲ್ಲ ಒಗ್ಗಟ್ಟಾಗಿದ್ದೇವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

- ಬಿಜೆಪಿಯ ರಕ್ತದಲ್ಲಿ ಕೋಮುವಾದದ ರೀತಿ ಅಂತಃಕಲಹ ಸೇರಿದೆ
- ಮೋದಿ ಅವರೇ ಕರ್ನಾಟಕದಿಂದ ಪ್ರಕಟವಾಗುವ ಪತ್ರಿಕೆಗಳ ಮೇಲೆ ಕಣ್ಣಾಡಿಸಿ
- ನಿಮ್ಮ ಪಕ್ಷದಲ್ಲಿ ನಡೆಯುವ ಅಂತಃ ಕಲಹದ ಒಂದು ಅಂದಾಜು ಸಿಗಬಹುದು
- ನಮ್ಮ ಪಕ್ಷದ ಕಡೆ ಬೊಟ್ಟು ಮಾಡುವುದನ್ನು ನಿಲ್ಲಿಸಿ, ನಿಮ್ಮ ಪಕ್ಷದ ಅಂತಃ ಕಲಹದ ಬೆಂಕಿಯನ್ನು ಶಮನ ಮಾಡಿ

ಬಿಜೆಪಿಯ ಕಲಹ ಇಂದಿನದ್ದಲ್ಲ

ಕರ್ನಾಟಕದ ಬಿಜೆಪಿಯಲ್ಲಿನ ಕಲಹ ಇತ್ತೀಚಿನ ಬೆಳವಣಿಗೆಯೇನಲ್ಲ, ಇದಕ್ಕೊಂದು ಇತಿಹಾಸವಿದೆ. ಕರ್ನಾಟಕದ ಜನತೆ ಎಂದೂ ಬಿಜೆಪಿಗೆ ಪೂರ್ಣಬಹುಮತ ನೀಡಿ ಅಧಿಕಾರಕ್ಕೆ ತಂದಿಲ್ಲ. ಅಕ್ರಮ ದುಡ್ಡಿನ ಬಲದಿಂದ ಆಪರೇಷನ್ ಕಮಲ ನಡೆಸಿ ಅಧಿಕಾರಕ್ಕೆ ಬಂದರೂ ಯಾರೇ ಒಬ್ಬ ಮುಖ್ಯಮಂತ್ರಿ ಪೂರ್ಣಾವಧಿ ಆಳಿಲ್ಲ. 2008 ರಿಂದ 2013ರ ವರೆಗೆ ಮೂವರು ಮುಖ್ಯಮಂತ್ರಿಗಳು, 2019ರಿಂದ 2023ರ ಅವಧಿಯಲ್ಲಿ ಇಬ್ಬರು ಮುಖ್ಯಮಂತ್ರಿಗಳು. ಕರ್ನಾಟಕದ ಬಿಜೆಪಿಯೊಳಗಿನ ಅಂತಕಲಹ ನಮ್ಮಲ್ಲಿ ಮನೆಮನೆಮಾತಾಗಿದೆ. ಇದರಲ್ಲಿ ನಮ್ಮ ಪಕ್ಷದ ಯಾವುದೇ ಪಾತ್ರ ಇಲ್ಲ. 2011ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಜೈಲಿಗೆ ಹೋಗಲು ಪಕ್ಷದೊಳಗಿನ ಅಂತಃ ಕಲಹವೂ ಕಾರಣ ಎನ್ನುವುದನ್ನು ಪ್ರಧಾನಿ ನರೇಂದ್ರ ಮೋದಿ ಅವರೂ ಮರೆತುಬಿಟ್ಟಿದ್ದಾರೆ. ಅದರ ನಂತರ ಬಿಜೆಪಿ ತೊರೆದು ಸ್ವಂತ ಪಕ್ಷ ಕಟ್ಟಿದ್ದ ಯಡಿಯೂರಪ್ಪನವರು ವಾಜಪೇಯಿ - ಅಡ್ವಾಣಿಯವರನ್ನು ಸೇರಿದಂತೆ ಯಾರನ್ನೂ ಬಿಡದೆ ಕೀಳು ಮಟ್ಟದ ಭಾಷೆಯಲ್ಲಿ ನಿಂದಿಸಿದ್ದಾರೆ. ಕೊನೆಗೆ ಅವರನ್ನೇ ಕರೆತಂದು ಮುಖ್ಯಮಂತ್ರಿ ಮಾಡಿದ್ದಾಯಿತು, ನಂತರ ಅವರನ್ನು ಪದಚ್ಯುತಿಗೊಳಿಸಿಯೂ ಆಯಿತು. ಇವೆಲ್ಲದರ ಹಿಂದೆ ಪಕ್ಷದ ಅಂತಃಕಲಹ ಕಾರಣ ಅಲ್ಲವೇ? ಎಂದು ಟೀಕಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಆಳಂದದಲ್ಲಿ ಮತ್ತೆ ಸದ್ದು ಮಾಡಿದ ಫೈರಿಂಗ್

ಕಲಬುರಗಿ: ಪಾರ್ಟಿ ಮಾಡಲು ಕುಳಿತಿದ್ದ ಗೆಳೆಯರು ಏಕಾಏಕಿ ಬಂದೂಕು ತೆಗೆದು ಸ್ನೇಹಿತನ ಮೇಲೆಯೇ ಗುಂಡಿನ ದಾಳಿ ನಡೆಸಿರುವ ಘಟನೆ ಆಳಂದ ತಾಲೂಕಿನ ಕಡಗಂಚಿಯಲ್ಲಿ ಗುರುವಾರ ನಡೆದಿದೆ. ಕಡಗಂಚಿ ಗ್ರಾಮದ ಶಾಂತಪ್ಪ ಪೂಜಾರಿ (23) ತಡರಾತ್ರಿ ಕಡಗಂಚಿ ಗ್ರಾಮದ ಮನೆಯೊಂದರಲ್ಲಿ ಪಾರ್ಟಿ ಮಾಡುತ್ತಿರುವ ವೇಳೆ ಗುಂಡಿನ ದಾಳಿ ನಡೆದಿದೆ. ಈ ವೇಳೆ ಶಾಂತಪ್ಪನ ಎಡಗೈಗೆ ಗುಂಡೇಟು ತಾಗಿ ಗಾಯಗೊಂಡಿದ್ದಾನೆ ಎಂದು ತಿಳಿದುಬಂದಿದೆ.ಶಾಂತಪ್ಪ ತನ್ನ ಗೆಳೆಯರಾದ ಕಾಂತಪ್ಪ ಹಾಗೂ ಮಾಳಪ್ಪ, ಸೇರಿ ಆರೇಳು ಜತೆಗೂಡಿ ಪಾರ್ಟಿ ಮಾಡುವ ವೇಳೆ ಜಗಳ ನಡೆದಿದೆ. ಗಲಾಟೆ ವಿಕೋಪಕ್ಕೆ ಹೋಗಿ ಗುಂಡಿನ ದಾಳಿ ನಡೆದಿದೆ ಎನ್ನಲಾಗಿದ್ದು, ಗಾಯಳು ಶಾಂತಪ್ಪ ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನೂ ಗನ್ ಸಮೇತ ಆರೋಪಿಗಳಾದ ಕಾಂತಪ್ಪ ಮತ್ತು ಮಾಳಪ್ಪನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಕುರಿತು ನರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೌಟುಂಬಿಕ ಕಲಹ: ಮೂವರ ಸಾವು

ಮಧುಗಿರಿ: ಸಂಸಾರದ ಕಲಹದಿಂದ ಬೇಸತ್ತು ತಾಯಿ ತನ್ನ ಇಬ್ಬರು ಮಕ್ಕಳೊಂದಿಗೆ ಸಿದ್ದಾಪುರ ಕೆರೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಗುರವಾರ ಮಧ್ಯಾಹ್ನ ನಡೆದಿದೆ. ಮಧುಗಿರಿ ತಾಲೂಕಿನ ಸಿದ್ದಾಪುರ ಕೆರೆಯನ್ನು ವೀಕ್ಷಣೆ ಮಾಡಿ ಬರೋಣ ಎಂದು ಮಕ್ಕಳಿಗೆ ಹೇಳಿ ಕರೆದುಕೊಂಡು ಹೋಗಿ ಏಕಾಏಕಿ ಕೆರೆಗೆ ಹಾರಿದ್ದಾರೆ. ಮಧುಗಿರಿ ಪಟ್ಟಣದ ಒಂದನೇ ಬ್ಲಾಕ್‌ನ ಅಲ್ವಾ ಮೆಡಿಕಲ್ಸ್ ಸಮೀಪದ ವಾಸಿಗಳಾದ ಮೊಹಮ್ಮದ್ ಶಫೀಕ್ ಪಾಷಾ ಹೆಂಡತಿಯಾದ ಹಸೀನಾ(26), ಮಕ್ಕಳಾದ ಅಲ್ಫಿಯಾ ಕೊನೆನ್ (04) ಹಾಗೂ ಆಫಿಯಾ ಕೊನೆನ್ (08) ಮೃತರು. ಶಾಲಾ ಸಮವಸ್ತ್ರ ದಲ್ಲೇ ಇರುವ ಮಕ್ಕಳ ಶವಗಳನ್ನ ಅಗ್ನಿಶಾಮಕ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ಹೊರ ತೆಗೆದಿದ್ದಾರೆ. ಮಧುಗಿರಿ ಪಟ್ಟಣದ ಎಸ್.ಎಂ.ಶಾಲೆಯ ವಿದ್ಯಾರ್ಥಿಗಳಾಗಿದ್ದಾರೆ. ಮಧುಗಿರಿ ಪಿಎಸ್‌ಐ ವಿಜಯಕುಮಾರ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ವೈದ್ಯ ವಿದ್ಯಾರ್ಥಿ ಸಾವು

ತಿಪಟೂರು: ದಾವಣಗೆರೆಯ ಶಾಮನೂರು ಶಿವಶಂಕರಪ್ಪ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಕೀರ್ತನ್.ವಿ (19)

ಆಕಸ್ಮಿಕವಾಗಿ ತಮ್ಮ ತೋಟದ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟ ಘಟನೆ ಗುರುವಾರ ನಡೆದಿದೆ. ತಿಪಟೂರು ತಾಲೂಕಿನ ಹೊನ್ನವಳ್ಳಿ ಹೋಬಳಿಯ ಸಾರ್ಥವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾವಿನಹಳ್ಳಿ ಗ್ರಾಮದ ಬಳಿ ನೆಲಗೊಂಡನಹಳ್ಳಿ ತೋಟದ ಮನೆಯಲ್ಲಿ ವಾಸವಿದ್ದರು. ಗುರುವಾರ ಸಂಜೆ ವೇಳೆ ತಮ್ಮ ತೋಟದಲ್ಲಿ ಟ್ರ್ಯಾಕ್ಟರ್ ಮೂಲಕ ಉಳುಮೆ ಮಾಡುತ್ತಿದ್ದ ಸಂದರ್ಭ ಟ್ರ್ಯಾಕ್ಟರ್ ರಿವರ್ಸ್ ತೆಗೆಯಲು ಹೋದಾಗ ಕೃಷಿ ಹೊಂಡಕ್ಕೆ ಬಿದ್ದು ಸಾವನ್ನಪ್ಪಿದ್ದಾರೆ. ಮೃತ ವಿದ್ಯಾರ್ಥಿ ನೇತ್ರದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾನೆ.

ಸಿಎಂ ರಾಜೀನಾಮೆ ಅಗತ್ಯವಿಲ್ಲ: ಡಿ.ಕೆ. ಶಿವಕುಮಾರ್

ಬೆಂಗಳೂರು: ಮುಖ್ಯಮಂತ್ರಿಗಳು ರಾಜೀನಾಮೆ ನೀಡುವ ಅಗತ್ಯವಿಲ್ಲ. ಹಳ್ಳಿಯಿಂದ ದೆಹಲಿವರೆಗೂ ಕಾಂಗ್ರೆಸ್ ಪಕ್ಷ ನಮ್ಮ ಮುಖ್ಯಮಂತ್ರಿಗಳ ಪರವಾಗಿ ನಿಲ್ಲಲಿದೆ. ಪಕ್ಷದ ಅಧ್ಯಕ್ಷನಾಗಿ ನಾನು ಈ ಮಾತು ಹೇಳುತ್ತಿದ್ದೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸ್ಪೀಕರ್ ಕೋಳಿವಾಡ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಕೆಪಿಸಿಸಿ ಅಧ್ಯಕ್ಷ ನಾನು, ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷರು ರೆಹಮಾನ್ ಖಾನ್. ಇಲ್ಲಿ ನಾನೇ ಹೇಳುತ್ತಿದ್ದೇನಲ್ಲ, ಅವರ ರಾಜೀನಾಮೆ ಪ್ರಶ್ನೆಯೇ ಉದ್ಭವ ಆಗುವುದಿಲ್ಲ ಅಂತ ಎಂದು ಹೇಳಿದರು.

ಸಿದ್ದರಾಮಯ್ಯ ಅವರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರ ಟೀಕೆ ಬಗ್ಗೆ ಕೇಳಿದಾಗ, ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರದ ವೇಳೆ ಸಿಎಂ ಸಿದ್ದರಾಮಯ್ಯ ಅವರ ವಿಚಾರ ಪ್ರಸ್ತಾಪ ಮಾಡುತ್ತಿದ್ದು, ಈ ವಿಚಾರದಲ್ಲಿ ಅವರು ರಾಜಕಾರಣ ಮಾಡುತ್ತಿದ್ದಾರೆ. ಅವರ ಸರಕಾರದ ಸಚಿವರುಗಳು ಅನೇಕ ಪ್ರಕರಣಗಳ ತನಿಖೆ ಎದುರಿಸುತ್ತಿದ್ದು, ಮೊದಲು ಅವರನ್ನು ಸಚಿವ ಸಂಪುಟದಿಂದ ಕೈಬಿಡಲಿ. ನಂತರ ಈ ಬಗ್ಗೆ ಚರ್ಚೆ ಮಾಡಲಿ ಎಂದು ತಿಳಿಸಿದರು.

ನಮ್ಮ ಮುಖ್ಯಮಂತ್ರಿಗಳ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್‌ನವರು ರಾಜಕೀಯವಾಗಿ ಷಡ್ಯಂತ್ರ ರೂಪಿಸುತ್ತಿದ್ದು, ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪುತ್ತಿರುವುದನ್ನು ಸಹಿಸಲು ಪ್ರತಿಪಕ್ಷಗಳಿಂದ ಸಾಧ್ಯವಾಗುತ್ತಿಲ್ಲ. ಕಾಂಗ್ರೆಸ್ ಅಧಿಕಾರದಲ್ಲಿರುವ ದೊಡ್ಡ ರಾಜ್ಯ ಕರ್ನಾಟಕ. ಇಲ್ಲಿ ನಮ್ಮ ಸರಕಾರ ಇರುವುದನ್ನು ಸಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ. ಸಿಎಂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

14 ಆನೆಗಳು,38 ಕುದುರೆಗಳ ಜತೆ 21 ಸುತ್ತು ಕುಶಾಲ ತೋಪು ಹಾರಿಸಿ ಅಭ್ಯಾಸ

ಕುಶಾಲತೋಪು ಮಧ್ಯೆ ಆನೆಗಳಿಗೆ ತಾಲೀಮು

ಮೈಸೂರು: ನಾಡಿನಾದ್ಯಂತ ವಿಜಯದಶಮಿಯ ವೈಭವ ಸಾರುವ ಕುಶಾಲತೋಪುಗಳ ಪ್ರಾಯೋಗಿಕ ಪರೀಕ್ಷೆ ಗುರುವಾರ ಗಜಪಡೆ ಸಮ್ಮುಖದಲ್ಲಿ ನಡೆಯಿತು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಅಭಿಮನ್ಯು ನೇತೃತ್ವದ 14 ಆನೆಗಳು ಮತ್ತು 38 ಕುದುರೆಗಳೊಂದಿಗೆ ಕುಶಾಲತೋಪು ಸಿಡಿಸುವ ಪೂರ್ವಭಾವಿ ಅಭ್ಯಾಸ ನಡೆಸಲಾಯಿತು.

ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಗಜಪಡೆ ಸಮ್ಮುಖದಲ್ಲಿ 21 ಸುತ್ತು ಕುಶಾಲ ತೋಪು ಹಾರಿಸಲಾಯಿತು. ದಸರಾ ಮಹೋತ್ಸವದ ಆಕರ್ಷಣೆಯಾದ ಜಂಬೂಸವಾರಿ ದಿನದಂದು ಅರಮನೆ ಆವರಣದಲ್ಲಿ ನಾಡದೇವತೆ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಮುನ್ನ 21 ಕುಶಾಲತೋಪನ್ನು ಹಾರಿಸಲಾಗುತ್ತದೆ. ಆನೆಗಳು, ಕುದುರೆಗಳು ಈ ವೇಳೆ ಹೆದರಬಾರದು ಎಂಬ ಹಿನ್ನೆಲೆಯಲ್ಲಿ ಗುರುವಾರ ಕುಶಾಲತೋಪು ಪೂರ್ವಭಾವಿಯಾಗಿ ಅಭ್ಯಾಸ ನಡೆಸಲಾಯಿತು.

ಮೊದಲ ಸುತ್ತಿನ ಕುಶಾಲತೋಪು ಅಭ್ಯಾಸವನ್ನು ನಡೆಸಲಾಗಿದೆ. ಇನ್ನೂ ಎರಡು ಬಾರಿ ಅಂದರೆ ಸೆ. 29 ಹಾಗೂ ಅ.1ರಂದು ಕುಶಾಲತೋಪು ಅಭ್ಯಾಸ ನಡೆಸಲಾಗುವುದು. ಅರಮನೆಯ ಆವರಣದಲ್ಲಿ ಬೀಡುಬಿಟ್ಟಿರುವ ಆನೆಗಳು ಅಭ್ಯಾಸ ಸ್ಥಳಕ್ಕೆ ಆಗಮಿಸುತ್ತಿದ್ದಂತೆ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು.



ಹೆದರದ ಗಜಪಡೆ

ನಗರ ಸಶಸ್ತ್ರ ಮೀಸಲು ಪಡೆಯ ಪೊಲೀಸ್ ಸಿಬ್ಬಂದಿಯಿಂದ ಕುಶಾಲತೋಪು ಸಿಡಿಸುವ ಮೊದಲ ಹಂತದ ತಾಲೀಮು ಯಶಸ್ವಿಯಾಗಿದ್ದು, ಏಳು ಫಿರಂಗಿ ಗಾಡಿಗಳ ಮೂಲಕ, ತಲಾ ಮೂರು ಬಾರಿಯಂತೆ ಒಟ್ಟು 21 ಕುಶಾಲತೋಪುಗಳನ್ನು ಸಿಎಆರ್ ಸಿಬ್ಬಂದಿ ಸಿಡಿಸಿದರು. ಕುಶಾಲತೋಪು ಸಿಡಿಸಿದ ವೇಳೆ ಹೊರಹೊಮ್ಮಿದ ಕಿವಿಗಡಚಿಕ್ಕುವ ಶಬ್ದಕ್ಕೆ ಗಜಪಡೆ ಹಾಗೂ ಅಶ್ವಾರೋಹಿ ದಳ ಹೆದರದೇ ನಿಂತವು. ಆದರೆ, ಆನೆಗಳ ಪೈಕಿ ಹಿರಣ್ಯ ಮತ್ತು ಏಕಲವ್ಯ ಆನೆಗಳು ಸ್ವಲ್ಪ ವಿಚಲಿತವಾದವು. ಸಿಡಿದ ಶಬ್ದ ಹಲವು ಕಿ.ಮೀ.ವರೆಗೆ ಮಾರ್ದನಿಸಿತು.

ಅರಮನೆಯ ಸ್ಟ್ರಾಂಗ್ ರೂಮ್‌ನಿಂದ ಹೊರತೆಗೆದು ಜೋಡಣೆ | ಅ.3ರಿಂದ ಖಾಸಗಿ ದರ್ಬಾರ್

ರತ್ನಖಚಿತ ಸಿಂಹಾಸನ ಜೋಡಣೆ ಇಂದು

ಮೈಸೂರು: ಶರನ್ನವರಾತ್ರಿ ವೇಳೆ ಮೈಸೂರು ರಾಜವಂಶಸ್ಥರ ಖಾಸಗಿ ದರ್ಬಾರ್‌ಗೆ ಸಿದ್ಧತೆ ಪ್ರಾರಂಭವಾಗಿದ್ದು, ಸೆ.27 ರಂದು ಸಿಂಹಾಸನ ಜೋಡಣೆ ಪ್ರಕ್ರಿಯೆ ನಡೆಯಲಿದೆ.

ಅ.3ರಿಂದ ಖಾಸಗಿ ದರ್ಬಾರ್ ನಡೆಯಲಿದೆ. ಹೀಗಾಗಿ ಅರಮನೆ ನೆಲಮಾಳಿಗೆಯ ಸ್ಟ್ರಾಂಗ್ ರೂಂನಿಂದ ರತ್ನಖಚಿತ ಸಿಂಹಾಸನವನ್ನು ಪೊಲೀಸ್ ಬಿಗಿಭದ್ರತೆಯಲ್ಲಿ ಹೊರತೆಗೆದು ದರ್ಬಾರ್ ಹಾಲ್‌ಗೆ ಜೋಡಿಸಲಾಗುತ್ತದೆ. ಅ.27ರಂದು ಸಿಂಹಾಸನ ವಿಸರ್ಜನೆ ಕಾರ್ಯ ನಡೆಯಲಿದೆ. ಶತಮಾನಗಳ ಇತಿಹಾಸವಿರುವ ರತ್ನಖಚಿತ ಸಿಂಹಾಸನವನ್ನು ಯದುವಂಶದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೂಲಕ ಖಾಸಗಿ ದರ್ಬಾರ್ ನಡೆಸುವರು.

ಜೋಡಣೆಗೂ ಮುನ್ನ ಧಾರ್ಮಿಕ ವಿಧಿ

ಸಿಂಹಾಸನದ ಜೋಡಣೆಗೂ ಮುನ್ನ ಗಣಪತಿ ಹೋಮ, ಚಾಮುಂಡೇಶ್ವರಿ ಪೂಜೆ, ಶಾಂತಿ ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿ-ವಿಧಾನ ಜರುಗಲಿವೆ. ನಂತರ ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯ ಶುಭಲಗ್ನದಲ್ಲಿ ಸಿಂಹಾಸನ ಜೋಡಣೆ ಕಾರ್ಯ ನಡೆಯಲಿದೆ.

ಅರಮನೆ ನೆಲಮಾಳಿಗೆಯ ಸ್ಟ್ರಾಂಗ್ ರೂಂನಿಂದ ರತ್ನಖಚಿತ ಸಿಂಹಾಸನವನ್ನು ಪೊಲೀಸ್ ಬಿಗಿಭದ್ರತೆಯಲ್ಲಿ ಹೊರತೆಗೆದಿರುವುದು.

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಾಗೂ ಮೈಸೂರು ಜಿಲ್ಲಾಡಳಿತದ ಸಮ್ಮುಖದಲ್ಲಿ ಜೋಡಣೆ ಕಾರ್ಯ ನಡೆಯಲಿದೆ. ಸಿಂಹಾಸನ ಜೋಡಣೆ ನಂತರ ಬಿಳಿಪರದೆಯಿಂದ ಮುಚ್ಚಲಾಗುತ್ತದೆ.

ಅರಮನೆಯ ಭದ್ರಕೋಣೆಯಲ್ಲಿ ಸಿಂಹಾಸನ ಇರಿಸಲಾಗಿದ್ದು, ಅರಮನೆ ಆಡಳಿತ ಮಂಡಳಿ ಹಾಗೂ ರಾಜವಂಶಸ್ಥರ ಬಳಿ ಕೋಣೆಯ ತಲಾ ಒಂದು ಬೀಗದಕ್ಕೆ ಇದೆ. ಸಿಂಹಾಸನದಲ್ಲಿ 3 ಭಾಗಗಳಿವೆ. ಒಂದು ಮುಖ್ಯ ಆಸನ, 11 ಮೆಟ್ಟಿಲು ಮತ್ತು ಬಂಗಾರದ ಛತ್ರಿಯಿದೆ. ಮೂಲತಃ ಅಂಜೂರ ಮರದಿಂದ ತಯಾರಿಸಲಾಗಿರುವ ಈ ರಾಜಗದ್ದುಗೆಗೆ ಆನೆಯ ದಂತದ ಪಟ್ಟಿಗಳನ್ನು ಅಳವಡಿಸಲಾಗಿದೆ. ಈ ಭಾಗಗಳನ್ನು ಬೇರ್ಪಡಿಸಿ ಮತ್ತೆ ಜೋಡಣೆ ಮಾಡುವ ತಾಂತ್ರಿಕತೆ ಇದಕ್ಕೆ ಇದೆ. ಶತಮಾನಗಳಿಂದಲೂ ರಾಜ ಮಹಾರಾಜರು ಇದೇ ಸಿಂಹಾಸನಾರೂಢರಾಗಿ ನವರಾತ್ರಿಯ ದಿನ ಖಾಸಗಿ ದರ್ಬಾರು ನಡೆಸಿಕೊಂಡು ಬಂದಿದ್ದಾರೆ. ಪ್ರಜಾ ಸರಕಾರ ಅಸ್ತಿತ್ವಕ್ಕೆ ಬಂದಿದ್ದರೂ ಅರಮನೆ ಸಾಂಪ್ರದಾಯಿಕ ಪದ್ಧತಿಗಳನ್ನು ಕೈಬಿಟ್ಟಿಲ್ಲ.

ಗೆಜ್ಜಗಳ್ಳಿ ಗ್ರಾಮಸ್ಥರೇ ಆಧಾರ

ರತ್ನಖಚಿತ ಸ್ವರ್ಣಸಿಂಹಾಸನ ಜೋಡಣೆಯಲ್ಲಿ ಮೈಸೂರು ತಾಲೂಕಿನ ಗೆಜ್ಜಗಳ್ಳಿ ಗ್ರಾಮಸ್ಥರು ಸಿದ್ಧಹಸ್ತರು. ಅದಕ್ಕಾಗಿಯೇ ರಾಜ ಮಹಾರಾಜರ ಕಾಲದಿಂದಲೂ ನವರಾತ್ರಿ ಆರಂಭಕ್ಕೂ ಮೂರು ತಿಂಗಳ ಮೊದಲೇ ಅರಮನೆಯಿಂದ ಪರಿಚಾರಕರು ಗೆಜ್ಜಗಳ್ಳಿಗೆ ಹೋಗಿ ವೀಳ್ಯ ಕೊಟ್ಟು ಆಹ್ವಾನ ನೀಡಿ ಬರುತ್ತಿದ್ದರು. ಗ್ರಾಮಸ್ಥರು ಬಂದು ಸ್ವರ್ಣ ಸಿಂಹಾಸನವನ್ನು ಜೋಡಿಸಿ ಹೋಗುತ್ತಾರೆ.

{ಬಸವರಾಜ ಬೊಮ್ಮಾಯಿ} ಸಂಸದ

ಶಿಗ್ಗಾವಿ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಬಗ್ಗೆ ಈಗಾಗಲೇ ಎರಡು ಸಭೆಗಳನ್ನು ಮಾಡಲಾಗಿದೆ. ಹಲವು ಆಕಾಂಕ್ಷಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಚ್ಚರಿ ಅಭ್ಯರ್ಥಿ, ಮುರುಗೇಶ ನಿರಾಣಿ ಸೇರಿ ಹಲವರಿಂದ ಟಿಕೆಟ್ ಲಾಬಿ ಕುರಿತು ಗೊತ್ತಿಲ್ಲ. ಕಳೆದ ಹತ್ತು ದಿನಗಳಿಂದ ನಾನು ಊರಲ್ಲಿ ಇರಲಿಲ್ಲ.



ಹಾಸನಾಂಬ ಪ್ರಸಾದಕ್ಕೂ ನಂದಿನಿ ತುಪ್ಪ ಬಳಕೆ

ಹಾಸನ: ತಿರುಪತಿ ಲಡ್ಡು ವಿವಾದದ ಬಳಿಕ ನಂದಿನಿ ತುಪ್ಪಕ್ಕೆ ಬೇಡಿಕೆ ಹೆಚ್ಚಿದೆ. ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಹಾಸನದ ಅಧಿದೇವತೆ ಹಾಸನಾಂಬೆ ಪ್ರಸಾದಕ್ಕೂ ನಂದಿನಿ ತುಪ್ಪ ಬಳಕೆಗೆ ನಿರ್ಧರಿಸಲಾಗಿದೆ. ಹಾಸನಾಂಬೆ ದೇವಾಲಯದ ಗರ್ಭಗುಡಿ ಬಾಗಿಲು ತೆರೆಯಲು ತಿಂಗಳು ಮಾತ್ರ ಬಾಕಿ ಇದೆ. ಹಾಸನಾಂಬ ಮಹೋತ್ಸವದಲ್ಲಿ ಭಕ್ತರಿಗೆ ನೀಡುವ ಲಡ್ಡು ಪ್ರಸಾದವನ್ನು ನಂದಿನಿ ತುಪ್ಪದಿಂದಲೇ ತಯಾರಿಸಲು ನಿರ್ಧರಿಸಲಾಗಿದೆ. ಇದರ ಜವಾಬ್ದಾರಿಯನ್ನು ಬೆಂಗಳೂರಿನ ಇಸ್ಕಾನ್ ಸಂಸ್ಥೆಗೆ ನೀಡಲು ಜಿಲ್ಲಾಡಳಿತ ನಿರ್ಧರಿಸಿದೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ರಾಜ್ಯದಲ್ಲಿ ನಂದಿನಿ ತುಪ್ಪ, ಹಾಲು ಹಾಗೂ ಹಾಲಿನ ಉತ್ಪನ್ನಕ್ಕೆ ಬೇಡಿಕೆ ಹೆಚ್ಚಾಗಿದೆ. ರಾಯಚೂರು, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಹಾಲು ಒಕ್ಕೂಟದಲ್ಲೂ ಬೇಡಿಕೆ ಹೆಚ್ಚಿದೆ. ತಿರುಪತಿ ಲಡ್ಡು ವಿವಾದದ ನಂತರದಲ್ಲಿ ಹಾಲಿನ ಉತ್ಪನ್ನದ ಬೇಡಿಕೆ ಹೆಚ್ಚಳವಾಗಿದೆ. ಈಗಾಗಲೇ ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳಲ್ಲೂ ನಂದಿನಿ ತುಪ್ಪ ಬಳಕೆಗೆ ಸರಕಾರ ಆದೇಶಿಸಿದೆ.

ಐಟಿ ಅಧಿಕಾರಿಗಳಿಂದ ಜೈಲಲ್ಲಿ ದರ್ಶನ್ ವಿಚಾರಣೆ

ಬಳ್ಳಾರಿ: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಳ್ಳಾರಿ ಜೈಲುವಾಸ ಅನುಭವಿಸುತ್ತಿರುವ ನಟ ದರ್ಶನ್ ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ರೇಣುಕಾಸ್ವಾಮಿ ಕೊಲೆ ನಡೆದ ನಂತರ ಆರೋಪಿಗಳ ಮಧ್ಯೆ ಹಣದ ವ್ಯವಹಾರ ನಡೆದಿದೆ ಎನ್ನಲಾಗುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಗುರುವಾರ ಬಳ್ಳಾರಿ ಜೈಲಿಗೆ ಆಗಮಿಸಿದ್ದಾರೆ. ಸಂದರ್ಶಕರ ಕೊಠಡಿಯಲ್ಲಿ ಅವರ ವಿಚಾರಣೆ ನಡೆಸುತ್ತಿದ್ದಾರೆ.

ಶುಕ್ರವಾರವೂ ಸಹ ದರ್ಶನ್ ಅವರನ್ನು ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ತೀವ್ರ ವಿಚಾರಣೆ ನಡೆಸಲಿದ್ದಾರೆ. ಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಐಟಿ ಅಧಿಕಾರಿಗಳು ದರ್ಶನ್ ರ ವಿಚಾರಣೆ ಮಾಡುತ್ತಿದ್ದಾರೆ. ಐಟಿ ಅಧಿಕಾರಿಗಳಿಗೆ ಸಹಕಾರ ನೀಡುವಂತೆ ನ್ಯಾಯಾಲ ಯದಿಂದ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಇ-ಮೇಲ್ ರವಾನೆಯಾಗಿತ್ತು. ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜಾಮೀನು ಕೋರಿ ನಟ ದರ್ಶನ್ ಈಗಾಗಲೇ ಅರ್ಜಿ ಸಲ್ಲಿಕೆ ಮಾಡಿದ್ದಾರೆ.

ಕೊಲೆ ನಂತರ ಸರೆಂಡರ್ ಆಗಿದ್ದ ಮೂವರು

ರೇಣುಕಾಸ್ವಾಮಿ ಹತ್ಯೆ ನಂತರ ನಟ ದರ್ಶನ್ ಬಳಿಯಿಂದ ಹಣ ಪಡೆದು ಮೂವರು ತಾವೇ ಬಂದು ಪೊಲೀಸರ ಮುಂದೆ ಶರಣಾಗಿದ್ದರು. ಅಂದರೆ ಇಲ್ಲಿ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಆರೋಪವನ್ನು ಇನ್ನೊಬ್ಬರ ಮೇಲೆ ಹೊರಿಸಲು ಪ್ಲ್ಯಾನ್ ಮಾಡಿದ್ದರು. ಕೊಲೆ ಕೇಸ್ ಮುಚ್ಚಿ ಹಾಕಲು 85 ಲಕ್ಷರು. ಕ್ಯಾಶ್ ಬಂದಿದ್ದು ಎಲ್ಲಿಂದ ಎಂಬ ಬಗ್ಗೆ ಮಾಹಿತಿ ಕೋರಿ ನೋಟಿಸ್ ಜಾರಿ ಮಾಡಿತ್ತು. ಅಷ್ಟು ದೊಡ್ಡ ಮೊತ್ತದ ಕ್ಯಾಶ್ ಎಲ್ಲಿಂದ ಬಂತು? ಹೇಗೆಲ್ಲ ಹಣ ವರ್ಗಾವಣೆ ಮಾಡಲಾಗಿದೆ ಎಂಬ ಬಗ್ಗೆ ಐಟಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ವೃದ್ಧೆಯನ್ನು 3 ಕಿ.ಮೀ. ಹೊತ್ತು ಸಾಗಿದ ಗ್ರಾಮಸ್ಥರು

ಚಿಕ್ಕಮಗಳೂರು: ಅನಾರೋಗ್ಯದ ವೃದ್ಧೆಯೊಬ್ಬರನ್ನು 3 ಕಿ.ಮೀ. ವರೆಗೂ ರಸ್ತೆ ಇಲ್ಲದೆ ಮಲೆನಾಡಿನ ಹಳ್ಳಿಯವರು ತೂಗುಸೇತುವೆ ಮೇಲೆ ಎತ್ತಿಕೊಂಡು ಸಾಗಿದ ಘಟನೆ ಜಿಲ್ಲೆಯ ಕಳಸ ತಾಲೂಕಿನ ಸಂಸೆ ಗ್ರಾಪಂ ವ್ಯಾಪ್ತಿಯ ನೆಲ್ಲಿಬೀಡು ಗ್ರಾಮದಲ್ಲಿ ನಡೆದಿದೆ.

ಲಕ್ಷ್ಮೀ ಎಂಬ 70 ರ ವೃದ್ಧೆ ಅನಾರೋಗ್ಯ ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಆ ಹಳ್ಳಿಯಿಂದ ಮುಖ್ಯರಸ್ತೆಗೆ ಬರಲು 3 ಕಿ.ಮೀ. ಸಾಗಬೇಕಾಗಿರುವುದರಿಂದ ಹಳ್ಳಿಯ ಕೆಲವರು ಸೇರಿಕೊಂಡು ಲಕ್ಷ್ಮೀ ಅವರನ್ನು ಹೊತ್ತುಕೊಂಡು ಬಂದ ದೃಶ್ಯ ಕಂಡುಬಂತು. ಭದ್ರಾ ನದಿಗೆ ನಿರ್ಮಿಸಿರುವ ತೂಗುಸೇತುವೆ ಮೇಲೆಯೇ ಹಳ್ಳಿಗರು ದಿನನಿತ್ಯ ಪಯಣಿಸುತ್ತಿದ್ದು, ನೆಲ್ಲಿಬೀಡು, ಅಜ್ಜಿಗದ್ದೆ, ಆರೋಳ್ಳಿ, ಕಟ್ಟೆಮನೆ, ಕೋಣೆಮನೆ ಸೇರಿ 10ಕ್ಕೂ ಹೆಚ್ಚು ಹಳ್ಳಿಗೆ ರಸ್ತೆ ಇಲ್ಲ. ಹಲವು ದಶಕಗಳಿಂದಲೂ ಭದ್ರಾ ನದಿಯ ತೂಗುಸೇತುವೆ ಇವರು ಅವಲಂಬಿಸಿದ್ದಾರೆ.



ಹಳ್ಳಿಯಿಂದ ಮುಖ್ಯ ರಸ್ತೆಗೆ ಬರಲು 3 ಕಿ.ಮೀ. ಸಾಗಬೇಕಾಗುತ್ತದೆ. ಬೇಸಿಗೆಯಲ್ಲಿ ಭದ್ರೆಯ ಒಡಲಲ್ಲೇ ಗಾಡಿಗಳು ಓಡಾಡುತ್ತವೆ, ಆದರೆ ಮಳೆಗಾಲದಲ್ಲಿ ಆಗಲ್ಲ. ಭದ್ರಾ ನದಿಗೆ ಸೇತುವೆ ನಿರ್ಮಿಸಿ ಕೊಡುವಂತೆ ಹಳ್ಳಿಯಲ್ಲಿರುವ ಸಾರ್ವಜನಿಕರು 70 ವರ್ಷಗಳಿಂದ ಮನವಿ ಮಾಡುತ್ತಿದ್ದರೂ, ಈವರೆಗೆ ಏನು ಪ್ರಯೋಜನವಾಗಲಿಲ್ಲ ಎಂದು ಸ್ಥಳೀಯರು ದೂರಿದ್ದಾರೆ..

ವಿಶ್ವವಾಣಿ

ಸಂಪಾದಕೀಯ

ಸುಪ್ರೀಂ ಅಭಿಪ್ರಾಯ ಮನನೀಯ

ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು ಬಾಯ್ತಪ್ಪಿ ಆಡಿದ ಮಾತಿನ ವಿಚಾರದಲ್ಲಿ ಸುಪ್ರೀಂಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ನ್ಯಾಯಮೂರ್ತಿಗಳ ಬೇಷರತ್ ಕ್ಷಮೆಯಾಚನೆ ಬಳಿಕ ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ನ್ಯಾಯಪೀಠ. ''ಇನ್ನು ಮುಂದೆ ಭಾರತದ ಯಾವುದೇ ಭಾಗವನ್ನು ಪಾಕಿಸ್ತಾನ ಎಂದು ಕರೆಯಬಾರದು. ಇಂಥ ಹೇಳಿಕೆ ದೇಶದ ಸಮಗ್ರತೆಗೆ ವಿರುದ್ಧವಾದುದು'' ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ನಿರ್ದಿಷ್ಟ ಜನಾಂಗವೊಂದು ಹೆಚ್ಚಿರುವ ಭಾಗಕ್ಕೆ 'ಮಿನಿ ಪಾಕಿಸ್ತಾನ' ಎಂದು ನಮ್ಮ ರಾಜಕೀಯ ನಾಯಕರು ಆಗಾಗ ನೀಡುತ್ತಿದ್ದ ಬಿಡುಬೀಸು ಹೇಳಿಕೆಯನ್ನು ಈ ಹಿಂದೆಯೂ ಕೇಳಿದ್ದೇವೆ. ಆದರೆ ಯಾರೂ ಈ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ತಮ್ಮ ವಿದ್ವತ್ತು ಮತ್ತು ನ್ಯಾಯತತ್ಪರತೆಗೆ ಹೆಸರಾದ ನ್ಯಾ.ಶ್ರೀಶಾನಂದ ಅವರು ತುಂಬಿದ ನ್ಯಾಯಾಲಯದಲ್ಲಿ ಇಂಥದ್ದೇ ಹೇಳಿಕೆಯೊಂದನ್ನು ನೀಡಿದಾಗ ಎಲ್ಲರಿಗೂ ಅಚ್ಚರಿಯಾಗಿತ್ತು. ಯಾವುದೇ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆಯ ಸಮಸ್ಯೆ ಇದ್ದರೆ, ಸೂಕ್ತಕ್ರಮ ಕೈಗೊಳ್ಳುವಂತೆ ಸರಕಾರ ಅಥವಾ ಅಧಿಕಾರಿಗಳಿಗೆ ನ್ಯಾಯಾಲಯ ನಿರ್ದೇಶನ ನೀಡಬಹುದು. ಆದರೆ ಅಲ್ಲಿ ವಾಸ್ತವ್ಯ ಹೂಡಿರುವ ಎಲ್ಲ ಜನರನ್ನು ಸಾರಾಸಗಟಾಗಿ ಹೊಣೆ ಮಾಡುವುದು ನಮ್ಮ ಸಾಮಾನ್ಯ ನ್ಯಾಯವಿವೇಚನೆಗೆ ವಿರುದ್ಧವಾದುದು. ನ್ಯಾಯದಾನವಲ್ಲದೆ ಅನೇಕ ವಿಷಯಗಳಲ್ಲಿ ತಮ್ಮ ಅನುಭವವನ್ನು ಬಹಿರಂಗ ನ್ಯಾಯಾಲಯದಲ್ಲಿ ಹಂಚಿಕೊಂಡಿರುವ ನ್ಯಾ.ಶ್ರೀಶಾನಂದ ಅವರು ಈ ಕಾರಣಕ್ಕಾಗಿ ಜನಾದರಕ್ಕೂ ಪಾತ್ರರಾದವರು. ಆದರೆ ತುಟಿಮೀರಿದ ಮಾತಿಗೆ ಅವರೇ ನ್ಯಾಯಾಲಯದಲ್ಲಿ ಕ್ಷಮೆ ಯಾಚಿಸಿ ತಮ್ಮ ಉದ್ದೇಶ ಅದಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸುಪ್ರೀಂಕೋರ್ಟ್ ಕೂಡ ಪ್ರಕರಣವನ್ನು ಇಲ್ಲಿಗೇ ಅಂತ್ಯಗೊಳಿಸಿರುವುದು ಸ್ವಾಗತಾರ್ಹ. ಆದರೆ ಈ ವೇಳೆ ಅದು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ನಾವು ಮನನ ಮಾಡಿಕೊಳ್ಳಬೇಕಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು, ತಮ್ಮ ಮಾತು, ಈ ನೆಲದ ಕಾನೂನು ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಿಲ್ಲದಂತೆ ಎಚ್ಚರಿಕೆ ವಹಿಸಬೇಕಿದೆ. ಅದರಲ್ಲೂ ನಿರ್ದಿಷ್ಟ ಭಾಷೆ, ಜನಾಂಗ, ಪ್ರದೇಶ, ಲಿಂಗದ ಬಗ್ಗೆ ತಪ್ಪಿಯೂ ಅನುಚಿತ ಮಾತುಗಳನ್ನು ಆಡಬಾರದು. ಭಾರತದ ಯಾವುದೇ ಭಾಗವನ್ನು 'ಪಾಕಿಸ್ತಾನ' ಎಂದು ಕರೆಯುವುದು ನಮ್ಮ ದೇಶದ ಸಮಗ್ರತೆ ಮತ್ತು ಏಕತೆಗೆ ನಾವೇ ಧಕ್ಕೆ ತಂದಂತೆ. ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಲಯದ ಮಾತುಗಳು ಮನನೀಯ.

ಸೊಂಪಾದಕೀಯ

ಕಾರ್ಯವಾಸಿ ಕತ್ತೆ ಹಾಲು ಹಿಡಿ

ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಅನ್ನೋ ಗಾದೆಮಾತನ್ನ ನಾವು ಕೇಳಿದ್ದೇವೆ. ಆದರೆ ಈ ವಿಷಯ ಕೇಳಿದರೆ ಕತ್ತೆಗೊಂದು ಕಾಲ ಅಂತ ಹೇಳೋ ಅನಿವಾರ್ಯತೆ ಎದುರಾಗುತ್ತದೆ. ಯಾಕಂದ್ರೆ, ಇದು ಕತ್ತೆಗೆ ಇರೋ ಡಿಮ್ಯಾಂಡ್ ವಿಷಯದ್ದು. ಹಾಗೆ ನೋಡಿದರೆ ಕತ್ತೆ ಹಾಲಿಗೆ ಇರೋ ಡಿಮ್ಯಾಂಡ್ ಇದು. ಕತ್ತೆ ಹಾಲಿಗೆ ಈಗ ಪ್ರತಿ ಲೀಟರ್‌ಗೆ 1,350 ರುಪಾಯಿ ಆಗಿದೆಯಂತೆ. ಆದರೆ ಈ ಸುದ್ದಿ ಕೇಳಿ ಕತ್ತೆ ಹಾಲು ಯಾರು ಮಾರಾಟ ಮಾಡುತ್ತಾರೆ, ಅದರ ಮಾರಾಟ ಮಳಿಗೆ ಎಲ್ಲಿದೆ, ಕತ್ತೆ ಹಾಲನ್ನು ಹಸುವಿನ ಹಾಲಿನಂತೆ ಅಂಗಡಿಯಲ್ಲಿ ಮಾರಾಟ ಮಾಡ್ತಾರೆಯೇ ಅನ್ನೋ ಪ್ರಶ್ನೆಗಳು ಮೂಡುತ್ತವೆ. ಆದರೆ ಕತ್ತೆ ಹಾಲನ್ನು ದೈನಂದಿನ ಬಳಕೆಗೆ ಬಳಸದೆ ಕೇವಲ ಅದರ ಔಷಧೀಯ ಗುಣಗಳಿಗಾಗಿ ಬಳಸಲಾಗುತ್ತದೆ ಅನ್ನೋದು ವಾಸ್ತವ. ಹಾಗೆ ನೋಡಿದರೆ, ಮೇಕೆ ಮತ್ತು ಒಂಟೆ ಹಾಲಿಗೂ ಈ ರೀತಿಯ ಔಷಧೀಯ ಗುಣಗಳಿದ್ದರೂ ಕತ್ತೆ ಹಾಲು ಅವೆರಡಕ್ಕಿಂತ ಜಾಸ್ತಿ ಎಫೆಕ್ಟಿವ್ ಅಂತೆ. ಹಾಗಾಗಿ ಕೆಲಸಕ್ಕೆ ಬಾರದ ಕತ್ತೆ ಅಂತ ಬಯ್ಯೋರಿಗೆ ಕತ್ತೆ ಹಾಲಿಗೂ ಬೆಲೆ ಇದೆ ಅಂತ ಹೇಳಬೇಕಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕತ್ತೆಯ ಹಾಲಿಗೆ ಬೇಡಿಕೆ ಇದೆಯಂತೆ. ದೆಹಲಿಯ ಮಹಿಳೆಯೊಬ್ಬರು ಕತ್ತೆ ಹಾಲಿನಿಂದ ಲಿಪ್‌ಬಾಮ್, ಸೋಪ್, ಸೌಂದರ್ಯ ವರ್ಧಕಗಳನ್ನು ತಯಾರಿಸುತ್ತಾರಂತೆ. ಹಾಗಾಗಿ ಸುಂದರವಾದ ಹುಡುಗಿಯೊಬ್ಬಳಿಗೆ ಮುತ್ತು ಕೊಡುವ ಮುಂಚೆ ಆಕೆ ತುಟಿಗೆ ಕತ್ತೆ ಹಾಲಿನ ಲಿಪ್‌ಬಾಮ್ ಹಚ್ಚಿಕೊಂಡಿರುವ ಎಲ್ಲ ಸಾಧ್ಯತೆ ಇರುತ್ತದೆ ಅನ್ನೋದನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಒಂದು ಹುಡುಗಿಯನ್ನ, 'ನೋಡೋಕೆ ಇಷ್ಟ್ ಚೆನ್ನಾಗಿದ್ದೀರಲ್ಲ ನೀವು ಯಾವ ಸೋಪಲ್ಲಿ ಸ್ನಾನ ಮಾಡೋದು?' ಅಂತ ಕೇಳಿದ್ರೆ, 'ಕತ್ತೆ ಹಾಲಿನ ಸೋಪ್' ಅನ್ನೋ ಉತ್ತರವೂ ಬರಬಹುದು. ಅಷ್ಟೇ ಅಲ್ಲದೆ ಕತ್ತೆ ಹಾಲಿಗೆ ಕೆಲವೊಂದು ರೋಗಗಳನ್ನು ಗುಣಪಡಿಸೋ ಶಕ್ತಿ ಇದೆಯಂತೆ. ಆದರೆ ಕೆಲಸಕ್ಕೆ ಬಾರದ ಕತ್ತೆಗಳಿಗೆ ಬುದ್ಧಿ ಕಲಿಸೋ ಶಕ್ತಿ ಕತ್ತೆ ಹಾಲಿನಲ್ಲಿ ಇದೆಯೇ ಅನ್ನೋದು ಇನ್ನಷ್ಟೇ ಗೊತ್ತಾಗಬೇಕಿದೆ. ಒಟ್ಟಿನಲ್ಲಿ 'ಕಾರ್ಯವಾಸಿ ಕತ್ತೆ ಕಾಲು ಹಿಡಿ' ಅನ್ನೋ ಮಾತಿನಂತೆ ಈಗ ಕಾರ್ಯ ವಾಸಿ ಅಲ್ಲ, ರೋಗ ವಾಸಿ ಆಗಲು ಕತ್ತೆ ಬೇಕಿದೆ. ಆದರೆ ಹಿಡಿಯಬೇಕಾಗಿರೋದು ಕತ್ತೆಯ ಕಾಲನ್ನಲ್ಲ, ಕತ್ತೆ ಹಾಲನ್ನ!

ಸಂಪಾದಕರ ಸದ್ಯಶೋಧನೆ

ಗೊಯೆಂಕಾ ಮಾಡಿದ ಸಾಹಸ

ರಾಷ್ಟ್ರೀಯ ವಿಚಾರಧಾರೆಯನ್ನು ಎತ್ತಿ ಹಿಡಿಯುವ ಪತ್ರಿಕೆಗಳು ದಕ್ಷಿಣ ಭಾರತದಲ್ಲಿ ಇಲ್ಲ. ಎಸ್.ಸದಾನಂದ ಸಂಪಾದಕತ್ವದ 'ದಿ ಫ್ರೀ ಪ್ರೆಸ್ ಜರ್ನಲ್' ಪತ್ರಿಕೆ ಕುಂಟುತ್ತಾ ಸಾಗುತ್ತಿದೆ. ಆ ಪತ್ರಿಕೆಯನ್ನು ನೀವೇಕೆ ಖರೀದಿಸಬಾರದು'' ಎಂದು ಮಹಾತ್ಮ ಗಾಂಧಿಯವರು ರಾಮನಾಥ ಗೊಯೆಂಕಾ ಅವರಿಗೆ ಹೇಳಿದಾಗ, ಗೊಯೆಂಕಾ ಸಮ್ಮತಿಸಿದರು. ಹಾಗೆ ನೋಡಿದರೆ, ಗೊಯೆಂಕಾಗೆ ಪತ್ರಿಕೆ ವ್ಯವಹಾರ ಹೊಸತು. ''ಮಾರವಾಡಿಯಾದವನು ಕಾಗದ ವ್ಯಾಪಾರ ಮಾಡಬಹುದೇ ಹೊರತು, ಪತ್ರಿಕೆ ವ್ಯವಹಾರವನ್ನಲ್ಲ'' ಎಂಬುದು ಗೊಯೆಂಕಾ ಅವರ ಮೊದಲ ಪ್ರತಿಕ್ರಿಯೆ ಆಗಿತ್ತಂತೆ. ಆದರೆ ಗಾಂಧೀಜಿ ಮಾತನ್ನು ಅಷ್ಟು ಸುಲಭಕ್ಕೆ ತಳ್ಳಿ ಹಾಕುವಂತಿರಲಿಲ್ಲ. ನಷ್ಟದಲ್ಲಿದ್ದ 'ದಿ ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯನ್ನು ಗೊಯೆಂಕಾ ಖರೀದಿಸಿದರು. ಆ ದಿನಗಳಲ್ಲಿ ಅವರು ತೊಡಗಿಸಿದ್ದ ಹಣ 3 ಲಕ್ಷ ರುಪಾಯಿ. ಅಂದರೆ ತಮ್ಮ ಉಳಿತಾಯವನ್ನೆಲ್ಲ ಅವರು ಹೊಸ ಉದ್ಯಮಕ್ಕೆ ಸುರಿದಿದ್ದರು. ''ಮಾರವಾಡಿ ಉದ್ಯಮಿ ಪತ್ರಿಕೆಯನ್ನು ಆರಂಭಿಸಿದ್ದು ದೊಡ್ಡ ಜೋಕು'' ಎಂದು ಆ ದಿನಗಳಲ್ಲಿ ಅನೇಕರು ಕುಹಕವಾಡಿದ್ದರಂತೆ. ಆಗ ಗೊಯೆಂಕಾರಿಗೆ ಧೈರ್ಯ ತುಂಬಿ, ಬೆಂಬಲಕ್ಕೆ ನಿಂತವರು ಎ.ಎನ್.ಶಿವರಾಮನ್. ಅಂದು ಪತ್ರಿಕೆಯ ಸಂಪೂರ್ಣ ನೇತೃತ್ವವನ್ನು ಅವರೇ (ಶಿವರಾಮನ್) ವಹಿಸಿಕೊಂಡರು. ಪತ್ರಿಕೆಯನ್ನು ವಿತರಿಸುವ ಹೊಣೆಗಾರಿಕೆ ಗೊಯೆಂಕಾ ಅವರದ್ದಾಯಿತು. ರಾತ್ರಿ 10 ಗಂಟೆಗೆ ಪತ್ರಿಕೆ ಪ್ರಿಂಟ್ ಆದ ಬಳಿಕ ಗೊಯೆಂಕಾ ಸ್ವತಃ ವಾಹನವನ್ನು ಓಡಿಸಿಕೊಂಡು ಹೋಗುತ್ತಿದ್ದರು, ಪತ್ರಿಕೆಯ ಬಂಡಲ್‌ಗಳನ್ನು ವಾಹನಕ್ಕೆ ಹಾಕುವುದು-ಇಳಿಸುವುದನ್ನು ಖುದ್ದಾಗಿ ಮಾಡುತ್ತಿದ್ದರು. 1932ರ ಹೊತ್ತಿಗೆ ಗೊಯೆಂಕಾ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯನ್ನು ಆರಂಭಿಸಿದ್ದರು. 1939ರ ಸೆಪ್ಟೆಂಬರ್ 3ರಂದು, ಜರ್ಮನಿಯ ಮೇಲೆ ಬ್ರಿಟನ್ ಯುದ್ಧ ಘೋಷಿಸಿತಷ್ಟೆ. ಆ ಸುದ್ದಿ ಪತ್ರಿಕಾ ಕಚೇರಿಗೆ ಮಧ್ಯಾಹ್ನ 2 ಗಂಟೆ ಹೊತ್ತಿಗೆ ತಲುಪಿತು. ಅದನ್ನು ಬಿಸಿಬಿಸಿಯಾಗಿರುವಾಗಲೇ ನೀಡಬೇಕು ಎಂದು ನಿರ್ಧರಿಸಿದ ಗೊಯೆಂಕಾ, ಸಾಯಂಕಾಲ 5 ಗಂಟೆ ಹೊತ್ತಿಗೆ 4 ಪುಟಗಳ, 2000 ಪ್ರತಿಗಳನ್ನು ಮುದ್ರಿಸಿ ವಿತರಿಸಿದರು. ಅದು ಆ ದಿನಗಳಲ್ಲಿ ದೊಡ್ಡ ಸುದ್ದಿಯಾಗಿತ್ತು. ಅದೇ ದಿನ ಮದರಾಸಿನಲ್ಲಿ ಸುಭಾಷ್‌ಚಂದ್ರ ಬೋಸ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತಾಡುವವರಿದ್ದರು. ಹಸಿಹಸಿಯಾದ ಪ್ರತಿಗಳನ್ನು ಎತ್ತಿಕೊಂಡ ಗೊಯೆಂಕಾ ನೇರವಾಗಿ ಬೋಸ್ ಭಾಷಣ ಮಾಡುತ್ತಿದ್ದ ಜಾಗಕ್ಕೆ ಹೋಗಿ ಪತ್ರಿಕೆಯನ್ನು ವಿತರಿಸಿದರು. ಅದನ್ನು ಗಮನಿಸಿದ ಬೋಸ್, ತಮ್ಮ ಭಾಷಣವನ್ನು ಅರ್ಧಕ್ಕೆ ನಿಲ್ಲಿಸಿ, ಪತ್ರಿಕೆಯ ಮೇಲೆ ಕಣ್ಣಾಡಿಸಿ, ''ಬ್ರಿಟನ್ ಮತ್ತು ಜರ್ಮನಿ ಮಧ್ಯೆ ಯುದ್ಧ ಆರಂಭವಾಗಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ವಿಶೇಷ ಆವೃತ್ತಿಯಲ್ಲಿ ವರದಿಯಾಗಿದೆ. 6 ತಿಂಗಳ ಹಿಂದೆ, ಬ್ರಿಟಿಷರು ಭಾರತ ಬಿಟ್ಟು ತೊಲಗುವಂತೆ ಕಡೆಯ ಎಚ್ಚರಿಕೆ ನೀಡಬೇಕು ಎಂದು ನಾನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಒತ್ತಾಯಿಸಿದ್ದೆ. ನನ್ನ ಸಲಹೆಯನ್ನು ಸಮಿತಿ ಗಂಭೀರವಾಗಿ ಪರಿಗಣಿಸಿ ಕಾರ್ಯತತ್ಪರವಾಗಿದ್ದರೆ, ಇಷ್ಟರೊಳಗೆ ನಮಗೆ ಸ್ವಾತಂತ್ರ್ಯ ಲಭಿಸಿರುತ್ತಿತ್ತು. ಅದೇನೇ ಇರಲಿ, ನಾನು ಗೊಯೆಂಕಾ ಅವರ ಈ ಪ್ರಯತ್ನವನ್ನು ಮೆಚ್ಚುತ್ತೇನೆ. ಅವರ ಪತ್ರಿಕೆಗೆ ಉಜ್ವಲ ಭವಿಷ್ಯವಿದೆ'' ಎಂದು ಪತ್ರಿಕೆಯನ್ನು ಪ್ರದರ್ಶಿಸುತ್ತಾ ತಮ್ಮ ಭಾಷಣದಲ್ಲಿ ಹೇಳಿದರು. ಮರುದಿನದ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಬೋಸ್ ಭಾಷಣ ವಿಸ್ತೃತವಾಗಿ ವರದಿಯಾಗಿತ್ತು. ಈಗಿನ ಕಾಲದಲ್ಲೂ ಅಂಥ ಸಾಹಸವನ್ನು ಮಾಡಲು ಪತ್ರಿಕೆಗಳು ಹಿಂಜರಿಯುತ್ತವೆ. ಆದರೆ ಸುಮಾರು 85 ವರ್ಷಗಳ ಹಿಂದೆಯೇ ಗೊಯೆಂಕಾ ಆ ಸಾಹಸದ ಪ್ರಯೋಗವನ್ನು ಮಾಡಿದ್ದರು. ಆ ದಿನಗಳಲ್ಲಿ ಯಾವುದಾದರೂ ಮಹತ್ವದ ಸುದ್ದಿ ಮಧ್ಯಾಹ್ನ 3 ಗಂಟೆಯೊಳಗೆ ಬಂದರೆ, ನಾಲ್ಕು ಪುಟಗಳ ವಿಶೇಷ ಪುರವಣಿ ತರುವಂತೆ ಗೊಯೆಂಕಾ ಒತ್ತಾಯಿಸುತ್ತಿದ್ದರು. ಅಂಥ ಪ್ರಯೋಗಕ್ಕೆ ಸಂಪಾದಕರು ಒಪ್ಪದಿದ್ದರೆ, ''ನಿಮ್ಮಿಂದಾಗದಿದ್ದರೆ ಹೇಳಿ, ನಾನು ಮಾಡುತ್ತೇನೆ. ಓದುಗರಿಗೆ ಬಿಸಿ ಸುದ್ದಿಯನ್ನು ನೀಡುವುದು ಪತ್ರಿಕೆಯ ಧರ್ಮ'' ಎಂದು ಹೇಳುತ್ತಿದ್ದರು.

ಮನೆ ಮಂತ್ರಾಲಯವಾದರಷ್ಟೇ ಮನ ದೇವಾಲಯವಾದೀತು

ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ನಿಮಗೆ ಅತ್ಯಂತ ಪ್ರೀತಿಯ ಸ್ಥಳ, ತುಂಬಾ ಇಷ್ಟವಾದ ಪರ ಊರು ಯಾವುದು? ಜೋಗ, ಹಂಪಿ, ಶಿಮ್ಲಾ, ಕುಲು, ಮನಾಲಿ, ಊಟಿ? ಅಥವಾ ಸ್ವಿಜರ್ಲೆಂಡ್, ಅಮೆರಿಕ, ಸಿಂಗಾಪುರ ಅಥವಾ ಇನ್ಯಾವುದೋ ದೇಶದ ಒಂದು ನಗರ, ಊರು? ಅಲ್ಲಿ, ಆ ಊರಿನಲ್ಲಿ ಇಷ್ಟವಾದ ಸ್ಪಾಟ್ ಯಾವುದು? ಒಬ್ಬೊಬ್ಬರದ್ದು ಒಂದೊಂದು ಉತ್ತರ. ಆ ಇಷ್ಟವಾಗುವ ಊರಿನಲ್ಲಿ- ಇಷ್ಟವಾದ ಜಾಗದಲ್ಲಿ ಹೋಗಿ ನಿಂತಾಗ ನಾವು ಒಮ್ಮೆ ಜಗತ್ತನ್ನೇ ಮರೆಯುತ್ತೇವೆ. ಹೋಗಿ ಬಂದ ನಂತರ ಕೂಡ ಆ ಜಾಗ ಆಗೀಗ ನೆನಪಾಗುತ್ತಿರುತ್ತದೆ. ಹೀಗೆ ಪ್ರವಾಸಕ್ಕೆ ಹೋದಾಗ ಅದೆಷ್ಟೋ ಬಾರಿ ನಮಗೆ ಸಹಜವಾಗಿ ಅನಿಸುವುದಿದೆ- ಇಲ್ಲೇ ನಮ್ಮ ಮನೆ ಇದ್ದಿದ್ದರೆ ಎಷ್ಟು ಚೆಂದವಿರುತ್ತಿತ್ತು ಎಂದು. ಇದೊಂದು ತೀರಾ ಕ್ಷಣಿಕ ವಿಚಾರ; ಆ ಕ್ಷಣ ಒಮ್ಮೆ ಹಾಗೆ ಅನಿಸಿಬಿಡುತ್ತದೆ. ಒಂದು ವೇಳೆ ಅದೇ ಊರಿನಲ್ಲಿ ಒಂದು ವಾರಕ್ಕಿಂತ ಹೆಚ್ಚಿಗೆ ಇದ್ದಿರೆಂದಿಟ್ಟುಕೊಳ್ಳಿ, ಮೆಲ್ಲಗೆ ಬೇಸರ ಬರಲು ಶುರುವಾಗುತ್ತದೆ. ಯಾಕೋ ನಮ್ಮ ಊರೇ ಚೆಂದ ಎಂದೆನಿಸಲು ಶುರುವಾಗುತ್ತದೆ. ಅಲ್ಲಿ, ಗೆಸ್ಟ್ ಹೌಸ್‌ನಲ್ಲಿ ಎಷ್ಟೇ ಸೌಕರ್ಯ, ರುಚಿಯಾದ ಆಹಾರ ಇದ್ದರೂ ನಮ್ಮ ಮನೆ ನೆನಪಾಗುತ್ತದೆ. ಮನುಷ್ಯನಿರಲಿ, ಪ್ರಾಣಿಗಳಿರಲಿ ಎಲ್ಲವಕ್ಕೂ ಮನೆ ಎನ್ನುವುದೊಂದಿದೆ. ಮನುಷ್ಯನ ಮನೆ ಗೋಡೆಗಳ ಮಧ್ಯೆ. ಹಕ್ಕಿಯ ಮನೆ ಅದರ ಗೂಡು. ಇಲಿಗೆ ಬಿಲ. ಹುಲಿಗೆ ಹತ್ತರಿಂದ ಎಪ್ಪತ್ತು ಚದರ ಕಿಲೋಮೀಟರ್ ಕಾಡು. ಬೀದಿನಾಯಿಗೆ ಬೀದಿಯೇ ಮನೆ. ಪ್ರತಿಯೊಂದು ಜೀವಿಯ ಮನೆಗೂ ಒಂದು ಗಡಿ. ಆ ಗಡಿಯ ಒಳಗೆ ಬೇರೆ ಜೀವಿ ಆಕ್ರಮಿಸುವಂತಿಲ್ಲ, ಒಳ ನುಸುಳುವಂತಿಲ್ಲ. ಎಲ್ಲ ಪ್ರಾಣಿಗಳೂ ಈ ತನ್ನದೆನ್ನುವ ಆಯ್ದ ಒಳಕ್ಕೆ ಇನ್ನೊಂದು ಜೀವಿ ಹೊಕ್ಕ ಕೂಡಲೇ ಪ್ರತಿರೋಧ ತೋರ್ಪಡಿಸುತ್ತವೆ ಇಲ್ಲವೇ ಯುದ್ಧಕ್ಕೇ ಇಳಿದುಬಿಡುತ್ತವೆ. ಪ್ರತಿಯೊಂದು ಜೀವಿ ಈ ಲ್ಯಾಂಡ್ ಡಿಸ್ಪ್ಯೂಟ್ ಕಾರಣದಿಂದ ಹೋರಾಟ ನಡೆಸುತ್ತಲೇ ಬದುಕುತ್ತಿರುತ್ತದೆ. ಮನುಷ್ಯನೂ ಇದಕ್ಕೆ ಹೊರತಲ್ಲ. ಒಡೆತನ ಮತ್ತು ತನ್ನ ಸ್ವತ್ತು ಎನ್ನುವ ಭಾವ ಇರದ ಜೀವಿಯೇ ಇಲ್ಲ. ಈ ತನ್ನದು, ತನ್ನ ಸ್ವತ್ತು ಎನ್ನುವ ವಿಚಾರ ಜಗತ್ತಿನ ನವಿರಾದ ಸಮತೋಲನಕ್ಕೆ ಕಾರಣ ಕೂಡ ಹೌದು. ಜೀವಿ ಭೂಮಿಯ ಮೇಲೆ ಹುಟ್ಟಿದ ದಿನವೇ ಈ ತನ್ನದು, ತನ್ನ ಮನೆ ಎನ್ನುವ ವಿಚಾರ ಕೂಡ ಹುಟ್ಟಿರುತ್ತದೆ. ಮನುಷ್ಯ ತನ್ನದು ಎನ್ನುವ ವಿಚಾರದಿಂದ ಎಷ್ಟೇ ಪ್ರಯತ್ನಪಟ್ಟರೂ, ಅಧ್ಯಾತ್ಮ ಓದಿದರೂ ವಿಮುಖನಾಗಲು ಸಾಧ್ಯವಾಗದೇ ಇರುವುದಕ್ಕೆ ಲಕ್ಷಾಂತರ ವರ್ಷ ವಂಶವಾಹಿನಿಯಾಗಿ ಹರಿದು ಬಂದ ಈ ವಿಚಾರವೇ ಕಾರಣ.

ನಾವೆಲ್ಲಾ ಬೇರೆ ಬೇರೆ, ನಮ್ಮೆಲ್ಲರ ಇಷ್ಟ ಬೇರೆ ಬೇರೆ; ಆದರೆ ಒಂದೇ ಒಂದು ಸಾಮಾನ್ಯವಾದ ವಿಚಾರ ಎಂದರೆ ನಮ್ಮೆಲ್ಲರಿಗೂ ನಮ್ಮ ಮನೆ ಎಂದರೆ ಇಷ್ಟ. ನಮಗೆಲ್ಲರಿಗೆ ಎಲ್ಲೇ ಹೋದರೂ ಕೊನೆಗೆ ಇಷ್ಟವಾಗುವುದು ನಮ್ಮ ಮನೆ. ಅತಿ ಸುಂದರ ಪ್ರವಾಸಿತಾಣಕ್ಕೆ ಹೋಗಿ ಅದೆಷ್ಟೋ ಮೋಜು-ಮಸ್ತಿ ಮಾಡಿಕೊಂಡು ಬಂದರೂ ನಮ್ಮ ಮನೆ ಹೊಕ್ಕ ತಕ್ಷಣ ಹುಟ್ಟುವ ಒಂದು ಸಮಾಧಾನ ಇನ್ನೆಲ್ಲಿಯೂ ಹುಟ್ಟುವುದಿಲ್ಲ. ಈ ತನ್ನ ಮನೆಯೆನ್ನುವ ವಿಚಾರ ಬಹಳ ಶಕ್ತಿಯುತ. ಅದೆಷ್ಟೆಂದರೆ ಮನೆಯಲ್ಲಿ ಅದೆಷ್ಟೇ ಗೌಜಿ, ಗಲಾಟೆ, ವಾಸನೆ, ಗಲೀಜು, ಚಳಿ, ಸೆಖೆ ಇರಲಿ, ಅದೆಲ್ಲವೂ ನಮ್ಮ ಮನೆಯೆಂಬ ಕಾರಣಕ್ಕೆ ನಮಗೆ ಸಹ್ಯ. ಆದರೆ ಹೀಗೆ ಸಹಿಸುತ್ತ ಸಹಿಸುತ್ತ ನಾವು ನಮಗರಿವಿಲ್ಲದಂತೆ ಮನೆಯ ಜತೆ ಕ್ರಮೇಣ ರಾಜಿ ಮಾಡಿಕೊಂಡು ಬಿಡುತ್ತೇವೆ. ನಮ್ಮ ಮನೆ ಎಂಬ ಒಂದೇ ಕಾರಣಕ್ಕೆ ಮನೆಯಲ್ಲಿ ವಸ್ತುಗಳು ಅದೆಷ್ಟೇ ಚೆಲ್ಲಾಪಿಲ್ಲಿಯಾಗಿದ್ದರೂ ಅದೆಲ್ಲ ಸಹ್ಯವೆನಿಸಲು ಶುರುವಾಗುತ್ತದೆ. ಈ ರೀತಿ ನಾವು ಸಹನೆಯನ್ನು ನಮಗೆ ಅರಿವಿಲ್ಲದಂತೆ ಹಿಗ್ಗಿಸಿಕೊಳ್ಳುತ್ತ ಹೋಗುತ್ತೇವೆ. ಕ್ರಮೇಣ ಮನೆಯೆಡೆಗಿನ ಪ್ರೀತಿ ಒಂದು ಅಣುವಷ್ಟು ಕೂಡ ಕಡಿಮೆಯಾಗದಿದ್ದರೂ ಮನೆಯಲ್ಲಿ ಕಿರಿಕಿರಿ ಎನಿಸಲು ಶುರುವಾಗುತ್ತದೆ. ಒಂದು ರೀತಿಯ ಅಸಹನೆ ಅವ್ಯಕ್ತವಾಗಿ ಕಾಡಲು ಶುರುವಾಗುತ್ತದೆ.

House is what we make. ಮನೆ ಕಟ್ಟಿಕೊಂಡದ್ದಿರಬಹುದು, ಪಡೆದುಕೊಂಡದ್ದಿರಬಹುದು, ಬಾಡಿಗೆಯದಿರಬಹುದು, ಗುಡಿಸಲಿರಬಹುದು, ಬಂಗಲೆಯಿರಬಹುದು, ಚಿಕ್ಕದಿರಬಹುದು, ದೊಡ್ಡದಿರಬಹುದು- ಎಲ್ಲ ಮನೆಯೂ ಕೊನೆಯಲ್ಲಿ ಮನೆಯೇ. ಈಗ ಮನೆಯೆಂದರೆ ಏನು ಎಂಬ ಸಹಜವೆನ್ನುವ ಪ್ರಶ್ನೆಯನ್ನು ಒಮ್ಮೆ ಕೇಳಿಕೊಳ್ಳೋಣ. ಅಡಿಪಾಯ, ಗೋಡೆ, ಕಿಟಕಿ ಬಾಗಿಲುಗಳು ಇವಷ್ಟೇ ಮನೆಯೇ? ಅಲ್ಲವಲ್ಲ. ಗೋಡೆ ಮನೆಯ ಸರಹದ್ದು, ಅದೊಂದೇ ಮನೆಯಲ್ಲವಲ್ಲ. ಮಾಡು, ತಾರಸಿ ಮನೆಯ ಮುಚ್ಚಳಿಕೆ- ಅದೇ ಮನೆಯಲ್ಲ. ಹಾಗಾದರೆ ಸೋಫಾ, ಕುರ್ಚಿ, ಮೇಜು, ಟಿವಿ, ಕಂಪ್ಯೂಟರ್, ಹಾಸಿಗೆ? ಅವೆಲ್ಲ ವಸ್ತುಗಳಾದವು. ಹಾಗಾದರೆ ಅಸಲಿಗೆ ಮನೆಯೆಂದರೆ ಏನು? ಒಂದು ಆಯ, ಆ ಆಯದೊಳಗಿನ ನಮ್ಮದೆನ್ನುವ, ನಾವು ಸ್ವಾಧೀನಪಡಿಸಿಕೊಂಡ ವಸ್ತುಗಳೆಲ್ಲ ಸೇರಿ ಮನೆಯಾಗುತ್ತದೆ ಅಲ್ಲವೇ? ಮನೆಯೆಂದರೆ ಒಂದು ಸಮಗ್ರತೆ. ಮನೆಯೆಂದರೆ ಅದೊಂದು ಸ್ಪೇಸ್, ಆ ಸ್ಪೇಸ್‌ನಲ್ಲಿರುವ ಎಲ್ಲ ವಸ್ತುಗಳು, ಎಲ್ಲ ಹರಗಣಗಳೂ ಸೇರಿ ನಮ್ಮ ಮನೆಯಾಗುತ್ತದೆ.

ಕೆಲವರ ಮನೆಗೆ ಹೋದರೆ ಅದೇನೋ ಒಂದು ಸುಂದರ ಅನುಭವ. ಅಲ್ಲೊಂದು ಸುಂದರ ವೈಬ್ರೇಷನ್. ಇನ್ನು ಕೆಲವರ ಮನೆ ಹೊಕ್ಕ ತಕ್ಷಣ ಮನಸ್ಸಿಗೆ ಏನೋ ಒಂದು ರಗಳೆ. ನೀವು ಅದಕ್ಕೆ ವಾಸ್ತು ಎಂದು ಕರೆದರೂ ಸರಿಯೇ. ಅದೇಕೆ ಹೀಗೆ ಎಂದು ಯಾವತ್ತಾದರೂ ಪ್ರಶ್ನಿಸಿಕೊಂಡಿದ್ದೀರಾ? ಕೆಲವರ ಮನೆ ತೀರಾ ಅಚ್ಚು ಕಟ್ಟು. ಇನ್ನು ಕೆಲವರ ಮನೆಯೆಂದರೆ ಅದೊಂದು ರೀತಿಯ ಸಾಮಾನು ತುಂಬಿಡುವ ಗೋದಾಮು. ಬಹುಶಃ ಮನುಷ್ಯನಷ್ಟು ತನ್ನ ಗೂಡನ್ನು, ಮನೆಯನ್ನು ಪ್ರೀತಿಸುವ ಪ್ರಾಣಿ ಇನ್ನೊಂದಿಲ್ಲ, ಆದರೆ ತನ್ನ ಆವಾಸ ಸ್ಥಾನವನ್ನು ಬೇಕಾಬಿಟ್ಟಿ ಇಟ್ಟುಕೊಳ್ಳುವ, ನಿರ್ಲಕ್ಷಿಸುವ ಒಂದು ದೊಡ್ಡ ಗುಂಪೇ ನಮ್ಮ ನಡುವೆ ಇದೆ. ಕೆಲವರ ಮನೆಯಲ್ಲಿ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ. ಒಮ್ಮೆಯಂತೂ ನನ್ನ ಸ್ನೇಹಿತರೊಬ್ಬರ ಮನೆಗೆ ಮೊದಲ ಬಾರಿ ಹೋಗಿದ್ದೆ. ಎಲ್ಲೆಂದರಲ್ಲಿ ವಸ್ತುಗಳು, ಮಕ್ಕಳ ಆಟಿಕೆ ಸಾಮಾನುಗಳು, ಬಟ್ಟೆ, ಮೊಬೈಲ್ ಚಾರ್ಜರ್ ಹೀಗೆ ನೂರಾರು ಸಾಮಾನು ಬಿದ್ದಿದ್ದವು. ಮನೆಯ ಬಾಗಿಲಿಂದ ಹೊರಟು ಕುಂಟಾಬಿಲ್ಲೆ ಆಟವಾಡಿದಂತೆ ದಾಟುತ್ತ, ಹಾರುತ್ತ ಕುರ್ಚಿಯ ಮೇಲೆ ಹೋಗಿ ಕೂರುವಾಗ ಸುಸ್ತಾಗಿಹೋಯಿತು. ಕುರ್ಚಿಯ ಮೇಲೆ ಕೂತ ಮೇಲೆ ಬೆನ್ನಿಗೆ ಏನೋ ಒಂದು ತಂಪಾದ ಅನುಭವ, ಸರಿದು ನೋಡಿದರೆ ಒದ್ದೆ ಅಂಡರ್‌ವೇರ್!

ಮನೆಯನ್ನು ನಾವು ಹೇಗೆ ಎಷ್ಟು ಅಚ್ಚುಕಟ್ಟಾಗಿ ಇಟ್ಟುಕೊಳ್ಳುತ್ತೇವೆ ಎನ್ನುವುದು ನಾನಾ ಕಾರಣಗಳಿಂದ ಮುಖ್ಯವಾಗುತ್ತದೆ. ನಮ್ಮ ಮನೆ, ನಮ್ಮಿಷ್ಟ ಎನ್ನುವುದು ನಿಜ. ನಮಗೆ ಬೇಕಾದಂತೆ ಮನೆಯನ್ನು ಇಟ್ಟುಕೊಳ್ಳುವ ಸ್ವಾತಂತ್ರ್ಯ ಎಲ್ಲರಿಗೂ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಮನೆಯನ್ನು ಇಟ್ಟುಕೊಂಡ ರೀತಿ ಮತ್ತು ಶಿಸ್ತಿಗೂ, ಮನೆಯಲ್ಲಿರುವ ಮನಸ್ಸುಗಳ ಸ್ಥಿತಿಗೂ ನೇರ ಸಂಬಂಧವಿರುವ ಕಾರಣ ಮನೆಯನ್ನು ನಾವು ಹೇಗೆ ಇಟ್ಟುಕೊಳ್ಳುತ್ತೇವೆ ಎನ್ನುವುದು ಬಹಳ ಮುಖ್ಯವಾಗುತ್ತದೆ. 'ಮನೆಯೇ ಮಂತ್ರಾಲಯ, ಮನಸೇ ದೇವಾಲಯ' ಎನ್ನುವಾಗ ಅಲ್ಲಿ ಕೂಡ ಸುಪ್ತವಾಗಿರುವ ವಿಚಾರವಾದ, ಮನೆಗೆ ಮತ್ತು ಮನಸ್ಸಿಗೆ ಇರುವ ಸಂಬಂಧವನ್ನು ಗ್ರಹಿಸಲೇ ಬೇಕು. ಮನೆ ಕಟ್ಟಿಕೊಳ್ಳುವುದಕ್ಕಿಂತ ಮನೆ ಇಟ್ಟುಕೊಳ್ಳುವುದು ಮುಖ್ಯವಾಗುತ್ತದೆ.

Cluttered house leads to cluttered minds. ಚೆಲ್ಲಾಪಿಲ್ಲಿಯಾಗಿರುವ ಮನೆ ಅಲ್ಲಿನ ಮನಸ್ಸುಗಳನ್ನು ಚೆಲ್ಲಾಪಿಲ್ಲಿಯಾಗಿಸುತ್ತದೆ ಎನ್ನುವುದು ಇಲ್ಲಿ ತಿಳಿಯಬೇಕಾದ ಸೂಕ್ಷ್ಮ. ನಾವು ಮನೆಯನ್ನು ಎಷ್ಟು ಅಚ್ಚುಕಟ್ಟಾಗಿ ಇಟ್ಟುಕೊಳ್ಳುತ್ತೇವೆ ಎನ್ನುವುದರ ಮೇಲೆ ನಮ್ಮ ಮನೆಯಲ್ಲಿನ ಅನುಭವ ನಿರ್ಧರಿತವಾಗುತ್ತದೆ. ಬಹುಪಾಲು ಸಾಂಸಾರಿಕ ಸಮಸ್ಯೆಗಳಿಗೆ ನೇರ ಕಾರಣ ನಾವು ಮನೆಯನ್ನು ಇಟ್ಟುಕೊಳ್ಳುವ ರೀತಿ. ಜೀವನದ ಅತಿಮುಖ್ಯ ಅಂಗವಾದ ವಾಸಸ್ಥಾನದ ಶಿಸ್ತು ನಮ್ಮ ಮಾನಸಿಕ ಶಾಂತಿ ಮತ್ತು ಯಶಸ್ಸನ್ನು ನಿರ್ಧರಿಸುತ್ತದೆ. ಮನಸ್ಸನ್ನು ವ್ಯವಸ್ಥಿತವಾಗಿ ಆರ್ಗನೈಜ್ ಮಾಡಿಕೊಳ್ಳಬೇಕೆಂದರೆ, ಸುಂದರವಾಗಿಟ್ಟುಕೊಳ್ಳಬೇಕೆಂದರೆ ಮೊದಲು ನಮ್ಮ ರೂಮ್ ಅನ್ನು, ಮನೆಯನ್ನು organize ಮಾಡಿಕೊಳ್ಳಬೇಕು. ಎಲ್ಲ ಮನಶ್ಶಾಸ್ತ್ರಜ್ಞರು ಒಪ್ಪುವ ವಿಚಾರ ಇದು. ಸುಪ್ರಸಿದ್ಧ ಮನಶ್ಶಾಸ್ತ್ರಜ್ಞ ಕೆನಡಾದ ಜೋರ್ಡನ್ ಪೀಟರ್ಸನ್ ತನ್ನ ಬಳಿ ಮಾನಸಿಕ ಸಮಸ್ಯೆ ಹೊತ್ತು ಬರುವ ಪ್ರತಿಯೊಬ್ಬರಿಗೂ ಮೊದಲು ಅವರ ಮನೆಯನ್ನು ವಿವರಿಸಲು ಹೇಳುತ್ತಾರೆ. ಮಾನಸಿಕ ಸಮಸ್ಯೆ ಯಾವುದೇ ಇರಬಹುದು, ಅವರ ಮೊದಲ ಪ್ರಿಸ್ಕ್ರಿಪ್ಷನ್ ರೋಗಿ ತನ್ನ ರೂಮ್ ಅನ್ನು ಮತ್ತು ಮನೆಯನ್ನು ಶಿಸ್ತಿನಿಂದ ಸಂಯೋಜಿಸುವುದು. ಮನೆಯನ್ನು ಸರಿಯಾಗಿ ಜೋಡಿಸಿದ ಫೋಟೋ ತೋರಿಸಿದ ಮೇಲೆಯೇ ಮುಂದಿನ ಮಾತುಕತೆ. ಅವರೇ ಹೇಳುವ ಪ್ರಕಾರ ಮನೆಯನ್ನು ನಾವು ಸರಿಯಾಗಿ ಜೋಡಿಸುತ್ತ ಹೋದಂತೆಲ್ಲ ಮನಸ್ಸು ಕೂಡ ಸರಿಯಾಗುತ್ತ ಹೋಗುತ್ತದೆ. ನಮ್ಮ ಮನಸ್ಸು ಮತ್ತು ಮೂಡ್‌ಗೆ ನೇರವಾಗಿ ಈ ನಮ್ಮ ಸುತ್ತಲಿನ ಎಲ್ಲ ವಸ್ತುಗಳೂ ಕಾರಣವಾಗಿರುತ್ತವೆ. ನಮ್ಮ ರೂಮ್, ನಾವು ಕೆಲಸ ಮಾಡಲು ಕೂರುವ ಮೇಜು, ಮಲಗುವ ಹಾಸಿಗೆ, ಸ್ನಾನಗ್ರಹ, ಅಡುಗೆ ಮನೆ, ದೇವರ ಮನೆ ಇವೆಲ್ಲ ಶಿಸ್ತುಬದ್ಧವಾಗಿದ್ದರೆ ಅದೆಲ್ಲದರ ಜತೆ ಬಹು ಸಮಯ ವ್ಯವಹರಿಸುವ ನಮ್ಮ ಮನಸ್ಸು ಕೂಡ ಅಷ್ಟೇ ವ್ಯವಸ್ಥಿತವಾಗುತ್ತ ಹೋಗುತ್ತದೆ. ನಮ್ಮ ಸುತ್ತಲಿನ ವಸ್ತುಗಳನ್ನು ಸರಿಯಾಗಿ, ಶಿಸ್ತಿನಿಂದ ಇಟ್ಟುಕೊಳ್ಳುವುದರ ಮೂಲಕ ನಮ್ಮ ಆ ವಸ್ತುಗಳ ಜತೆಗಿನ ಅನುಭವ ಕೂಡ ಶಿಸ್ತುಗೊಳ್ಳುತ್ತ ಹೋಗುತ್ತದೆ. ಈ ಮೂಲಕ ಮಾನಸಿಕವಾಗಿ ನಾವು ನಮಗರಿವಿಲ್ಲದಂತೆಯೇ ಶಾಂತಿಯನ್ನು ಹೊಂದುತ್ತೇವೆ. ನಾವು ಏನನ್ನು ಅನುಭವಿಸುತ್ತೇವೆಯೋ ಅದೇ ನಾವಾಗುತ್ತೇವೆ. ಆ ಕಾರಣದಿಂದ ನಮ್ಮ ಅನುಭವಗಳನ್ನು ಹಸನಾಗಿಸುವ ಶಿಸ್ತನ್ನು ರೂಪಿಸಿಕೊಳ್ಳುವುದು ಮುಖ್ಯವಾಗುತ್ತದೆ.

ಮನೆಯನ್ನು ಶಿಸ್ತಿನಿಂದ ಇಟ್ಟುಕೊಳ್ಳುವುದು ಅಷ್ಟು ಸುಲಭದ ಮಾತಲ್ಲ. ಆದರೆ ಒಮ್ಮೆ ವ್ಯವಸ್ಥಿತವಾಗಿಸಿಕೊಂಡರೆ ಮತ್ತು ರೂಢಿಸಿಕೊಂಡರೆ ಅದೊಂದು ಸುಸ್ತಾಗಿಸುವ ಕೆಲಸ ಎಂದೆನಿಸುವುದಿಲ್ಲ. ಹೇಗೆ ಮನೆಯನ್ನು ಶಿಸ್ತಾಗಿರಿಸಿಕೊಳ್ಳುವುದು ಎನ್ನುವುದೇ ಹಲವರ ಪ್ರಶ್ನೆ. ಆ ನಿಟ್ಟಿನಲ್ಲಿ ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ನೀವು ಒಮ್ಮೆಲೇ ಇಡೀ ಮನೆಯನ್ನು ಶಿಸ್ತುಗೊಳಿಸುತ್ತೇನೆ ಎಂದು ಹೊರಟರೆ ಅದು ಅಷ್ಟು ಸುಲಭದಲ್ಲಿ ಸಾಧ್ಯವಾಗುವುದಿಲ್ಲ. ಹಾಗೆ ಹೊರಟಾಗ ಮನೆ ಇನ್ನಷ್ಟು ಚೆಲ್ಲಾಪಿಲ್ಲಿಯಾಗುವ ಸಾಧ್ಯತೆಯೇ ಹೆಚ್ಚು. ಇದನ್ನು ಹಂತಹಂತವಾಗಿ ಮೊದಲು ಸಾಧಿಸಬೇಕಾಗುತ್ತದೆ. ಅದೊಂದು ಚಿಕ್ಕ ಪ್ರಾಜೆಕ್ಟ್. ಶಿಸ್ತುಗೊಳಿಸುವ ಮೊದಲ ಹಂತದಲ್ಲಿ ನೀವು ಅತಿಯಾಗಿ ಬಳಸುವ ಜಾಗವನ್ನು ಆಯ್ಕೆ ಮಾಡಿಕೊಳ್ಳಿ. ಆ ಚಿಕ್ಕ ಜಾಗವನ್ನು ಮೊದಲು ಸರಿಪಡಿಸಿಕೊಳ್ಳಿ. ಬೇಡದ ವಸ್ತುಗಳನ್ನು ಮರುವಿಚಾರ ಮಾಡದೇ ಎಸೆದುಬಿಡಿ. ಮುಂದೊಂದು ದಿನ ಬೇಕಾಗಬಹುದು ಎನ್ನುವ ವಸ್ತು ಹೆಚ್ಚಾಗಿ ಯಾವತ್ತೂ ಬೇಕಾಗುವುದೇ ಇಲ್ಲ. ನಿಮ್ಮ ಮೇಜಿರಲಿ ಅಥವಾ ಕೋಣೆಯಿರಲಿ, ಹೆಚ್ಚು ಜಾಗ ಖಾಲಿ ಇದ್ದಷ್ಟು ಆ ಜಾಗ ಮನಸ್ಸಿಗೆ ಹತ್ತಿರವಾಗುತ್ತದೆ ಮತ್ತು ಇಷ್ಟವಾಗುತ್ತದೆ. ಹೀಗೆ ಸಂಯೋಜಿಸುವಾಗ ವಸ್ತುವನ್ನು ನಿಮ್ಮ ಕೈಗೆತ್ತಿಕೊಳ್ಳಿ, ಅದು ನಿಮಗೆ ಸಂತೋಷವನ್ನು ನೀಡುತ್ತದೆಯೇ ಅಥವಾ ಇಲ್ಲವೇ ಎನ್ನುವುದನ್ನು ಒಂದು ಕ್ಷಣ ಕಣ್ಣು ಮುಚ್ಚಿ ವಿಚಾರ ಮಾಡಿ. ಸಂತೋಷ ಕೊಡುತ್ತಿದ್ದರೆ ಮಾತ್ರ ಇಟ್ಟುಕೊಳ್ಳಿ. ಇಲ್ಲದಿದ್ದರೆ ಎರಡು ಮನಸ್ಸು ಬೇಡ, ಸೀದಾ ಎಸೆದುಬಿಡಿ. ನೀವು ಇಟ್ಟುಕೊಳ್ಳುವ ವಸ್ತು ನಿಮ್ಮ ಜೀವನದಲ್ಲಿ ಒಂದು ವ್ಯಾಲ್ಯೂ ಹೊಂದಿರಬೇಕು. ಇದೊಂದು ವ್ಯಾವಹಾರಿಕ ಪ್ರಶ್ನೋತ್ತರ. ಹಳೆಯ ಬಾಕ್ಸ್‌ಗಳು, ಪ್ಲಾಸ್ಟಿಕ್ ಬ್ಯಾಗ್‌ಗಳು, ರದ್ದಿ ಪೇಪರ್‌ಗಳು, ಬರೆಯದ ಪೆನ್ನುಗಳು, ಬಳಸದ ಮೊಬೈಲ್ ಚಾರ್ಜರ್‌ಗಳು ಇವೆಲ್ಲ ನಿಮ್ಮ ಅಮೂಲ್ಯ ಜಾಗವಾದ ಮನೆಯಲ್ಲಿ ಇರಲು ಯೋಗ್ಯವೇ ಎಂದು ಪ್ರಶ್ನಿಸಿಕೊಳ್ಳಿ. ಮುಂದಿನ ಒಂದು ತಿಂಗಳು ಒಂದು ವಸ್ತುವನ್ನು ನೀವು ಬಳಸುವುದಿಲ್ಲ ಎಂದೆನಿಸಿದರೆ ಆ ವಸ್ತು ಬೇಡವೆಂದೇ ಅರ್ಥ. ಕೆಲವು ಸೀಸನ್ ವಸ್ತುಗಳಾದ ಛತ್ರಿ, ರೈನ್ ಕೋಟ್, ಸ್ವೆಟರ್ ಮೊದಲಾದವುಗಳನ್ನು ಶಿಸ್ತಾಗಿ ಮಡಚಿ ಅಟ್ಟಕ್ಕೇರಿಸಿ. ಅದಕ್ಕಿಂತ ಮೊದಲು ಅಟ್ಟದಲ್ಲಿರುವ ಹಳೆಯ ಒಡೆದ ಹೆಲ್ಮೆಟ್, ಟಿವಿ ಕವರ್, ವಯರ್, ಹಳೆಯ ಬ್ಯಾಟರಿ ಸೆಲ್‌ಗಳು, ಧೂಳು ಇವನ್ನೆಲ್ಲ ಮನೆಯಿಂದಾಚೆ ಅಟ್ಟಿಬಿಡಿ. ಬೇಡದ ವಿಚಾರ ಮತ್ತು ಬೇಡದ ವಸ್ತು ಎರಡೂ ಒಂದೇ.

ಹೀಗೆ ಎಸೆಯುವಾಗ ಕೆಲವೊಂದು ವಸ್ತುಗಳ ಅವಶ್ಯಕತೆಯಿಲ್ಲದಿದ್ದರೂ ಹಲವು ಭಾವನಾತ್ಮಕ ಕಾರಣದಿಂದ ಎಸೆಯಲು ಮನಸ್ಸು ಬರುವುದಿಲ್ಲ. ಮಕ್ಕಳು ಚಿಕ್ಕಂದಿನಲ್ಲಿರುವಾಗ ಬಳಸಿದ ಬಟ್ಟೆಗಳು, ಬಿಡಿಸಿದ ಚಿತ್ರಗಳು, ಪ್ರೀತಿಯಿಂದ ಕೊಟ್ಟ ಗಿಫ್ಟುಗಳು ಇವೆಲ್ಲ ವಸ್ತುಗಳನ್ನು ಎಸೆಯುವುದು ಅಷ್ಟು ಸುಲಭವಲ್ಲ. ಇಂಥ ಸಮಯದಲ್ಲಿ ಒಂದೋ ಎರಡೋ ವಸ್ತುಗಳನ್ನು ಇಟ್ಟುಕೊಂಡು ಉಳಿದವುಗಳಿಗೆ ಕಸದ ಬುಟ್ಟಿಯ ದಾರಿ ತೋರಿಸುವುದು ಉತ್ತಮ. ವ್ಯರ್ಥ ವಸ್ತುಗಳನ್ನು ಮನೆಯಿಂದ ಸಾಗಹಾಕಿದಂತೆಲ್ಲ ಮನಸ್ಸು ಹಗುರವಾಗುವುದನ್ನು ಗ್ರಹಿಸಿ. ಮನೆಯಲ್ಲಿ ಪ್ರತಿಯೊಂದು ವಸ್ತುವಿಗೆ ಅದರದೇ ಆದ ಒಂದು ಜಾಗವನ್ನು ನಿರ್ಧರಿಸಿ. ಆ ವಸ್ತು ಅದೇ ಜಾಗದಲ್ಲಿರಬೇಕು, ಅದೇ ಅದರ ಮನೆ. ನೀವು ಯುಟ್ಯೂಬ್‌ನಲ್ಲಿ declutter house ಎಂದು ಹುಡುಕಿದರೆ ಸಾವಿರಾರು ವಿಡಿಯೋಗಳು ಎದುರಿಗೆ ಬಂದು ನಿಲ್ಲುತ್ತವೆ. ಸುಮ್ಮನೆ ಒಂದಿಷ್ಟು ವಿಡಿಯೋಗಳನ್ನು ನೋಡಿ. 'Marie Kondo' ಎಂದು ಹುಡುಕಿದರೆ ಹತ್ತಾರು ವಿಧಾನಗಳು, ಅದರಲ್ಲಿಯೂ ಬಟ್ಟೆಗಳನ್ನು ಹೇಗೆ ಇಟ್ಟುಕೊಳ್ಳಬೇಕು ಎನ್ನುವ ವಿಡಿಯೋ ಸಿಗುತ್ತದೆ. ಆಕೆ ಮನೆ ಶಿಸ್ತುಗೊಳಿಸುವ ವಿಷಯದ ಮೇಲೆ ಪುಸ್ತಕ ಬರೆದ, ಟಿವಿ ಕಾರ್ಯಕ್ರಮಗಳನ್ನು ನಡೆಸಿಕೊಡುವ ಸುಪ್ರಸಿದ್ಧ ಜಪಾನಿ ಮಹಿಳೆ. ಆಕೆಯ ಮನೆ ಸಂಯೋಜಿಸುವ ಪದ್ಧತಿ KonMari Method ಎಂದೇ ಅಮೆರಿಕದಲ್ಲಿ ಜನಜನಿತ. ನಿಮಗೆ ಸರಿಹೊಂದುವ ಯಾವುದಾದರೂ ಒಂದು ರೀತಿಯನ್ನು ಆಯ್ದುಕೊಂಡು ಪಾಲಿಸಿ.

ಕೆಲವರು ಎಷ್ಟೇ ಪ್ರಯತ್ನಪಟ್ಟರೂ ಒಮ್ಮೆ ನೀಟ್ ಮಾಡಿಕೊಂಡ ಮನೆಯನ್ನು ಹಾಗೆಯೇ ಶಿಸ್ತಿನಿಂದ ಇಟ್ಟುಕೊಂಡು ಹೋಗಲು ಸಾಧ್ಯವಾಗುವುದಿಲ್ಲ, ಅದಕ್ಕೆ ನೇರ ಕಾರಣ Over Possession (ಅವಶ್ಯಕತೆಗಿಂತ ಹೆಚ್ಚಿಗೆ ವಸ್ತುಗಳನ್ನು ಹೊಂದಿರುವುದು) ಮತ್ತು Hyper Consumerism (ಕೊಳ್ಳುಬಾಕತನ). ಮನುಷ್ಯನ ಮನಸ್ಸನ್ನು ಇಲಿಯ ಮನಸ್ಸಿಗೆ ಹಲವಾರು ಕಡೆ ಹೋಲಿಸಲಾಗುತ್ತದೆ. ಇಲಿ ಹೇಗೆ ಬೇಳೆ ಕಾಳುಗಳನ್ನು ಶೇಖರಿಸುತ್ತದೆಯೋ ಹಾಗೆಯೇ ನಾವು ಬಹುತೇಕರು. ಇದನ್ನು Hoarding Disorder ಎಂದು ಕರೆಯಲಾಗುತ್ತದೆ. ಡಿಸಾರ್ಡರ್ ಎಂದಾಕ್ಷಣ ಹುಚ್ಚು ಎಂದು ಪರಿಭಾವಿಸಬೇಕಿಲ್ಲ, ಸಿಕ್ಕಿಸಿಕ್ಕಿದ್ದನ್ನೆಲ್ಲ ಶೇಖರಿಸುವ ಈ ಗುಣ ತೀರಾ ಸಾಮಾನ್ಯ. ಕೆಲವರ ಮನೆಯಲ್ಲಿ ಕನಿಷ್ಠ ಹತ್ತಿಪ್ಪತ್ತು ಸಾವಿರ ಸಾಮಾನುಗಳಿರುತ್ತವೆ. ಹಳೆಯ ಸಾಮಾನುಗಳು, ಹಳೆಯ ಪಾತ್ರೆ, ತುಕ್ಕು ಹಿಡಿದು ಬಳಸದ ಹೊಲಿಗೆ ಮಷಿನ್, ಬಾರ್ ಕಿತ್ತುಹೋದ ಚಪ್ಪಲಿಗಳು, ನೂರೆಂಟು ವೈರ್‌ಗಳು, ಹಳೆಯ ಪತ್ರಗಳು ಹೀಗೆ ಪಟ್ಟಿ ದೊಡ್ಡದು.. ಅದೆಷ್ಟೋ ವಸ್ತುಗಳು ಸುತರಾಂ ಜೀವಮಾನವಿಡೀ ಬಳಸದೇ ಇರುವ ವಸ್ತುಗಳೇ. ಆದರೂ ಅದನ್ನು ನಾವು ಎಸೆದಿರುವುದಿಲ್ಲ, ಮುಂದೊಮ್ಮೆ ಬಳಸುವ ಸಾಧ್ಯತೆಯೇ ಇಲ್ಲದ ವಸ್ತುವನ್ನು ಕೂಡ ಎಸೆಯದೇ ಹಾಗೆಯೇ ಇಟ್ಟುಕೊಂಡಿರುತ್ತೇವೆ. ಇನ್ನು Hyper Consumerism- ಕೊಳ್ಳುಬಾಕತನ. ಇದನ್ನು ಕೆಲವು ಮನಶಾಸ್ತ್ರಜ್ಞರಂತೂ ಒಂದು ರೋಗವೆಂದೇ ಕರೆಯುತ್ತಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ರೋಗ ಸ್ವಲ್ಪ ಜಾಸ್ತಿಯೇ. ಕಾರಣ ಇಲ್ಲೆಲ್ಲ ಸಾಮಾನ್ಯ ಮನುಷ್ಯನ ಖರೀದಿಸುವ ತಾಕತ್ತು ಜಾಸ್ತಿ. ಸಿಕ್ಕಿದ್ದನ್ನೆಲ್ಲ ಖರೀದಿಸಿ ಮನೆಗೆ ತರುವುದು ಈ ರೋಗದ ಲಕ್ಷಣ. ಅಂಗಡಿಯಲ್ಲಿ ಕಂಡಾಕ್ಷಣ, ಖರೀದಿಸಲು ಹಣವಿರುವ ಏಕೈಕ ಕಾರಣದಿಂದ ಹಿಂದೆ ಮುಂದೆ ನೋಡದೆ ಎತ್ತಿಕೊಂಡು ಬರುವುದು. ಈಗೀಗ ನಮ್ಮ ದೇಶ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ಹಲವು ದೇಶಗಳಲ್ಲಿ ಕೂಡ ಜನರಲ್ಲಿ ಈ ರೋಗ ಲಕ್ಷಣಗಳು ತೀವ್ರವಾಗಿ ಹರಡುತ್ತಿವೆ. ಈಗಂತೂ ವಸ್ತುಗಳನ್ನು ಖರೀದಿಸಲು ಅಂಗಡಿಗೆ ಕೂಡ ಹೋಗಬೇಕೆಂದಿಲ್ಲ, ಸುಮ್ಮನೆ ಆನ್‌ಲೈನ್‌ನಲ್ಲೇ ಏನು ಬೇಕೋ ಅದನ್ನು ಖರೀದಿಸುವ ಸಾಧ್ಯತೆಯಿರುವುದರಿಂದ ವಸ್ತು ಬೇಕೋ ಬೇಡವೋ ಎನ್ನುವ ವಿಚಾರ ಕೂಡ ಸರಿಯಾಗಿ ಮಾಡದೇ ಖರೀದಿಸಿಬಿಡುತ್ತೇವೆ. ಅದರಲ್ಲಿಯೂ ನೀವು ಕೊಳ್ಳುಬಾಕತನಕ್ಕೆ ಒಳಗಾದವರಾದರೆ ಬೇಕೋ ಬೇಡವೋ ಎಂದು ವಿಚಾರ ಮಾಡಿದಾಗಲೆಲ್ಲ ಬೇಕು ಎಂದೇ ಅನಿಸುತ್ತಾ ಹೋಗುತ್ತದೆ. ಬೇಡದಿದ್ದರೂ, ನೂರೆಂಟು ಆಫರ್‌ಗಳು ಖರೀದಿಸಲು ಪ್ರೇರೇಪಿಸುತ್ತವೆ.

ಒಂದು ವಸ್ತುವನ್ನು ಖರೀದಿಸುವ ಮೊದಲು, ನೀವು ಎಸೆಯುವ ಮೊದಲು ಕೇಳಿಕೊಳ್ಳುವ ಪ್ರಶ್ನೆಯನ್ನೇ ಕೇಳಿಕೊಳ್ಳಬೇಕು. ಮನೆಯಲ್ಲಿ ಆ ವಸ್ತುವನ್ನು ಎಲ್ಲಿಡಬೇಕೆಂದು ಮೊದಲೇ ವಿಚಾರ ಮಾಡಿ ಆಮೇಲೆ ಖರೀದಿಸಬೇಕು. ಮನೆಗೆ ತರುವ ಪ್ರತಿಯೊಂದು ವಸ್ತುವೂ ನಿಮ್ಮಿಷ್ಟದ ಜಾಗವನ್ನು ತುಂಬುತ್ತದೆ ಎಂದೇ ಅರ್ಥ. ಒಂದು ವಸ್ತು ನಿಮ್ಮ ಜೀವನದ ಭಾಗವಾಗುವುದಕ್ಕೆ ಒಪ್ಪಿಕೊಳ್ಳುವ ಮೊದಲು ಅದರ ಅವಶ್ಯಕತೆಯನ್ನು ಹತ್ತು ಬಾರಿ ಪ್ರಶ್ನಿಸಿಕೊಳ್ಳಬೇಕು. ಮನೆಯೆನ್ನುವುದು ಜೀವನದ ಅತಿಮುಖ್ಯ ಭಾಗ. ಅಲ್ಲಿ ಸಲ್ಲದ ವಸ್ತುಗಳಿಗೆ ಜಾಗವಿಲ್ಲ ಎನ್ನುವ ವಿಚಾರ ಅಂಗಡಿಗೆ ಹೋದಾಗ, ಆನ್‌ಲೈನ್‌ನಲ್ಲಿ ಜಾಲಾಡುವಾಗ ಸದಾ ನೆನಪಾಗುತ್ತಲಿರಬೇಕು. ಜೀವನದ ಸಾರ್ಥಕತೆ ನಾವು ಎಷ್ಟು ವಸ್ತುಗಳನ್ನು ಖರೀದಿಸಿದ್ದೇವೆ, ಗಳಿಸಿದ್ದೇವೆ ಎನ್ನುವುದರ ಮೇಲೆ ನಿರ್ಧರಿತವಾಗುವುದಿಲ್ಲ.

ಮನೆ ವಾಸಸ್ಥಾನವೇ ಹೊರತು ಗೋದಾಮೂ ಅಲ್ಲ, ವಸ್ತುಸಂಗ್ರಹಾಲಯವೂ ಅಲ್ಲ, ಸುಮ್ಮನೆ 'ಹೋಂ ಸ್ವೀಟ್ ಹೋಮ್', 'ಹ್ಯಾಪಿ ಹೋಮ್' ಎಂದು ಬೋರ್ಡ್ ಹಾಕಿಕೊಳ್ಳುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ನಿಮ್ಮ ಮನೆ ಹಿತವಾಗಿರಬೇಕೆಂದರೆ ಒಂದು ಗಟ್ಟಿ ಮನಸ್ಸು ಮಾಡಲೇಬೇಕು. ಒಮ್ಮೆ ಬೇಡದ ವಸ್ತುಗಳನ್ನು ಎಸೆದ ನಂತರ ಮನೆಯನ್ನು ಚೆಂದವಾಗಿಟ್ಟುಕೊಳ್ಳುವುದು ಒಂದು ನಿರಂತರ ತಪಸ್ಸಿನಂತೆ. ಆ ತಪಸ್ಸಿನಿಂದ ಮಾತ್ರ ಮನೆ ಮಂತ್ರಾಲಯವಾಗುತ್ತದೆ, ಅಲ್ಲಿನ ಮನಸ್ಸುಗಳು ದೇವಾಲಯವಾಗುತ್ತವೆ.

Have a good life ahead.

ಸಾಧಿಸಿದ್ದು ಇಷ್ಟು, ಸಾಧಿಸಬೇಕಾದ್ದು ಇನ್ನಷ್ಟು!

ಅವಲೋಕನ
ಗಣೇಶ್‌ಭಟ್ ವಾರಾಣಸಿ
vveditoped@gmail.com

ಜಗತ್ತಿನ ಕೆಲವು ದೇಶಗಳಲ್ಲಿ ಸಾಕಷ್ಟು ಪ್ರಾಕೃತಿಕ ಸಂಪನ್ಮೂಲಗಳಿದ್ದರೂ ಅವು ಬಡದೇಶಗಳಾಗಿಯೇ ಉಳಿದಿವೆ. ಸೊಮಾಲಿಯಾ, ಯೆಮನ್, ಸೂಡಾನ್, ಸಿರಿಯಾ, ಇರಾಕ್, ಲಿಬಿಯಾ ಮೊದಲಾದ ಅರಬ್ ದೇಶಗಳಲ್ಲಿ ಸಾಕಷ್ಟು ತೈಲ ನಿಕ್ಷೇಪಗಳಿದ್ದರೂ ಅವು ಬಡತನದಲ್ಲೇ ಬಳಲುತ್ತಿರುವುದು ಈ ಮಾತಿಗೆ ಸಾಕ್ಷಿ. ಆಫ್ರಿಕಾ ಖಂಡದ ಮಧ್ಯಭಾಗದಲ್ಲಿ 'ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್' ಹೆಸರಿನ ದೇಶವಿದೆ. ಅಲ್ಲಿ ಸಾಕಷ್ಟು ಪೆಟ್ರೋಲಿಯಂ ಲಭ್ಯವಿದೆ, ಚಿನ್ನ ಹಾಗೂ ವಜ್ರದ ಗಣಿಗಳಿವೆ, ಯುರೇನಿಯಂ, ನಿಕ್ಕೆಲ್, ಕೋಬಾಲ್ಟ್, ತಾಮ್ರ, ಕಬ್ಬಿಣ, ಮ್ಯಾಂಗನೀಸ್ ಮೊದಲಾದ ಲೋಹಗಳ ಅದಿರುಗಳು ಅಲ್ಲಿ ಹೇರಳವಾಗಿವೆ. ಸಾಕಷ್ಟು ಮಳೆಯಾಗುತ್ತದೆ, ನಿತ್ಯ ಹರಿದ್ವರ್ಣದ ಕಾಡು ಮತ್ತು ಕೃಷಿಗೆ ಯೋಗ್ಯವಾದ ಫಲವತ್ತಾದ ಮಣ್ಣು ಅಲ್ಲಿದೆ. ಸುಮಾರು 55 ಲಕ್ಷ ಜನಸಂಖ್ಯೆಯಿರುವ ಆ ದೇಶದ ಜನಸಾಂದ್ರತೆ ಬಹಳ ಕಡಿಮೆ. ಆದರೂ 'ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್' ಜಗತ್ತಿನ ಅತಿ ಬಡದೇಶಗಳಲ್ಲಿ ಒಂದಾಗಿ ಉಳಿದಿದೆ. ಈ ದೇಶದ ಶೇ.14ರಷ್ಟು ಮನೆಗಳಿಗೆ ಮಾತ್ರ ವಿದ್ಯುತ್ ಸಂಪರ್ಕವಿದೆ. ರಾಜಕೀಯ ಅಸ್ಥಿರತೆ, ಮಿಲಿಟರಿ ದಂಗೆ, ಆಂತರಿಕ ಯುದ್ಧ, ಭ್ರಷ್ಟಾಚಾರ ಮೊದಲಾದ ಕಾರಣಗಳಿಂದಾಗಿ ಅದು ಬಡದೇಶವಾಗಿಯೇ ಉಳಿದಿದೆ. ಆಫ್ರಿಕಾ ಖಂಡದ ಹೆಚ್ಚಿನ ದೇಶಗಳ ಪರಿಸ್ಥಿತಿಯೂ ಇದೇ. ಅದೇ ರೀತಿ, ಸಾಕಷ್ಟು ತೈಲ ನಿಕ್ಷೇಪಗಳನ್ನು ಹೊಂದಿದ್ದರೂ ತಪ್ಪು ಆರ್ಥಿಕ ನೀತಿಯಿಂದಾಗಿ ಬಡದೇಶವಾಗಿ ಉಳಿದಿದೆ ದಕ್ಷಿಣ ಅಮೆರಿಕದ ವೆನಿಜುವೆಲಾ.

ದೇಶವೊಂದರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯು ಒಮ್ಮಿಂದೊಮ್ಮೆಲೇ ಸುಧಾರಿಸುವುದಿಲ್ಲ. 2013ರಲ್ಲಿ ಭಾರತವನ್ನು, ಆರ್ಥಿಕವಾಗಿ ದುರ್ಬಲವಾಗಿರುವ 5 ರಾಷ್ಟ್ರಗಳಲ್ಲಿ ಒಂದು ಎಂದು ಗುರುತಿಸಲಾಗಿತ್ತು. ಮಿತಿಮೀರಿದ ಭ್ರಷ್ಟಾಚಾರ, ರಾಜಕೀಯ ಇಚ್ಛಾಶಕ್ತಿಯ ಕೊರತೆ, ಶೇ.10ರ ಆಸುಪಾಸಿನಲ್ಲಿದ್ದ ಹಣದುಬ್ಬರ, ಆರ್ಥಿಕಾಭಿವೃದ್ಧಿಯ ಕುಸಿತ ಮೊದಲಾದ ವಿಚಾರಗಳು ಭಾರತವನ್ನು 'Fragile Five' ದೇಶಗಳ ಪಟ್ಟಿಯ ಕೆಳಗೆ ದೂಡಿದ್ದವು. ಆದರೆ ಇಂದು ಭಾರತವು ಜಗತ್ತಿನಲ್ಲಿಯೇ ಅತಿವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯುಳ್ಳ ದೇಶವಾಗಿ ನಿಂತಿದೆ. ಈ ಸಕಾರಾತ್ಮಕ ಬದಲಾವಣೆಯು ಒಂದು ಆಕಸ್ಮಿಕ ಬೆಳವಣಿಗೆಯೇನಲ್ಲ.

ಭಾರತದ ಬದಲಾವಣೆಯಾಗಬೇಕಾದರೆ ಇಲ್ಲಿನ ಮೂಲಭೂತ ಸೌಕರ್ಯಗಳ ಸುಧಾರಣೆಯಾಗಬೇಕಾದುದು ಅನಿವಾರ್ಯವಾಗಿತ್ತು. ಹತ್ತು ವರ್ಷಗಳ ಹಿಂದೆ ದೇಶದ ಶೇ.40ರಷ್ಟು ಮನೆಗಳಲ್ಲಿ ಮಾತ್ರ ಶೌಚಾಲಯಗಳಿದ್ದವು, ಶೇ.16ರಷ್ಟು ಮನೆಗಳಿಗೆ ಮಾತ್ರ ಕುಡಿಯುವ ಶುದ್ಧನೀರು, ಶೇ.30ರಷ್ಟು ಮನೆಗಳಿಗೆ ಅಡುಗೆ ಅನಿಲ, ಶೇ.75ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಇತ್ತು. ದೇಶದ ಹೆದ್ದಾರಿಗಳ ಅಭಿವೃದ್ಧಿ ಬಹಳ ನಿಧಾನಗತಿಯಲ್ಲಿ ಆಗುತ್ತಿತ್ತು. ಎಕ್ಸ್‌ಪ್ರೆಸ್ ಹೆದ್ದಾರಿಗಳು ಇರಲಿಲ್ಲ. ಯಾವುದೇ ಸುಧಾರಣೆಯಿಲ್ಲದೆ ರೈಲ್ವೆ ವ್ಯವಸ್ಥೆ ನಿಂತ ನೀರಾಗಿತ್ತು. ಕೈಗಾರಿಕೆಗಳಿಗೆ ಬೇಕಾಗುವಷ್ಟು ಉತ್ತೇಜನವಾಗಲೀ, ವಿದ್ಯುತ್ ಪೂರೈಕೆಯಾಗಲೀ ಇರಲಿಲ್ಲ, ವಿಪರೀತ ಭ್ರಷ್ಟಾಚಾರದಿಂದಾಗಿ ಅಭಿವೃದ್ಧಿ ನಿಂತುಹೋಗಿತ್ತು.

ದೇಶದ ಸ್ವಚ್ಛತಾ ಮಟ್ಟವನ್ನು ಹಾಗೂ ಜನರ ಆರೋಗ್ಯವನ್ನು ಸುಧಾರಿಸಲು ಎಲ್ಲ ಪ್ರಜೆಗಳಿಗೆ ಶೌಚಾಲಯವನ್ನು ಒದಗಿಸಬೇಕಾದ್ದು ಅನಿವಾರ್ಯತೆಗಳಲ್ಲಿ ಒಂದಾಗಿತ್ತು. ಹತ್ತು ವರ್ಷಗಳ ಹಿಂದಿನವರೆಗೂ ದೇಶದ ಶೇ.60ರಷ್ಟು ಪ್ರಜೆಗಳು ಬಹಿರ್ದೆಸೆಗೆ ಬಯಲನ್ನೇ ಬಳಸುತ್ತಿದ್ದರು. ಬಯಲು ಶೌಚದಿಂದಾಗಿ ದೇಶದ ಮಕ್ಕಳು ಮತ್ತು ಮಹಿಳೆಯರು ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತ, ವಿವಿಧ ಸಾಂಕ್ರಾಮಿಕ ರೋಗಗಳಿಗೆ ಬಲಿಯಾಗುತ್ತಿದ್ದರು. ಆದರೆ ಕಳೆದ 10 ವರ್ಷಗಳಲ್ಲಿ 'ಸ್ವಚ್ಛ ಭಾರತ್' ಅಭಿಯಾನದಡಿ ದೇಶದ 11 ಕೋಟಿ ಮನೆಗಳಿಗೆ ಶೌಚಾಲಯಗಳನ್ನು ಉಚಿತವಾಗಿ ಕಟ್ಟಿಸಿಕೊಡಲಾಗಿದೆ. ಈ ಅಭಿಯಾನದ ಫಲವಾಗಿ ಭಾರತದಲ್ಲಿ ಬಯಲುಶೌಚದ ಪರಿಪಾಠವು ಗಣನೀಯವಾಗಿ ತಗ್ಗಿದೆ; ಬಯಲುಶೌಚದಿಂದಾಗಿ ಪ್ರತಿ ವರ್ಷ ಭಾರತದಲ್ಲಿ ವಾರ್ಷಿಕ 70 ಸಾವಿರ ಮಕ್ಕಳು ವಿವಿಧ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದುದನ್ನು ಈ ಅಭಿಯಾನದಿಂದಾಗಿ ತಡೆಗಟ್ಟಿದಂತಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಕೆಲ ವರ್ಷದ ಹಿಂದೆ ಹೇಳಿದ್ದಿದೆ. ಪ್ರಸಿದ್ಧ ಜಾಗತಿಕ ವೈಜ್ಞಾನಿಕ ಪತ್ರಿಕೆ 'ನೇಚರ್' ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇದೇ ರೀತಿ, 10.5 ಕೋಟಿ ಬಡ ಮಹಿಳೆಯರ ಮನೆಗಳಿಗೆ ಅಡುಗೆ ಅನಿಲದ ಸಂಪರ್ಕವನ್ನು ನೀಡಲಾಗಿದೆ, ಪ್ರಧಾನಮಂತ್ರಿ ಜಲಜೀವನ್ ಯೋಜನೆಯಡಿ ಶೇ.78.5ರಷ್ಟು ಮನೆಗಳಿಗೆ ಕುಡಿಯುವ ಶುದ್ಧನೀರನ್ನು ನಲ್ಲಿಗಳ ಮೂಲಕ ಒದಗಿಸಲಾಗಿದೆ. ಮುಂದಿನ ವರ್ಷದೊಳಗಾಗಿ ದೇಶದ ಪ್ರತಿ ಮನೆಯೂ ಕುಡಿಯುವ ನೀರಿನ ಸಂಪರ್ಕವನ್ನು ಪಡೆಯಲಿದೆ.

ಭಾರತೀಯ ರೈಲ್ವೆಯಲ್ಲಿ ಎರಡು ಗಮನಾರ್ಹ ಬದಲಾವಣೆಗಳಾಗಿವೆ. ಹಿಂದೆ, ನಮ್ಮ ರೈಲುಬೋಗಿಗಳಲ್ಲಿ ತೆರೆದ ಶೌಚಾಲಯ ವ್ಯವಸ್ಥೆಯಿದ್ದು, ಮಲಮೂತ್ರಗಳು ಹಳಿಗಳ ಮೇಲೆ ಬೀಳುತ್ತಿದ್ದವು. ಈಗ ಅದನ್ನು ಬಯೋ-ಶೌಚಾಲಯವಾಗಿ ಪರಿವರ್ತಿಸಲಾಗಿದ್ದು ಮಲಮೂತ್ರಗಳು ಹಳಿಗಳ ಮೇಲೆ ಬೀಳುವುದಕ್ಕೆ ತಡೆಯೊಡ್ಡಿದಂತಾಗಿದೆ. ರೈಲು ನಿಲ್ದಾಣಗಳ ಮತ್ತು ಹಳಿಗಳ ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಈ ಬದಲಾವಣೆ ಮಹತ್ವದ್ದಾಗಿದೆ. ದೇಶದ ಗಣನೀಯ ರೈಲುಮಾರ್ಗಗಳು ವಿದ್ಯುದೀಕರಣಗೊಂಡು, ಡೀಸೆಲ್ ಅವಲಂಬನೆಯಿಂದ ರೈಲುಗಳು ಹೊರಬರುತ್ತಿರುವುದು ಇನ್ನೊಂದು ಮಹತ್ಸಾಧನೆ. ರೈಲುಮಾರ್ಗಗಳ ವಿದ್ಯುದೀಕರಣದಿಂದಾಗಿ ದೇಶಕ್ಕೆ ವಾರ್ಷಿಕ 600 ಕೋಟಿ ರುಪಾಯಿಗಳಷ್ಟು ಇಂಧನ ವೆಚ್ಚವು ಕಡಿಮೆಯಾಗಿದೆ. ಉತ್ಕೃಷ್ಟ ಸೇವೆ ಒದಗಿಸುವ ವಂದೇಭಾರತ್ ರೈಲುಗಳನ್ನು ದೇಶದ ವಿವಿಧೆಡೆ ಪರಿಚಯಿಸಿರುವುದರಿಂದಾಗಿ ಸಮಯದ ಕ್ಲುಪ್ತತೆಯ ಸಾಧನೆಯಾಗುತ್ತಿದೆ.

2014ರಲ್ಲಿ ಕೇವಲ 2.5 ಗಿಗಾವ್ಯಾಟ್ ಸೌರವಿದ್ಯುತ್ ಉತ್ಪಾದನೆಯಾಗುತ್ತಿದ್ದುದು ಈಗ ಆ ಪ್ರಮಾಣ 90 ಗಿಗಾವ್ಯಾಟ್ ಅನ್ನು ಮುಟ್ಟಿದೆ. ಮನೆಗಳ ಸೂರಿಗೆ ಸೌರಫಲಕಗಳನ್ನು ಅಳವಡಿಸಲು ಪ್ರೋತ್ಸಾಹಿಸುವ 'ಸೂರ್ಯಘರ್' ಯೋಜನೆಯು ಪ್ರಸ್ತುತ ಘೋಷಿಸಲ್ಪಟ್ಟಿದ್ದು, ಒಂದು ಕೋಟಿ ಮನೆಗಳು ಹೀಗೆ ಅಳವಡಿಸಿಕೊಂಡಾಗ ಅವುಗಳಿಂದಾಗಿ ಹೆಚ್ಚುವರಿಯಾಗಿ 40 ಗಿಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಸೌರಫಲಕಗಳಿಗಾಗಿ ಈ ಹಿಂದೆ ಚೀನಾವನ್ನು ಅವಲಂಬಿಸಿದ್ದ ಭಾರತವು ಈಗ ಈ ಕ್ಷೇತ್ರದಲ್ಲೂ ಆತ್ಮನಿರ್ಭರವಾಗುತ್ತಿದೆ. 'ಮೇಕ್ ಇನ್ ಇಂಡಿಯಾ' ಹಾಗೂ 'ಆತ್ಮನಿರ್ಭರ ಭಾರತ' ಉಪಕ್ರಮಗಳಿಂದಾಗಿ 1.4 ಲಕ್ಷ ನವೋದ್ಯಮಗಳು ಹೊಸದಾಗಿ ತಲೆಯೆತ್ತಿವೆ. ಸ್ಮಾರ್ಟ್‌ಫೋನ್‌ಗಳಿಗೆ ವಿದೇಶಗಳನ್ನು ಅವಲಂಬಿಸಿದ್ದ ಭಾರತವಿಂದು ಸ್ವಾವಲಂಬಿಯಾಗಿರುವುದಲ್ಲದೆ ಅವನ್ನು ವಿದೇಶಗಳಿಗೂ ರಫ್ತುಮಾಡುತ್ತಿದೆ. ದೇಶೀಯವಾಗಿ 5-ಜಿ ತಂತ್ರಜ್ಞಾನವನ್ನು ರೂಪಿಸಿ ಯಶಸ್ವಿಯಾಗಿ ಜಾರಿಮಾಡಿರುವ ಭಾರತವಿಂದು 6-ಜಿ ತಂತ್ರಜ್ಞಾನವನ್ನು ಕೂಡ ರೂಪಿಸುತ್ತಿದೆ.

ದೇಶದಲ್ಲಿಂದು ದಿನವೊಂದಕ್ಕೆ 35 ಕಿ.ಮೀ.ನಷ್ಟು ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ಹೆದ್ದಾರಿಗಳು ನಿರ್ಮಾಣವಾಗುತ್ತಿದ್ದು, ಕಳೆದ 10 ವರ್ಷಗಳಲ್ಲಿ ರಸ್ತೆ, ಸೇತುವೆ, ಬಂದರು, ರೈಲ್ವೆ, ಮೆಟ್ರೋ, ವಿದ್ಯುತ್, ಕುಡಿಯುವ ನೀರು ಮೊದಲಾದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 50 ಲಕ್ಷ ಕೋಟಿ ರುಪಾಯಿಗಳನ್ನು ವ್ಯಯಿಸಲಾಗಿದೆ. ಈ ಮೊತ್ತವು 1947ರಿಂದ 2014ರವರೆಗೆ ದೇಶದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಮಾಡಲಾದ ವೆಚ್ಚಕ್ಕಿಂತಲೂ ಹೆಚ್ಚು.

ಕಳೆದ ಹತ್ತು ವರ್ಷಗಳಲ್ಲಿ ದೇಶದ ಸ್ಟಾಕ್ ಮಾರುಕಟ್ಟೆಯು ಬೆಳೆದ ರೀತಿಯೂ ದೇಶದ ಅಭಿವೃದ್ಧಿಯ ಸೂಚ್ಯಂಕವಾಗಿದೆ. ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನ ಸೂಚ್ಯಂಕವು 2014ರಲ್ಲಿ 20000ದ ಆಸುಪಾಸಿನಲ್ಲಿದ್ದುದು ಈಗ 85000ವನ್ನು ತಲುಪುವ ಸಿದ್ಧತೆಯಲ್ಲಿದೆ. ಭಾರತೀಯ ಷೇರು ಮಾರುಕಟ್ಟೆಯಲ್ಲಿ ಕಳೆದ 10 ವರ್ಷಗಳಲ್ಲಿ 4 ಪಟ್ಟು ಹೆಚ್ಚು ಮೊತ್ತವು ಹೂಡಿಕೆಯಾದುದನ್ನು ನಾವು ಕಾಣಬಹುದು.

ಇವು ಸ್ಥೂಲವಾಗಿ ಭಾರತದಲ್ಲಾಗಿರುವ ಒಂದಷ್ಟು ಬದಲಾವಣೆಗಳು; ಇದರ ಜತೆಗೆ ಇನ್ನೂ ಬದಲಾಗಬೇಕಾದ ವಿಷಯಗಳು ಸಾಕಷ್ಟಿವೆ. ಪ್ರತಿಭಾವಂತ ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ದೇಶದ ಪೌರತ್ವವನ್ನು ತೊರೆದು ವಿದೇಶಗಳಿಗೆ ತೆರಳುತ್ತಿದ್ದು, ಸರಕಾರವು ಸಕಾರಾತ್ಮಕ ನಡೆಗಳ ಮೂಲಕ ಇದನ್ನು ಸರಿಪಡಿಸಬೇಕಾದ ಅಗತ್ಯವಿದೆ. ಕೇಂದ್ರದ ಮಟ್ಟದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆ, ಕೇಂದ್ರದ ಆರ್ಥಿಕ ನೆರವುಗಳು ಫಲಾನುಭವಿಗಳ ಬ್ಯಾಂಕ್ ಖಾತೆಗಳನ್ನು ನೇರವಾಗಿ ಸೇರುತ್ತಿವೆ. ಆದರೆ ರಾಜ್ಯಗಳ ಮಟ್ಟದಲ್ಲಿ ಭ್ರಷ್ಟಾಚಾರವು ಇನ್ನೂ ಹಾಗೆಯೇ ಉಳಿದಿದೆ, ವಿವಿಧ ಇಲಾಖೆಗಳಲ್ಲಿ ಅದು ಎಗ್ಗಿಲ್ಲದೆ ಸಾಗಿದೆ. ಇದನ್ನು ನಿಯಂತ್ರಿಸದೆ ಸಕಾರಾತ್ಮಕ ಬದಲಾವಣೆ ಅಸಾಧ್ಯ.

ಭಾರತದಿಂದಾಗುವ ರಫ್ತು ಪ್ರಮಾಣವು ಹೆಚ್ಚುತ್ತಿದ್ದರೂ, ಆಮದಿನ ಪ್ರಮಾಣವೇನೂ ತಗ್ಗಿಲ್ಲ. ಭಾರತವು ಈಗಲೂ ದೊಡ್ಡ ಪ್ರಮಾಣದಲ್ಲಿ ನಿರ್ದಿಷ್ಟ ಸರಕುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತಿರುವುದು ಇದಕ್ಕೆ ಸಾಕ್ಷಿ. 'ವ್ಯಾಪಾರದ ಕೊರತೆ'ಯನ್ನು (ಟ್ರೇಡ್ ಡೆಫಿಸಿಟ್) ನಿಯಂತ್ರಿಸದಿದ್ದರೆ, ಭಾರತವು ನಿರೀಕ್ಷಿತ ಆರ್ಥಿಕ ಪ್ರಗತಿಯನ್ನು ಹೊಂದಲು ಸಾಧ್ಯವಿಲ್ಲ. ಸಂಶೋಧನೆ ಮತ್ತು ಅಭಿವೃದ್ಧಿಗೆ (ಆರ್ ಆ್ಯಂಡ್ ಡಿ) ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಾಕಷ್ಟು ಪ್ರೋತ್ಸಾಹವನ್ನು ಕೊಡದಿದ್ದರೆ, ನಮ್ಮ ದೇಶದಲ್ಲಿ ಹೊಸ ಆವಿಷ್ಕಾರಗಳಾಗುವುದಾದರೂ ಹೇಗೆ? ಆರ್ಥಿಕಾಭಿವೃದ್ಧಿಯ ದರವು ಶೇ.10ಕ್ಕಿಂತ ಮೇಲಕ್ಕೆ ಹೋದರೆ ಮಾತ್ರವೇ ಭಾರತವು ಚೀನಾ ಮತ್ತು ಅಮೆರಿಕಗಳೊಂದಿಗೆ ತನ್ನನ್ನು ತುಲನೆ ಮಾಡಿಕೊಳ್ಳಲು ಸಾಧ್ಯ. ಶೇ.10ರ ಅಭಿವೃದ್ಧಿ ದರವನ್ನು ಸಾಧಿಸಬೇಕೆಂದರೆ, ಕೇಂದ್ರ ಸರಕಾರ ಹಾಗೂ ರಾಜ್ಯಗಳ ಸರಕಾರಗಳ ನಡುವೆ ರಾಜಕೀಯವನ್ನು ಮೀರಿದ ಹೊಂದಾಣಿಕೆ ಇರಬೇಕು. ಆದರೆ, 'ವಂದೇ ಭಾರತ್' ರೈಲಿಗೆ ಕಲ್ಲೆಸೆಯುವವರನ್ನು, ರೈಲುಗಳ ಹಳಿ ತಪ್ಪಿಸಲು ಹಳಿಗೆ ಅಡ್ಡಲಾಗಿ ಸಿಲಿಂಡರ್, ಸ್ಲ್ಯಾಬ್, ಕಬ್ಬಿಣದ ತುಂಡು ಇಡುವವರನ್ನು ಸಮರ್ಥಿಸುವ ವಿಪಕ್ಷಗಳಿರುವಾಗ ಇದು ಸಾಧ್ಯವೇ ಎಂಬ ಪ್ರಶ್ನೆಯೂ ಮೂಡುತ್ತದೆ!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

● **ಭೀಮರಾವ್ ಮನಗೂಳಿ, ಚಾಮರಾಜಪೇಟೆ**
ಭಟ್ರೇ, ಹಸುವನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಲು ಹಿಂಡಿದರೆ ಅದು ಹೈನುಗಾರಿಕೆ, ತಲೆ ಕೂದಲು ಯದ್ವಾತದ್ವಾ ಬೆಳೆಯಲು ಬಿಟ್ಟು ಪೋಷಿಸಿದರೆ ಅದು?
- ಹೇನುಗಾರಿಕೆ!

● **ಕಾಶಿ ಪ್ರಾಣೇಶ, ವಿದ್ಯಾಪೀಠ ಸರ್ಕಲ್**
ಭಟ್ರೇ, ರಸ್ತೆ ಗುಂಡಿ ನೋಡಲು ಡಿಕೆಶಿ ರಾತ್ರಿಯನ್ನೇ ಆರಿಸಿಕೊಂಡಿದ್ದೇಕೆ?
- ರಸ್ತೆಗುಂಡಿಗಳು ಕಾಣದಿರಲಿ ಎಂದು!

● **ಚಂಚಲಾ ಚಿಟಗುಪ್ಪಿ, ಮೈಸೂರು**
ಭಟ್ರೇ, ಮಾಲೆಯಲ್ಲಿ ಏರ್ಪಡಿಸಿದ್ದ ಸಮಾರಂಭವನ್ನು ನಿಮ್ಮ ವಿರೋಧಿಗಳು ಹೇಗೆ ಕಂಡರು?
- ಕಾ'ಮಾಲೆ' ಕಣ್ಣಿನಿಂದ!

● **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಮುದ್ದಿನ ಬೆಕ್ಕೇ, ಮುದ್ದಿನ ಗಿಣಿಯೇ, ಮುದ್ದಿನ ಹೆಣ್ಣೇ ಎನ್ನುವವರು ಗಂಡಸರನ್ನು ನೋಡಿ ಏನನ್ನುತ್ತಾರೆ?
- ಛೀ.. ಕಳ್ಳ!

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಈ ವಯಸ್ಸಿನಲ್ಲಿ ದೇವೇಗೌಡರು ಕರುಣಾಮಯಿ ಥರಾ ಕಾಣುತ್ತಾರಲ್ಲ?
- ಹೂಂ.. ಒಂದು ಆಂಗಲ್‌ನಿಂದ ಥೇಟು ಗಂಡು ಮದರ್ ಥೆರೆಸಾ ಥರಾ ಕಾಣುತ್ತಾರೆ!

● **ಎಸ್.ರಾಘವೇಂದ್ರ, (ಇಮೇಲ್ ಮೂಲಕ)**
ಭಟ್ರೇ, 'ಪೂಜಿಸಲೆಂದೇ ಹೂಗಳ ತಂದೆ' ಎಂದು ಬಾಗಿಲು ತೆಗೆಸಿದವಳು ಹೀಗೆ ಮಾಡಬಾರದಿತ್ತು, ಅಲ್ವಾ?
- ಏನು, ನಿಮ್ಮ ಕಿವಿಗೆ ಹೂ ಇಟ್ಟು ಹೋದಳಾ?!

● **ಅರವಿಂದ ಕೆಮ್ಮತ್ತೂರು, (ಇಮೇಲ್ ಮೂಲಕ)**
ಭಟ್ರೇ, ದರ್ಶನ್ ಕೂದಲು ಉದುರುತ್ತಿದೆಯಲ್ಲ?
- 'ಕೇಶಿರಾಜ' ಆರ್.ಜಿ.ಹಳ್ಳಿ ನಾಗರಾಜನೇ ತಲೆ ಕೆಡಿಸಿಕೊಂಡಿಲ್ಲ, ನೀನೇಕೆ ಕೆಡಿಸಿಕೊಳ್ಳುತ್ತೀಯ?!

● **ಲಗ್ಗೆರೆ ಪ್ರಕಾಶ, ಬೆಂಗಳೂರು**
ಭಟ್ರೇ, ರಾತ್ರಿಯಾಗುತ್ತಿದ್ದಂತೆ ಮೇಲಕ್ಕೆ ಗುಂಡು ಹಾರಿಸ್ತಾನೆ, ಕೆಟ್ಟ ಸ್ವರದಲ್ಲಿ ಕಿರುಚಿಕೊಳ್ತಾನೆ, ಯಾಕೆ?
- ಮತ್ತೆ ಶುರುವಾಯ್ತಾ..? ಆ ಬೆಳಗೆರೆ ಸತ್ತ ನಂತರ ಈ ಪೀಡೆ ನಿಂತಿತ್ತಲ್ಲ?!

● **ರವೀಶ ಭಟ್, ಯಲ್ಲಾಪುರ**
ಭಟ್ರೇ, ಪುಸ್ತಕ ಓದಿ ಯಾರೂ ಬುದ್ಧಿವಂತರಾಗಿಲ್ಲವಂತೆ, ಹೌದಾ?
- ನಿಜ, 'ಕುಡಿಯೋಣು ಬಾರಾ' ಓದಿ ಯಾರೂ ಕುಡುಕರಾಗಿಲ್ಲ!

● **ನಂದೀಶ ಸಾಲೂರು, ಭದ್ರಾವತಿ**
ಭಟ್ರೇ, ಮದುವೆ ನಂತರ ಗಂಡನೇ ಹೆಂಡತಿ ಮನೆಗೆ ಹೋಗುವಂತಿದ್ದರೆ?
- ಈಗ ಮದುವೆಯಾದವರೆಲ್ಲ ಎರಡನೇ ಮದುವೆಗೆ ರೆಡಿಯಾಗುತ್ತಿದ್ದರು!

ಗಡ್ಡೆ ಗೆಣಸುಗಳ ನಾಡಿನಲ್ಲಿ ಒಂದು ಸುತ್ತು

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ದಕ್ ಗೆಣಗು ಬೇಸಿ ಇಟ್ಟಿದ್ದೆ, ತಿನ್ನು'- ನಾವು ಸಂಜೆ ಶಾಲೆ ಮುಗಿಸಿಕೊಂಡು ಬಂದ ತಕ್ಷಣ ಅಮ್ಮಮ್ಮ ಹೇಳುತ್ತಿದ್ದರು. 'ದಕ್ ಗೆಣಗು' ಅಥವಾ 'ದಕ್ ಗೆಣಸು' ಒಂದು ಬಗೆಯ ಗಡ್ಡೆ. ಅರ್ಧದಿಂದ ಒಂದು ಇಂಚು ಅಗಲ, ಆರೆಂಟು ಇಂಚು ಉದ್ದ ಇರಬಹುದಾದ, ಹೇಳಿಕೊಳ್ಳುವಂಥ ವಿಶೇಷ ರುಚಿ ಇಲ್ಲದ ಒಂದು ಗಡ್ಡೆ. ಈಗ ಹೆಚ್ಚು ಪ್ರಚಲಿತದಲ್ಲಿರುವ ಸಿಹಿ ಗೆಣಸಿಗೆ ಸಂಬಂಧಿ ಅಲ್ಲದೇ ಇರುವ ಸಸ್ಯ. ಉಪ್ಪು ಹಾಕಿ ಬೇಯಿಸಿದರೆ, ತೀರಾ ಸಪ್ಪೆ ಅಲ್ಲದ ರುಚಿ. ಬೇಯಿಸಿದಾಗ, ಅದರ ಮೇಲಿನ ಸಿಪ್ಪೆಯನ್ನು ಕಿತ್ತರೆ, ಸುರುಳಿ ಸುರುಳಿಯಾಗಿ ಬಿಡಿಸಿಕೊಳ್ಳುತ್ತದೆ.

ಶಾಲೆ ಮುಗಿಸಿ, 3 ಕಿ.ಮೀ. ನಡೆದು ಮನೆಗೆ ಬಂದಾಗ ಹಸಿವಾಗಿರುತ್ತದೆ; ಆಗ, ತಿನ್ನಲಿಕ್ಕೆ ದಕ್ ಗೆಣಸಾದರೂ ಪರವಾಗಿಲ್ಲ, ಸಿಹಿ ಗೆಣಸಾದರೂ ಪರವಾಗಿಲ್ಲ ಎಂಬ ಸ್ಥಿತಿ. ನಮ್ಮ ಹಳ್ಳಿಯಲ್ಲಿ ಒಂದು ಗಾದೆಯೇ ಇದೆ 'ಮಕ್ಕಳ ಬಾಯಿಗೆ ದಕ್ ರುಚಿ'. ಇಲ್ಲಿ ದಕ್ ಎಂದರೆ, ಒಣಗಿದ ಕೋಲು ಅಥವಾ ಮರದ ರೆಂಬೆ ಎಂಬ ಅರ್ಥವಿದೆ. ದಕ್ ಎಂಬ ಪದದ ಮೂಲ ನನಗೆ ಸ್ಪಷ್ಟವಿಲ್ಲ, ಮೈಸೂರು ವಿಶ್ವವಿದ್ಯಾಲಯ ಪ್ರಕಟಿಸಿರುವ ಸಂಕ್ಷಿಪ್ತ ಕನ್ನಡ ನಿಘಂಟುವಿನಲ್ಲಿ, 'ದಕ್ಕು' ಎಂಬ ಪದಕ್ಕೆ ಎರಡನೆಯ ಅರ್ಥವಾಗಿ, ಮರದ ಶೂಲ, ಮುಳ್ಳು ಎಂಬ ಅರ್ಥವನ್ನೂ ನೀಡಿದ್ದಾರೆ. ಮರದ ಕೋಲಿನಂಥ ಗಡ್ಡೆಗೆ, ದಕ್ ಗೆಣಸು ಎಂದು ನಮ್ಮ ಹಳ್ಳಿಯವರು ಕರೆದಿರಬೇಕು. ಈಚಿನ ವರ್ಷಗಳಲ್ಲಿ ಈ ಗಡ್ಡೆಯನ್ನು ನಾನು ನೋಡಿಲ್ಲ.

ಗಡ್ಡೆ ಗೆಣಸುಗಳ ಮೂಲವನ್ನು ಅಗೆಯುತ್ತಾ ಹೋದರೆ, ಸಾಕಷ್ಟು ಸ್ವಾರಸ್ಯಕರ ವಿಚಾರಗಳು ನೆನಪಾಗುತ್ತವೆ, ಮನದಾಳದಿಂದ ಎದ್ದು ಬರುತ್ತವೆ. ಮನುಷ್ಯನ ಇತಿಹಾಸವನ್ನು ಕೆದಕುತ್ತಾ ಹೋದರೆ, ಹಿಂದೆ ಆದಿಮಾನವನು ಗಡ್ಡೆ ಗೆಣಸುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಎನ್ನುತ್ತಾರೆ. ಆ ಪದ್ಧತಿಯ ಉಳಿಕೆಯಂಥ ಕೆಲವು ಆಹಾರಗಳು ನಮ್ಮ ಹಳ್ಳಿಯಲ್ಲಿದ್ದವು. ಈಚಿನ ವರ್ಷಗಳಲ್ಲಿ, ವಾಣಿಜ್ಯೀಕರಣ ಮತ್ತು ತರಕಾರಿಗಾಗಿ ಪೇಟೆಯ ಅಂಗಡಿಗಳ ಮೇಲಿನ ಅವಲಂಬನೆ ಜಾಸ್ತಿಯಾಗಿದ್ದರಿಂದಲೋ ಏನೋ, ಅವು ನಿಧಾನವಾಗಿ ಕಣ್ಮರೆಯಾಗಿವೆ. ಇತ್ತೀಚೆಗೆ ಸ್ನೇಹಿತರೊಬ್ಬರ ಮನೆಯಲ್ಲಿ ನೀಡಿದ ಸಿಹಿಗೆಣಸಿನ ಬೋಂಡಾ ತಿನ್ನುವಾಗ ಅನಿಸಿತು- ಈ ಬೋಂಡಾವು ಆಲೂಗಡ್ಡೆ ಬೋಂಡಾಕ್ಕಿಂತಲೂ ರುಚಿಯಾಗಿದೆ, ಅದೇಕೆ ನಮ್ಮ ರೆಸ್ಟೋರೆಂಟುಗಳು ಗೆಣಸಿನ ಬೋಂಡಾ ತಯಾರಿಸಬಾರದು ಎಂದು. ಸಿಹಿ ಗೆಣಸಿನ ಬೋಂಡಾ ಜನಪ್ರಿಯಗೊಂಡರೆ, ನಮ್ಮ ನಾಡಿನ ಕೃಷಿಕರ ಒಂದು ಬೆಳೆಗೆ ಬೆಂಬಲ ನೀಡಿದಂತೆಯೂ ಆಗುತ್ತದೆ.

ಕೆಲವು ದಶಕಗಳ ಹಿಂದೆ ನಮ್ಮ ಹಳ್ಳಿಯಲ್ಲಿ ಸಿಹಿ ಗೆಣಸು ನಾನಾ ರೀತಿಯಲ್ಲಿ ಉದರ ಸೇರುತ್ತಿತ್ತು. ಬಡವರ ಬಂಧು ಈ ಗೆಣಸಿನ ಗಡ್ಡೆ ಎಂಬ ನುಡಿಗಟ್ಟು ಸಹ, ಗೆಣಸಿನ ಬಹೂಪಯೋಗಗಳನ್ನು ಬಿಂಬಿಸುತ್ತದೆ. ನಮ್ಮ ಮನೆಯಲ್ಲಿ ಗೆಣಸನ್ನು ನಾನಾ ರೀತಿಯಲ್ಲಿ ಅಡುಗೆಗೆ, ತಿನ್ನಲು ಈ ಮುಂಚೆ ಬಳಸುತ್ತಿದ್ದುದುಂಟು- ಸಾಂಬಾರು, ಪಲ್ಯ, ಪೋಡಿ (ಬೋಂಡ), ಒಗ್ಗರಣೆ, ಉಪ್ಪು ಹಾಕಿ ಬೇಯಿಸಿ ತಿನ್ನುವುದು- ಈ ರೀತಿ. ಅಷ್ಟೇಕೆ, ಸಿಹಿಗೆಣಸನ್ನು ಹಸಿಯಾಗಿ ತಿನ್ನಲೂ ಸಾಧ್ಯವಿದೆ! ಆದರೆ, ಈ ಪದ್ಧತಿ ವ್ಯಾಪಕವಾಗಿ ಈಚೆಗೆ ಮುಂದುವರಿದಿಲ್ಲ ಎಂಬುದು ಬೇರೆ ಮಾತು; ಅದಕ್ಕೆ ನಾನಾ ಕಾರಣಗಳಿರಬಹುದು. ಚಳಿಗಾಲ ಕಳೆದ ನಂತರ, ನೀರಿನ ಆಶ್ರಯವಿಲ್ಲದೇ, ಮಕ್ಕಿ ಗದ್ದೆಯಲ್ಲಿ ಗೆಣಸಿನ ಕೃಷಿಯೂ ಅಂದಿನ ದಿನಗಳಲ್ಲಿ ಸಾಮಾನ್ಯ. ಇಬ್ಬನಿಯ ತಂಪನ್ನೇ ಕುಡಿದು ಬೆಳೆಯುತ್ತಿದ್ದ ಗೆಣಸಿನ ಗಿಡಗಳು, ಸಿಹಿ ಸಿಹಿಯಾದ ಗಡ್ಡೆಗಳನ್ನು ಕೊಡುತ್ತಿದ್ದವು. ಆ ಬೆಳೆಗೆ ಜಾಸ್ತಿ ಗೊಬ್ಬರವೂ ಬೇಡ, ಕ್ರಿಮಿನಾಶಕಗಳ ಸಿಂಪರಣೆಯೂ ಬೇಡ; ಕೆಲವು ಬಾರಿ ಕಾಡುಹಂದಿಗಳು ನೆಲವನ್ನು ಬಗೆದು ಗಡ್ಡೆಗಳನ್ನು ತಿಂದುಹಾಕುವ ಕಿರಿಕಿರಿ ಬಿಟ್ಟರೆ, ಗೆಣಸಿನ ಬೆಳೆಯು ಅತಿ ಕಡಿಮೆ ಖರ್ಚಿನ ಬೆಳೆ. ಗೆಣಸನ್ನು ಬೇಯಿಸಿ ತಯಾರಿಸಿದ ಹಪ್ಪಳವು ಒಂದು ಮಟ್ಟಕ್ಕೆ ಮಳೆಗಾಲದ ತಿಂಡಿಯೂ ಹೌದು. ಆ ಮೂಲಕ, ಬಹುದಿನಗಳ ತನಕ ಸಂಗ್ರಹಿಸಿಟ್ಟುಕೊಂಡು, ಉಪಯೋಗಿಸಬಹುದಾದ ಆಹಾರ. ಕೆಲವರು, ಮುಖ್ಯವಾಗಿ ಕೃಷಿ ಕಾರ್ಮಿಕರು ಗೆಣಸನ್ನು ಮಳೆಗಾಲದ ಉಪಯೋಗಕ್ಕೆಂದು ಬೇರೊಂದೇ ರೀತಿಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಬೇಸಗೆಯಲ್ಲಿ ಗೆಣಸಿನ ಬೆಳೆ ಬಂದಾಗ, ಕಡಿಮೆ ಬೆಲೆಯಲ್ಲಿ ಖರೀದಿಗೆ ಸಿಗುತ್ತದೆ. ಆಗ ಸಾಕಷ್ಟು ಗೆಣಸನ್ನು ಸಂಗ್ರಹಿಸಿ, ಸಣ್ಣದಾಗಿ ಕತ್ತರಿಸಿ, ಬೇಯಿಸಿ, ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಡಬ್ಬಿಯಲ್ಲಿ ತುಂಬಿಡುವ ಪದ್ಧತಿ. ಮಳೆಗಾಲದಲ್ಲಿ ಕೂಲಿ ಸಿಗದೇ ಇದ್ದಾಗ, ಊಟ ತಿಂಡಿಗೆ ಕಷ್ಟವಿದ್ದಾಗ, ಈ ರೀತಿ ಒಣಗಿಸಿಟ್ಟ ಗೆಣಸಿನ ಚೂರುಗಳನ್ನು ಬೇಯಿಸಿ, ಒಂದು ಹೊತ್ತಿನ ಊಟದ ಬದಲಿಗೆ ತಿನ್ನುವ ಪದ್ಧತಿ. ಈಗ, ಸರಕಾರವು ರಿಯಾಯತಿ ದರದಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿ ಮೊದಲಾದ ಪಡಿತರಗಳನ್ನು ನೀಡಲು ಆರಂಭಿಸಿದ ನಂತರ, ಈ ಕಷ್ಟಕರ ಆಹಾರವನ್ನು ಬಳಸುವ ಪದ್ಧತಿ ಮರೆಯಾಗಿದೆ.

ಹೆಚ್ಚು ಜನಪ್ರಿಯವಾಗಿರುವ, ಈಗ ಸೂಪರ್ ಮಾರ್ಕೆಟ್‌ನಲ್ಲೂ ಖರೀದಿಗೆ ದೊರಕುವ ಸಿಹಿಗೆಣಸು, ಇಂದಿಗೂ ಹಲವರ ಆಹಾರ, ತಿನಿಸಾಗಿ ಉಳಿದುಕೊಂಡಿದೆ. ನಮ್ಮ ಹಳ್ಳಿಯಲ್ಲಿ ಇದರ ಜತೆಗೇ ಇನ್ನೂ ಹಲವು ಪ್ರಭೇದಗಳ ಗೆಣಸುಗಳು, ಗಡ್ಡೆಗಳು ಬೆಳೆಯುತ್ತಿದ್ದವು. ಅವುಗಳ ಪೈಕಿ ತೀರಾ ವಿಚಿತ್ರ ಸ್ವರೂಪದ ಗೆಣಸು ಎಂದರೆ, ಹೆಗ್ಗೆಣಸು ಅಥವಾ ಹೆಡಿಗೆ ಗೆಣಸು. ಇದರ ಗಡ್ಡೆಯು ಒಂದು ಹೆಡಿಗೆಯಷ್ಟು (ಬುಟ್ಟಿ) ಗಾತ್ರದ್ದು, ಹತ್ತಾರು ಕಿಲೋ ತೂಗುವಂಥದ್ದು. ಆದ್ದರಿಂದಲೇ 'ಹೆಡಿಗೆ ಗೆಣಸು' ಎಂಬ ಹೆಸರು! ಮರದ ಮೇಲೆ ಉದ್ದಕ್ಕೂ ಹಬ್ಬಿಕೊಂಡು ಹೋಗುವ ಅದರ ಬಳ್ಳಿಯ ಗಾತ್ರವನ್ನು ಕಂಡರೇ ಊಹಿಸಬಹುದು, ಇದೊಂದು ವನ್ಯ ಪ್ರಭೇದದ ಸಸ್ಯ ಎಂದು. ನೆಲದಾಳದಲ್ಲಿ

ಇದರ ಗಡ್ಡೆಯು ಬೆಳೆದು ದೊಡ್ಡದಾಗಲು ಒಂದು ವರ್ಷದ ಕಾಲಾವಕಾಶವೇ ಬೇಕು ಎನಿಸುತ್ತದೆ; ಇದನ್ನು ಕತ್ತರಿಸಿ, ಸಾಂಬಾರು, ಪಲ್ಯ ಮಾಡಬಹುದು. ರುಚಿ ಮಾತ್ರ ಅಷ್ಟಕ್ಕಷ್ಟೆ, ಅತ್ತ ಸಿಹಿಯೂ ಇಲ್ಲ, ಇತ್ತ ಬೇರಾವ ಹೇಳಿಕೊಳ್ಳಬಹುದಾದ ರುಚಿಯೂ ಇಲ್ಲ. ಬೇಯಿಸಿ ತಿಂದರೆ, ಹೊಟ್ಟೆ ತುಂಬುತ್ತದೆ, ಅಷ್ಟೆ. ಒಂದು ಹೆಡಿಗೆ ಗೆಣಸನ್ನು ಕತ್ತರಿಸಿದರೆ, ಅಕ್ಕಪಕ್ಕದ ನಾಲ್ಕಾರು ಮನೆಗಳವರು ಹಂಚಿ ತಿನ್ನಬಹುದು!

ದಕ್ ಗೆಣಸು, ಕೋಲು ಗೆಣಸು, ಮರಗೆಣಸು ಮೊದಲಾದ ಹಲವು ಪ್ರಭೇದದ ಗೆಣಸುಗಳು, ಗಡ್ಡೆಗಳು ನಮ್ಮ ಹಳ್ಳಿಯಲ್ಲಿವೆ. ಗಡ್ಡೆಗಳನ್ನು ಹೆಸರಿಸುವಾಗ, ಅವು ಗೆಣಸಿನ ಸಂಬಂಧಿ ಅಲ್ಲದಿದ್ದರೂ, ಗೆಣಸು ಎಂದು ಕರೆಯುವ ರೂಢಿ. ಕರಾವಳಿಯ ದಕ್ಷಿಣ ಭಾಗ ಮತ್ತು ಕೇರಳದಲ್ಲಿ ಮರಗೆಣಸನ್ನು ವ್ಯಾಪಕವಾಗಿ ಕೃಷಿ ಮಾಡುವ ಪದ್ಧತಿ ಈಗಲೂ ಇದೆ. ಈ ನಿಟ್ಟಿನಲ್ಲಿ ಮರಗೆಣಸು ಒಂದು ವಾಣಿಜ್ಯಕ ಬೆಳೆಯಾಗಿ ರೂಪುಗೊಂಡಿದೆ; ಇತರ ಗಡ್ಡೆಗಳೂ ಇಂಥ ವಾಣಿಜ್ಯಕ ಬೆಳೆಯ ಖದರು ಬೆಳೆಸಿಕೊಂಡರೆ, ನಮ್ಮ ಕೃಷಿಕರಿಗೆ ಉಪಆದಾಯವಾದೀತು. ದಕ್ಷಿಣ ಅಮೆರಿಕ ಮೂಲದ ಮರಗೆಣಸು (ಟಾಪಿಯೋಕಾ) ಒಂದು ಉತ್ತಮ ಆಹಾರ ಮೂಲವಾಗಿದ್ದು, ಕೆಲವು ದೇಶಗಳಲ್ಲಿ ಬ್ರೆಡ್ ತಯಾರಿಗೂ ಬಳಸಲಾಗುತ್ತದೆ. ಜಾನುವಾರುಗಳ ಆಹಾರವಾಗಿಯೂ ಇದರ ಉಪಯೋಗವಿದೆ. ಕಡಿಮೆ ಮಳೆಯಲ್ಲಿ, ಗುಡ್ಡಗಾಡು ಪ್ರದೇಶದಲ್ಲಿ ಬೆಳೆಯುವ ಮರಗೆಣಸು, ಆಫ್ರಿಕಾದ ಹಲವು ದೇಶಗಳಲ್ಲಿ ಒಂದು ಪ್ರಮುಖ ಆಹಾರಮೂಲ ಎನಿಸಿದೆ.

ನಮ್ಮ ಹಳ್ಳಿಯವರು ಅಡುಗೆಗೆ ಬಳಸುವ ಗಡ್ಡೆಗಳಲ್ಲಿ ಕೆಸುವಿನ ಗಡ್ಡೆಗಳು ಮುಂಚೂಣಿಯಲ್ಲಿವೆ. ಇದರಲ್ಲಿ ಹಲವು ಪ್ರಭೇದಗಳು- ಕಾಡು ಕೆಸ, ಕರಿ ಕೆಸ, ಕೋಲು ಕೆಸ, ಗೋವೆ ಕೆಸ ಇತ್ಯಾದಿ. ಇವುಗಳ ಪೈಕಿ ಗೋವೆ ಕೆಸದ ಗಡ್ಡೆಯು ನಿಜಕ್ಕೂ ರುಚಿಕರ. ದೊಡ್ಡ ದೊಡ್ಡ ಎಲೆ ಬಿಡುವ ಈ ಕೆಸುವಿನ ಗಡ್ಡೆಯೂ ದೊಡ್ಡದು; ನಾಲ್ಕಾರು ಇಂಚು ದಪ್ಪ, ಒಂದೆರಡು ಅಡಿ ಉದ್ದ ಬೆಳೆಯುವ ಗೋವೆಕೆಸದ ಗಡ್ಡೆಯು, ಈಗ ಅಂಗಡಿಗಳಲ್ಲಿ ದೊರಕುವ ಯಾವುದೇ ತರಕಾರಿಗೂ, ರುಚಿಯಲ್ಲಿ ಪೈಪೋಟಿ ನೀಡಬಲ್ಲದು. ಇದನ್ನು ಕತ್ತರಿಸಿ ತಯಾರಿಸಿದ ಸಾಂಬಾರು, ಆಲೂಗಡ್ಡೆಯ ಸಾಂಬಾರಿಗೆ ಸ್ಪರ್ಧೆ ನೀಡಬಲ್ಲದು! ಮೆದುವಾಗಿ ಬೇಯುವ ರುಚಿಕರ ಗಡ್ಡೆ ಗೋವೆ ಕೆಸ. ಉದ್ದಕ್ಕೆ ಮಡಿ ಮಾಡಿ, ಗೊಬ್ಬರ ಹಾಕಿ ಇದನ್ನು ನಮ್ಮ ಹಳ್ಳಿಯವರು ಬೆಳೆಯುತ್ತಾರೆ. ಅದೇಕೆ ಇನ್ನೂ ಈ ತರಕಾರಿಯು, ವಾಣಿಜ್ಯಕವಾಗಿ ನಮ್ಮ ರಾಜ್ಯದಾದ್ಯಂತ ಹಬ್ಬಲಿಲ್ಲವೋ, ಅಚ್ಚರಿಯಾಗುತ್ತದೆ. ಈ ಗಿಡದ ಎಲೆಯಿಂದ ರುಚಿಕರ ಪತ್ರೊಡೆಯನ್ನೂ ತಯಾರಿಸಲು ಸಾಧ್ಯ.

ಗೋವೆ ಕೆಸವು ಒಂದು ರೀತಿಯಲ್ಲಿ ಹೈಬ್ರಿಡ್ ಸ್ವರೂಪ ಎಂದು ಗುರುತಿಸಿಕೊಂಡರೆ, ಅದರ ನಾಟಿ ಪ್ರಭೇದಗಳು ನಮ್ಮೂರಿನ ಮೂಲೆ ಮೂಲೆಯಲ್ಲಿ ಬೆಳೆಯುತ್ತವೆ! ಜೂನ್ ತಿಂಗಳಿನಲ್ಲಿ ಒಂದೆರಡು ವಾರ ಚೆನ್ನಾಗಿ ಮಳೆ ಬಂದ ತಕ್ಷಣ, ಗದ್ದೆಯಂಚಿನಲ್ಲಿ, ತೋಡಿನಂಚಿನಲ್ಲಿ, ತೋಟದ ಮೂಲೆ ಮೂಲೆಗಳಲ್ಲಿ, ಅಂಗಳದ ಬದಿಯಲ್ಲಿ ತನ್ನಷ್ಟಕ್ಕೆ ತಾನೇ ಬೆಳೆಯುವ ಕಾಟು ಕೆಸ ಮತ್ತು ಕರಿಕೆಸವು, ಬಹು ಬೇಗನೆ ಬೆಳೆಯುವ ಸಸ್ಯ. ಹೆಚ್ಚು ನೀರಿನ ಅಂಶವಿರುವ ಜಾಗ ಸಿಕ್ಕರೆ ಸಾಕು, ಕಳೆ ಗಿಡದ ರೀತಿ ತನ್ನಷ್ಟಕ್ಕೆ ತಾನೇ ಬೆಳೆಯುತ್ತಾ, ಹರಡುತ್ತಾ ಹೋಗುತ್ತದೆ. ಇದಕ್ಕೆ ಪ್ರತ್ಯೇಕ ಗೊಬ್ಬರ ಹಾಕ ಬೇಕಿಲ್ಲ, ನೀರುಣಿಸಬೇಕಿಲ್ಲ. ಇದರ ಗಡ್ಡೆಯನ್ನು ಬಳಸಿ, ಸಾಂಬಾರ್, ಚಟ್ನಿ ಮಾಡಬಹುದು; ಗೋವೆ ಕೆಸಕ್ಕೆ ಹೋಲಿಸಿದರೆ, ತುಂಬಾ ಚಿಕ್ಕ ಗಾತ್ರದ ಈ ಗಡ್ಡೆಗಳು, ರುಚಿಯಲ್ಲಿ ಗೋವೆ ಕೆಸದ ಗಡ್ಡೆಯ ಸಮಾನಕ್ಕೆ ಬರಲಾರವು. ತಿಂದು ಅಭ್ಯಾಸ ಇಲ್ಲದವರಿಗೆ, ಕಾಟು ಕೆಸದ, ಕರಿಕೆಸದ ಗಡ್ಡೆಯ ಸಾಂಬಾರ್ ತಿಂದರೆ, ಬಾಯಲ್ಲಿ ತುರಿಕೆ, ನವೆ ಬಂದರೂ ಬರಬಹುದು! ತುಸು ಕಪ್ಪು ಬಣ್ಣದ ದಂಟು ಹೊಂದಿರುವ ಕಾಡು ಕೆಸದ ಗಡ್ಡೆ, ರುಚಿ ಜಾಸ್ತಿ, ಬಾಯಿ ತುರಿಕೆ ಕಡಿಮೆ. ಈ ಗಿಡದ ಎಲೆಗಳಿಂದ ಚಟ್ನಿ, ದೋಸೆ, ದಂಟುಗಳಿಂದ ಸಾಂಬಾರ್ ತಯಾರಿಸಬಹುದು. ಮಲೆನಾಡು, ಕರಾವಳಿಯವರಿಗೆ, ಮಳೆಗಾಲದಲ್ಲಿ ತರಕಾರಿಯಾಗಿ ನಾನಾ ರೀತಿಯಲ್ಲಿ ಒದಗಿ ಬರುವ, ಸುಲಭವಾಗಿ ಕೈಗೆ ಸಿಗುವ ಕಾಟು ಕೆಸವು ಕಬ್ಬಿಣದ ಅಂಶವನ್ನು ಹೊಂದಿದೆ.

ನಮ್ಮ ಹಳ್ಳಿಯ ನೆಲದಲ್ಲಿ ದೊರಕುವ ಇನ್ನೊಂದು ಗಡ್ಡೆಯೆಂದರೆ ಮರಸಣಿಗೆ ಗಡ್ಡೆ. ಕೆಸುವನ್ನು ಹೋಲುವ ಎಲೆ, ಆದರೆ ಎರಡರಿಂದ ನಾಲ್ಕು ಅಡಿ ಉದ್ದದ ಎಲೆ! ಮಳೆ ಬಂದಾಗ, ತುರ್ತು ಸನ್ನಿವೇಶದಲ್ಲಿ ಕೊಡೆಯಾಗಿ ಬಳಸಬಲ್ಲಷ್ಟು ದೊಡ್ಡ ಎಲೆ. ಆ ಗಿಡದ ಬುಡವನ್ನು ಅಗೆದರೆ ದೊರೆಯುವ ಒಂದೆರಡು ಅಡಿ ಉದ್ದದ ಗಡ್ಡೆಯಿಂದ ಮುಖ್ಯವಾಗಿ ಪಲ್ಯ ಮತ್ತು ಸಾಂಬಾರು ತಯಾರಿಸಬಹುದು. ಇದರ ಚಟ್ನಿಯನ್ನೂ ತಯಾರಿಸುವುದುಂಟು. ನೆಲದಲ್ಲಿ ಸಿಗುವ ಇನ್ನೊಂದು ರುಚಿಕರ ಗಡ್ಡೆಯೆಂದರೆ ಸುವರ್ಣ ಗಡ್ಡೆ- ಇದು ವಾಣಿಜ್ಯಕವಾಗಿ ಸಾಕಷ್ಟು ಪ್ರಚಾರಗೊಂಡಿದೆ, ಎಲ್ಲರಿಗೂ ಪರಿಚಿತ.

ಸುವರ್ಣ ಗಡ್ಡೆಯ ದೂರದ ಸಂಬಂಧಿ ಎನಿಸುವ ಗಡ್ಡೆಯೊಂದು ನಮ್ಮೂರಿನ ಕಾಡು ಪ್ರದೇಶದಲ್ಲಿ, ಗುಡ್ಡಗಳಲ್ಲಿ ತನ್ನಷ್ಟಕ್ಕೆ ತಾನು ಬೆಳೆಯುತ್ತದೆ. ಮಳೆ ಬಂದ ಕೂಡಲೆ ನೆಲದಿಂದ ಮೇಲಕ್ಕೆ ಬರುವ ಅದರ ಎಲೆಗಳು ಸುವರ್ಣ ಗಿಡದ ಎಲೆಗಳನ್ನೇ ಹೋಲುತ್ತವೆ. ಅದರ ಬುಡವನ್ನು ಅಗೆದಾಗ ದೊರಕುವ ಗಡ್ಡೆಗಳ ಗಾತ್ರ ಮಾತ್ರ ಚಿಕ್ಕದು- ಒಂದು ಮುಷ್ಟಿಯಿಂದ ಎರಡು ಮುಷ್ಟಿಯಷ್ಟು ಗಾತ್ರದ ಗಡ್ಡೆಗಳು. ಇದನ್ನು ಹಬೆಯಲ್ಲಿ ಬೇಯಿಸಿ, ಕಡುಬು ಮಾಡುವ ಪದ್ಧತಿ ನಮ್ಮ ಹಳ್ಳಿಯಲ್ಲಿದೆ. ಜತೆಗೆ, ಆಸಾಡಿ (ಆಷಾಢ) ತಿಂಗಳಲ್ಲಿ ನಡೆಯುವ ಆಸಾಡಿ ಹಬ್ಬದ ಆಚರಣೆಗೆ ಕ್ಯಾನಿಗೆಂಡೆಯ ಕಡುಬು ಅತ್ಯಗತ್ಯ. ಪುರಾತನ ಕಾಲದಿಂದಲೂ ಮಾನವನ ಹೊಟ್ಟೆಯ ಹಸಿವು ತಣಿಸಿದ ಗಡ್ಡೆ ಇದಾಗಿರಬಹುದು, ಆದ್ದರಿಂದಲೇ ಹಬ್ಬದ ಆಚರಣೆಯ ಭಾಗವಾಗಿ ಇಂದಿಗೂ ನಮ್ಮೂರಿನ ಸಂಸ್ಕೃತಿಯಲ್ಲಿ ಸೇರಿಕೊಂಡಿದೆ. ಮನುಷ್ಯನು ಹಿಂದೆ ಗಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದುದರ ನೆನಪುಗಳಾಗಿ ಈ ರೀತಿಯ ಹಲವು ಗಡ್ಡೆಗಳು ಇಂದಿಗೂ ನಮ್ಮ ಆಹಾರದ ಮೆನುವಿನಲ್ಲಿ ಉಳಿದುಕೊಂಡು ಬಂದಿರಬೇಕು, ಅಲ್ಲವೇ!

ಸ್ಮರಣೆ

ವಚನಾನಂದ ಸ್ವಾಮೀಜಿ

ಅಪರೂಪದ ಶ್ರೀಮೂಕಪ್ಪ ಮಹಾಶಿವಯೋಗಿ

ಕನ್ನಡನಾಡಿನಲ್ಲಿ ಅನೇಕ ಯೋಗಿ, ಶಿವಯೋಗಿಗಳು ಅವತರಿಸಿದ್ದಾರೆ. ಅದರಲ್ಲಿ ಅಪರೂಪದ ಯೋಗಿಸ್ವರೂಪರು ತಿಪ್ಪಾಯಿಕೊಪ್ಪದ ಶ್ರೀ ಮೂಕಪ್ಪ ಮಹಾಶಿವಯೋಗಿಗಳು. ನಾವು ಬಾಲ್ಯದಿಂದಲೂ ಶ್ರೇಷ್ಠಯೋಗಿ ಪುಂಗವರ ಪುರಾಣ ಪುಣ್ಯಗ್ರಂಥ ಓದುತ್ತಾ,ಪ್ರವಚನಗಳನ್ನು ಆಲಿಸುತ್ತಾ ಬೆಳೆದವರು.

ಧಾರವಾಡದ ಶ್ರೀ ಮೃತ್ಯುಂಜಯ ಅಪ್ಪಗಳವರು ಹಾಗೂ ಶ್ರೀ ಮೂಕಪ್ಪ ಶಿವಯೋಗಿಗಳು ಮುಖಾಮುಖಿಯಾಗಿ ದರ್ಶನವಿತ್ತ ಘಟನೆ ನಮ್ಮೊಳಗೆ ಕಿಂಕರತ್ವದಿಂದ ಶಂಕರತ್ವದಡೆಗೆ ಸಾಗುವ ಮಾರ್ಗತೋರಿದೆ. ನಾವು ಧಾರವಾಡ ಮುರುಘಾಮಠದಲ್ಲಿ ವಿದ್ಯಾರ್ಜನೆ ವೇಳೆಯಲ್ಲಿ ನಾಡಿನ ಹಲವು ಮಠ, ಪೀಠಗಳ ಪೂಜ್ಯರು ಮುರುಘಾಮಠಕ್ಕೆ ಭೇಟಿ ನೀಡುತ್ತಿದ್ದರು. ಹೀಗೆ ಮಠಕ್ಕೆ ಭೇಟಿ ನೀಡುವ ಪ್ರತಿ ಪರಮ ಪೂಜ್ಯರ ಆರೈಕೆ, ಸೇವೆ ಸದಾ ನಮ್ಮದಾಗಿರುತ್ತಿತ್ತು. ಪೂಜ್ಯರ ಇಷ್ಟಲಿಂಗ ಮಹಾಪೂಜೆಗೆ ಪತ್ರೆ -ಪುಷ್ಪಗಳನ್ನು, ಕಾಯಕ್ಕೆ ಕಾವಿ ಮಡಿವಸ್ತ್ರವನ್ನು ಜೋಡಿಸುವ,ಮಜ್ಜನಕ್ಕೆ ಬಿಸಿ ನೀರು ತೋಡುವ, ನೈವೇದ್ಯಕ್ಕೆ ಬಸವನಾಮ ಜಪಿಸುತ್ತಾ ಕೋರಿಶೆಟ್ಟರು ತಯಾರಿಸಿದ ಬಿಸಿ ಪ್ರಸಾದವನ್ನು ಎಡೆಮಾಡುವುದೆಂದರೆ ಅಚ್ಚು ಮೆಚ್ಚು. ನಮ್ಮ ಹೃದಯಕ್ಕೆ ಹತ್ತಿರವಾದವರು ಶ್ರೀ ತಿಪ್ಪಾಯಿಕೊಪ್ಪ ಮೂಕಪ್ಪ ಶಿವ ಯೋಗಿ ಮಠದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ವಿರೂಪಾಕ್ಷ ಮಹಾ ಸ್ವಾಮಿಗಳವರು. ಪೂಜ್ಯರು ಪವಡಿಸುವಾಗ ಅವರ ಪಾದ ಒತ್ತುತ್ತಿದ್ದರೆ ಯೋಗನಿದ್ರೆಯಲ್ಲಿ ಲೀನನಾದ ಅವರ ಅಪಾದ ಮಸ್ತಕದಿಂದ ಓಂಕಾರದ ಝೇಂಕಾರ ಮಂತ್ರ ಮೊಳಗುತ್ತಿತ್ತು. ಅದನ್ನು ಆಲಿಸುವುದೆಂದರೆ ಪಂಚಪ್ರಾಣ.

ಅವರ ಪದತಲದ ಸೇವೆ ಸಲ್ಲಿಸುವಾಗಲೆಲ್ಲ ಹಲವು ಮಾತೇನು, ನೀನೊಲಿದು ಪಾದ ವನಿಟ್ಟ ನೆಲವೇ ಸುಕ್ಷೇತ್ರ,ಜಲವೇ ಪಾವನ ತೀರ್ಥ, ಸುಲಭ ಶ್ರೀಗುರುವೇ ಕೃಪೆಯಾಗು ಎಂಬ ಮೈಲಾರ ಬಸವಲಿಂಗ ಶರಣರ ವಚನ ಶ್ವಾಸ ಶಾಸ್ತ್ರವಾಗುತಿತ್ತು. ಒಂದು ಮಧ್ಯಾಹ್ನದ ಇಷ್ಟಲಿಂಗ ಪೂಜೆಯ ನಂತರ ದಲ್ಲಿ ಪೂಜ್ಯ ವಿರೂಪಾಕ್ಷ ಮಹಾಸ್ವಾಮಿಗಳು ನಮ್ಮನ್ನು ಉದ್ದೇಶಿಸಿ ಅಥಣಿ ಮಠದ ಮರಿದೇವರೇ, ನಿಮ್ಮ ಸೇವಾಗುಣ ನಮ್ಮೊಳಗಿನ ಶಿವಯೋಗಿಗೆ ಸಂತೃಪ್ತಿ ಯಾಗಿದೆ. ನೀವೊಬ್ಬ ಶ್ರೇಷ್ಠ ಸೇವಾಯೋಗಿ- ಶಿವ ಯೋಗಿ ಯಾಗುವಿರಿ ಎಂದು ಹರಿಸಿದರು. ಆ ಮಾತು ಮಂತ್ರಮುಗ್ಧ ಗೊಳಿಸಿತು. ಆ ಗಳಿಗೆ ಅಂತರಂಗದ ಅರಿವಿಗೆ ಮುನ್ನುಡಿ ಬರೆಯಿತು.ಅಲ್ಲಿಂದ ಶ್ವಾಸಶಾಶ್ವತ ಸಾಧನೆ ಶುರುವಾಯಿತು.

ನಾವು ಹಲವು ಬಾರಿ ತಿಪ್ಪಾಯಿಕೊಪ್ಪದ ಶ್ರೀ ಮೂಕಪ್ಪ ಶಿವಯೋಗಿಗಳವರ ಮಠಕ್ಕೆ ಭೇಟಿ ನೀಡಿ ಶ್ರೀಮೂಕಪ್ಪ ಶಿವಯೋಗಿಗಳವರ ಕರ್ತೃ ಗದ್ದುಗೆಯ ಹಾಗೂ ಪರಮಪೂಜ್ಯ ಶ್ರೀ ವಿರೂಪಾಕ್ಷ ಮಹಾಸ್ವಾಮಿಗಳವರ ದರ್ಶನಾ ಶೀರ್ವಾದ ಪಡೆದು ಭಾರತೀಯ ವಿವಿಧ ದರ್ಶನ ಶಾಸ್ತ್ರಗಳ ಚರ್ಚೆ ಸಂವಾದಗೈದ ಯೋಗ ಸುಯೋಗ ನಮ್ಮದಾಗಿದೆ. ಇಂದು ಪರಮಪೂಜ್ಯರು ಗುರುವಾರ ಗುರುವಿನ ಅಣತಿಯಂತೆ ಪ್ರಾತಃಕಾಲ ಲಿಂಗವ ಪೂಜಿಸುತ್ತಾ ಲಿಂಗವೇಯಾಗಿ ಲಿಂಗಯ್ಯನಲ್ಲಿ ಲೀನರಾಗಿದ್ದಾರೆ. ಪೂಜ್ಯರ ಅಂಗವೆಲ್ಲ ಲಿಂಗವಾಗಿದೆ, ಪೂಜಿಸಿದ ಲಿಂಗ ಆತ್ಮಲಿಂಗವಾಗಿದೆ. ಆದ್ದರಿಂದ ನಾವೆಲ್ಲ ಶಿಷ್ಯ ಸದ್ಭಕ್ತರು ಪೂಜ್ಯವಂದ್ಯರ ನಡೆದ ದಾರಿಯಲ್ಲಿ ನಾವು ನಡೆಯೋಣ! ಅದುವೇ ಅವರಿಗೆ ನಾವು ಸಲ್ಲಿಸುವ ಗೌರವ. ಇಲ್ಲಿಂದ ತಿಪ್ಪಾಯಿಕೊಪ್ಪ ಶ್ರೀ ಮೂಕಪ್ಪ ಶಿವಯೋಗಿಮಠದ ಪರಂಪರೆಯ ಕರ್ಣಧಾರತ್ವ ಹಿಡಿದು ಸದ್ಭಕ್ತರನ್ನು ಸತ್ಪಥದಲ್ಲಿ ಅರಿವಿನ ಕುರುಹಾಗಿ ಗುರುವಾಗಿ ಮುನ್ನಡೆಸುವವರು ಶ್ರೀಮನ್ನಿರಂಜನ ಮಹಾಂತ ಮಹಾಸ್ವಾಮಿಗಳವರು. ಪೂಜ್ಯ ಶ್ರೀ ಮಹಾಂತ ಮಹಾ ಸ್ವಾಮಿಗಳವರು ಪರಮಪೂಜ್ಯ ಲಿಂಗೈಕ್ಯ ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ವಿರೂಪಾಕ್ಷ ಮಹಾಸ್ವಾಮಿಗಳವರ ಕರಕಮಲ ಸಂಜಾತರು. ಗುರುಮುಟ್ಟಿ ಗುರುವಾದ ಅಪರೂಪದ ಸದ್ಗುರು. ನಾವು 2008 ನೇ ಇಸ್ವಿಯಲ್ಲಿ ಋಷಿಕೇಶದ ಶ್ರೀ ಸ್ವಾಮಿ ರಾಮ ಧ್ಯಾನ ಗುರುಕುಲದಲ್ಲಿ ವ್ಯಾಸಂಗ ಮಾಡುವಾಗ ನಮ್ಮೊಂದಿಗೆ ಶಿವಯೋಗಾನುಷ್ಠಾನಕ್ಕೆ ಒಳಪಟ್ಟು ಮಹಾಂತ ಮಂದಾರವಾದವರು. ಹಿಮಾಲಯದ ಗುಹೆಯೊಳಗೆ ಧ್ಯಾನ ಮೌನದಲ್ಲಿ ಲೀನರಾ ದವರು.ಅವರೊಳಗೆ ನಾವು ಶ್ರೀ ಮೂಕಪ್ಪ ಶಿವಯೋಗಿಗಳವರ ದೈವಿಗುಣ ಸಾಕ್ಷೀಕರಿಸಿ ದ್ದೇವೆ.

ಅವರ ಪ್ರತಿ ನೋಟವೆಲ್ಲ ನಮಗೆ ಬಸವಣ್ಣನವರ ಈ ಕೆಳಗಿನ ವಚನ ನೆನಪಿಸುತ್ತದೆ.

ನಿಮ್ಮ ನೋಟ ಅನಂತ ಸುಖ, ನಿಮ್ಮ ಕೂಟ ಪರಮಸುಖ ! ಅವುಟುಕೋಟಿ ರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು ! ಕೂಡಲಸಂಗಮದೇವಾ ನಿಮ್ಮ ನೋಡಿ ನೋಡಿ ಮನದಲ್ಲಿ ರತಿಹುಟ್ಟಿ ನಿರ್ಮಿದುವೆನ್ನ ಕಂಗಳು.

ಪರಮಪೂಜ್ಯ ಲಿಂಗೈಕ್ಯ ಶ್ರೀ ವಿರೂಪಾಕ್ಷ ಮಹಾಸ್ವಾಮಿಗಳವರ ಆತ್ಮಚೈತನ್ಯ ನಮ್ಮೆಲ್ಲರಿಗೂ ಮಾರ್ಗದರ್ಶನ ನೀಡಲೆಂದು ಪ್ರಾರ್ಥಿಸುತ್ತೇವೆ.

(ಲೇಖಕರು: ಜಗದ್ಗುರುಗಳು, ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಹರಕ್ಷೇತ್ರ ಹರಿಹರ)

ಕಂಪನಿಗಳಲ್ಲಿ ಅತಿಯಾದ ಕೆಲಸದ ಒತ್ತಡವೇಕೆ? ಪರಿಹಾರವೇನು?

ಕಾರ್ಪೊರೇಟ್ ಕೆಲಸದ ಒತ್ತಡದ ವಿಚಾರದಲ್ಲಿ ಅನೇಕ ಸಂಗತಿಗಳು ಆಗಾಗ ಪ್ರಕಟವಾಗುತ್ತಲೇ ಇವೆ. ಆ್ಯನ್ನಾ ಪ್ರಕರಣವು ಮೊದಲನೆಯದೇನೂ ಅಲ್ಲ. ಆರು ತಿಂಗಳ ಈಚೆಗಷ್ಟೇ, ಕಾರ್ಯದೊತ್ತಡದಿಂದ ಮೃತನಾದ ಎನ್ನಲಾದ ಹೈ ಪ್ರೊಫೈಲ್ ಗ್ಲೋಬಲ್ ಕನ್ಸಲ್ಟಿಂಗ್ ಕಂಪನಿಯೊಂದರ 25ರ ಹರೆಯದ ಉದ್ಯೋಗಿಯೊಬ್ಬನ ನಿದರ್ಶನವನ್ನೂ ಈ ಸಂದರ್ಭದಲ್ಲಿ ಕೆಲವರು ಪ್ರಸ್ತಾಪಿಸಿದ್ದಾರೆ. ಇನ್ನೂ ಅನೇಕ ಸೂಕ್ಷ್ಮ ಅನುಭವಗಳು ಜಾಲತಾಣದಲ್ಲಿ ಹರಿದಾಡುತ್ತಿವೆ.

ವಿಶ್ಲೇಷಣೆ
ಎಸ್.ಜಿ.ಹೆಗಡೆ
vveditoped@gmail.com

ಆ್ಯನ್ನಾ ಸೆಬಾಸ್ಟಿಯನ್ ಪೆರಿಯಾಲ್ ಎಂಬ 26 ವರ್ಷದ ಯುವತಿ ಇತ್ತೀಚೆಗೆ ನಿಧನಳಾದ ಸಂಗತಿ ವ್ಯಾಪಕವಾಗಿ ಸುದ್ದಿಯಾಗಿದೆ. ಈಕೆ ಪುಣೆಯ ಪ್ರತಿಷ್ಠಿತ ಕಂಪನಿಯೊಂದರಲ್ಲಿ ತನ್ನ ಮೊದಲ ಉದ್ಯೋಗ ಪಡೆದು 4 ತಿಂಗಳಾಗಿತ್ತಷ್ಟೇ. ಈಕೆ ಚಾರ್ಟರ್ಡ್ ಅಕೌಂಟೆಂಟ್ (ಸಿಎ) ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಇತ್ತೀಚೆಗಷ್ಟೇ ವೃತ್ತಿಜೀವನಕ್ಕೆ ಪದಾರ್ಪಣ ಮಾಡಿದವಳು, ಕಳೆದ ಜುಲೈನಲ್ಲಿ ತನ್ನ ಸಿಎ ಘಟಿಕೋತ್ಸವದಲ್ಲಿ ಭಾಗಿಯಾದವಳು. ಕಠಿಣವೂ ಸ್ಪರ್ಧಾತ್ಮಕವೂ ಆದ ಸಿಎ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಪಡೆದು ಉತ್ತೀರ್ಣಳಾಗಿದ್ದ ಆ್ಯನ್ನಾ ಪ್ರತಿಭಾವಂತೆಯೆನ್ನುವುದು ಸ್ಪಷ್ಟ. ಶಾಲಾ ದಿನಗಳಿಂದಲೂ ಹೆಚ್ಚಿನ ಅಂಕ ಪಡೆದು ಮೇಲಿನ ಕ್ರಮಾಂಕದಲ್ಲಿದ್ದ ಈಕೆ, ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಾಧಕಿಯಾಗಿದ್ದಳು. ಇಂಥ ಅದ್ಭುತ ಹಿನ್ನೆಲೆಯಿಂದ ಬಂದು ಕೆಲಸಕ್ಕೆ ಸೇರಿದ್ದ ಆ್ಯನ್ನಾಳ ಬದುಕು ಇಷ್ಟು ಬೇಗನೆ ಮೊಟಕಾಗಿದ್ದು ವಿಷಾದನೀಯ.

ಆ್ಯನ್ನಾ ಸಾವಿನ ವಿಷಯ ವ್ಯಾಪಕ ಸಾಮಾಜಿಕ ಗಮನ ಸೆಳೆದಿದ್ದು ಆಕೆ ಕೆಲಸ ಮಾಡುತ್ತಿದ್ದ ಸಂಸ್ಥೆಯ ಮುಖ್ಯಸ್ಥರಿಗೆ ಆಕೆಯ ತಾಯಿ ಅನಿತಾ ಅಗಸ್ಟಿನ್ ಬರೆದ ಪತ್ರದಿಂದ ಅನ್ನಬಹುದು. ಆ ಪತ್ರದ ಸಾರಾಂಶ ಹೀಗಿದೆ:

''ಓದು ಮುಗಿಸಿ ಪ್ರತಿಷ್ಠಿತ ಕಂಪನಿಗೆ ಕೆಲಸಕ್ಕೆ ಸೇರುವಾಗ ಮಗಳು ಉತ್ಸಾಹಿತಳಾಗಿದ್ದಳು, ಕನಸು ಹೊಂದಿದ್ದಳು. ಆದರೆ ಸೇರಿದ 4 ತಿಂಗಳಲ್ಲಿಯೇ ಇಲ್ಲವಾದಳು. ಉದ್ಯೋಗಕ್ಕೆ ಸೇರಿದ ಹೊಸತರಲ್ಲಿ 'ಕಠಿಣ ಪರಿಶ್ರಮವೇ ಯಶಸ್ಸಿನ ಕೀಲಿಕೈ' ಎಂದು ನಂಬುತ್ತಾ ಹೆಚ್ಚು ಹೆಚ್ಚು ಕೆಲಸದಲ್ಲಿ ತೊಡಗಿಕೊಂಡವಳು, ತಡರಾತ್ರಿಯ ತನಕ, ವಾರಾಂತ್ಯದಲ್ಲೂ ಎಡೆಬಿಡದೇ ಕೆಲಸದಲ್ಲಿ ನಿರತಳಾದಳು. ಅವಳ ಘಟಿಕೋತ್ಸವಕ್ಕೆಂದು ನಾವು ಪುಣೆ ತಲುಪಿದಾಗಲೂ ಬಿಡುವಿಲ್ಲದೆ ಕೆಲಸದಲ್ಲಿ ತೊಡಗಿಸಿಕೊಂಡಿದ್ದಳು. ಅಸಹನೀಯ ಕಾರ್ಯದೊತ್ತಡವು ಆರೋಗ್ಯದ ಮೇಲೆ ಬೀರಿದ ಋಣಾತ್ಮಕ ಪರಿಣಾಮದಿಂದಾಗಿ ಅವಳು ಅಳಿಯುವಂತಾಯಿತು. ಅವಳನ್ನು ಬದುಕಿಸಿಕೊಳ್ಳುವ ಕುರಿತು ಅರಿವಾಗುವ ಮೊದಲೇ ಇನ್ನಿಲ್ಲವಾದಳು''.

ತಮ್ಮ ಮಗಳ ಸಾವು ಒಂದು ಎಚ್ಚರಿಕೆಯ ಗಂಟೆಯಾಗಿದ್ದು ಎಲ್ಲ ನೌಕರರ ಹಿತದೃಷ್ಟಿಯಿಂದ ಸಂಸ್ಥೆಯು ಕಾರ್ಯಸಂಸ್ಕೃತಿಯನ್ನು ಸರಿಪಡಿಸಿಕೊಳ್ಳಬೇಕೆಂದು ಕೂಡ ತಾಯಿ ಅನಿತಾ ಅಗಸ್ಟಿನ್ ಪತ್ರದಲ್ಲಿ ಮನವಿ ಮಾಡಿದ್ದಾರೆ. ಆ ಪತ್ರದಲ್ಲಿ ಹೇಳಿದ ವಿಚಾರವು ವ್ಯಾಪಕ ಪ್ರಚಾರ ಪಡೆದಿದ್ದು ಸಾರ್ವಜನಿಕ ಚರ್ಚೆಗೆ ಆಸ್ಪದ ನೀಡಿದೆ.

ಕಾರ್ಪೊರೇಟ್ ಕೆಲಸದ ಒತ್ತಡದ ವಿಚಾರದಲ್ಲಿ ಅನೇಕ ಸಂಗತಿಗಳು ಆಗಾಗ ಪ್ರಕಟವಾಗುತ್ತಲೇ ಇವೆ. ಆ್ಯನ್ನಾ ಪ್ರಕರಣವು ಮೊದಲನೆಯದೇನೂ ಅಲ್ಲ. ಆರು ತಿಂಗಳ ಈಚೆಗಷ್ಟೇ, ಕಾರ್ಯದೊತ್ತಡದಿಂದ ಮೃತನಾದ ಎನ್ನಲಾದ ಹೈ ಪ್ರೊಫೈಲ್ ಗ್ಲೋಬಲ್ ಕನ್ಸಲ್ಟಿಂಗ್ ಕಂಪನಿಯೊಂದರ 25ರ ಹರೆಯದ ಉದ್ಯೋಗಿಯೊಬ್ಬನ ನಿದರ್ಶನವನ್ನೂ ಈ ಸಂದರ್ಭದಲ್ಲಿ ಕೆಲವರು ಪ್ರಸ್ತಾಪಿಸಿದ್ದಾರೆ. ಇನ್ನೂ ಅನೇಕ ಸೂಕ್ಷ್ಮ ಅನುಭವಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಹಿಂದಿನ ಸಂಸ್ಥೆಯಲ್ಲಿನ ತನ್ನ ಉದ್ಯೋಗವನ್ನು ಬಿಡದಿದ್ದಿದ್ದರೆ ತನ್ನ ಗತಿಯೂ ಹೀಗೆಯೇ ಆಗುತ್ತಿತ್ತೇನೋ ಎಂಬುದಾಗಿ ಸ್ಟಾರ್ಟ್‌ಅಪ್ ಕಂಪನಿಯೊಂದರ ಸಮಾಲೋಚಕಿಯಾಗಿ ಕೆಲಸ ಮಾಡುತ್ತಿರುವ ಚಾರ್ಟರ್ಡ್ ಅಕೌಂಟೆಂಟ್ ಒಬ್ಬಳು ಹೇಳಿದ್ದಾಗಿ ವರದಿಯಾಗಿದೆ. ಮಾರ್ಕೆಟಿಂಗ್ ಕಂಪನಿಯೊಂದರ ಉದ್ಯೋಗಿಯೊಬ್ಬ ತನ್ನ ಪತ್ನಿ ಡೆಂಘಿ ಜ್ವರದಿಂದ ಬಳಲುತ್ತಿದ್ದಾಗ ಅವಳ ನಿಗಾ ನೋಡಲೆಂದು ತಾನು ರಜೆ ತೆಗೆದುಕೊಂಡಿದ್ದಾಗಲೂ 'ಕೆಲಸವನ್ನು ಕೂಡಲೇ ಮುಗಿಸಬೇಕು' ಎಂದು ಮ್ಯಾನೇಜರ್ ತನಗೆ ಒತ್ತಡ ಹೇರಿರುವ ಬಗ್ಗೆ ಹೇಳಿಕೊಂಡಿದ್ದಾನೆ. ಮತ್ತೊಬ್ಬನು, ತನ್ನ ಹೆಂಡತಿ ಕೂಡ ಆ್ಯನ್ನಾ ಇದ್ದ ಸಂಸ್ಥೆಯಲ್ಲೇ ಕೆಲಸ ಮಾಡಿದ್ದು, ಕಾರ್ಯದೊತ್ತಡವನ್ನು ತಾಳಲಾಗದೆ ಅದನ್ನು ತ್ಯಜಿಸಿದ ಕುರಿತು 'ಲಿಂಕ್ಡ್-ಇನ್' ಮಾಧ್ಯಮದಲ್ಲಿ ಹೇಳಿಕೊಂಡಿದ್ದು, '18 HOURS WORK DAYS ARE OFTEN GLORIFIED AND NORMALISED AT MANY BIG COMPANIES IN INDIA' ಎನ್ನುವ ಆತನ ಪೋಸ್ಟ್‌ಗೆ 30,000ಕ್ಕೂ ಹೆಚ್ಚು ಲೈಕಿಂಗ್ಸ್ ಬಂದಿವೆ. ಕಾರ್ಯಕ್ಷೇತ್ರದಲ್ಲಿನ ಕೆಲಸದ ಒತ್ತಡದ ಕುರಿತು ಹಲವಾರು ಸಂಗತಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಆಗಾಗ ಬರುತ್ತಲೇ ಇವೆ. ಅವೆಲ್ಲವನ್ನೂ ಸರಿಯಾಗಿ ತಿಳಿದುಕೊಂಡು ಸೂಕ್ತವಾಗಿ ಪ್ರತಿಕ್ರಿಯಿಸುವುದು ಅಗತ್ಯ.

ಆ್ಯನ್ನಾ ಘಟನೆ, ಜಾಲತಾಣಗಳಲ್ಲಿನ ಟಿಪ್ಪಣಿಗಳು ಮತ್ತು ಕಂಪನಿಗಳ ಸ್ಥಿತಿಯನ್ನು ಸಮಗ್ರವಾಗಿ ವೀಕ್ಷಿಸಬೇಕಾದ್ದು ಅತ್ಯಗತ್ಯ. ಖಾಸಗಿ ಸಂಸ್ಥೆಗಳ ವಿಚಾರ ಬಂದಾಗ, ಅವುಗಳನ್ನು ಸ್ಥೂಲವಾಗಿ 3 ಪ್ರಕಾರದಲ್ಲಿ ವಿಂಗಡಿಸಬಹುದು- ಆಗಷ್ಟೇ ಶುರುವಾಗಿರುವ ಸಂಸ್ಥೆಗಳು (ಸ್ಟಾರ್ಟ್ ಅಪ್), ಕೆಲ ವರ್ಷಗಳಿಂದ ವ್ಯವಹಾರದಲ್ಲಿ ತೊಡಗಿದ್ದು ಮಧ್ಯಮ ಗಾತ್ರದಲ್ಲಿ ಬೆಳೆದಿರುವ ಸಂಸ್ಥೆಗಳು ಮತ್ತು ದೊಡ್ಡದಾಗಿ ಬೆಳೆದು ನಿಂತ ಸಂಸ್ಥೆಗಳು. ಎಲ್ಲ ಬಗೆಯ ಸಂಸ್ಥೆಗಳೂ ಬಹುತೇಕವಾಗಿ ಸ್ಟಾರ್ಟ್‌ಅಪ್ ರೂಪಿನಿಂದ ಮುನ್ನಡೆದಂಥವೇ. ಇಂದು ಬೃಹದಾಕಾರವಾಗಿ ಬೆಳೆದು ನಿಂತಿರುವ ರಿಲಯನ್ಸ್, ಟಾಟಾ, ಬಿರ್ಲಾ, ಇನ್ಫೋಸಿಸ್ ಮುಂತಾದ ಸಂಸ್ಥೆಗಳೂ ಹಲವು ವರ್ಷಗಳ ಹಿಂದೆ ಶೈಶವಾವಸ್ಥೆಯಲ್ಲಿ ಇದ್ದಂಥವೇ ಎಂಬುದನ್ನು ಗಮನಿಸಬೇಕು. ಸಂಸ್ಥೆಗಳನ್ನು ಆರಂಭಿಸುವಾಗ ಸ್ಥಾಪಕರು ತಮ್ಮದೇ ಆದ ಕನಸುಗಳನ್ನು ಕಂಡಿರುತ್ತಾರೆ. ಜಮ್ಶೆಡ್‌ಜಿ ಟಾಟಾ, ಧೀರೂಭಾಯಿ ಅಂಬಾನಿ ಅಥವಾ ಎನ್.ಆರ್.ನಾರಾಯಣಮೂರ್ತಿ ಹೀಗೆ ಎಲ್ಲ ಸಂಸ್ಥಾಪಕರೂ ಸಂಸ್ಥೆಯ ಸ್ಥಾಪನೆ, ಬೆಳವಣಿಗೆ ಮತ್ತು ಸ್ಥಿರತೆಯ ಕುರಿತು ಪಟ್ಟ/ಪಡುವ ಶ್ರಮ ಅಂತಿಂಥದ್ದಲ್ಲ. ಇವರೆಲ್ಲ ಎಷ್ಟು ಒತ್ತಡಕ್ಕೊಳಗಾಗಿ, ದಿನಕ್ಕೆ ಎಷ್ಟು ಗಂಟೆ ಕೆಲಸ ಮಾಡಿರಬಹುದೆಂಬ ಲೆಕ್ಕವಿಲ್ಲ. ಹೀಗೆ, ಅತಿಯಾದ ಕೆಲಸವು ಕಂಪನಿಗಳ ಹಿನ್ನೆಲೆಯಾಗಿರುತ್ತದೆ ಎಂದರೆ ತಪ್ಪಾಗಲಾರದು.

ಹೀಗೆ ಹೇಳಲು ಕಾರಣವೆಂದರೆ, ಸಂಸ್ಥೆಗಳೆಲ್ಲವೂ ಯಾರದೋ ಅತಿಯಾದ ಪರಿಶ್ರಮದಿಂದಲೇ ಹುಟ್ಟಿ ಬೆಳೆಯುತ್ತವೆ. ಹೊಸದಾಗಿ ಹುಟ್ಟಿಕೊಂಡ ಸಂಸ್ಥೆಗಳಲ್ಲಿ ಸಾಕಷ್ಟು ಉತ್ಪನ್ನವಿಲ್ಲದೇ ಕೆಲವೇ ಕೆಲಸಗಾರರ ಮೂಲಕ ಉಳಿವಿನ ಹೋರಾಟ ನಡೆಸುವ ಪ್ರಸಂಗವಿರುತ್ತದೆ. ಮಧ್ಯಮ ಗಾತ್ರದ ಹಲವು ಸಂಸ್ಥೆಗಳು flourish or perish ಎನ್ನುವ ಸ್ಥಿತಿಯಲ್ಲೇ ನಡೆದಿರುತ್ತವೆ. ಬೆಳೆದು ನಿಂತ ದೊಡ್ಡ ಸಂಸ್ಥೆಗಳಿಗೂ ನಿಂತ ನೀರಾಗುವ ಅಪಾಯವು ಸದಾ ಕಾಡಿರುತ್ತದೆ. ವ್ಯವಹಾರಕ್ಕೆಂದು ರೂಪುಗೊಂಡ ಎಲ್ಲ ಸಂಸ್ಥೆಗಳು 'ಬೆಳೆಯುವ ಓಟವನ್ನು' ಸದಾ ಓಡಲೇಬೇಕಾದ ನಿರ್ಬಂಧದಲ್ಲಿ ಸಿಲುಕಿರುತ್ತವೆ. ಹಲವಾರು ಸಂಸ್ಥೆಗಳು ಸಾರ್ವಜನಿಕರಿಗೆ ಷೇರು ಹಂಚಿ ಹಣ ಪಡೆದಿರುತ್ತವೆಯಾದ್ದರಿಂದ, ತಮ್ಮ ಷೇರಿನ ಬೆಲೆಯನ್ನು ಸ್ಥಿರವಾಗಿ ಕಾಪಿಟ್ಟುಕೊಳ್ಳಲು, ಹೆಚ್ಚಿಸಿಕೊಳ್ಳಲೆಂದು ಹೆಚ್ಚೆಚ್ಚು ಆದಾಯವನ್ನು ಪಡೆಯುವ ನಿಟ್ಟಿನಲ್ಲಿ ತೊಡಗಿರುತ್ತವೆ. ಸದಾ ಉಳಿಯುವ, ಸ್ಥಿರವಾಗುವ, ಬೆಳೆಯುವ ಚಕ್ರದಲ್ಲಿ ಸಿಲುಕಿರುವ ಸಂಸ್ಥೆಗಳಿಗೆ ತಮ್ಮದೇ ಆದ ದಾರಿ ಮತ್ತು ಗುರಿಯನ್ನು ನಿಶ್ಚಯಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಸಂಸ್ಥೆಗಳಿಗೆ ತಂತಮ್ಮ ಧಾರಣಶಕ್ತಿಗೆ ಅನುಗುಣವಾದ ಮಾನವ ಸಂಪನ್ಮೂಲ ನಿರ್ವಹಣಾ ಪರಿಕ್ರಮಗಳಿರುತ್ತವೆ. ಬೆಳೆದು ನಿಂತ ದೊಡ್ಡ ಸಂಸ್ಥೆಗಳಲ್ಲಿ ಸಮರ್ಪಕ ರೀತಿಯಲ್ಲಿ ಯೋಗ್ಯ ಉದ್ಯೋಗಿಗಳ ಆಯ್ಕೆ ಮತ್ತು ಕಾರ್ಯಕ್ಷಮತೆಯ ವಿಮರ್ಶೆ, ಬೆಂಬಲ ವ್ಯವಸ್ಥೆ ಮತ್ತು ಉದ್ಯೋಗಿಗಳ ಕುಂದುಕೊರತೆ ಇತ್ಯಾದಿಗಳನ್ನು ಸಮರ್ಥವಾಗಿ ನಿರ್ವಹಿಸಲೆಂದೇ ಮಾನವ ಸಂಪನ್ಮೂಲ ತಜ್ಞರನ್ನೊಳಗೊಂಡ ಪ್ರತ್ಯೇಕ ವಿಭಾಗವೇ ಇರುತ್ತದೆ. ಅಂಥ ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಎಲ್ಲ ಸಂಸ್ಥೆಗಳಿಗೂ ಅಸಾಧ್ಯ; ಏಕೆಂದರೆ, ಅಂಥ ವಿಭಾಗ ಸ್ಥಾಪನೆಗೆ ಬೇಕಿರುವ ಖರ್ಚನ್ನು ಭರಿಸುವ ಶಕ್ತಿಯಿರುವುದಿಲ್ಲ. ಹಲವು ಸಂಸ್ಥೆಗಳು ಸಿಬ್ಬಂದಿ ಆಯ್ಕೆ ಮತ್ತು ನಿರ್ವಹಣೆಗಷ್ಟೇ ಸೀಮಿತವಾಗಿರುತ್ತವೆ. ಹೊಸದಾಗಿ ಸ್ಥಾಪಿತವಾಗಿರುವ ಅಥವಾ ಇನ್ನೂ ಸಣ್ಣ ಸ್ವರೂಪದಲ್ಲಿರುವ ಸಂಸ್ಥೆಗಳಲ್ಲಿ ಬಹುತೇಕವಾಗಿ ಸಂಸ್ಥೆಯ ಮಾಲೀಕ ಅಥವಾ ಆತನ ಪ್ರತಿನಿಧಿಯು ಉದ್ಯೋಗಿಗಳನ್ನು ನಿಭಾಯಿಸುವುದು ವಾಡಿಕೆ. ಹೀಗೆ ಸಂಸ್ಥೆಗಳು ತಮ್ಮ ಶಕ್ತಿಗೆ ತಕ್ಕಂಥ ಸಿಬ್ಬಂದಿ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿರುತ್ತವೆ. ಎಲ್ಲ ಸಂಸ್ಥೆಗಳಿಗೂ ಸಿಬ್ಬಂದಿಯನ್ನು ನೆಲದ ಕಾನೂನಿನ ಚೌಕಟ್ಟಿನಲ್ಲಿ ನಿಭಾಯಿಸುವ ಬಾಧ್ಯತೆ ಇದ್ದೇ ಇದೆ.

ಎಲ್ಲ ಸಂಸ್ಥೆಗಳಿಗೂ ಉದ್ಯೋಗಿಗಳು ಜೀವಾಳ, ಸಂಸ್ಥೆಗಳ ಯಶಸ್ಸಿನಲ್ಲಿ ಅವರ ಕೊಡುಗೆ ಮಹತ್ವದ್ದು. ಹಾಗಾದರೆ ಉದ್ಯೋಗಿಗಳ ಕಲ್ಯಾಣದ ವಿಷಯದಲ್ಲಿ ಚ್ಯುತಿಯಾಗುವುದೇಕೆ, ಅವರನ್ನು ಅತಿ ಕೆಲಸದ ಒತ್ತಡಕ್ಕೆ ನೂಕುವುದೇಕೆ? ಎಂಬ ಪ್ರಶ್ನೆ ಪ್ರಸ್ತುತವಾದದ್ದು. ಇದೊಂದು ಸಂಕೀರ್ಣ ವಿಚಾರ. ಸಂಸ್ಥೆಗಳ ಸ್ಥಿತಿ ಮತ್ತು ಮಾನವ ಸಂಪನ್ಮೂಲವನ್ನು ನಿಭಾಯಿಸುವ ಕುರಿತು ಈ ಮೊದಲು ವಿವರಿಸಿದ್ದು ಅದೇ ಕಾರಣದಿಂದ. ಎಲ್ಲ ಸಂಸ್ಥೆಗಳೂ ತಮ್ಮ ಕಾರ್ಯಕ್ಷೇತ್ರಕ್ಕೆ ತಕ್ಕಂತೆ ಸೀಮಿತ ಸಿಬ್ಬಂದಿಯನ್ನು ಹೊಂದಲು ಇಚ್ಛಿಸುತ್ತವೆ. ವ್ಯಾಪಾರಿ ಸಂಸ್ಥೆಗಳು ಸದಾ ಹೊಸ ವ್ಯವಹಾರದ ಅನ್ವೇಷಣೆಯಲ್ಲಿರುತ್ತವೆ. ಕೆಲವೊಮ್ಮೆ, ತನ್ನಲ್ಲಿನ ಮಾನವ ಶಕ್ತಿಗಿಂತ ಹೆಚ್ಚು ವ್ಯವಹಾರ ಸಿಕ್ಕಾಗ ಮತ್ತು ಕಾಲಮಿತಿಯೊಳಗೇ ಅದನ್ನು ನಿರ್ವಹಿಸುವ ಅನಿವಾರ್ಯತೆಯಿದ್ದಾಗ, ಉದ್ಯೋಗಿಗಳಿಗೆ ಅತಿಯಾದ ಕೆಲಸದೊತ್ತಡ ಬೀಳುವುದಿದೆ. ಸಂಸ್ಥೆಗಳು ತಮಗೆ ಬರಬಹುದಾದ ವ್ಯವಹಾರ ಮತ್ತು ಅದಕ್ಕೆ ಅಗತ್ಯವಾಗುವ ಸಿಬ್ಬಂದಿಯ ಅಂದಾಜಿನ ಮೇರೆಗೆ ಮಾನವ ಸಂಪನ್ಮೂಲವನ್ನು ಕ್ರೋಡೀಕರಿಸಿಕೊಂಡರೂ, ಆಗಾಗ ಅನುಭವಿಸುವ ಏರುಪೇರಿನ ಸ್ಥಿತಿಯನ್ನು ನಿರ್ವಹಿಸುವ ಅಂದಾಜಿನ ಕೊಂಡಿ ಕಳಚುವುದಿದೆ. ಅಂದರೆ, ಉದ್ಯೋಗಿಗಳ ಸಂಖ್ಯೆ ಸಾಕಾಗಾದ ಮತ್ತು ಹೆಚ್ಚಾದ ಎರಡೂ ಬಗೆಯ ಸನ್ನಿವೇಶ ಎದುರಾಗುವುದಿದೆ. ಅಂಥ ಸ್ಥಿತಿಯಲ್ಲಿ ಅತಿಕೆಲಸ ಮತ್ತು ಉದ್ಯೋಗಿಗಳ 'ಹಂಗಾಮಿ ವಜಾ' ಎರಡೂ ಕ್ರಮಗಳನ್ನು ಬಳಸಬೇಕಾಗುತ್ತದೆ. ಇದೊಂದು ಕ್ಲಿಷ್ಟ ಪ್ರಕ್ರಿಯೆ.

ಇತ್ತೀಚೆಗೆ ಯಾವ ವ್ಯಾಪಾರಿ ಸಂಸ್ಥೆಯೂ ಇಂಥ ಕ್ಲಿಷ್ಟ ಪ್ರಕ್ರಿಯೆಗೆ ಹೊರತಾಗಿಲ್ಲವೆಂದೇ ಹೇಳಬೇಕು. ಕೆಲ ವರ್ಷಗಳ ಹಿಂದೆ ಹಲವು ಸರಕಾರಿ ಸಂಸ್ಥೆಗಳು, ಬ್ಯಾಂಕುಗಳು, ಶಿಕ್ಷಣ ಸಂಸ್ಥೆಗಳು ಮುಂತಾದವು ಕಾಲಮಿತಿಯೊಳಗಿನ ಮತ್ತು ಪೂರ್ವ ನಿರ್ಧಾರಿತ ಕೆಲಸವನ್ನಷ್ಟೇ ಮಾಡುವ ಕಾರ್ಯವಿಧಾನ ಹೊಂದಿದ್ದವು. ಈಚೀಚೆಗೆ ಅವೂ ಸ್ಪರ್ಧಾತ್ಮಕ ಕಾರ್ಯವಿಧಾನದಲ್ಲಿ ತೊಡಗಿಸಿಕೊಂಡಿದ್ದು, ಅಲ್ಲಿಯೂ ಅತಿಯಾದ ಕಾರ್ಯದೊತ್ತಡದ ದೂರು ಕೇಳಿಬರುತ್ತಿದೆ. ಬದಲಾದ ಜಗತ್ತಿಗನುಗುಣವಾಗಿ ಬಹುತೇಕ ಎಲ್ಲ ಕ್ಷೇತ್ರಗಳೂ ಸ್ಪರ್ಧಾತ್ಮಕ ಕಾರ್ಯವಿಧಾನವನ್ನು ಅನುಸರಿಸಬೇಕಾಗಿ ಬಂದಿದೆ. ಕೆಲಸಗಾರರೂ ಇಂಥ ಸ್ಥಿತಿಗೆ ಒಗ್ಗಿಕೊಳ್ಳಬೇಕಾದ ಮನಸ್ಥಿತಿಯನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ. ಸಂಸ್ಥೆಯು ತನ್ನ ಗುರಿಸಾಧನೆ ಮತ್ತು ಉದ್ಯೋಗಿಗಳ ಒಳಿತನ್ನು ಸಮಂಜಸವಾಗಿ ಸರಿದೂಗಿಸಬಲ್ಲ ವಿಧಾನವನ್ನು ನೆಚ್ಚಬೇಕಾಗುತ್ತದೆ, ಅನವಶ್ಯಕವಾಗಿ ಕಾರ್ಯದೊತ್ತಡ ನೀಡುವ ಮನಸ್ಥಿತಿಯ ಕಾರ್ಯನಿರ್ವಾಹಕರನ್ನು ಹದ್ದುಬಸ್ತಿನಲ್ಲಿಡಬೇಕಾಗುತ್ತದೆ. ಕೆಲಸ ನೀಡುವ ಹಂತದಲ್ಲಿ ತೆಗೆದುಕೊಳ್ಳಬೇಕಾದ ಕಾಳಜಿಯ ಕುರಿತು ಯೋಗ್ಯ ಮಾರ್ಗದರ್ಶನ ಅವಶ್ಯಕ. ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಇನ್ನಾವುದೇ ರೀತಿಯಲ್ಲಿ ಹೊಮ್ಮಿದ ಟೀಕೆ-ಟಿಪ್ಪಣಿಗಳನ್ನು ಯೋಗ್ಯನಿಷ್ಕರ್ಷೆಗೆ ಗುರಿಯಾಗಿಸುವುದೂ ಮಾನವ ಸಂಪನ್ಮೂಲ ನಿರ್ವಹಣೆಯ ಮಹತ್ವದ ಭಾಗ.

ಮೇಲೆ ಉಲ್ಲೇಖಿಸಲಾಗಿರುವ ಆ್ಯನ್ನಾಳ ತಾಯಿಯ ಪತ್ರಕ್ಕೆ ಕಂಪನಿಯ ಮುಖ್ಯಸ್ಥರು ಉತ್ತರಿಸಿ, ಅತೀವ ಸಂತಾಪ ಸೂಚಿಸಿ, ಸಾಧ್ಯವಾದಷ್ಟು ನೆರವಾಗುವುದಾಗಿ ತಿಳಿಸಿ, ತಮ್ಮ ಕಾರ್ಯಸಂಸ್ಕೃತಿಯನ್ನು ಮತ್ತಷ್ಟು ಸುಧಾರಿಸಿಕೊಳ್ಳುವುದಾಗಿ ಹೇಳಿದ್ದಾರೆ ಎನ್ನಲಾಗಿದೆ. ಉದ್ಯೋಗಿಗಳ ಕಲ್ಯಾಣಕ್ರಮವು ಸಂಸ್ಥೆಗಳ ಕಾರ್ಯನಿರ್ವಹಣೆಯ ಅತಿಮುಖ್ಯ ಭಾಗ. ಅತಿಯಾದ ಕಾರ್ಯದೊತ್ತಡದಿಂದ ಉದ್ಯೋಗಿಗಳು ಅನಾರೋಗ್ಯಕ್ಕೆ, ದೈಹಿಕ-ಮಾನಸಿಕ ಒತ್ತಡಗಳಿಗೆ ಬಲಿಯಾಗದಂತೆ ಅದು ಕಾಳಜಿ ವಹಿಸಬೇಕಾಗುತ್ತದೆ. ಸಂಸ್ಥೆಗಳು ತಮ್ಮ ವ್ಯವಹಾರ ಸಂಬಂಧಿತ ಗುರಿಯನ್ನು ಕಾಲಮಿತಿಯೊಳಗೆ ಸಾಧಿಸುವುದರ ಜತೆಜತೆಗೆ, ತಮ್ಮ ಕೆಲಸಗಾರರ ಹುರುಪು ಮತ್ತು ಸಾಮರ್ಥ್ಯವನ್ನೂ ಕಾಪಾಡಿಕೊಳ್ಳುವುದರಲ್ಲೇ ಅವುಗಳ ಯಶಸ್ಸಿದೆ. ಉದ್ಯೋಗಿಗಳೂ ತಮ್ಮ ಮೇಲಿನ ಕಾರ್ಯದೊತ್ತಡವು ಅಸಹನೀಯವಾದರೆ ಹೇಳಿಕೊಳ್ಳಲು ಹಿಂಜರಿಯಬಾರದು ಮತ್ತು ಸಂಸ್ಥೆಗಳು ಅಂಥ ಸ್ಥಿತಿಯನ್ನು ತೆರೆದ ಮನಸ್ಸಿನಿಂದ ಪರಿಶೀಲಿಸಿ ತಕ್ಕ ಬೆಂಬಲ ನೀಡಬೇಕು. ಆಗ ಸೂಕ್ತ ಪರಿಹಾರ ಸಿಕ್ಕೀತು. ಕಾರ್ಯದೊತ್ತಡವನ್ನು ಸಮತೂಕದಲ್ಲಿ-ಸಮರ್ಪಕವಾಗಿ ಎದುರಿಸಿ ನಿಭಾಯಿಸುವ ಕುರಿತು ನೌಕರರಿಗೆ ನಿಯತವಾಗಿ ತರಬೇತಿ ನೀಡಬೇಕಾದ್ದೂ ಮುಖ್ಯ.

(ಮುಂಬೈನ ಲಾಸಾ ಜೆನರಿಕ್ ಕಂಪನಿಯ ಪೂರ್ವ ನಿರ್ದೇಶಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 277

ಸಮಾಚಾರ ಸಣ್ಣದಲ್ಲ

ಆಫ್‌ಸ್ಪಾ 6 ತಿಂಗಳು ವಿಸ್ತರಣೆಗೆ ಆದೇಶ

ದೆಹಲಿ: ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶದ ಹಲವು ಜಿಲ್ಲೆಗಳಲ್ಲಿ 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ'(ಆಫ್‌ಸ್ಪಾ)ಯನ್ನು ಮತ್ತೆ 6 ತಿಂಗಳು ವಿಸ್ತರಿಸಿ ಕೇಂದ್ರ ಗೃಹ ಸಚಿವಾಲಯ ಆದೇಶ ಹೊರಡಿಸಿದೆ. ಎರಡೂ ರಾಜ್ಯಗಳಲ್ಲಿನ ಕಾನೂನು ಪರಿಸ್ಥಿತಿ ಪರಿಶೀಲಿಸಿದ ಬಳಿಕ ನಾಗಾಲ್ಯಾಂಡ್‌ನ 8 ಜಿಲ್ಲೆಗಳು ಹಾಗೂ 21 ಪೊಲೀಸ್ ಠಾಣೆ ವ್ಯಾಪ್ತಿಯಲ್ಲ ಹಾಗೂ ಅರುಣಾಚಲದ 3 ಜಿಲ್ಲೆಗಳಲ್ಲಿ 6 ತಿಂಗಳವರೆಗೆ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ ಜಾರಿ ವಿಸ್ತರಿಸಲಾಗಿದೆ. ಕಾಯ್ದೆಯು ಸಶಸ್ತ್ರಪಡೆಗಳಿಗೆ ಪ್ರಕ್ಷುಬ್ಧ ಪ್ರದೇಶಗ ಳಲ್ಲಿ ತಪಾಸಣೆ, ಬಂಧನ ಹಾಗೂ ಕಾನೂನು- ಸುವ್ಯವಸ್ಥೆ ಕಾಪಾಡಲು, ಅಗತ್ಯವಿದ್ದಲ್ಲಿ ಗುಂಡು ಹಾರಿಸಲು ಅನುಮತಿ ನೀಡುತ್ತದೆ. ಆಫ್‌ಸ್ಪಾ ಜಮ್ಮು- ಕಾಶ್ಮೀರದಲ್ಲೂ ಜಾರಿಯಲ್ಲಿದೆ. ಈಶಾನ್ಯ ರಾಜ್ಯಗಳಿಂದ ಶೇ.70ರಷ್ಟು ಹಿಂಪಡೆಯಲಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಇತ್ತೀಚೆಗೆ ತಿಳಿಸಿದ್ದರು.

ತೆಲುಗು ನಟ ಮನೇಲಿ ಕಳವು; ಕೆಲಸದಾಳು ಸೆರೆ

ಹೈದರಾಬಾದ್: ತೆಲುಗು ಚಿತ್ರರಂಗದ ಹೆಸರಾಂತ ನಟ ಮೋಹನ್ ಬಾಬು ಮನೆಯಿಂದ 10 ಲಕ್ಷ ರು. ನಗದು ಕಳವಾಗಿದೆ. ದೂರಿನ ಮೇರೆಗೆ ಮನೆಗೆಲಸದವರಲ್ಲಿ ಒಬ್ಬನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ನಟ ಮೋಹನ್ ಅವರ ಕಾರ್ಯದರ್ಶಿ ಮನೆಗೆ ಬಂದಿದ್ದಾಗ ಹಣವಿದ್ದ ಬ್ಯಾಗ್ ತಂದಿದ್ದರು. ಆ ಬ್ಯಾಗ್ ಕಳುವಾಗಿದ್ದು, ಮನೆಗೆಲಸದ ವ್ಯಕ್ತಿ ಆ ಬಳಿಕ ಗೈರಾಗಿದ್ದ. ಅವನನ್ನು ತಿರುಪತಿಯಲ್ಲಿ ಬಂಧಿಸಿ, 7.36 ಲಕ್ಷ ರು. ವಶಪಡಿಸಿಕೊಳ್ಳಲಾಗಿದೆ.

ವಿಶ್ವಸಂಸ್ಥೆ ಮಹಾಸಭೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರಾನ್ ಭಾಷಣ | ಭದ್ರತಾ ಮಂಡಳಿ ವಿಸ್ತರಣೆ-ಭಾರತ ಸೇರಿ ನಾಲ್ಕು ದೇಶಗಳ ಸೇರ್ಪಡೆಗೆ ಹಲವರ ಆಗ್ರಹ | ಜರ್ಮನಿ, ಜಪಾನ್, ಬ್ರೆಜಿಲ್‌ಗೂ ಕಾಯಂ ಸದಸ್ಯತ್ವ ನೀಡಲು ಫ್ರಾನ್ಸ್ ಒತ್ತಾಯ

ಭದ್ರತಾ ಮಂಡಳಿಗೆ ಭಾರತ ಕಾಯಂ: ಫ್ರಾನ್ಸ್ ಬೆಂಬಲ

ನ್ಯೂಯಾರ್ಕ್: ಸ್ವತಂತ್ರ ಭಾರತದ ಆರೇಳು -ದಶಕಗಳ ಕನಸು, ಮಹದಾಸೆ ಕಡೆಗೂ ಈಡೇರುವ ವಿಶ್ವಾಸ ಮೂಡಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಈಗಲಾದರೂ ಖಾಯಂ ಸ್ಥಾನವನ್ನು ನೀಡಲೇಬೇಕು ಎಂದು ಫ್ರಾನ್ಸ್ ಆಗ್ರಹಿಸಿದೆ.

ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಗುರುವಾರ ಮಾತನಾಡಿದ ಫ್ರಾನ್ಸ್ ಅಧ್ಯಕ್ಷ ಇಮ್ಯಾನುವಲ್ ಮ್ಯಾಕ್ರಾನ್, ಭಾರತ ದೇಶ ಎಲ್ಲಾ ರೀತಿಯಿಂದಲೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಖಾಯಂ ಸ್ಥಾನ ಹೊಂದುವುದಕ್ಕೆ ಅರ್ಹವಾಗಿದೆ ಎಂದು ಹೇಳಿದರು. ಆ ಮೂಲಕ ಮಿತ್ರದೇಶದ ಕನಸು ನನಸಾಗಲಿ ಎಂಬ ಉದ್ದೇಶದಿಂದ ಭಾರತದ ಪ್ರಸ್ತಾವಕ್ಕೆ ಪೂರ್ಣ ಬೆಂಬಲ ಘೋಷಿಸಿದರು. ಭದ್ರತಾ ಮಂಡಳಿಯನ್ನು ಇನ್ನಷ್ಟು ವಿಸ್ತರಿಸಬೇಕಾದ ಅಗತ್ಯವಿದೆ. ಈ ಪ್ರಸ್ತಾವಕ್ಕೆ ಫ್ರಾನ್ಸ್ ದೇಶದ ಪೂರ್ಣ ಬೆಂಬಲವಿದೆ. ಆ ಮೂಲಕ ವಿಶ್ವದ ಬೃಹತ್ ಪ್ರಜಾಪ್ರಭುತ್ವ ದೇಶ ಭಾರತವನ್ನೂ ಭದ್ರತಾ ಮಂಡಳಿಗೆ ಒಳಪಡಿಸಬೇಕಿದೆ. ಅದಕ್ಕೆ ಭಾರತ ಅರ್ಹವೂ ಆಗಿದೆ ಎಂದು ಮ್ಯಾಕ್ರಾನ್ ಪ್ರತಿಪಾದಿಸಿದರು.

ಭಾರತದ ಜತೆಗೇ ಜರ್ಮನಿ, ಜಪಾನ್, ಬ್ರೆಜಿಲ್ ದೇಶಗಳನ್ನೂ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯ ರಾಷ್ಟ್ರಗಳಾಗಿ ಸೇರಿಸಿಕೊಳ್ಳಬೇಕಿದೆ. ಆಫ್ರಿಕಾದ ಎರಡು ದೇಶಗಳನ್ನೂ ಪ್ರತಿನಿಧಿಗಳಾಗಿ ಸೇರ್ಪಡೆ ಮಾಡಿಕೊಳ್ಳಬೇಕಿದೆ ಎಂದೂ ಮ್ಯಾಕ್ರಾನ್ ಹೇಳಿದರು.

ಫ್ರಾನ್ಸ್ ಅಧ್ಯಕ್ಷರ ಮಾತು...

- ಭದ್ರತಾ ಮಂಡಳಿ ವಿಸ್ತರಣೆಯಷ್ಟೇ ಅಲ್ಲ, ಕಾರ್ಯ ವೈಖರಿಯಲ್ಲೂ ಬದಲಾವಣೆ ಅಗತ್ಯ. ಮುಖ್ಯ ವಾಗಿ ವಿಟೊ ಹಕ್ಕು ಚಲಾವಣೆ ವಿಚಾರದಲ್ಲಿ...
- ಲೆಬನಾನ್ ಮೇಲಿನ ದಾಳಿ ಯನ್ನು ಕೊನೆಗೊಳಿಸುವಂತೆ ಇಸ್ರೇಲ್‌ಗೆ ಆಗ್ರಹಿಸುವೆ. ಅದೇ ವೇಳೆ, ಇಸ್ರೇಲ್ ಮೇಲೆ ಕ್ಷಿಪಣಿ ಹಾರಿಸಬಾರದು ಎಂದೂ ಹಿಜ್ಬುಲ್ಲಾಗೆ ಆಗ್ರಹಿಸುವೆ.
- ಉಕ್ರೇನ್‌ಗೆ ಫ್ರಾನ್ಸ್ ಬೆಂಬಲ ಮುಂದುವರಿ ಯಲಿದೆ. ಫ್ರಾನ್ಸ್ ಉಕ್ರೇನ್ ಜನರ ಜತೆಗಿ ರಲಿದೆ. ಗಾಜಾ ಯುದ್ಧವಂತೂ ಬಲು ದೀರ್ಘ ವಾಯಿತು. ಆದಷ್ಟೂ ಬೇಗ ಕದನ ವಿರಾಮ ಘೋಷಣೆಯಾಗಲಿ.

ಮಂಡಳಿ ವಿಸ್ತರಣೆಗೆ ಒತ್ತಾಯ

ಸದ್ಯ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕೇವಲ ಐದು ರಾಷ್ಟ್ರಗಳಷ್ಟೇ ಇವೆ. ಅಮೆರಿಕ, ರಷ್ಯಾ, ಫ್ರಾನ್ಸ್, ಬ್ರಿಟನ್, ಚೀನಾ ಅವಕಾಶ ಪಡೆದಿವೆ. ಅಲ್ಲದೇ, 10 ರಾಷ್ಟ್ರಗಳಿಗೆ ಖಾಯಂ ಸದಸ್ಯರಲ್ಲದ ಸ್ಥಾನಮಾನ ನೀಡಲಾಗಿದೆ. ಅಲ್ಲದೇ, ಇತ್ತೀಚೆಗೆ ವಿಶ್ವಸಂಸ್ಥೆಗೂ ಹೊಸ ಸದಸ್ಯರಾಗಿ 50 ರಾಷ್ಟ್ರಗಳ ಸೇರ್ಪಡೆಯಾಗಿದ್ದು, ಒಟ್ಟು ಸದಸ್ಯ ದೇಶಗಳ ಸಂಖ್ಯೆ 193ಕ್ಕೆ ಮುಟ್ಟಿದೆ. ಚೀನಾ ಹೊರತುಪಡಿಸಿ ಉಳಿದೆಲ್ಲಾ ರಾಷ್ಟ್ರಗಳೂ ಭದ್ರತಾ ಮಂಡಳಿ ವಿಸ್ತರಣೆಗೊಳ್ಳಬೇಕು ಎಂದೇ ಒಂದಲ್ಲಾ ಒಂದು ರೀತಿಯಲ್ಲಿ ಹೇಳುತ್ತಲೇ ಇವೆ.

ವಿಟೊ ಹಕ್ಕು: ಬದಲಾವಣೆ ಅಗತ್ಯ

ಭದ್ರತಾ ಮಂಡಳಿಯ ಪರಿಣಾಮಕಾರಿ ಕಾರ್ಯ ನಿರ್ವಹಿಸಬೇಕೆಂದರೆ ಮಂಡಳಿಯ ವಿಸ್ತರಣೆ ಮಾತ್ರವೇ ಸಾಲದು. ಭದ್ರತಾ ಮಂಡಳಿಯ ಕಾರ್ಯ ವೈಖರಿಯಲ್ಲೂ ಮಹತ್ವದ ಬದಲಾವಣೆಗಳನ್ನು ತರಬೇಕಿದೆ. ಮುಖ್ಯವಾಗಿ ವಿಟೊ ಹಕ್ಕು ಚಲಾವಣೆಯ ವಿಚಾರವನ್ನು ಸಾಮೂಹಿಕ ಅಪರಾಧಗಳ ಸಂದರ್ಭಗಳಲ್ಲಿ ಮಿತಿಗೆ ಒಳಪಡಿಸಬೇಕಿದೆ. ಹಾಗೂ ಶಾಂತಿ ಸ್ಥಾಪನೆ ಪ್ರಕ್ರಿಯೆಗಳ ಬಗ್ಗೆ ಕಾರ್ಯಕಾರಿ ನಿರ್ಧಾರ ಕೈಗೊಳ್ಳುವಾಗ ಹೆಚ್ಚು ಜಾಗ್ರತೆ ವಹಿಸಬೇಕಾದ ಅಗತ್ಯವಿದೆ ಎಂದೂ ಫ್ರಾನ್ಸ್ ಅಧ್ಯಕ್ಷ ಮಾಕ್ರಾನ್ ಎಮ್ಯಾನು ವಲ್ ಪ್ರತಿಪಾದಿಸಿದರು. ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಯ ಆದೇಶಗಳು ಪರಿಪೂರ್ಣವಾಗಿ ಜಾರಿಗೊ ಳ್ಳುವಂತೆ, ವಾಸ್ತವಕ್ಕಿಳಿಯುವಂತೆ ಮಾಡಲೇಬೇಕಾದ ಸಮಯ ಈಗ ಬಂದಿದೆ ಎಂದೂ ಹೇಳಿದರು. ಉಕ್ರೇನ್-ರಷ್ಯಾ ಸಂಘರ್ಷ, ಗಾಜಾದಲ್ಲಿನ ಸದ್ಯದ ಪರಿಸ್ಥಿತಿ ಮತ್ತಿತರ ಕಳವಳಕಾರಿ ವಿದ್ಯಮಾನಗಳು ನಡೆಯುತ್ತಿರುವಾಗಲೂ ವಿಶ್ವಸಂಸ್ಥೆ ಎಂಬ ಪ್ರಾತಿನಿಧಿಕ ಸಂಸ್ಥೆಗಳ ಮಾತಿಗೆ ಬೆಲೆ ಇಲ್ಲದಂತಾಗಿರುವ ಹಿನ್ನೆಲೆಯಲ್ಲಿ ಫ್ರಾನ್ಸ್ ಸೇರಿದಂತೆ ಕೆಲ ದೇಶಗಳು ವಿಶ್ವಸಂಸ್ಥೆಯ ಒಟ್ಟಾರೆ ರಚನೆಯಲ್ಲೇ ಸಮಗ್ರ ಬದಲಾವಣೆಯನ್ನು ಬಯಸಿವೆ.

ಅಮೆರಿಕದಿಂದಲೂ ಭಾರತಕ್ಕೆ ಬೆಂಬಲ

ಭದ್ರತಾ ಮಂಡಳಿ ಖಾಯಂ ಸ್ಥಾನ ವಿಚಾರದಲ್ಲಿ ಮಿತ್ರದೇಶ ಫ್ರಾನ್ಸ್ ಮಾತ್ರವಲ್ಲದೇ ಭಾರತಕ್ಕೆ ಹಲವು ದೇಶಗಳು ಬೆಂಬಲ ಘೋಷಿಸಿವೆ. ಭಾರತದ ಪರವಾಗಿ ಮಹಾಸಭೆಯಲ್ಲಿ ದನಿ ಎತ್ತಿವೆ. ಅಲ್ಲದೇ, ಇತ್ತೀಚೆಗೆ ಕ್ವಾಡ್‌ನ 6ನೇ ಶೃಂಗಸಭೆಯಲ್ಲಿಯೂ ವಿಚಾರ ಪ್ರಸ್ತಾಪವಾಗಿದೆ. ಮಿತ್ರ ದೇಶಗಳು ಭಾರತವನ್ನು ಬೆಂಬಲಿಸಿ ಮಾತನಾಡಿವೆ. ಅಲ್ಲದೇ, ವಿಶ್ವಸಂಸ್ಥೆಯಲ್ಲಿ ಸುಧಾರಣೆ ತರಬೇಕಿದೆ ಎಂದೂ ಹೇಳಲಾಗಿದೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಕೂಡಾ ಭಾರತಕ್ಕೆ ಭದ್ರತಾ ಮಂಡಳಿಯಲ್ಲಿ ಖಾಯಂ ಸದಸ್ಯತ್ವ ನೀಡಬೇಕು ಎಂದು ಹೇಳಿದ್ದಾರೆ. ಅಮೆರಿಕದ ಗೃಹ ಸಚಿವ ಆಂಟೊನಿ ಬ್ಲಿಂಕನ್ ಇತ್ತೀಚೆಗೆ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಭಾರತವನ್ನು ಭದ್ರತಾ ಮಂಡ ಳಿಗೆ ಖಾಯಂ ಸದಸ್ಯನಾಗಿ ಸೇರಿಸಿಕೊಳ್ಳಬೇಕೆಂದು ಆಗ್ರಹಿಸಿದ್ದರು. ಇದರಿಂದ ಭದ್ರತಾ ಮಂಡಳಿಯ ಕಾರ್ಯಶೈಲಿ ಮತ್ತು ಅದರ ಆದೇಶಗಳ ಕಾನೂನು ಮಾನ್ಯತೆಯನ್ನು ಇನ್ನಷು ಬಲಪಡಿಸುತ್ತದೆ ಎಂದು ಹೇಳಿದ್ದರು. ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿರುವುದರತ್ತಲೂ ಬ್ಲಿಂಕೆನ್ ಸಭೆಯ ಗಮನ ಸೆಳೆದಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472-278604, ಇಮೇಲ್ ವಿಳಾಸ: ka.kalaburagi.dudc@gmail.com
ಸಂ:ಜಿನಕೋ/ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)-4/ವಾಡಿ/99/2023-24 ದಿ: 25.09.2024.

:: ಟೆಂಡರ್ ಅಧಿಸೂಚನೆ ::

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ ಜಿಲ್ಲೆ, ಕಲಬುರಗಿರವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯಡಿ ತೆಗೆದುಕೊಂಡ ಈ ಕೆಳಕಂಡ ವಿವಿಧ ಕಾಮಗಾರಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಕೆ.ಡಬ್ಲ್ಯೂ-1, 2 & 3ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : 01 ವಾಡಿ ಪುರಸಭೆ ವ್ಯಾಪ್ತಿಯಲ್ಲಿ 1. ವಾರ್ಡ ನಂ-4 ಸೇವಾಲಾಲ ಮಂದಿರ ಅಭಿವೃದ್ಧಿ, 2. ಮರಾಠ ಮತ್ತು ಸವಿತಾ ಸಮಾಜ ಸಮುದಾಯ ಭವನ ನಿರ್ಮಾಣ. 3. ದಿವ್ಯಾಂಗ ಸ್ನೇಹಿ ನೈರ್ಮಲ್ಯ ಶೌಚಾಲಯ. DMA/2023-24/OW/WORK_INDENT 17574/CALL-3, 2) ಯಡ್ರಾಮಿ ಪ.ಪಂ. ವ್ಯಾಪ್ತಿಯಲ್ಲಿ ವಾರ್ಡ್ ಸಂಖ್ಯೆ 06 ರಲ್ಲಿ ಪೊಲೀಸ್ ಠಾಣೆ ಎದುರಿನ ಬಯಲು ಪ್ರದೇಶದಲ್ಲಿ ವಿಕಲಚೇತನರಿಗಾಗಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು ಕಚೇರಿ ಕಟ್ಟಡಗಳಲ್ಲಿ ರ‍್ಯಾಂಪ್‌ಗಳ ನಿರ್ಮಾಣ (DMA/2023-24/BD/WORK_INDENT17670/CALL-2), 3) ಕಮಲಾಪೂರ ಪ.ಪಂ. ವ್ಯಾಪ್ತಿಯಲ್ಲಿ ವಿವಿಧ ಸರ್ಕಾರಿ ಕಛೇರಿಗಳಲ್ಲಿ ಜನಸ್ನೇಹಿ ಶೌಚಾಲಯ ನಿರ್ಮಾಣ & ಖುರೇಶಿ ಗಲ್ಲಿಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮತ್ತು 2. ವಾರ್ಡ್ ನಂ.6 ರಲ್ಲಿ ಅಸ್ತಿತ್ವದಲ್ಲಿರುವ ಗ್ರೇವ್ ಯಾರ್ಡ್‌ಗೆ ಕಾಂಪೌಂಡ್ ಗೋಡೆಯ ನಿರ್ಮಾಣ. (DMA/2023-24/ BD/ WORK_INDENT17570/CALL-2), 4) ನಿಗಧಿಪಡಿಸಿದ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): **ಕನಿಷ್ಠ 9.00, ಗರಿಷ್ಠ 81.23,** 5) ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **ಕನಿಷ್ಠ 26,575/-, ಗರಿಷ್ಠ 1,62,467/-,** 6) ಗುತ್ತೇದಾರರ ದರ್ಜೆ : Eligible PWD Contractor, 7) ಕಾಲಾವಕಾಶ : ಕಾಮಗಾರಿ ಕ್ರ.ಸಂ. 1 & 3ಕ್ಕೆ ಕಾರ್ಯಾದೇಶ ನೀಡಿದ ನಂತರದ 12 ತಿಂಗಳು ಮತ್ತು ಕಾಮಗಾರಿ ಕ್ರ.ಸಂ. 2ಕ್ಕೆ ಕಾರ್ಯಾದೇಶ ನೀಡಿದ ನಂತರದ 6 ತಿಂಗಳು.
ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: **25.09.2024** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ **https://kppp.karnataka.gov.in/** ರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು. ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.
1) ಟೆಂಡರ್ ಕುರಿತಂತೆ ಪ್ರಶ್ನೆಗಳಿದ್ದಲ್ಲಿ **(Queries)12.10.2024** ಸಂಜೆ 5.30 ಗಂಟೆಗೆ, 2) ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಲು ಕೊನೆಯ ದಿನಾಂಕ : **15.10.2024** ಸಂಜೆ 5.30 ಗಂಟೆವರೆಗೆ, 3) ಟೆಂಡರ್ ತೆರೆಯುವ ದಿನಾಂಕ : (ತಾಂತ್ರಿಕ ಬಿಡ್) : **18.10.2024** ಬೆಳಿಗ್ಗೆ 11.00 ಗಂಟೆಗೆ
ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/473/ಕೆ.ಎಸ್.ಎಂ.ಸಿ.ಎ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ(ಬಿ.ಬಿ.ಸಿ-1)/448/2024-25. ದಿನಾಂಕ: 26.09.2024

ಸಾರ್ವಜನಿಕ ಪ್ರಕಟಣೆ
ನೋಟೀಸ್
ಭೂಸ್ವಾಧೀನ ಕಾಯ್ದೆ 1894 ಕಲಂ 9 ಮತ್ತು 10 ರ ಮೇರೆಗೆ,

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ದಾಸನಪುರ ಹೋಬಳಿಗೆ ಸಂಬಂಧಪಟ್ಟ ಗ್ರಾಮಗಳಾದ ಮಾದನಾಯಕನಹಳ್ಳಿ, ಹನುಮಂತಸಾಗರ, ಕುದುರೆಗೆರೆ, ತಮ್ಮೇನಹಳ್ಳಿ ಹಾಗೂ ಡಿಟೋ ತಾಲ್ಲೂಕು, ಯಶವಂತಪುರ ಹೋಬಳಿಗೆ ಸಂಬಂಧಪಟ್ಟ ಗ್ರಾಮವಾದ ಚಿಕ್ಕಬಾಣಾವಾರ ಮತ್ತು ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿಗೆ ಸಂಬಂಧಪಟ್ಟ ಗ್ರಾಮಗಳಾದ ಸೋಲದೇವನಹಳ್ಳಿ, ಕೆಂಪಾಪುರ ಮತ್ತು ಕಾಳತಮ್ಮನಹಳ್ಳಿ ಗ್ರಾಮಗಳಲ್ಲಿರುವ ಖಾತೆದಾರರು/ಆಸಕ್ತದಾರರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ;
ಈ ಕೆಳಗೆ ವಿವರಿಸಿರತಕ್ಕ ಜಮೀನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ **"Formation of Peripheral Ring Road Part-1 (PRR-1) (Between Tumkur Road, Old Madras Road & Hosur Road)"** ಯೋಜನೆಗೋಸ್ಕರ ಬೇಕಾಗಿರುವುದರಿಂದ ಸದರಿ ಸ್ವತ್ತುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನಪಡಿಸಿಕೊಳ್ಳಲು ನಿಶ್ಚಯಿಸಿ ಬಿ.ಡಿ.ಎ ಕಾಯ್ದೆ 1976 ಕಲಂ 19(1) ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/399/ಎಮ್‌ಎನ್‌ಎಕ್ಸ್/2006, ಬೆಂಗಳೂರು ದಿನಾಂಕ: 29.06.2007 ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದ ಭಾಗ-03, ಸಂಚಿಕೆ ಸಂಖ್ಯೆ: 1077 ಪುಟ ಸಂಖ್ಯೆ: 01 ರಿಂದ 17 ರವರೆಗೆ ದಿನಾಂಕ: 03.07.2007 ರಂದು ಪ್ರಕಟಿಸಲಾಗಿರುತ್ತದೆ.
ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, **ಮಾದನಾಯಕನಹಳ್ಳಿ** ಗ್ರಾಮದ ಸರ್ವೆ ನಂ. 6/6, 6/7, 7/1ಎ, 8/1, 8/2ಎ, 8/3, 9, 10/3, 11/1ಎ, 11/1ಬಿ, 11/3, 11/4, 12, 13/1, 14/2, 16/2, 54/6ಸಿ, **ಹನುಮಂತಸಾಗರ** ಗ್ರಾಮದ ಸರ್ವೆ ನಂ. 5/2, 6/2, 6/3, 7/2, 8/1, 9/1, 9/2, 9/3, 10, 12/1, 12/2, 13/2, 13/3, 14, 15/1, 15/5, 16 **ಕುದುರೆಗೆರೆ** ಗ್ರಾಮದ ಸರ್ವೆ ನಂ. 4/1, 4/2, 4/3, 5, 6, 10/4, 11, 12, 13/1, 13/2, 14/3, 14/4, 14/5, 17/2, 22/1&2, 26, 27, 28, 29/1, 29/2, 29/3, 33/4, 33/5, 42/2, 94/1, 94/5, 96/1, 97, 98/11, **ತಮ್ಮೇನಹಳ್ಳಿ** ಗ್ರಾಮದ ಸರ್ವೆ ನಂ. 36/2, 37, **ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಚಿಕ್ಕಬಾಣಾವಾರ** ಗ್ರಾಮದ ಸರ್ವೆನಂ.138/1, ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ, **ಸೋಲದೇವನಹಳ್ಳಿ** ಗ್ರಾಮದ ಸರ್ವೆನಂ.73/3, ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ, **ಕೆಂಪಾಪುರ** ಗ್ರಾಮದ ಸರ್ವೆ ನಂ. 21/3, 49, 51, **ಕಾಳತಮ್ಮನಹಳ್ಳಿ** ಗ್ರಾಮದ ಸರ್ವೆ ನಂ. 108, 109, 110, 111, 112, 114/1&2, 129/1, 130, 131, 132, 134 ರ ಸ್ವತ್ತಗಳ ಮೇಲೆ ನಿಮಗೆ ಇರಬಹುದಾದಂತಹ ಹಕ್ಕು ಬಾಧ್ಯತೆಯ ಸ್ವಭಾವವನ್ನು ಮತ್ತು ಅದಕ್ಕೆ ನೀವು ಅಪೇಕ್ಷಿಸುವ ಪರಿಹಾರದ ತಪಶೀಲನ್ನು ಮತ್ತು ಇದರ ಅಳತೆ ಕೆಳಕಾಣಿಸಿರುವುದರಲ್ಲಿ ಏನಾದರೂ ಆಕ್ಷೇಪಣೆ ಇದ್ದರೆ ಅದನ್ನೂ ಸಹ ತಿಳಿಸುವುದಕ್ಕಾಗಿ ನಿಮ್ಮಲ್ಲಿರಬಹುದಾದ ದಾಸ್ತಾವೇಜುಗಳೊಂದಿಗೆ ಸರಿಯಾಗಿ ಈ ಅಧಿಕಾರಿಯರವರ ರೂಬು ರೂಬು ಮೊಕ್ಕಾಂನಲ್ಲಿ ಖುದ್ದಾಗಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ವಹಿಸಿದ ಪ್ರತಿನಿಧಿ ಮುಖಾಂತರವಾಗಲಿ ಜಾರಿಯಾದ 15 ದಿನಗಳ ಒಳಗಾಗಿ ಹಾಜರಾಗಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕಾನೂನು ಅನುಸರಿಸಿ ಕ್ರಮ ಜರುಗಿಸಲಾಗುವುದು ಮತ್ತು ಸದರಿ ಜಮೀನಿನ ಮೇಲಾಗಲಿ/ ಅಥವಾ ಅದರ ಯಾವ ಭಾಗದ ಮೇಲಾಗಲಿ ಇತರರಿಗೆ ಇರಬಹುದಾದ ಭೋಗ್ಯ, ಆಧಾರ, ಹಿಡುವಳಿ ಅಥವಾ ಸಾಗುವಳಿ ಹಿಸ್ಸೆ ಅಥವಾ ಅನುಭವ ಮುಂತಾದ ಹಕ್ಕು ಭಾದ್ಯತೆಗಳನ್ನು ಸಾಧ್ಯವಾದ ಮಟ್ಟಿಗೆ ಕರಾರುವಕ್ಕಾಗಿ ತೋರಿಸುವಂತೆ ತಪಶೀಲ್ ನಮೂದಿಸಿ, ಒಂದು ಲಿಖಿತ ಹೇಳಿಕೆಯನ್ನು ಈ ನೋಟೀಸ್ ನಿಮಗೆ ಜಾರಿಯಾದ 15 ದಿನಗಳ ಒಳಗಾಗಿ ಈ ಕೆಳಕಾಣಿಸಿದ ಅಧಿಕಾರಿಯವರ ರೂಬು ರೂಬು ಹಾಜರುಪಡಿಸತಕ್ಕದ್ದಾಗಿರುತ್ತದೆ.
ಮೇಲ್ಕಂಡ ಜಮೀನುಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಖಾತೆದಾರರು/ಆಸಕ್ತದಾರರುಗಳಿಗೆ ಭೂಸ್ವಾಧೀನ ಕಾಯ್ದೆ 1894 ಕಲಂ 9 ಮತ್ತು 10 ನೋಟಿಸ್ ಅನ್ನು ಲಭ್ಯವಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ / ಮುದ್ದಂ/ ಗ್ರಾಮ ಪಂಚಾಯಿತಿ ಮುಖೇನ ಪ್ರಚುರಪಡಿಸಲಾಗಿದ್ದು, ಈಗಾಗಲೇ ಜಾರಿ ಮಾಡಲಾಗಿದ್ದು, ಒಂದು ವೇಳೆ 9 ಮತ್ತು 10 ನೋಟಿಸ್ ತಲುಪದಿದ್ದಲ್ಲಿ ಸದರಿ ಪ್ರಕಟಣೆಯನ್ನು ಭೂಸ್ವಾಧೀನ ಕಾಯ್ದೆ 1894 ಕಲಂ 9 ಮತ್ತು 10 ನೋಟಿಸ್ ಎಂದು ಪರಿಗಣಿಸಲು ಕೋರಿದೆ.
ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿಗಳು-6,
ಬೆಂಗಳೂರು ಬ್ಯುಸಿನೆಸ್ ಕಾರಿಡಾರ್-1, ಬೆಂ.ಅ.ಪ್ರಾ., ಬೆಂಗಳೂರು.

130 ಕೋಟಿ ವೆಚ್ಚದಲ್ಲಿ ದೇಶೀ ತಯಾರಿಕೆ | ಪುಣೆ, ದೆಹಲಿ, ಕೋಲ್ಕತ್ತದಿಂದ ಪ್ರಕ್ರಿಯೆ | ವೈಜ್ಞಾನಿಕ ಸಂಶೋಧನೆಗೆ ನೆರವು

ಪರಮ ರುದ್ರ 3 ಸೂಪರ್ ಕಂಪ್ಯೂಟರ್ ಲೋಕಾರ್ಪಣೆ

ಪುಣೆ: 'ಪರಮ ರುದ್ರ' ಹೆಸರಿನಲ್ಲಿ ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾದ 3 ಸೂಪರ್ ಕಂಪ್ಯೂಟರ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ಲೋಕಾರ್ಪಣೆಗೊಳಿಸಿದರು.

ಭಾರೀ ಮಳೆ ಕಾರಣ ಪುಣೆಯ ಪ್ರವಾಸ ರದ್ದಾದರೂ ಪ್ರಧಾನಿ ಮೋದಿ ದೆಹಲಿಯಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಪರಂ ರುದ್ರ 3 ಸೂಪರ್ ಕಂಪ್ಯೂಟರ್‌ಗಳ ಲೋಕಾರ್ಪಣೆಯನ್ನು ನೆರವೇರಿಸಿ ಸಂತಸ ವ್ಯಕ್ತಪಡಿಸಿದರು.

ಒಟ್ಟು 130 ಕೋಟಿ ರು. ವೆಚ್ಚದಲ್ಲಿ 3 ಸೂಪರ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪುಣೆ, ದೆಹಲಿ ಮತ್ತು ಕೋಲ್ಕತ್ತದಲ್ಲಿ ನೆಲೆಗೊಳಿಸಲಾಗಿರುವ ಮೂರೂ ಸೂಪರ್ ಕಂಪ್ಯೂಟರ್‌ಗಳು ದೇಶದಲ್ಲಿನ ವೈಜ್ಞಾನಿಕ ಸಂಶೋಧನಾ ಕಾರ್ಯಗಳಿಗೆ ಬಹಳವಾಗಿ ನೆರವಾಗಲಿವೆ ಎಂದು ಪ್ರಧಾನಿ ಹೇಳಿದರು.

ಇದೇ ವೇಳೆ, ಪ್ರಧಾನಿ 850 ಕೋಟಿ ರು. ವೆಚ್ಚದಲ್ಲಿ ಅಭಿವೃದ್ಧಿಪಡಿಸಿದ, 'ಹೈಪರ್ಫಾರ್ಮೆನ್ಸ್ ಕಂಪ್ಯೂಟಿಂಗ್ ಸಿಸ್ಟಂ'ಗೂ ಚಾಲನೆ ನೀಡಿದರು. ಇದು ಹವಾಗುಣ ಮತ್ತು ವಾತಾವರಣದಲ್ಲಿನ ಬೆಳವಣಿಗೆಗಳ ಬಗ್ಗೆ ಮುನ್ಸೂಚನೆ ನೀಡಲು

ಸಮರ್ಥವಾದ ಅತ್ಯಾಧುನಿಕ ವ್ಯವಸ್ಥೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೂಪರ್ ಕಂಪ್ಯೂಟರ್‌ಗಳನ್ನು ಸ್ವತಃ ಅಭಿವೃದ್ಧಿಪಡಿಸುವ ದೀರ್ಘ ಕಾಲದ ಕನಸನ್ನು ಭಾರತದ ತಂತ್ರಜ್ಞರು, 'ನ್ಯಾಷನಲ್ ಸೂಪರ್ ಕಂಪ್ಯೂಟಿಂಗ್ ಮಿಷನ್' ಯೋಜನೆಯಲ್ಲಿ ಈಡೇರಿಸಿಕೊಂಡಿದ್ದಾರೆ. ಸೂಪರ್ ಕಂಪ್ಯೂಟರ್ ನಿರ್ಮಾಣದ ವಿಚಾರದಲ್ಲಿ ಇನ್ನು ಮುಂದೆ ಭಾರತದ ತಂತ್ರಜ್ಞರಿಗೆ ಆಕಾಶದಷ್ಟು ಅವಕಾಶಗಳು ಸೃಷ್ಟಿಯಾಗಲಿವೆ ಎಂಬ ಪ್ರಶಂಸೆಯ ಮಾತುಗಳು ಕೇಳಿಬಂದಿವೆ.

ನ್ಯಾಯಾಲಯಕ್ಕೆ ಸಿಬಿಐ ಮಾಹಿತಿ

ಕಿರಿಯ ವೈದ್ಯೆ ಹತ್ಯಾಚಾರ: ಪೊಲೀಸರಿಂದ ನಕಲಿ ಸಾಕ್ಷ್ಯ

ಕೋಲ್ಕತ್ತ: 31 ವರ್ಷದ ಕಿರಿಯ ವೈದ್ಯೆ ಅತ್ಯಾಚಾರ-ಹತ್ಯೆ ಪ್ರಕರಣದಲ್ಲಿ ಸಾಕ್ಷ್ಯಗಳನ್ನು ನಾಶ ಪಡಿಸಿದ ವಿಚಾರದಲ್ಲಿ 'ದೊಡ್ಡ ಮಟ್ಟದ ಸಂಚು' ನಡೆದಿದೆ ಎಂಬ ಆರೋಪದ ಬೆನ್ನು ಹತ್ತಿರುವ ಸಿಬಿಐ ತನಿಖಾಧಿಕಾರಿಗಳ ತಂಡ, ಮಹತ್ವದ ಅಂಶಗಳನ್ನು ಕಂಡುಕೊಂಡಿದೆ.

ಸಾಕ್ಷ್ಯಗಳ ನಾಶ ವಷ್ಟೇ ಅಲ್ಲ, ಪ್ರಕರಣದಲ್ಲಿ ಹಲವು ನಕಲಿ ದಾಖಲೆಗಳನ್ನು ಕೋಲ್ಕತ್ತ ನಗರದ ತಾಲಾ ಪೊಲೀಸ್ ಠಾಣೆಯಲ್ಲಿಯೇ ಸೃಷ್ಟಿಸಲಾಗಿದೆ ಎಂಬ ಆಘಾತಕಾರಿ ಸಂಗತಿಯನ್ನು ನ್ಯಾಯಾಲಯಕ್ಕೆ ತಿಳಿಸಿದೆ. ಆ ಮೂಲಕ ತಾಲಾ ಪೊಲೀಸ್ ಠಾಣಾಧಿಕಾರಿಯೂ ಕಿರಿಯ ವೈದ್ಯೆಯ ಹತ್ಯಾಚಾರ ಪ್ರಕರಣದಲ್ಲಿ ನೇರ ಭಾಗಿಯಾಗಿದ್ದಾರೆ ಎಂಬ ಅಂಶವನ್ನು ಕೋರ್ಟ್ ಗಮನಕ್ಕೆ ತಂದಿದೆ.

ಆರೋಪಿಗಳಾದ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಹಾಗೂ ತಾಲಾ ಪೊಲೀಸ್ ಠಾಣಾಧಿಕಾರಿಯಾಗಿದ್ದ ಅಭಿಜಿತ್ ಮೊಂಡಲ್‌ನನ್ನು ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಹಾಜರಪಡಿಸಿ ಕಸ್ಟಡಿ ಅವಧಿ ವಿಸ್ತರಣೆಗೆ ಸಿಬಿಐ ಕೋರಿದೆ. ಈ ವೇಳೆ ಪ್ರಕರಣದಲ್ಲಿ ದಾಖಲೆಗಳನ್ನು ತಿರುಚಿರುವ ಬಗ್ಗೆ ನ್ಯಾಯಾಲಯಕ್ಕೆ ಸಿಬಿಐ ಮಾಹಿತಿ ನೀಡಿದೆ. ಇಬ್ಬರೂ ಆರೋಪಿಗಳನ್ನು ಕೋರ್ಟ್ ಸೆ.30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕೆಲವು ನಕಲಿ ದಾಖಲೆಗಳನ್ನು ತಾಲಾ ಪೊಲೀಸ್ ಠಾಣೆಯಲ್ಲಿ ಸೃಷ್ಟಿಸಲಾಗಿದೆ, ಕೆಲ ದಾಖಲೆಗಳನ್ನು ತಿರುಚಲಾಗಿದೆ. ಪೊಲೀಸ್ ಠಾಣೆಯ ಸಿಸಿಟಿವಿ ದೃಶ್ಯಗಳ ಹಾರ್ಡ್‌ಡಿಸ್ಕ್ ಹಾಗೂ ಡಿಜಿಟಲ್ ವಿಡಿಯೋ ರೆಕಾರ್ಡ್ ಅನ್ನು ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಇನ್ನೆರಡು ದಿನಗಳಲ್ಲಿ ಮಹತ್ವದ ಮಾಹಿತಿ ಕೈಸೇರಲಿದೆ ಎಂದು ಸಿಬಿಐ ಹೇಳಿದೆ.

ಒಸಿಐ ಹೊಸ ನಿಯಮ; ಹಲವು ಸವಲತ್ತು ಕಡಿತ

ದೆಹಲಿ: ಭಾರತ ಸರಕಾರ ಸಾಗರೋತ್ತರ ಭಾರತೀಯ ಸಮುದಾಯಕ್ಕೆ ನೀಡುವ 'ಭಾರತದ ಸಾಗರೋತ್ತರ ನಾಗರಿಕರು' (ಒಸಿಐ) ಸ್ಥಾನಮಾನಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ತಂದಿದ್ದು, ಹಲವು ಸವಲತ್ತುಗಳಿಗೆ ಕತ್ತರಿ ಹಾಕಿದೆ.

ಭಾರತದ ನಾಗರಿಕರಿಗೆ ಸಮಾನ ನಾಗರಿಕ ಸ್ಥಾನಮಾನ ಮತ್ತು ಸವಲತ್ತು ಅನುಭವಿಸುತ್ತಿದ್ದ 'ಒಸಿಐ' ಜನರನ್ನು ಈಗ ವಿದೇಶಿ ಪ್ರಜೆಗಳು ಎಂದು ಮರುವರ್ಗೀಕರಿಸಲಾಗಿದೆ. ವಿವಿಧ ದೇಶಗಳಲ್ಲಿರುವ 3.20 ಕೋಟಿ ಭಾರತೀಯ ನಿವಾಸಿಗಳಿಗೆ ಹೊಸ ನಿಯಮಗಳು ದೊಡ್ಡ ಆಘಾತ ಉಂಟು ಮಾಡಿವೆ. ಪರಿಣಾಮ ಅನಿವಾಸಿ ಭಾರತೀಯ ಸಮುದಾಯ ತೀವ್ರ ಅಸಮಾಧಾಗೊಂಡಿದ್ದಾರೆ. ನನ್ನ ಪತ್ನಿ ಮತ್ತು ಮಕ್ಕಳು ವಿದೇಶಿ ಪ್ರಜೆಗಳು. ಒಸಿಐ ನಿಯಮದಲ್ಲಿನ ಹೊಸ ಬದಲಾವಣೆಗಳಿಂದ ನಿರುತ್ಸಾಹಗೊಂಡಿದ್ದೇನೆ. ನಾನು ನನ್ನ ಭಾರತೀಯ ಪೌರತ್ವ ತ್ಯಜಿಸಬೇಕಾಯಿತು ಎಂದು ಜರ್ಮನಿ ನಿವಾಸಿ ಯಾಗಿರುವ ಭಾರತ ಮೂಲದ ಆದಿತ್ಯ ಅರೋರಾ ಹೇಳಿದ್ದಾರೆ. ಕ್ಯಾಲಿಫೋರ್ನಿಯದಲ್ಲಿರುವ ಭಾರತ ಮೂಲದ ಎಸ್.ಸಂದೀಪ್, ಭಾರತ ದಲ್ಲಾಗುವ ವಿದೇಶಿ ನೇರ ಹೂಡಿಕೆಗೆ 'ಒಸಿಐ'ಗಳ ಕೊಡುಗೆ ದೊಡ್ಡದಿದೆ. ನಾವು ಶತಕೋಟಿ ಡಾಲರ್‌ಗಳಷ್ಟು ಹಣವನ್ನು ಸಕ್ರಮ ಮಾರ್ಗದಲ್ಲೇ ಪೋಷಕರಿಗೆ ಕಳುಹಿಸುತ್ತಿದ್ದೇವೆ ಎಂದಿದ್ದಾರೆ.

ಮಾಜಿ ಪ್ರಧಾನಿ ಜನ್ಮದಿನ

ದೆಹಲಿ: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಗುರುವಾರ 91ನೇ ಜನ್ಮದಿನ ಆಚರಿಸಿಕೊಂಡರು. 2004ರಿಂದ 2014ರವರೆಗೆ ಯುಪಿಎ ಸರಕಾರದ ಮುಖ್ಯಸ್ಥರಾಗಿ ಸಿಂಗ್, 10 ವರ್ಷಗಳ ಕಾಲ ದೇಶದ ಆಡಳಿತ ನಡೆಸಿದ್ದರು. ಆರ್ಥಿಕ ತಜ್ಞರೂ ಆಗಿದ್ದ ಸಿಂಗ್‌ಗೆ ಪ್ರಧಾನಿ ನರೇಂದ್ರ ಮೋದಿ, ಲೋಕಸಭೆ ಯಲ್ಲಿನ ಪ್ರತಿಪಕ್ಷ ನಾಯಕ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಹಲವು ಗಣ್ಯರು ಶುಭ ಕೋರಿದರು.



ಹಳಿ ತಪ್ಪಿದ ಗೂಡ್ಸ್ ರೈಲು

ರಾಂಚಿ: ಜಾರ್ಖಂಡ್‌ನಲ್ಲಿ ಗುರುವಾರ ಸರಕು ಸಾಗಣೆ ರೈಲೊಂದು ಹಳಿ ತಪ್ಪಿದ್ದರಿಂದ 15 ರೈಲುಗಳ ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ. ಉಕ್ಕು ಸಾಗಣೆ ಮಾಡುತ್ತಿದ್ದ ಗೂಡ್ಸ್ ರೈಲು ಬೊಕೊರೊ ಜಿಲ್ಲೆಯಲ್ಲಿ ಹಳಿ ತಪ್ಪಿತ್ತು. ಹಾಗಾಗಿ 14 ಎಕ್ಸ್‌ಪ್ರೆಸ್ ಮತ್ತು ಒಂದು ಸಾಮಾನ್ಯ ರೈಲಿನ ಮಾರ್ಗ ಬದಲಿಸಬೇಕಾಯಿತು. ಪರಿಣಾಮ ಸಾವಿರಾರು ಪ್ರಯಾಣಿಕರು ತೊಂದರೆಗೊಳಗಾದರು.

ಕಲಿಯುಗ ಆರಂಭ ಆದಂತಿದೆ: ಹೈಕೋರ್ಟ್

ಲಖನೌ: ವರ್ಷಗಳಿಂದ ಪತ್ನಿಯಿಂದ ದೂರವಾಗಿರುವ ನಿವೃತ್ತ ಸರಕಾರಿ ನೌಕರ ಜೀವನಾಂಶ ಹಣ ಹೆಚ್ಚಳ ಮಾಡಿದ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ 80ರ ಇಳಿವಯಸ್ಸಿನಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ವಿಚಾರಣೆ ವೇಳೆ ನ್ಯಾಯಾಲಯ ಕಲಿಯುಗ ಆರಂಭವಾದಂತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



ಕಿರಿಯ ಮಗನ ಜತೆ ವಾಸವಾಗಿರುವ ಪತ್ನಿ ಗಾಯತ್ರಿ ದೇವಿಗೆ ಮಾಸಿಕ 5 ಸಾವಿರ ರು. ಜೀವನಾಂಶ ಪಾವತಿಸುವಂತೆ ಕೌಟುಂಬಿಕ ಕೋರ್ಟ್ ಆದೇಶಿಸಿರುವುದನ್ನು ಒಪ್ಪದ ಪತಿ ಮುನೇಶ್ ಕುಮಾರ್, ಕಷ್ಟಪಟ್ಟು ದುಡಿದ ಹಣದಲ್ಲೇ 1981ರಲ್ಲಿ ಪತ್ನಿ ಹೆಸರಲ್ಲಿ ಒಂದು ಮನೆ ಖರೀದಿಸಿದ್ದೆ. ಆದರೆ, ನನ್ನನ್ನೂ ಹಿರಿಯ ಮಗನನ್ನೂ ಬಲಪ್ರಯೋಗಿಸಿ ಮನೆಯಿಂದ ಹೊರಹಾಕಿದರು. ಸದ್ಯ ಹಿರಿ ಮಗನ ಕುಟುಂಬದ ಜತೆ ವಾಸವಿರುವೆ. ಬರುವ 14 ಸಾವಿರ ರು. ಪಿಂಚಣಿಯಲ್ಲೇ ಹೊಂದಿಸಿ 2008ರಿಂದ ಮಾಸಿಕ 2 ಸಾವಿರ ರು.ಪತ್ನಿಗೆ ನೀಡುತ್ತಾ ಬಂದಿರುವೆ. ಈಗ 5 ಸಾವಿರ ರು.ಗೆ ಏರಿಸಿದರೆ ಕೊಡಲಾಗದು ಎಂದು ತಕರಾರು ತೆಗೆದಿದ್ದಾರೆ. ರಾಜಿ ಮಾಡಿಕೊಳ್ಳಿ ಎಂದು ಸಲಹೆ ನೀಡಿದ ಪೀಠ, ವಿಚಾರಣೆಯನ್ನು ಮುಂದೂಡಿದೆ.

ಮಾನಹಾನಿ: ಶಿವಸೇನೆ ಸಂಸದ ರಾವುತ್‌ಗೆ ಜೈಲು

ಮುಂಬೈ: ಮಾನಹಾನಿ ಪ್ರಕರಣದಲ್ಲಿ ಶಿವಸೇನೆ (ಉದ್ಧವ್ ಬಣ) ನಾಯಕ, ಸಂಸದ ಸಂಜಯ್ ರಾವುತ್‌ಗೆ ಮಝುಗಾಂವ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ 15 ದಿನಗಳ ಜೈಲು ಶಿಕ್ಷೆ ವಿಧಿಸಿ ಗುರುವಾರ ತೀರ್ಪು ಪ್ರಕಟಿಸಿದೆ. 25 ಸಾವಿರ ರು. ದಂಡವನ್ನೂ ವಿಧಿಸಲಾಗಿದೆ. ಆದರೆ ಕೆಲವೇ ಗಂಟೆಗಳಲ್ಲಿ ರಾವುತ್‌ಗೆ ಜಾಮೀನು ಮಂಜೂರಾಗಿದೆ. ಬಿಜೆಪಿ ನಾಯಕ ಕಿರಿತ್ ಸೋಮಯ್ಯ ಅವರ ಪತ್ನಿ ಮೇಧಾ ಸೋಮಯ್ಯ ಮಾನ ಹಾನಿ ಪ್ರಕರಣ ದಾಖಲಿಸಿದ್ದರು.ಶಿವಸೇನೆಯ ಮುಖವಾಣಿಯಾದ ಮರಾಠಿ ಪತ್ರಿಕೆ 'ಸಾಮ್ನಾ'ಗೆ ಸಂಜಯ್ ರಾವುತ್ ಕಾರ್ಯನಿರ್ವಾಹಕ ಸಂಪಾದಕರಾಗಿದ್ದಾರೆ. 2022ರ ಏ.15ರ ಸಂಚಿಕೆ ಯಲ್ಲಿ ಮೀರಾ ಬಾಯಂಧರ್ ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಶೌಚಾಲಯ ನಿರ್ಮಾಣ- ನಿರ್ವಹಣೆಯಲ್ಲಿ 100 ಕೋಟಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ತಮ್ಮ ಹಾಗೂ ಪತಿ ವಿರುದ್ಧ ಮಾನಹಾನಿಕರ, ಆಧಾರ ರಹಿತ ಆರೋಪ ಮಾಡಿ ಸುದ್ದಿ ಪ್ರಕಟಿಸಲಾಗಿದೆ. ಸಾರ್ವಜನಿಕರ ದೃಷ್ಟಿಯಲ್ಲಿ ಚಾರಿತ್ರ್ಯಹರಣ ಉದ್ದೇಶದಿಂದಲೇ ಹೀಗೆ ಮಾಡಲಾಗಿದೆ ಎಂದು ಮೇಧಾ ಸೋಮಯ್ಯ ದೂರಿ ದ್ದರು ಎಂದು ಪ್ರೊಫೆಸರ್ ಮೇಧಾ ಪರ ವಕೀಲ ವಿವೇಕಾನಂದ ಗುಪ್ತಾ ತಿಳಿಸಿದ್ದಾರೆ.

ಗುರುತಿಸಲಾಗದ 88 ಶವ ಸ್ವೀಕರಿಸಲು ಗಾಜಾ ನಕಾರ

ಗಾಜಾ ಪಟ್ಟಿ: ಪ್ಯಾಲೆಸ್ತೀನಿಯರ ಕೊಳೆತ 88 ಶವಗಳನ್ನು ಟ್ರಕ್‌ನಲ್ಲಿ ಗಾಜಾ ಪಟ್ಟಿಗೆ ಸಾಗಿಸಿದ ಇಸ್ರೇಲ್ ಕ್ರಮಕ್ಕೆ ಪ್ಯಾಲೆಸ್ತೀನ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಗುರುತೇ ಇಲ್ಲದ, ಮಾಹಿತಿಯೇ ಇರದ ಮೃತದೇಹಗಳನ್ನು ಹೀಗೆ ಕಳುಹಿಸಿರುವುದೇ ಅಮಾನವೀಯ ಎಂದಿರುವ ಪ್ಯಾಲೆಸ್ತೀನ್, ಶವಗಳನ್ನು ಸ್ವೀಕರಿಸಲು ನಿರಾಕರಿಸಿದೆ.

ಇಸ್ರೇಲ್ ಕಳುಹಿಸಿರುವ 88 ಮೃತದೇಹಗಳು ಗುರುತಿಸಲೂ ಆಗದಂತಿವೆ. ಶವಗಳು ಪೂರ್ಣ ಕೊಳೆತಿವೆ, ವಯಸ್ಸು, ಲಿಂಗ, ಯಾವ ಪ್ರದೇಶದವರ ಶವ ಎಂಬ ಯಾವುದೇ ಮಾಹಿತಿಯೂ ಇಲ್ಲದೇ ಟ್ರಕ್‌ನಲ್ಲಿ ಶವಗಳನ್ನು ಹೀಗೆ ಕಳುಹಿಸಿದ್ದು ತಪ್ಪು. ತನ್ನ ಈ ನಡೆಗೆ ಇಸ್ರೇಲ್ ಸಮರ್ಪಕ ಉತ್ತರ ನೀಡಬೇಕು ಎಂದು ಪ್ಯಾಲೆಸ್ತೀನ್ ಆರೋಗ್ಯ ಸಚಿವಾಲಯ ಮಾಧ್ಯಮ ಅಧಿಕಾರಿ ಐಯ್ಯಾದ್ ಕದೀಹ್ ಆಗ್ರಹಿಸಿದ್ದಾರೆ.

ಯಾವುದೇ ಅಂತರಾಷ್ಟ್ರೀಯ ನಿಯಮಗಳನ್ನು ಪಾಲಿಸದ ಇಸ್ರೇಲ್ ನಡೆ ಅಮಾನವೀಯ. ಈ ರೀತಿ ಗುರುತಿಲ್ಲದ ಶವಗಳನ್ನು ಕಳುಹಿಸಿರುವುದು 5ನೇ ಬಾರಿ. ಸ್ವೀಕರಿಸಲು ಸಾಧ್ಯವೇ ಇಲ್ಲ ಎಂದಿದ್ದಾರೆ. ರೆಡ್ ಕ್ರಾಸ್ ಈ ಬಗ್ಗೆ ಇಸ್ರೇಲ್ ನಿಂದ ಮಾಹಿತಿ ಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಕೆಲ ದೃಶ್ಯ ಕತ್ತರಿಸಿದರೆ 'ಎಮರ್ಜೆನ್ಸಿ' ಬಿಡುಗಡೆ

ಮುಂಬೈ: ನಟಿ-ಸಂಸದೆ ಕಂಗನಾ ರಣಾವತ್, ನಿರ್ದೇಶಿಸಿ, ನಟಿಸಿರುವ 'ಎಮರ್ಜೆನ್ಸಿ' ಚಿತ್ರದ ಕೆಲ ವಿವಾದಾತ್ಮಕ ದೃಶ್ಯಗಳಿಗೆ ಕತ್ತರಿ ಹಾಕಿದರೆ ಮಾತ್ರ ಸಿನಿಮಾ ಬಿಡುಗಡೆಗೆ ಅವಕಾಶವಿದೆ ಎಂದು ಸೆನ್ಸಾರ್ ಮಂಡಳಿ (ಸಿಬಿಎಫ್‌ಸಿ) ಬಾಂಬೆ ಹೈಕೋರ್ಟ್‌ಗೆ ತಿಳಿಸಿದೆ. ವಿಚಾರಣೆಯನ್ನು ಸೆ.30ಕ್ಕೆ ಮುಂದೂಡಲಾಗಿದೆ. ಚಿತ್ರಕ್ಕೆ ಸೆನ್ಸಾರ್ ಸರ್ಟಿಫಿಕೆಟ್ ಕೊಡಿಸಿ ಕೊಡುವಂತೆ ಆಗ್ರಹಿಸಿ ಸಹ ನಿರ್ಮಾಣ ಸಂಸ್ಥೆ 'ಝೀ' ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯ ಮೂರ್ತಿ ಬಿ.ಪಿ.ಕೊಲಾಬಾವಲ್ಲಾ ಮತ್ತು ನ್ಯಾ.ಫಿರ್ದೋಶ್ ಪೂನಿವಲ್ಲಾ ಅವರ ಪೀಠ ಗುರುವಾರ ನಡೆಸಿದೆ. ಎಮರ್ಜೆನ್ಸಿ ಚಿತ್ರ ಸಿಖ್ ಸಮುದಾಯವನ್ನು ತಪ್ಪಾಗಿ ಬಿಂಬಿಸಿದೆ ಎಂಬ ವಿವಾದ ಹಿನ್ನೆಲೆ ಸೆನ್ಸಾರ್ ಮಂಡಳಿ ಈವರೆಗೂ ಪ್ರಮಾಣಪತ್ರ ನೀಡದ ಕಾರಣ ಸೆ.6ಕ್ಕೆ ಬಿಡುಗಡೆ ಆಗಬೇಕಿದ್ದ ಚಿತ್ರ ಇನ್ನೂ ಪ್ರದರ್ಶನ ಕಾಣಲು ಸಾಧ್ಯವಾಗಿಲ್ಲ. ಸಿಬಿಎಫ್‌ಸಿ ಪರಿಶೀಲನಾ ಸಮಿತಿ ಚಿತ್ರದ ಕೆಲ ದೃಶ್ಯಗಳಿಗೆ ಕತ್ತರಿ ಹಾಕುವಂತೆ ಸೂಚಿಸಿದೆ. ಆ ಕ್ರಮ ಕೈಗೊಂಡರೆ ಸಿನಿಮಾ ಬಿಡುಗಡೆಗೆ ಯಾವುದೇ ಅಡ್ಡಿ ಇಲ್ಲ ಎಂದು ಸಿಬಿಎಫ್‌ಸಿ ಪರ ವಕೀಲ ಅಭಿನವ್ ತಿಳಿಸಿದ್ದಾರೆ. 'ಝೀ' ಪರ ಹಾಜರಾಗಿದ್ದ ವಕೀಲ ಶರಣ್ ಜಗ್ತಿಯಾನಿ, ಸೆನ್ಸಾರ್ ಮಂಡಳಿ ಸೂಚಿಸಿದ ಬದಲಾವಣೆ ಬಗ್ಗೆ ನಿರ್ಧರಿಸಲು ಸಮಯಾವಕಾಶ ಕೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ವಕ್ಫ್ ಜೆಪಿಸಿಗೆ 1 ಕೋಟಿ ಪತ್ರ: ಐಎಸ್ಐ ಕೈಚಳಕ?

ದೆಹಲಿ: ಸಾರ್ವಜನಿಕರಿಂದ, ಸಮುದಾಯಗಳಿಂದ ವಕ್ಫ್ ತಿದ್ದುಪಡಿ ಕಾಯಿದೆ ವಿಚಾರವಾಗಿ ಸಲಹೆಗಳನ್ನು ಆಹ್ವಾನಿಸಿದ ಜಂಟಿ ಸಂಸದೀಯ ಸಮಿತಿಗೆ 1.2 ಕೋಟಿ ಪತ್ರಗಳು ಬಂದಿವೆ. ಈ ಬಗ್ಗೆ ಸಂಸದೀಯ ಸಮಿತಿ ಸದಸ್ಯರು ಶಂಕೆ ವ್ಯಕ್ತಪಡಿಸಿದ್ದು, ಇದು ಕಾಯಿದೆ ಜಾರಿ ವಿಳಂಬವಾಗಲೆಂದು ಬಾಹ್ಯಶಕ್ತಿಗಳ ಕೈವಾಡವಿರಬಹುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಜಂಟಿ ಸಂಸದೀಯ ಸಮಿತಿಯ ಸದಸ್ಯ, ಬಿಜೆಪಿ ಸಂಸದ ನಿಶಿಕಾಂತ್ ದುಬೆ, 'ತನಿಖೆಗೆ ಆಗ್ರಹಿಸಿ ಗೃಹ ಇಲಾಖೆಗೆ ಪತ್ರ ಬರೆಯಿರಿ' ಎಂದು ಸಮಿತಿ ಅಧ್ಯಕ್ಷ ಜಗದಾಂಬಿಕ ಪಾಲ್ ಅವರನ್ನು ಒತ್ತಾಯಿಸಿದ್ದಾರೆ. 1 ಕೋಟಿಗೂ ಅಧಿಕ ಪತ್ರಗಳು ಬಂದಿರುವುದನ್ನು ನೋಡಿದರೆ ಮೂಲಭೂತವಾದಿಗಳು, ಇಸ್ಲಾಮಿಕ್ ಮುಖಂಡ ಝೂಕಿರ್ ನಾಯಕ್, ಅಥವಾ ವಿದೇಶಿ ಏಜೆನ್ಸಿಗಳ ಪಾತ್ರ ಇರಬಹುದು. ಸಂಸದೀಯ ಪ್ರಕ್ರಿಯೆಗೆ ತಡೆಯೊಡ್ಡುವ ಪ್ರಯತ್ನವೂ ಇದಾಗಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ. ಪತ್ರ ಕಳುಹಿಸಿದವರ ಹಿನ್ನೆಲೆ ಪರಿಶೀಲಿಸುವ ಅಗತ್ಯವಿದೆ ಎಂದಿದ್ದಾರೆ. ವಕ್ಫ್ ತಿದ್ದುಪಡಿ ಕಾಯಿದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿ, ಜನರಿಂದ ಸಲಹೆ ಆಹ್ವಾನಿಸಿತ್ತು. ಎಲ್ಲಾ ಆಯಾಮದ ಅಭಿಪ್ರಾಯ ಪಡೆದು ಸಮಗ್ರ ವರದಿ ನೀಡುವುದೇ ಸಮಿತಿ ಉದ್ದೇಶವಾಗಿತ್ತು. ಈಗ 1.2 ಕೋಟಿ ಪತ್ರಗಳು ಬಂದಿರುವುದು ಸಮಿತಿಯ ಆತಂಕಕ್ಕೆ ಕಾರಣವಾಗಿದೆ.

ಆಯೋಧ್ಯೆಯಲ್ಲಿ ರಾಮತಾರಕ ಯಜ್ಞ

ಆಯೋಧ್ಯೆ: ಉತ್ತರ ಪ್ರದೇಶದ ಪುಣ್ಯ ನಗರಿ ಆಯೋಧ್ಯೆಯ ಶ್ರೀರಾಮ ಜನ್ಮಭೂಮಿಯಲ್ಲಿ ಪಿತೃಪಕ್ಷ ಸಂದರ್ಭ ಲೋಕಕ ಲ್ಯಾಣಾರ್ಥ ರಾಮ ತಾರಕ ಯಜ್ಞ ಸಪ್ತಾಹ ನಡೆಸಿದ್ದು, ಮಹಾಲಯ ಅಮಾವಾಸ್ಯೆ ದಿನವಾದ ಗುರುವಾರವೇ ಯಜ್ಞ ಸಂಪನ್ನಗೊಂಡಿದೆ. ಶ್ರೀ ರಾಮ ಮಂದಿರ ಟ್ರಸ್ಟ್ ವಿಶ್ವಸ್ತರಾದ ಪೇಜಾವರ ಮಠಾಧೀಶ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ಉಪಸ್ಥಿತಿಯಲ್ಲಿಯೇ ಯಜ್ಞ ನಡೆಸಲಾಗಿದೆ. ಗುರುವಾರ ಶ್ರೀಗಳ ಹಾಜರಿಲಯಲ್ಲೇ ಪೂರ್ಣಾಹುತಿ ನೀಡಿ ಯಜ್ಞ ಸಂಪನ್ನಗೊಳಿಸಲಾಗಿದೆ. ಈ ಸಂದರ್ಭ ಟ್ರಸ್ಟ್ ಕಾರ್ಯದರ್ಶಿ ಚಂಪತರಾಯ್, ವಿಶ್ವ ಹಿಂದೂ ಪರಿಷತ್ ಮುಖಂಡ ಜಿ.ಗೋಪಾಲ್ ಮತ್ತಿತರರಿದ್ದರು.

ಬಂಧನ ಭೀತಿಯಲ್ಲಿ ತಲೆ ಮರೆಸಿಕೊಂಡ ನಟ ಸಿದ್ದೀಕ್



ತಿರುವನಂತಪುರಂ: ಕೇರಳ ಚಿತ್ರರಂಗದ ಹಿರಿಯ ನಟ ಸಿದ್ದೀಕ್ ವಿರುದ್ಧ ನಟಿಯೊಬ್ಬರು ಲೈಂಗಿಕ ಕಿರುಕುಳ ದೂರು ನೀಡಿದ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಸಿಗದ ಹಿನ್ನೆಲೆ ನಟ ಸಿದ್ದೀಕ್ ಈಗ ತಲೆ ಮರೆಸಿಕೊಂಡಿದ್ದಾರೆ. ಅವರ ಮೊಬೈಲ್ ಫೋನ್ ಕೂಡಾ ಸ್ವಿಚ್ಡ್ ಆಫ್ ಆಗಿದೆ. ಹಿರಿಯ ನಟನ ವಿರುದ್ಧ ಕೇರಳ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ತನಿಖಾ ತಂಡ(ಎಸ್ಐಟಿ) ಗುರುವಾರ ಲುಕೌಟ್ ನೋಟಿಸ್ ಹೊರಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಿದ್ದೀಕ್ ಫೋಟೊ ಸಮೇತ ಸೂಚನೆ ರವಾನಿಸಲಾಗಿದೆ. ತಕ್ಷಣವೇ ಬಂಧನಕ್ಕೆ ಆದೇಶಿಸಲಾಗಿದೆ.

28 ರಂದು ಪರಂಪರಾ ಪುರಸ್ಕಾರ ಪ್ರದಾನ

ಬೆಂಗಳೂರು: ಇಷುಧಿ ಪ್ರಕಟನಾಲಯದ ಬೆಳ್ಳಿಹಬ್ಬ ಮತ್ತು ಜಂಬೂಸವಾರಿ ಮಾಸಪತ್ರಿಕೆಯ ದಶಮಾನೋತ್ಸವವು ಇದೇ 28ರ ಶನಿವಾರದಂದು ನಗರದ ನಯನ ಸಭಾಂಗಣದಲ್ಲಿ ನಡೆಯಲಿದೆ. ಇದರ ಅಂಗವಾಗಿ ಪರಂಪರಾ ಕಲ್ಚರಲ್ ಫೌಂಡೇಷನ್‌ನ ಪರಂಪರಾ ಕ್ಲಬ್ ಹೌಸ್‌ನ ಸಾವಿರ ಕಥೆಗಳ ಸಂಭ್ರಮ ಕಥಾ ವಿಹಾರ 3.0 ಜರುಗಲಿದ್ದು, ಅಂದು ಬೆಳಿಗ್ಗೆ 10ಗಂಟೆಯಿಂದ ಸಂಜೆ 7.30ರ ವರೆಗೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಇದೇ ಸಂದರ್ಭದಲ್ಲಿ ಮನೋವಿಜ್ಞಾನಿ ಡಾ. ಸಿ.ಆರ್.ಚಂದ್ರಶೇಖರ್, ನೇಪಾಳದ ಪಶುಪತಿನಾಥ ದೇವಸ್ಥಾನದ ವಿಶ್ರಾಂತ ಪ್ರಧಾನ ಅರ್ಚಕ ರಾವಲ್ ಅನಂತಕೃಷ್ಣ ಸೋಮಯಾಜಿ, ನಿವೃತ್ತ ಸೈನಿಕ ಹುಣಸೂರು ರಾಜೇಶ್ ಭಟ್, ಪತ್ರಕರ್ತ ಗಣೇಶ್ ಕಾಸರಗೋಡು, ಉದ್ಯಮಿ ಮತ್ತು ಸಮಾಜಸೇವಕ ಬೇಳೂರು ರಾಘವೇಂದ್ರ ಶೆಟ್ಟಿ ಅವರುಗಳಿಗೆ ಪರಂಪರಾ ಪುರಸ್ಕಾರ ಪ್ರದಾನ ಮಾಡಲಾಗುವುದು. ಶಾಸಕ ಸಿ.ಕೆ.ರಾಮಮೂರ್ತಿ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಉದ್ಯಮಿ ಎಸ್.ರಾಮಕೃಷ್ಣ ಅಡಿಗ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಕತೆಗಾರ ಕೆ.ಎನ್.ಭಗವಾನ್, ಲೇಖಕ ಅಣಕು ರಾಮನಾಥ್ ಅವರು ಆಗಮಿಸುವರು. ಉದ್ಯಮಿಗಳಾದ ಬಾ.ರಾಮಚಂದ್ರ ಉಪಾಧ್ಯ ಮತ್ತು ಜಿ.ಕೆ.ಸೋಮಯಾಜಿ ಉಪಸ್ಥಿತರಿರುವರು. ಎಂದು ಪರಂಪರಾ ಸಂಸ್ಥೆಯ ಅಧ್ಯಕ್ಷ ಜಿ.ಪಿ.ರಾಮಣ್ಣ ಮತ್ತು ಜಂಬೂಸವಾರಿ ಪತ್ರಿಕೆಯ ಸಂಪಾದಕ ಡಿ. ಶರತ್ ಕುಮಾರ್ ತಿಳಿಸಿದ್ದಾರೆ.

{ ಜಗತ್ ಪ್ರಕಾಶ್ ನಡ್ಡಾ } ಕೇಂದ್ರ ಆರೋಗ್ಯ ಸಚಿವ

ಕಾಂಗ್ರೆಸ್ ಪಕ್ಷ ನಗರ ನಕ್ಸಲರ ವಕ್ತಾರರಂತೆ ಕೆಲಸ ಮಾಡುತ್ತಿದೆ. ದೇಶದ ಅತಿ ಹಳೆಯ ಪಕ್ಷವು ವಿನಾಶಕಾರಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದೆ. ಕಾಂಗ್ರೆಸ್ ಭಿನ್ನಮತ ಇಟ್ಟುಕೊಂಡು ಕೆಲಸ ಮಾಡುತ್ತದೆ. ಆದರೆ, ಬಿಜೆಪಿ ಒಗ್ಗಟ್ಟಿನಿಂದ ಕೂಡಿದೆ. ಬೇರುಮಟ್ಟದ ಕಾರ್ಯಕರ್ತ ದೊಡ್ಡ ನಾಯಕನಾಗಲು ಬಿಜೆಪಿಯಲ್ಲಿ ಅವಕಾಶವಿದೆ.

ಕದನ ವಿರಾಮ ಸಾಧ್ಯ–ಲೆಬನಾನ್ | ದಾಳಿ ನಿಲ್ಲಲ್ಲ–ನೆತನ್ಯಾಹು | ಪ್ರಜೆಗಳ ವಾಪಸ್‌ಗೆ ಭಾರತ, ಬ್ರಿಟನ್, ಆಸ್ಟ್ರೇಲಿಯ ಸೂಚನೆ

21 ದಿನ ಕದನ ವಿರಾಮಕ್ಕೆ ಅಮೆರಿಕ, ಫ್ರಾನ್ಸ್ ಕರೆ

ವಾಷಿಂಗ್ಟನ್/ಪ್ಯಾರಿಸ್: ಅಮೆರಿಕ, ಫ್ರಾನ್ಸ್ ಸೇರಿದಂತೆ ಹಲವು ಪ್ರಮುಖ ದೇಶಗಳು ತಕ್ಷಣ 21 ದಿನಗಳ ಕದನ ವಿರಾಮ ಘೋಷಿಸುವಂತೆ ಇಸ್ರೇಲ್–ಲೆಬನಾನ್‌ಗೆ ಕರೆ ನೀಡಿವೆ. ಲೆಬನಾನ್ ಸಂಘರ್ಷ ವಿಚಾರವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಸಭೆಯಲ್ಲಿ ಕದನ ವಿರಾಮ ಬಗ್ಗೆ ಅಮೆರಿಕದ ಶ್ವೇತ ಭವನ ಜಂಟಿ ಹೇಳಿಕೆ ಬಿಡುಗಡೆ ಮಾಡಿದೆ.

ಯುದ್ಧ ಇಸ್ರೇಲ್, ಲೆಬನಾನ್ ಯಾರ ಹಿತವನ್ನೂ ಬಯಸುವುದಿಲ್ಲ. ರಾಜತಾಂತ್ರಿಕ ಮಾರ್ಗದಲ್ಲೇ ಸಂಘರ್ಷ ಕೊನೆಗಾಣಿಸುವ ಸಮಯವಿದು. ಗಡಿಯ ಎರಡೂ ಕಡೆಯ ಜನರು ಸುರಕ್ಷಿತವಾಗಿರುವಂತೆ ಮಾಡಬೇಕಿದೆ. ಸಂಘರ್ಷವಿರುವಾಗ ಮಾತುಕತೆ ಕಷ್ಟ ಎಂದು ವಿಶ್ವಸಂಸ್ಥೆ ತನ್ನ ಹೇಳಿಕೆಯಲ್ಲಿ ಗಮನ ಸೆಳೆದಿದೆ.

ಭಾರತದ 4 ಸಾವಿರ ಜನರು ಲೆಬನಾನ್‌ನಲ್ಲಿದ್ದು ತಕ್ಷಣ ದೇಶ ತೊರೆಯುವಂತೆ ವಿದೇಶಾಂಗ ಇಲಾಖೆ ಇದೇ ವೇಳೆ ಸೂಚನೆ ನೀಡಿದೆ. ಆಸ್ಟ್ರೇಲಿಯ 15 ಸಾವಿರ ಜನರೂ ಲೆಬನಾನ್‌ನಲ್ಲಿದ್ದಾರೆ. ಅಲ್ಲದೇ, ಕೆನಡಾ, ಬ್ರಿಟನ್, ಅಮೆರಿಕ ಆಡಳಿತ ಲೆಬನಾನ್‌ನಲ್ಲಿರುವ ತನ್ನ ಪ್ರಜೆಗಳಿಗೆ ವಾಪಸ್ ಬರುವಂತೆ ಸೂಚನೆ ನೀಡಿವೆ.

ಜಯ ಕಾಣುವವರೆಗೂ ಯುದ್ಧ:

ಈ ಪ್ರಸ್ತಾವನೆಗೆ ಒಪ್ಪಿಗೆ ಇಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕಡ್ಡಿಮುರಿದಂತೆ ಪ್ರತಿಕ್ರಿಯಿಸಿದ್ದಾರೆ. ಅಲ್ಲದೇ, ಪೂರ್ಣ ಪ್ರಮಾಣದ ದಾಳಿಗೆ ತಯಾರಾಗುವಂತೆ ತಮ್ಮ ಸೇನೆಗೆ ಸೂಚನೆಯನ್ನೂ ನೀಡಿದ್ದಾರೆ. ಹಿಜ್ಬುಲ್ಲಾ ಉಗ್ರರನ್ನು ನಾಶ ಮಾಡುವವರೆಗೂ ಕದನ ನಿಲ್ಲುವುದಿಲ್ಲ ಎಂದು ಹೇಳಿದ್ದಾರೆ. ಇನ್ನೊಂದೆಡೆ ಲೆಬನಾನ್ ಪ್ರಧಾನಿ ನಾಜಿಬ್ ಮಿಕಾತಿ, ಕದನ ವಿರಾಮ ಪ್ರಸ್ತಾವನೆ ಸ್ವಾಗತಿಸಿದ್ದಾರೆ. ಆದರೆ ಅಂತಾರಾಷ್ಟ್ರೀಯ ನಿರ್ಣಯಗಳನ್ನು ಪಾಲಿಸಲು ಇಸ್ರೇಲ್ ಬದ್ಧವೇ? ಎಂದು ಪ್ರಶ್ನಿಸಿದ್ದಾರೆ. ಆ ಮೂಲಕ ಕದನ ಮುಂದುವರೆಸಲು ಲೆಬನಾನ್‌ಗೆ ಆಸಕ್ತಿ ಇಲ್ಲ ಎಂಬುದನ್ನು ಸೂಚ್ಯವಾಗಿ ಹೇಳಿದ್ದಾರೆ.

ಆದರೆ ಇರಾನ್ ಬೆಂಬಲಿತ ಹಿಜ್ಬುಲ್ಲಾ ಉಗ್ರ ಸಂಘಟನೆಯ ನಿರ್ಧಾರ ಏನು? ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಮಂಗಳವಾರವಷ್ಟೇ ಇರಾನ್‌ನ ನಾಯಕ, ಹಿಜ್ಬುಲ್ಲಾ ಸಂಘಟನೆ ಬಗ್ಗು ಬಡಿಯುವುದು ಅಷ್ಟು ಸುಲಭವಲ್ಲ ಎಂದು ಬೆದರಿಕೆ ರೀತಿಯಲ್ಲೇ ಹೇಳಿದ್ದರು.

ಇಸ್ರೇಲ್ ಹಿಜ್ಬುಲ್ಲಾದತ್ತ ಗುರಿಯಿಟ್ಟು 10 ದಿನಗಳಾಗಿವೆ. ಲೆಬನಾನ್ ನೆಲದಿಂದ ಹಿಜ್ಬುಲ್ಲಾ ಕೂಡ ಇಸ್ರೇಲ್‌ನತ್ತ ನೂರಾರು ರಾಕೆಟ್‌ಗಳ ದಾಳಿ ನಡೆಸಿದೆ. ಆದರೆ ಇಸ್ರೇಲ್ ದಾಳಿ ಪರಿಣಾಮ ಲೆಬನಾನ್‌ನ 90 ಸಾವಿರಕ್ಕೂ ಅಧಿಕ ಮಂದಿ ಮನೆ ತೊರೆಯುವಂತಾಗಿದೆ. 500ಕ್ಕೂ ಅಧಿಕ ಆಶ್ರಯ ಕೇಂದ್ರಗಳನ್ನು ಸುರಕ್ಷಿತ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಆಸ್ತಿಗಳ ಹಾನಿ ಲೆಕ್ಕಕ್ಕೆ ಸಿಗದಂತಾಗಿದೆ. ದಕ್ಷಿಣ ಲೆಬನಾನ್, ಬೈರೂತ್ ನಗರಗಳೇ ಇಸ್ರೇಲ್ ಸೇನೆಯ ಗುರಿಯಾಗಿವೆ. ಬುಧವಾರ ರಾತ್ರಿ ಇಸ್ರೇಲ್, ಹಿಜ್ಬುಲ್ಲಾದ 75 ನೆಲೆಗಳನ್ನು ಗುರಿಯಾಗಿಸಿ ರಾಕೆಟ್ ದಾಳಿ ನಡೆಸಿದೆ. ಪ್ರತಿಯಾಗಿ ಹಿಜ್ಬುಲ್ಲಾ ಉತ್ತರ ಇಸ್ರೇಲ್ ಮೇಲೆ 45 ರಾಕೆಟ್‌ಗಳನ್ನು ಹಾರಿಸಿದೆ. ಆದರೆ, ಇಸ್ರೇಲ್‌ನ ಐರನ್ ಡೋಮ್ ಆ ಕ್ಷಿಪಣಿಗಳನ್ನು ಆಕಾಶದಲ್ಲೇ ಸಿಡಿಯುವಂತೆ ಮಾಡಿದೆ.

ಸಿರಿಯಾದ 23 ನಿರಾಶ್ರಿತರು ಬಲಿ

ಇಸ್ರೇಲ್ ದಾಳಿಗೆ ಈವರೆಗೆ ಲೆಬನಾನ್‌ನಲ್ಲಿ 650ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ. ಅವರಲ್ಲಿ 23 ಸಿರಿಯಾ ನಿರಾಶ್ರಿತರೂ ಸೇರಿದ್ದಾರೆ. ಯುನಿನ್ ಗ್ರಾಮಕ್ಕೆ ಇಸ್ರೇಲ್ ರಾಕೆಟ್ ಅಪ್ಪಳಿಸಿದಾಗ 27 ಮಂದಿ ಸಾವನ್ನಪ್ಪಿದರು. ಕಟ್ಟಡಗಳ ಅವಶೇಷಗಳಡಿಯಿಂದ 23 ಸಿರಿಯಾ ಪ್ರಜೆಗಳ ಮೃತದೇಹಗಳೂ ಪತ್ತೆಯಾಗಿದೆ ಎಂದು ಲೆಬನಾನ್ ಹೇಳಿದೆ. ಇದೇ ವೇಳೆ, 17 ಸಾವಿರಕ್ಕೂ ಅಧಿಕ ಲೆಬನಾನ್ ಪ್ರಜೆಗಳು, ಲೆಬನಾನ್‌ನಲ್ಲಿದ್ದ ಸಿರಿಯಾ ಪ್ರಜೆಗಳು ಸಿರಿಯಾ ಪ್ರವೇಶಿಸಿ ಆಶ್ರಯ ಕೋರಿದ್ದಾರೆ.

ಹಿಜ್ಬುಲ್ಲಾ ಏರ್ ಕಮಾಂಡರ್‌ನತ್ತ ಗುರಿ

ಹಿಜ್ಬುಲ್ಲಾ ಶಸ್ತ್ರಾಸ್ತ್ರ ಸಂಗ್ರಹ, ಕಮಾಂಡರ್‌ಗಳನ್ನು ಗುರಿಯಾಗಿಸಿ ಇಸ್ರೇಲ್ ಸತತ ದಾಳಿ ನಡೆಸುತ್ತಿದೆ. ಗುರುವಾರ ನಡೆದ ದಾಳಿಯಲ್ಲಿ ಬೈರೂತ್‌ನಲ್ಲಿರುವ ಹಿಜ್ಬುಲ್ಲಾ ವಾಯುಪಡೆ ಗುರಿಯಾಗಿಸಲಾಗಿದೆ ಎಂದು ಇಸ್ರೇಲ್‌ನ ಸೇನಾ ರೇಡಿಯೊ ವರದಿ ಮಾಡಿದೆ. ಬೈರೂತ್‌ನ ದಹಿಯೇ ಪ್ರದೇಶದಲ್ಲಿ ಹಿಜ್ಬುಲ್ಲಾ ಉನ್ನತ ನಾಯಕರ ನೆಲೆ ಪತ್ತೆ ಹಚ್ಚಿರುವ ಇಸ್ರೇಲ್, ಅತ್ತಲೇ ರಾಕೆಟ್‌ಗಳನ್ನು ಗುರಿ ಇಟ್ಟಿದೆ. ತೈರೆ ಪ್ರದೇಶದತ್ತಲೂ 20 ರಾಕೆಟ್‌ಗಳನ್ನು ಇಸ್ರೇಲ್ ಉಡಾಯಿಸಿದೆ. ಜಬಾಲಿಯಾ ಶಾಲೆ ಗುರಿಯಾಗಿಸಿದ್ದ ದಾಳಿಯಲ್ಲಿ ಮಕ್ಕಳು, ಮಹಿಳೆಯರು ಸೇರಿ 15 ಮಂದಿ ಸಾವನ್ನಪ್ಪಿದ್ದಾರೆ.

ಜನರೆಲ್ಲ ಬಿಜಿ; ಖಾಲಿ ಉಳಿಯುತ್ತಿರುವ ಪಿಜಿ

ವರ್ಕ್ ಫ್ರಂ ಹೋಮ್ ನಿಲ್ಲಿಸಲು ಪಿಜಿ ಮಾಲೀಕರಿಂದ ಹೆಚ್ಚಿದ ಒತ್ತಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೋರಮಂಗಲದ ಪಿಜಿಗೆ ನುಗ್ಗಿದ ಯುವಕನೊಬ್ಬ ಯುವತಿಯನ್ನು ಹತ್ಯೆಗೈದ ಬೆನ್ನಲ್ಲೇ ನಗರದ ಪಿಜಿಗಳು ಖಾಲಿಯಾಗುತ್ತಿವೆ.

ಈ ಕೊಲೆಯ ಬಳಿಕ ಪಿಜಿಗಳಿಗೆ ಸೇರುವವರ ಸಂಖ್ಯೆಯು ಕಡಿಮೆಯಾಗುತ್ತಿದ್ದು, ಇದರ ಜತೆಗೆ ಹಲವು ಕಂಪನಿಗಳು ವರ್ಕ್ ಫ್ರಂ ಹೋಮ್ ಅವಕಾಶವನ್ನು ನೀಡುತ್ತಿದೆ. ವರ್ಕ್ ಫ್ರಮ್ ಹೋಮ್ ಸಹ ಇರುವುದರಿಂದ ಯಾರೂ ಪಿಜಿಗೆ ಬರುವುದೇ ಇಲ್ಲ. ಎಲ್ಲಾ ಸುರಕ್ಷತೆ ಕೊಟ್ಟರೂ ಬೆಂಗಳೂರಿನಲ್ಲಿ ಪಿಜಿಗಳು ಖಾಲಿ ಖಾಲಿ ಆಗಿವೆ. ಹಲವು ಕಂಪನಿಗಳು ತಮ್ಮ ಸಿಬ್ಬಂದಿಗೆ ವರ್ಕ್ ಫ್ರಮ್ ಹೋಮ್, ಹೈಬ್ರಿಡ್ ಮೋಡ್‌ನಲ್ಲಿ ಕೆಲಸ ಮಾಡಲು ಹೇಳಿರುವುದು ಬೆಂಗಳೂರಿನ ಪಿಜಿ ಮಾಲೀಕರಿಗೆ ತಲೆನೋವಾಗಿ ಪರಿಣಮಿಸಿದೆ. ಹೀಗಾಗಿ ವರ್ಕ್‌ಫ್ರಂ ಹೋಮ್ ನಿಲ್ಲಿಸುವಂತೆ ಪಿಜಿ ವೆಲ್‌ಫೇರ್ ಅಸೋಸಿಯೇಷನ್ ಕಂಪನಿಗಳಿಗೆ ಮನವಿ ಮಾಡಿದೆ.

ಇನ್ನು ಇದರ ಜತೆಗೆ ಬಿಬಿಎಂಪಿಯು ಪಿಜಿಗಳಿಗೆ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದು, ಸುರಕ್ಷತೆ, ಸ್ಥಳಾವಕಾಶ ಎಂದು ನೂರು ಹೊಸ ನಿಯಮಗಳನ್ನು ಹೇರುತ್ತಿದೆ. ಇವೆಲ್ಲಾ ಸೌಕರ್ಯಗಳನ್ನು ನೀಡಿದರೂ ಪಿಜಿಗಳಿಗೆ ಜನರು ಆಗಮಿಸುತ್ತಿಲ್ಲ. ಹಲವು ಖರ್ಚುಗಳಿರುವಾಗ ಪಿಜಿಗಳಿಗೆ ಜನರು ಆಗಮಿಸದಿದ್ದರೆ ಎಲ್ಲವನ್ನೂ ಹೇಗೆ ಸುಧಾರಿಸಿಕೊಂಡು ಹೋಗುವುದು ಎಂದು ಪಿಜಿ ಮಾಲೀಕರು ಹೈರಾಣಾಗಿ ಹೋಗಿದ್ದಾರೆ.

ಒಂದು ದಿನ ಬರುತ್ತಾರೆ, ಎರಡನೇ ದಿನ ಇರುವುದೇ ಇಲ್ಲ

ಕಂಪನಿಗಳು ಹೈಬ್ರಿಡ್ ಮೋಡ್, ವರ್ಕ್ ಫ್ರಮ್ ಹೋಮ್ ಸೌಲಭ್ಯ ನೀಡಿರುವುದರಿಂದ ಕೆಲವರು ಪಿಜಿಯಲ್ಲಿ ಕೆಲವೇ ದಿನಗಳಿಗೆ ಮಾತ್ರ ಬರುತ್ತಾರೆ. ಪಿಜಿಯಲ್ಲಿ ಇವತ್ತು ಇದ್ದರೆ, ನಾಳೆ ಇರುವುದಿಲ್ಲ. ಇದರಿಂದ ಪಿಜಿ ಮಾಲೀಕರಿಗೆ ಯಾವುದೇ ಲಾಭವಾಗುವುದಿಲ್ಲ, ಇದೆಲ್ಲದರ ಜತೆಗೆ ಒಂದು ತಿಂಗಳಿನಲ್ಲಿ ಪಿಜಿಯಲ್ಲಿ ಎಷ್ಟು ದಿನ ಇರುತ್ತಾರೋ ಅಷ್ಟೇ ದಿನದ ಪೇಮೆಂಟ್ ಮಾಡುತ್ತಾರೆ. ತಿಂಗಳ ಲೆಕ್ಕದಲ್ಲಿ ಯಾರೂ ಪೇಮೆಂಟ್ ಮಾಡುವುದಿಲ್ಲ. ಹೀಗಾಗಿ ತಿಂಗಳಿಗೆ 15 ದಿನ ಪೇಮೆಂಟ್ ಮಾಡಿದರೆ ಉಳಿದ 15 ದಿನ ಪಿಜಿಗಳು ಖಾಲಿ ಖಾಲಿ ಇರುತ್ತವೆ.



ತಿಂಗಳ ಲೆಕ್ಕದಲ್ಲೇ ಬಿಲ್ ಕಟ್ಟಬೇಕು

ಪಿಜಿ ಮಾಲೀಕರಿಗೆ ಪೇಮೆಂಟ್ ದಿನದ ಲೆಕ್ಕದಲ್ಲಿ ಆಗುತ್ತದೆ. ಆದರೆ ಪಿಜಿ ಮಾಲೀಕರು ಮಾತ್ರ ತಿಂಗಳ ಲೆಕ್ಕದಲ್ಲಿ ವೈಫೈ ಬಿಲ್, ಕರೆಂಟ್ ಬಿಲ್‌ಗಳನ್ನು ಕಟ್ಟಬೇಕು. ಪಿಜಿ ಮಾಡಲು ಹಲವು ಕಡೆ ಕಟ್ಟಡ ಲೀಸ್ ಪಡೆದಿರುತ್ತೇವೆ ಅವರಿಗೂ ಕೂಡ ಹಣ ಕೊಡಬೇಕು. ಪ್ರತಿ ತಿಂಗಳು ಲಕ್ಷಾಂತರ ರುಪಾಯಿಯನ್ನು ನಾವು ಕಟ್ಟಬೇಕಾಗುತ್ತದೆ. ಹೀಗಾದರೆ ನಾವು ಬದುಕು ಸಾಗಿಸುವುದು ಹೇಗೆ ಎಂಬುದು ಪಿಜಿ ಮಾಲೀಕರ ಪ್ರಶ್ನೆಯಾಗಿದೆ.

ಪ್ರಧಾನಿ ಪುಣೆ ಭೇಟಿ ಕೊನೆ ಕ್ಷಣ ರದ್ದು | ರೆಡ್ ಅಲರ್ಟ್

ಮುಂಬೈನಲ್ಲಿ ಭಾರಿ ಮಳೆ: ಸಿಡಿಲಿಗೆ ಮೂರು ಬಲಿ

ಮುಂಬೈ: ಮುಂಬೈ ಮತ್ತು ಸುತ್ತಲ ಹಲವು ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತಿದ್ದು, ತಗ್ಗು ಪ್ರದೇಶಗಳಲ್ಲಿರುವ ಮನೆಗಳಿಗೆ ನೀರು ನುಗ್ಗಿದೆ. ಸ್ಥಳೀಯ ರೈಲು ಮತ್ತು ವಾಹನಗಳ ಸಂಚಾರದಲ್ಲಿ ವ್ಯತ್ಯಯವಾಗಿದೆ. ಗುರುವಾರ ಮುಂಬೈನಲ್ಲಿ ಶಾಲಾ–ಕಾಲೇಜಿಗೆ ರಜೆ ನೀಡಲಾಗಿದೆ. ಹವಾಮಾನ ವೈಪರೀತ್ಯದಿಂದ 2 ವಿಮಾನಗಳನ್ನು ಮುಂಬೈ ಬದಲು ಬೇರೆ ವಿಮಾನ ನಿಲ್ದಾಣದೆಡೆಗೆ ತಿರುಗಿಸಲಾಗಿದೆ.

ಮುಂಬೈ, ಥಾಣೆ, ರಾಯಗಡ ಮತ್ತು ರತ್ನಗಿರಿ ಜಿಲ್ಲೆಗಳಲ್ಲಿ ಮಿಂಚು ಮತ್ತು ಬಿರುಗಾಳಿ ಸಹಿತ ಭಾರಿ ಮಳೆ ಮತ್ತು ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ವಾಣಿಜ್ಯ ನಗರಿ ಮತ್ತು ಪಕ್ಕದ ಜಿಲ್ಲೆಗಳಿಗೆ ಶುಕ್ರವಾರಕ್ಕೆ ರೆಡ್ ಅಲರ್ಟ್ ಘೋಷಿಸಿದೆ.

ಸಿಡಿಲಿಗೆ 3 ಬಲಿ: ಥಾಣೆ ಜಿಲ್ಲೆಯಲ್ಲಿ 2 ದಿನಗಳಲ್ಲಿ ಮಳೆ ವೇಳೆ ಪ್ರತ್ಯೇಕ ಘಟನೆಗಳಲ್ಲಿ ಸಿಡಿಲಿಗೆ ಮೂವರು ಬಲಿಯಾಗಿದ್ದಾರೆ. ಮುರ್ಬಾದ್ ತಾಲೂಕಿನ ಶಿರಗಾಂವ್ ಮತ್ತು ಕಲ್ಯಾಣ್ ಬಳಿ ಸಿಡಿಲು ಬಡಿದು ಕಲ್ಲುಕ್ವಾರಿಯಲ್ಲಿ ಕೆಲಸ ಮಾಡುತ್ತಿದ್ದ ಪುರುಷ ಮತ್ತು ಮಹಿಳೆ ಮೃತಪಟ್ಟಿದ್ದಾರೆ. ಶಿರಗಾಂವ್‌ನಲ್ಲಿ ಮಧ್ಯವಯಸ್ಕರೊಬ್ಬರು ಮೃತಪಟ್ಟಿದ್ದಾರೆ.

ಭೇಟಿ ರದ್ದು: ರಾಜ್ಯಾದ್ಯಂತ ಭಾರಿ ಮಳೆ ಸುರಿಯುತ್ತಿರುವ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರ ಪುಣೆ ಭೇಟಿ ರದ್ದಾಗಿದೆ. ಪುಣೆಯ ನೂತನ ಮೆಟ್ರೋ ಮಾರ್ಗ ಉದ್ಘಾಟನೆಗೆ ಪ್ರಧಾನಿ ಮೋದಿ ಬರಬೇಕಿತ್ತು.

ಮಲ್ಟಿಲೆವೆಲ್ ಪಾರ್ಕಿಂಗ್‌ನಲ್ಲಿ ವಾಣಿಜ್ಯ ಚಟುವಟಿಕೆಗೆ ಮನವಿ

ಬೆಂಗಳೂರು: ಬಿಬಿಎಂಪಿಯು ಆರಂಭಿಸಿದ ಮಲ್ಟಿಲೆವೆಲ್ ಪಾರ್ಕಿಂಗ್ ಸ್ಥಳದಲ್ಲಿ ರೆಸ್ಟೋರೆಂಟ್ ಆರಂಭಿಸಲು ಅಥವಾ ವಾಣಿಜ್ಯ ಚಟುವಟಿಕೆಯನ್ನು ಆರಂಭಿಸಲು ಅನುಮತಿ ನೀಡುವಂತೆ ಕೋಟಿ ಕೋಟಿ ಹಣ ನೀಡಿ ಟೆಂಡರ್ ಪಡೆದ ಗುತ್ತಿಗೆದಾರ ಸಂಸ್ಥೆ ಪ್ರಿನ್ಸ್ ರಾಯಲ್ ಸಂಸ್ಥೆ ಪಾಲಿಕೆಗೆ ಮನವಿ ಮಾಡಿದೆ. ನಗರದ ವಾಹನ ದಟ್ಟಣೆ ನಿಯಂತ್ರಿಸುವ ಸಲುವಾಗಿ ಪಾಲಿಕೆಯು ಫ್ರೀಡಂ ಪಾರ್ಕ್‌ನಲ್ಲಿ ನಿರ್ಮಿಸಿದ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಥಳವನ್ನು ನಿರ್ಮಿಸಲಾಗಿದ್ದು, ಆದರೆ ಈ ಪಾರ್ಕಿಂಗ್ ವ್ಯವಸ್ಥೆಗೆ ಯಾವುದೇ ರೀತಿಯ ಪ್ರತಿಕ್ರಿಯೆ ದೊರೆಯದ ಹಿನ್ನೆಲೆ ಈ ಸ್ಥಳವನ್ನು ಗುತ್ತಿಗೆ ಪಡೆದ ಸಂಸ್ಥೆಯ ಮುಖ್ಯಸ್ಥರು ಪಾಲಿಕೆಯ ಆಯುಕ್ತರಿಗೆ ಪಾರ್ಕಿಂಗ್ ಸ್ಥಳದಲ್ಲಿ ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡುವಂತೆ ಪತ್ರೆ ಬರೆದಿದ್ದು, ಫ್ರೀಡಂ ಪಾರ್ಕ್‌ನಲ್ಲಿ ನಿರ್ಮಾಣ ಮಾಡಲಾಗಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಸ್ಥಳವನ್ನು 8 ಕೋಟಿ ರು. ನೀಡಿ ಟೆಂಡರ್ ಪಡೆದುಕೊಂಡಿದ್ದೇವೆ. ಆದರೆ ನಮಗೆ ಇದರಲ್ಲಿ ಲಾಭ ದೊರೆಯುತ್ತಿಲ್ಲ ಹೀಗಾಗಿ ಈ ಕಟ್ಟಡದ ಬೇಸ್‌ಮೆಂಟ್‌ನಲ್ಲಿ ರೆಸ್ಟೋರೆಂಟ್ ನಿರ್ಮಾಣ ಮಾಡಲು ಅನುಮತಿ ನೀಡಿ ಎಂದು ಮನವಿ ಮಾಡಿದ್ದಾರೆ. ಈ ಹಿಂದೆ ಪಾರ್ಕಿಂಗ್ ಲಾಟ್ ನಿರ್ವಹಣೆಗೆ 7 ಬಾರಿ ಟೆಂಡರ್ ಕರೆದಿದ್ದರೂ ಯಾರೊಬ್ಬರೂ ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರಲಿಲ್ಲ. ಹೀಗಾಗಿ ರಾಯಲ್ ಸಂಸ್ಥೆಯ ವರು ಎಂಟನೆ ಬಾರಿಗೆ 8 ಕೋಟಿ ರು.ಗಳಿಗೆ ಟೆಂಡರ್ ಪಡೆದುಕೊಂಡಿ ದ್ದರು. ಪ್ರತಿನಿತ್ಯ 50 ಕಾರುಗಳು ಪಾರ್ಕಿಂಗ್ ಲಾಲ್‌ಗೆ ಬರುತ್ತಿಲ್ಲ ಹೀಗಾಗಿ ಇದುವರೆಗೂ 70 ಲಕ್ಷ ರು.ಗಳಿಗೂ ಹೆಚ್ಚು ನಷ್ಟವಾಗಿದೆ. ಹೀಗಾಗಿ ನಮಗೆ ಆಗಿರುವ ನಷ್ಟ ಭರಿಸಿಕೊಳ್ಳಲು ಹೋಟೆಲ್ ನಡೆಸಲು ಇಲ್ಲವೆ ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಿ ಎಂದು ಬಿಬಿಎಂಪಿಗೆ ಪತ್ರ ಬರೆದಿದೆ.

ಹಂತ ಹಂತವಾಗಿ ರಾಜೀವ್ ಗಾಂಧಿ ವಿವಿ ಸ್ಥಳಾಂತರ

ವೈದ್ಯಕೀಯ ವಿವಿ ಕೇಂದ್ರ ಕಚೇರಿ ರಾಮನಗರಕ್ಕೆ | ಗೃಹ ಮಂಡಳಿಯ ಜಮೀನಿನಲ್ಲಿ ಕಾಲೇಜು ಕಟ್ಟಡ ನಿರ್ಮಾಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯವನ್ನು ಹಂತ ಹಂತವಾಗಿ ರಾಮನಗರಕ್ಕೆ ಸ್ಥಳಾಂತರ ಹಾಗೂ ಕನಕಪುರ ಮೆಡಿಕಲ್ ಕಾಲೇಜಿಗೆ ಮೂಲಸೌಕರ್ಯ ಹೆಚ್ಚಿಸಿ ಎನ್‌ಎಂಸಿ (ನ್ಯಾಷನಲ್ ಮೆಡಿಕಲ್ ಕಮಿಷನ್)ಗೆ ಮರು ಅರ್ಜಿ ಸಲ್ಲಿಸಲು ತೀರ್ಮಾ ನಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ರಾಮನಗರ ಹಾಗೂ ಕನಕಪುರ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಹಾಗೂ ಕಾರ್ಯಾರಂಭ ಸಂಬಂಧ ವಿಧಾನಸೌಧದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಸಭೆ ನಡೆಸಿದರು. ಬಳಿಕ ಮಾತನಾಡಿದ ಡಿ.ಕೆ.ಶಿವಕುಮಾರ್, ರಾಮನಗರದಲ್ಲಿ ಕಟ್ಟಡ ನಿರ್ಮಾಣಕ್ಕಿರುವ ಭೂ ಸ್ವಾಧೀನ ಸಮಸ್ಯೆಗೆ ಪರಿಹಾರ ನೀಡಿ ಕಾಮಗಾರಿ ನಡೆಸಲಾಗುತ್ತಿದೆ. ರಾಮನಗರದಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಲು ಅಗತ್ಯ ಮೂಲಭೂತ ಸೌಕರ್ಯ ಒದಗಿಸಲಾಗುತ್ತಿದೆ. ವೈದ್ಯಕೀಯ ವಿವಿ ಕೇಂದ್ರ, ಕಚೇರಿಯನ್ನು ರಾಮನಗರಕ್ಕೆ ಸ್ಥಳಾಂತರಗೊಳಿಸಲು ಸೂಚಿಸಿದ್ದೇನೆ. ಈ ವಿಚಾರವಾಗಿ ಈ ಹಿಂದೆ ಸರಕಾರಿ ಆದೇಶ ಹೊರಡಿಸಲಾಗಿದ್ದು, ಹಂತ ಹಂತವಾಗಿ ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು.

ಕನಕಪುರದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿತ್ತು. ಗೃಹ ಮಂಡಳಿಯಿಂದ ಜಮೀನು ಪಡೆದು ಕಾಲೇಜು ಕಟ್ಟಡ ನಿರ್ಮಾಣ ಮಾಡಲಾಗುವುದು. ಕನಕಪುರದಲ್ಲಿ ಮೂಲಸೌಕರ್ಯವಿಲ್ಲ ಎಂದು ಎನ್‌ಎಂಸಿಯಿಂದ ಅರ್ಜಿ ತಿರಸ್ಕರಿಸಲಾಗಿತ್ತು. ಹೀಗಾಗಿ ಮೂಲಸೌಕರ್ಯ ಹೆಚ್ಚಿಸಿ ಮತ್ತೆ ಹೊಸದಾಗಿ ಅರ್ಜಿ ಸಲ್ಲಿಸಲು ಇಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಹಿಂದೆ ಕನಕಪುರದಲ್ಲಿ ಮೆಡಿಕಲ್ ಕಾಲೇಜು ಆರಂಭಿಸಲು ಟೆಂಡರ್ ಕರೆದು ಭೂಮಿ ಪೂಜೆ ಮಾಡಲಾಗಿತ್ತು. ನಂತರ ಯಡಿ ಯೂರಪ್ಪನವರ ಸರಕಾರದಲ್ಲಿ ಮಾಜಿ ಸಚಿವ ಸುಧಾಕರ್ ಅವರು ಚಿಕ್ಕಬಳ್ಳಾಪುರಕ್ಕೆ ಆ ಮೆಡಿಕಲ್ ಕಾಲೇಜು ತೆಗೆದುಕೊಂಡು ಹೋದರು. ಆಗ 450 ಕೋಟಿ ಇದ್ದ ಮೆಡಿಕಲ್ ಕಾಲೇಜು ನಿರ್ಮಾಣ ವೆಚ್ಚ 850 ಕೋಟಿಗೆ ಏರಿಕೆಯಾಗಿದೆ ಎಂದು ವಿವರಿಸಿದರು.

ದ್ವೇಷದ ರಾಜಕಾರಣಕ್ಕೆ ಕೈತಪ್ಪಿತ್ತು: ಬಿಜೆಪಿ ದ್ವೇಷದ ರಾಜಕಾರಣ ಮಾಡಿದೆ. ನಾವು ಬಜೆಟ್ ನಲ್ಲಿ ಇದನ್ನು ಘೋಷಿಸಿದ್ದು, ಇದನ್ನು ಹಂತ ಹಂತವಾಗಿ ಪೂರ್ಣಗೊಳಿಸುತ್ತೇವೆ. ಕಾಲೇಜು ನಿರ್ಮಾಣಕ್ಕೆ ಅನುಮತಿ ನೀಡುವಂತೆ ಮರು ಅರ್ಜಿ ಹಾಕುತ್ತೇವೆ. ರಾಮನಗರದಲ್ಲಿನ ಕಟ್ಟಡ ಕಾಮಗಾರಿಗೆ 600 ಕೋಟಿ ಬಿಡು ಗಡೆಯಾಗಿದ್ದು, ಕೆಲಸ ಭರದಿಂದ ಸಾಗುತ್ತಿದೆ. ನಾವು ಅಭಿವೃದ್ಧಿ ವಿಚಾರದಲ್ಲಿ ರಾಜಕಾರಣ ಮಾಡುವುದಿಲ್ಲ ಎಂದು ತಿಳಿಸಿದರು. ವಿವಿಯನ್ನು ಯಾವಾಗ ಸ್ಥಳಾಂತರ ಮಾಡಲಾಗುವುದು ಎಂದು ಕೇಳಿದಾಗ, ರಾಜೀವ್ ಗಾಂಧಿ ವಿವಿ ಕೇಂದ್ರ, ಕಚೇರಿ ರಾಮನಗರದಲ್ಲಿ ನಿರ್ಮಾಣ ಮಾಡಬೇಕು ಎಂದು 2008ರಲ್ಲೇ ಸರಕಾರದ ಆದೇಶ ಹೊರಡಿಸಿ ಬಿಲ್ ಮಂಡಿಸಲಾಗಿದೆ. ಇದನ್ನು ಹಂತ ಹಂತವಾಗಿ ಸ್ಥಳಾಂತರ ಮಾಡಲಾಗುವುದು ಎಂದು ತಿಳಿಸಿದರು.

ಮಾರ್ಕ್ ಆಗಿಲ್ಲ ಬ್ಲ್ಯಾಕ್ ಎಲ್ಲಿಂದ ಬಂತು

ಇನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಕೆಲವರು ಸಿದ್ದರಾಮಯ್ಯ ರಾಜಕೀಯ ಜೀವನದಲ್ಲಿ ಈ ಪ್ರಕರಣ ಬ್ಲ್ಯಾಕ್ ಮಾರ್ಕ್ ಎನ್ನುತ್ತಿದ್ದಾರೆ. ಮಾರ್ಕ್ ಆಗಿಲ್ಲದಿರುವಾಗ ಬ್ಲ್ಯಾಕ್ ಎಲ್ಲಿಂದ ಆಗುತ್ತದೆ. ತನಿಖೆ ನಡೆಯಬೇಕು. ಕೆಲವರು ತಮ್ಮ ತಮ್ಮ ಅಭಿಪ್ರಾಯ ಹೇಳಿದ್ದಾರೆಯೇ ಹೊರತು. ಮುಖ್ಯಮಂತ್ರಿಗಳು ತಪ್ಪು ಮಾಡಿದ್ದಾರೆ ಎಂದು ಸಾಬೀತು ಪಡಿಸಿಲ್ಲ ಎಂದು ತಿಳಿಸಿದರು. ಸಿದ್ದರಾಮಯ್ಯ ಅವರ ರಾಜೀನಾಮೆ ಆಗ್ರಹಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪ್ರತಿಭಟನೆಗೆ ಪ್ರತಿಕ್ರಿಯಿಸಿ, ಯಾವ ಪ್ರಕರಣದಲ್ಲಿ ಯಾವ ಯಾವ ಕೇಂದ್ರ ಸಚಿವರ ವಿರುದ್ಧ ತನಿಖೆ ನಡೆಯುತ್ತಿದೆ. ಅವರು ಅಧಿಕಾರದಲ್ಲಿ ಮುಂದುವರಿದಿಲ್ಲವೇ? ಮೊದಲು ಅವರ ರಾಜೀನಾಮೆ ತೆಗೆದುಕೊಳ್ಳಿ. ನಂತರ ನಮ್ಮ ಮುಖ್ಯ ಮಂತ್ರಿಗಳ ರಾಜೀನಾಮೆ ಬಗ್ಗೆ ಚರ್ಚೆ ಮಾಡೋಣ ಎಂದು ತಿಳಿಸಿದರು.

ಲಂಡನ್‌ನಲ್ಲಿ ನಾಡಪ್ರಭು ಕೆಂಪೇಗೌಡರ ಸಾಂಸ್ಕೃತಿಕ ಸಂಭ್ರಮ, ಕನ್ನಡೋತ್ಸವ

ಬೆಂಗಳೂರು: ವಿಶ್ವ ಒಕ್ಕಲಿಗರ ಮಹಾ ವೇದಿಕೆಯು ಸೆಪ್ಟೆಂಬರ್ 28ರಂದು ಲಂಡನ್ ನಗರದಲ್ಲಿ ನಾಡಪ್ರಭು ಕೆಂಪೇಗೌಡರ 3ನೇ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಭ್ರಮ ಮತ್ತು ಕನ್ನಡೋತ್ಸವವನ್ನು ಆಯೋಜಿಸಲು ಸಜ್ಜಾಗಿದೆ. ಈಗಾಗಲೇ ದುಬೈ ಮತ್ತು ಸಿಂಗಾಪುರ್ ನಗರಗಳಲ್ಲಿ ಈ ಉತ್ಸವವನ್ನು ನಡೆಸಲಾಗಿದ್ದು, ಮೂರನೇ ಉತ್ಸವವನ್ನು ಈ ಬಾರಿ ಮಹಾನಗರಿ ಲಂಡನ್‌ನಲ್ಲಿ ಆಚರಿಸಲು ವೇದಿಕೆಯು ಸಿದ್ಧಗೊಂಡಿದೆ.

ಕಾರ್ಯಕ್ರಮ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮಿ ಸಾನಿಧ್ಯದಲ್ಲಿ ನಡೆಯಲಿದ್ದು, ಕಾರ್ಯಕ್ರಮದ ಅಧ್ಯಕ್ಷರಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಹಾಗೂ ಕಾರ್ಯಕ್ರಮದ ಉದ್ಘಾಟಕರಾಗಿ ಕರ್ನಾಟಕದ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಮತ್ತು ಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ಸತೀಶ್ ರೆಡ್ಡಿ ಪಾಲ್ಗೊಳ್ಳಲಿದ್ದಾರೆ.

ಈ ಉತ್ಸವದಲ್ಲಿ ಮಾತುಕತೆಯ ಜತೆಗೆ ಮನರಂಜನೆಯ ಮಹಾ ರಸದೌತಣವನ್ನೇ ಏರ್ಪಡಿಸಲಾಗುತ್ತಿದೆ. ಕರ್ನಾಟಕದ ಶ್ರೀಮಂತ ಪರಂಪರೆ ಮತ್ತು ಸಾಂಸ್ಕೃತಿಕ ಹೆಮ್ಮೆಯನ್ನು ವಿದೇಶಿ ನೆಲದಲ್ಲಿ ಪ್ರಸ್ತುತಪಡಿಸಲು ವೇದಿಕೆಯು ಮುಂದಾಗಿದೆ. ಈ ಮೂಲಕ ನಾಡು, ನುಡಿಯ ಅಭಿಮಾನವನ್ನು ಸದಾ ಜಾಗೃತಗೊಳಿಸುವ ಈ ರೀತಿಯ ಕಾರ್ಯಗಳು ವೇದಿಕೆಯಿಂದ ನಿರಂತರವಾಗಿ ಜಾರಿಯಲ್ಲಿರಲಿವೆ.

ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಎ.ಒ. #14, ಸೌತ್ ಎಂಡ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020.
ಫೋನ್ ನಂ.: 23562229 / 23460051

ನಿಯಮ 13(4) ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳಸಹಿದಾರರು **ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002 ರ ನಿಯಮ 3 ಓದಿಕೊಂಡಂತೆ ಕಲಂ 13 (12)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಈ ಕೆಳಕಂಡ ಸಾಲಗಾರರು/ಅಡಮಾನದಾರರು/ಕಾನೂನುಬದ್ಧ ಉತ್ತರಾಧಿಕಾರಿಗಳಾದವರುಗಳಿಗೆ ಸಾಲವನ್ನು ಮರು ಪಾವತಿಸಲು ತಗಾದೆ ಸೂಚನೆಯನ್ನು ನೀಡಲಾಗಿತ್ತು. ಸದರಿ **ಸೂಚನೆ ತಲುಪಿದ 60 ದಿನಗಳ ಒಳಗೆ** ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿ ಮಾಡಬೇಕಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲಿಲ್ಲವಾದ್ದರಿಂದ ಸಾಲಗಾರರು/ಅಡಮಾನದಾರರು/ಕಾನೂನುಬದ್ಧ ಉತ್ತರಾಧಿಕಾರಿಗಳು ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸದರಿ ನಿಯಮದ ಕಲಂ 9 ಅನ್ನು ಓದಿಕೊಂಡಂತೆ ಸದರಿ ಆಕ್ಟ್ ಪ್ರಕರಣ 13(4) ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕಗಳಂದು ವಿವರಿಸಲಾಗಿರುವ ಸ್ವತ್ತುಗಳನ್ನು ಕೆಳ ಸಹಿದಾರರು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು/ಅಡಮಾನದಾರರು/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ **ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು** ಇವರಿಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಮತ್ತು ಇತರೆ ವೆಚ್ಚ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕ್ರಮ ಸಂಖ್ಯೆ	ಸಾಲಗಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನ ಪಡಿಸಿಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	**ಶ್ರೀಮತಿ ಗೀತಾ ರತ್ನಾಕರ್ ಶೇಟ್ ಕೋಂ ರತ್ನಾಕರ್ ಶೇಟ್** ನಂ. 18/28, ಗೀತಾ ಹೈಸ್ಕೂಲ್ ಹತ್ತಿರ, ಪರಿಮಳನಗರ, ನಂದಿನಿ ಲೇಔಟ್, ಬೆಂಗಳೂರು–560096 **ಜಾಮೀನುದಾರರು:** **1) ಶ್ರೀ ರತ್ನಾಕರ್ ಜೆ. ಶೇಟ್ ಬಿನ್ ಲೇಟ್ ಜಗನ್ನಾಥ್ ಶೇಟ್** **2) ಶ್ರೀ ಸಂಜಯ್ ಆರ್. ಬಿನ್ ರತ್ನಾಕರ್ ಜೆ. ಶೇಟ್** ಇವರೆಲ್ಲರ ವಾಸಸ್ಥಳ: ನಂ. 18/28, ಗೀತಾ ಹೈಸ್ಕೂಲ್ ಹತ್ತಿರ, ಪರಿಮಳನಗರ, ನಂದಿನಿ ಲೇಔಟ್, ಬೆಂಗಳೂರು–560096.	ಎಲ್ಲಾ ಭಾಗ ಮತ್ತು ವಿಭಾಗಗಳ ಸ್ಥಿರಾಸ್ತಿ ಸ್ವತ್ತು ಭೂಮಿ ವಾಸಯೋಗ್ಯ ಕಟ್ಟಡ ಪಶ್ಚಿಮ ಭಾಗದ ಕಡೆಗೆ ಚಾಲ್ತಿ ಕಾರ್ಪೊರೇಶನ್ ನಂ.28 ಪಿಐಡಿ ನಂ.12–51–28 ರಲ್ಲಿ ನೊಂದಣಿಯಾಗಿದ್ದು ಹಳೆ ನಂ. 18/28 ನಂತರ ನಂ. 18, 5ನೇ ಅಡ್ಡರಸ್ತೆ, ಪರಿಮಳನಗರ, ಜರಕಬಂಡೆಕಾವಲ್, ಬೆಂಗಳೂರು ನಗರ, ಬಿಬಿಎಂಪಿ ವಾರ್ಡ್ ನಂ.12, ಬೆಂಗಳೂರು ಇಲ್ಲಿದೆ. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 44'–0" ಅಡಿಗಳು ಮತ್ತು ಉತ್ತರ–ದಕ್ಷಿಣ: 36'–0" ಅಡಿಗಳಿರುವ ಸ್ವತ್ತು ದಕ್ಷಿಣ ಭಾಗದ ಕಡೆಗೆ ಹೊಂದಿಕೊಂಡಿದ್ದು ಪಶ್ಚಿಮದ ಕಡೆಗೆ ಪೂರ್ವ–ಪಶ್ಚಿಮ: 14'–0" ಅಡಿಗಳು ಮತ್ತು ಉತ್ತರ–ದಕ್ಷಿಣ: 19'–0" ಅಡಿಗಳು ಒಟ್ಟು 1850 ಚದರ ಅಡಿಗಳು. **ಚಕ್ಕುಬಂಧಿ: ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಅಂಥೋಣಿರಾಜ್ ರವರ ಸ್ವತ್ತು, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಪ್ರಕಾಶ್ ಮತ್ತು ವಡಿಯಪ್ಪ ರವರ ಸ್ವತ್ತು.	18.07.2024	24.09.2024	**ಖಾತೆ ಸಂಖ್ಯೆ 299 ರೂ.61,84,929/– + ದಿನಾಂಕ 18.07.2024 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು. ಪ್ರಭಾರಗಳು ಇತ್ಯಾದಿ.**
2.	**ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ತಮ್ಮಯ್ಯ** ನಂ. 1181/75, "ನಾಗನಕಟ್ಟೆ ಪ್ರತಿಬಿಂಬ", ಇಜೂರು, ವಾರ್ಡ್ ನಂ. 30, ರಾಮನಗರ–562159. **ಜಾಮೀನುದಾರರು:** **1) ಶ್ರೀಮತಿ ರಾಣಿ ಕೋಂ ಕಿರಣ್ ಕೆ.ಎಲ್.** **2) ಶ್ರೀ ಕಿರಣ್ ಕೆ.ಎಲ್. ಬಿನ್ ಲಕ್ಕಯ್ಯ** ಇವರೆಲ್ಲರ ವಾಸಸ್ಥಳ: ನಂ. 1181/75, "ನಾಗನಕಟ್ಟೆ ಪ್ರತಿಬಿಂಬ", ಇಜೂರು, ವಾರ್ಡ್ ನಂ. 30, ರಾಮನಗರ–562159.	ಎಲ್ಲಾ ಭಾಗ ಮತ್ತು ವಿಭಾಗಗಳ ಸ್ಥಿರಾಸ್ತಿ ಸ್ವತ್ತು ಭೂಮಿ ವಾಸಯೋಗ್ಯ ಕಟ್ಟಡ ನಿವೇಶನ ನಂ.27, ಇಜೂರು ಕೊನೆಯ ಸ್ಟೇಜ್ ಬೆಟ್ಟದ ಕಡೆಯ ಮುನಿಸಿಪಲ್ ಖಾತಾ ನಂ.1181, ವಾರ್ಡ್ ನಂ.30, ರಾಮನಗರ ಟೌನ್, ರಾಮನಗರ ಜಿಲ್ಲೆ. **ವಿಸ್ತೀರ್ಣ:** ಪೂರ್ವ–ಪಶ್ಚಿಮ: 30'–0" ಅಡಿಗಳು ಮತ್ತು ಉತ್ತರ–ದಕ್ಷಿಣ: 40'–0" ಅಡಿಗಳು ಒಟ್ಟು 1200 ಚದರ ಅಡಿಗಳು. **ಚಕ್ಕುಬಂಧಿ: ಪೂರ್ವಕ್ಕೆ:** ಅರಸ ಹನುಮಯ್ಯ ರವರ ನಿವೇಶನ ನಂ.26, **ಪಶ್ಚಿಮಕ್ಕೆ:** ಅರಸ ಹನುಮಯ್ಯ ರವರ ನಿವೇಶನ ನಂ.28, **ಉತ್ತರಕ್ಕೆ:** 24 ಅಡಿ ರಸ್ತೆ, **ದಕ್ಷಿಣಕ್ಕೆ:** ಅರಸ ಹನುಮಯ್ಯ ರವರ ನಿವೇಶನ ನಂ.30.	10.07.2024	24.09.2024	**ಖಾತೆ ಸಂಖ್ಯೆ 01 ಮತ್ತು 02 ರೂ.8,56,989/– + ದಿನಾಂಕ 10.07.2024 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು. ಪ್ರಭಾರಗಳು ಇತ್ಯಾದಿ.**

ದಿನಾಂಕ: 27.09.2024
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಶುಕ್ರವಾರ
27 | 09 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್,
ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಚಿತ್ತ ವಿಹಾರ

ಒಂದಷ್ಟು ಶ್ರಮ ಪಡೋಣ

ನಮ್ಮ ಯೋಚನೆಗಳೇ ಎಷ್ಟೇ ದೊಡ್ಡದಾಗಿದ್ದರೂ ಸರಿ, ಆದರ್ಶಪೂರ್ಣವಾಗಿದ್ದರೂ ಅಷ್ಟೇ, ಅವುಗಳನ್ನು ಕಾರ್ಯಗತಗೊಳಿಸದೇ ಇದ್ದರೆ ಪ್ರಯೋಜನವಾಗದು. ಸಮೃದ್ಧ ಯೋಚನೆಗಳಗಿಂತ ಕನಿಷ್ಠ ಕ್ರಿಯೆ ಬಹುಮುಖ್ಯ. ಶ್ರಮ ನಾವು ಪಡದೇ ಏನನ್ನು ಪಡೆಯಲಾಗದು ಎಂಬುದು ಸಾರ್ವತ್ರಿಕ ನಿಯಮವಾಗಿದೆ ಎಂಬ ಅರಿವಿದ್ದರೂ ನಮ್ಮ ಮನಸ್ಸು ಕಿಂಚಿತ್ತೂ ಪ್ರಯತ್ನ ಪಡದೇ ಎಲ್ಲವನ್ನು ಪಡೆಯಬೇಕೆಂದು ಹಾತೊರೆಯುತ್ತಲೇ ಇರುತ್ತದೆ. ನಮ್ಮ ಸೋಮಾರಿತನದ ನಿಲುವುಗಳು ನಮಗೆ ನಿರಾಸೆಯನ್ನಲ್ಲದೇ ಬೇರೆ ಏನನ್ನೂ ಕೊಡಲು ಸಾಧ್ಯವಿಲ್ಲ. ಜ್ಞಾನವೇ ಶಕ್ತಿ ಎಂಬ ಮಾತು ಇದ್ದೇ ಇದೆ; ಆದರೆ, ಶ್ರಮ ಹಾಕಿದರೆ ಮಾತ್ರ ಯಶಸ್ಸು ಸಿಕ್ಕೀತು. ಒಂದು ಕೆಲಸ ಕೈಗೂಡಬೇಕಾದರೆ ವಿಚಾರದ ಜತೆಯಲ್ಲೇ, ಅದಕ್ಕಿತ ಮಿಗಿಲಾದ ಕ್ರಿಯೆ ಅತ್ಯವೆನಿಸುತ್ತದೆ. ಸಮೃದ್ಧ ಫಸಲನ್ನು ಹೊತ್ತಿರುವ ಹಣ್ಣಿನ ಮರದ ಕೆಳಗೆ ನಿಂತು ಹಣ್ಣನ್ನು ನೋಡುತ್ತ ನನಗೆ ಇದು ಬೇಕು ಎಂದು ಯೋಚಿಸುತ್ತ, ಸುಮ್ಮನೆ ನಿಂತರೆ ಅದು ಕಾಲಹರಣವಾಗುವುದಲ್ಲದೇ ಮತ್ತೇನೂ ಆಗಲು ಸಾಧ್ಯವಿಲ್ಲ. ಮರ ಹತ್ತಿ ಹಣ್ಣು ಕೀಳಲು ಸಾಧ್ಯವಾಗದೆ ಹೋದರು ಕನಿಷ್ಠ ಕಲ್ಲನ್ನಾದರೂ ಬೀಸಬೇಕು.

ಲಂಕೆಯಿಂದ ಸೀತೆಯನ್ನು ಕರೆತರಲು ಸೇತುವೆ ನಿರ್ಮಾಣ ಕಾರ್ಯದಲ್ಲಿ ವಾನರ ಸೈನ್ಯವೇ ಭಾಗಿಯಾಗಿತ್ತು. ಈ ಕೆಲಸದಲ್ಲಿ ತಾನೂ ಭಾಗಿಯಾಗಬೇಕೆಂಬ ಆಸೆಯನ್ನು ಹೊತ್ತುಕೊಂಡಿದ್ದ, ಅಳಿಲು ಇದೆಲ್ಲವನ್ನು ಗಮನಿಸುತ್ತಲೇ ಇತ್ತು. ನಾನು ಪುಟ್ಟದೇಹಿ ನಾನು ಇಂತಹ ಸೇತುವೆ ನಿರ್ಮಾಣ ಕಾರ್ಯದಲ್ಲಿ ಏನು ಮಾಡಲು ಸಾಧ್ಯ? ಎಂಬ ನಿರಾಸೆಯಿಂದ ನಿಲ್ಲಲಿಲ್ಲ. ಮತ್ತೆ ಮತ್ತೆ ಮರಳಿನಲ್ಲಿ ಹೊರಳಾಡಿ ಮೈಗೆ ಮರಳನ್ನು ಅಂಟಿಸಿಕೊಂಡು ಮೈಗೆ ಅಂಟಿದ ಮರಳನ್ನು ಸೇತುವೆ ಕಟ್ಟುವ ಜಾಗದಲ್ಲಿ ಜಾಡಿಸಿ ಬರುವ ಕೆಲಸದಲ್ಲಿ ತೊಡಗಿತು. ಅದರಿಂದಾಗಿ ರಾಮನ ಪ್ರೀತಿಗೆ ಪಾತ್ರವಾಗಿತ್ತು.

ಚಿಕ್ಕ ಚಿಕ್ಕ ಕಾರ್ಯಗಳನ್ನು ಕೈಗೊಳ್ಳುವುದರಿಂದ ಖಂಡಿತವಾಗಿ ದೊಡ್ಡ ಯಶಸ್ಸು ಪಡೆಯಲು ಸಾಧ್ಯವಿದೆ. ನಮ್ಮ ಬದುಕನ್ನು ಸಮೃದ್ಧಗೊಳಿಸಿಕೊಳ್ಳಲು, ಸಾರ್ಥಕವಾಗಿಸಲು ಏನು ಮಾಡಬೇಕೆಂದು ನಮಗೆ ತಿಳಿದಿದ್ದರೂ ನಾವು ನಮ್ಮ ಯೋಚನೆಗಳನ್ನು ಕಾರ್ಯರೂಪಕ್ಕೆ ತರದೇ ಹೋದರೆ ಯಾವುದೇ ಬದಲಾವಣೆಯಾಗಲು ಸಾಧ್ಯವೇ ಇಲ್ಲ. ಕನಸು ಕಾಣುವುದಕ್ಕೂ ಒಂದು ಘನತೆ ಇದೆಯಾದರೂ, ಅವುಗಳನ್ನು ನನಸಾಗುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವ ನಮ್ಮ ನಡೆ ಮಾತ್ರವೇ ಯಶಸ್ಸನ್ನು ತಂದು ಕೊಡಬಲ್ಲದು.

• ಮಹಾದೇವ ಬಸರಕೋಡ

ದಡ ಸೇರಿಸುವವನು

ಒಂದು ಬಸ್ಸು ಹೊರಡಲು ಸಿದ್ಧವಾಗಿತ್ತು. ಒಬ್ಬ ಪಯಣಿಗ ಓಡಿಬಂದು ಬಸ್ಸು ಹತ್ತಿದ. ಒಂದು ಜಾಗ ಖಾಲಿ ಇದ್ದ ಜಾಗದಲ್ಲಿ ಕೂತ. ಕಂಡಕ್ಟರ್ ಬಂದಾಗ ತಾನು ಹೋಗಬೇಕಾಗಿರುವ ಸ್ಥಳ ಹೇಳಿ ಟಿಕೆಟ್ ಕೊಂಡ. ಇದನ್ನು ಪ್ರತೀದಿನ ಒಂದಲ್ಲಾ ಒಂದು ಸಾರಿ ನಾವು ಕಂಡಿರುತ್ತೇವೆ. ಇಲ್ಲಿ ಬಹಳ ಮುಖ್ಯವಾದುದು ಏನೆಂದರೆ ನಮ್ಮ ಬದುಕೂ ಈ ಬಸ್ಸಿನ ಪಯಣದಂತೆಯೇ. ನಾವು ಹೇಗೋ ಏನೋ ಬಂದು ಬದುಕು ಎನ್ನುವ ಈ ಬಸ್ಸಿನಲ್ಲಿ ಕೂತಿದ್ದೀವಿ. ಬದುಕು ಎನ್ನುವ ಬಸ್ಸನ್ನು ನಡೆಸುವವನು ಅಲ್ಲಿ ಕೂತಿದ್ದಾನೆ. ಅವನೇ ಕೃಷ್ಣ, ಶಿವ, ಗಣಪತಿ, ನರಸಿಂಹ, ಮುಂತಾದ ಹೆಸರಿನಿಂದ ನಾವು ಕರೆಯಲ್ಪಡುವ ಡ್ರೈವರು. ನಾವು ಕೊಂಡಿರುವ ಟಿಕೆಟ್ ನಾವು ಹೊಗಬೇಕಾಗಿರುವ ತಾಣಕ್ಕೆ. ಇಲ್ಲಿ ನಾವು ಅಧ್ಯಾತ್ಮಿಕ ಬದುಕಿನಲ್ಲಿ ಹೋಗಬೇಕಾಗಿರುವ ತಾಣ ಮುಕ್ತಿ ಎನ್ನುವ ತಾಣಕ್ಕೆ. ಅದಕ್ಕೆ ನಾವು ತೆರಬೇಕಾಗಿರುವ ಹಣ ಭಕ್ತಿ, ನಿವೇದನ ನೈವೇದ್ಯ, ಪೂಜೆ ಮುಂತಾದುವುಗಳು. ಇನ್ನು ನಾವು ಲೌಕಿಕ ಬದುಕಿನಲ್ಲಿ ಹಣ ಕೊಟ್ಟು ಕೂತು ಡ್ರೈವರು ನಮ್ಮನ್ನು ನಮ್ಮ ತಾಣಕ್ಕೆ ಸುಖವಾಗಿ ಕರೆದುಕೊಂಡು ಹೋಗಿ ಮುಟ್ಟಿಸುತ್ತಾನೆ ಎನ್ನುವ ನಂಬಿಕೆಯಿಂದ ಕೂತಿರುತ್ತೇವೆ. ಹಾಗೆಯೇ ಭಗವಂತನಿಗೆ ನಾವು ನಿತ್ಯ ಪೂಜೆ ಸಲ್ಲಿಸಿ ಅವನನ್ನು ನಮ್ಮನ್ನು ಕಾಪಾಡುತ್ತಾನೆ ಎನ್ನುವ ನಂಬಿಕೆಯಿಂದ ಇರಬೇಕು.

ಇಂಥಾ ನಂಬಿಕೆಗಳು ಬಹಳ ಸಾರಿ ಸುಳ್ಳಾಗುವುದಿಲ್ಲ. ಹಾಗೆಯೇ ನಾವು ಈ ಬದುಕಿನಲ್ಲಿ ಇರುವಾಗ ಆ ಪರಮಾತ್ಮ ಎನ್ನುವ ಡ್ರೈವರನನ್ನು ನಂಬಿ ಇದ್ದರೆ ಅವನು ನಮ್ಮನ್ನು ನಮ್ಮ ತಾಣಕ್ಕೆ ಸುಖವಾಗಿ ಕರೆದುಕೊಂಡು ಹೋಗಿ ಮುಟ್ಟಿಸುತ್ತಾನೆ. ನಾವು ಕೂತಿರುವ ಬಸ್ಸಿನ ಡ್ರೈವರನ ಪರಿಣಿತಿ ನಮಗೆ ಗೊತ್ತಿಲ್ಲ, ಅವನು ಸಮರ್ಥನೇ, ಅವನಿಗೆ ವಾಹನ ಚಲಾಯಿಸುವ ಲೈಸನ್ಸ್ ಇದೆಯೇ ಎಂದೆಲ್ಲಾ ನಾವು ಕೇಳದೇ ಅವನನ್ನು ನಂಬಿ ಬಸ್ಸು ಹತ್ತಿ ಕೂರುತ್ತೇವೆ. ಏಕೆಂದರೆ ಡ್ರೈವರ್ ಸೀಟಿನಲ್ಲಿ ಕೂತವನು ಸಮರ್ಥನೇ ಎನ್ನುವುದು ನಮ್ಮ ನಂಬಿಕೆ. ಅವನ ಸಾಮರ್ಥ್ಯವನ್ನು ನಾವು ಪರೀಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ನಮಗೆ ಆ ಸಾಮರ್ಥ್ಯ ಇಲ್ಲ. ಹಾಗೆಯೇ ನಾವು ನಂಬಿರುವ ದೈವದ ಬಗೆಗೆ ನಮಗೆ ಅನುಮಾನವೇ ಬೇಡ. ಏಕೆಂದರೆ ಆ ಶಕ್ತಿಯನ್ನು ಪರೀಕ್ಷಿಸುವ ಶಕ್ತಿ ನಮಗಿಲ್ಲ. ನಮಗಿರುವ ಒಂದೇ ಸಾಧನ ಎಂದರೆ ನಿಷ್ಕಲ್ಮಶವಾದ ನಂಬಿಕೆ.

ನಂಬಿ ಕೆಟ್ಟವರಿಲ್ಲವೋ ರಂಗನ ಎಂದು ದಾಸರು ಹಾಡಿದ್ದಾರೆ. ನಮ್ಮನ್ನು ಈ ಭೂಮಿಗೆ ತಂದವನು ಯಾರೆಂದು ಗೊತ್ತಿಲ್ಲ, ನಮ್ಮನ್ನು ಇಲ್ಲಿಂದ ಎತ್ತಂಗಡಿ ಮಾಡುವವನು ಯಾರೆಂದು ಗೊತ್ತಿಲ್ಲ. ಆದರೆ ಯಾರೋ ಒಬ್ಬ ಇದ್ದಾನೆ ಎನ್ನುವುದು ಗೊತ್ತು. ಆ ಯಾರೋ ಒಬ್ಬನನ್ನು ನಿಷ್ಕಲ್ಮಶ ಹೃದಯದಿಂದ ನಂಬಿ ಅವನಿಗೇ ಶರಣಾಗಿ ಅವನು ನಮ್ಮನ್ನು ಕಾಪಾಡುತ್ತಾನೆ ಎನ್ನುವ ಭರವಸೆಯಿಂದ ಬದುಕುವುದು ನಾವು ಆ ಅವಿಜ್ಞಾತನಿಗೆ ಸಲ್ಲಿಸುವ ಗೌರವ ಮತ್ತು ಭಕ್ತಿ.

• ಬೇಲೂರು ರಾಮಮೂರ್ತಿ

ಅಂಚೆ ಅಣ್ಣನ ಆಧುನಿಕ ಕಾರು!

• ರವೀಂದ್ರ ವೈದ್ಯ

ಅಂಚೆ ಅಣ್ಣ ಎಂದ ಕೂಡಲೇ ನಮ್ಮ ಕಣ್ಣೆದುರು ನಮ್ಮ ದೇಶದ ಅಂಚೆ ಅಣ್ಣನ ನೆನಪಾಗುವುದು ಸಹಜ. ಬಿಸಿಲು, ಮಳೆ, ಗಾಳಿ ಎನ್ನದೇ, ಪತ್ರಗಳನ್ನು ಹೊತ್ತುಕೊಂಡು ಮನೆಯಿಂದ ಮನೆಗೆ ಹಕ್ಷಿಂಚುವ ಕೆಲಸ.ಕೆಲವರು ಸೈಕಲ್, ಈಚಿನ ದಿನಗಳಲ್ಲಿ ಮೋಟಾರ್ ಸೈಕಲ್ ಮೇಲೆ ಓಡಾಡುವ ಅಂಚೆಯ ಅಣ್ಣಂದಿರೂ ಇದ್ದಾರೆ.

ಕಳೆದ ಮೂರು ತಿಂಗಳಿನಿಂದ ನಾವು ಕ್ಯಾಲಿಫೋರ್ನಿಯಾದ ನನ್ನ ಮಗನ ಮನೆ ಇರುವ ಸಾಂತಾ ಕ್ಲಾರಾ ಪ್ರದೇಶದಲ್ಲಿದ್ದೇವೆ. ಇಲ್ಲಿ ದಿನ ನಿತ್ಯ ನೋಡುವ ಅಂಚೆಯ ಅಣ್ಣ ಮತ್ತು ಅವರಿಗಿರುವ ಸವಲತ್ತುಗಳನ್ನು ನೋಡಿದಾಗ, ಆಶ್ಚರ್ಯ ಉಂಟಾಯಿತು. ಅಂಚೆ ಇಲಾಖೆಯವರು ಕೊಡಮಾಡಿದ ದೊಡ್ಡದಾದ ವಾಹನವನ್ನು ಅಂಚೆ ಅಣ್ಣ ತಾನೇ ಚಾಲನೆ ಮಾಡುತ್ತ ಬಂದು, ನಿಗದಿತ ನಿಲ್ದಾಣದಲ್ಲಿ ತನ್ನ ವಾಹನ ನಿಲ್ಲಿಸಿ, ಆ ರಸ್ತೆಯ ಎರಡೂ ಬದಿಗಳಲ್ಲಿ ಇರುವ ಮನೆಗಳ ಪತ್ರ, ಪಾರ್ಸಲಗಳನ್ನು ಪ್ರತ್ಯೇಕಿಸಿ ಮನೆ ಮನೆಗೆ ತೆರಳಿ ಬಾಗಿಲಿಗೆ ಇರುವ ಪೆಟ್ಟಿಗೆಯಲ್ಲಿ ಹಾಕಿ, ಕರೆ ಗಂಟೆ ಒತ್ತುತ್ತಾನೆ. ಬಿಳಿ ಬಣ್ಣದ ದೊಡ್ಡ ಗಾತ್ರದ ಕಾರು ಆತನ ವಾಹನ ಮತ್ತು ಅದರ ಮೇಲೆ ಯುಎಸ್‌ಪಿಎಸ್ ಎಂದು ದೊಡ್ಡದಾಗಿ ಬರೆದಿರುವುದನ್ನೂ ಗಮನಿಸಬಹುದು.

ಮನೆಯ ಜನರು ಬಾಗಿಲು ಹತ್ತಿರ ಕಂಡಲ್ಲಿ ಅಂಚೆಯ ಅಣ್ಣನು ಆ ಮನೆಯ ಜನರೊಂದಿಗೆ 'ಹಲೋ, ಹೌ ಆರ್ ಯು?' 'ಯು ಗುಡ್?' ಎಂದೋ ಗೌರವಯುತವಾಗಿ ಸ್ನೇಹದಿಂದ ಮಾತನಾಡುತ್ತಾರೆ. ಮೊನ್ನೆ ನನ್ನ ಮಗನ ಮನೆಗೆ ಪತ್ರ ಕೊಡಲು ಬಂದಾಗ, ನಮ್ಮನ್ನು ನೋಡಿದ ಪಂಜಾಬಿ ಅಂಚೆಯ ಅಣ್ಣ, ನಮ್ಮೊಂದಿಗೆ ಹಿಂದಿ ಭಾಷೆಯಲ್ಲಿ ಮಾತನಾಡಿ, ಭಾರತೀಯರನ್ನು ಭೆಟ್ಟಿ ಆದದ್ದಕ್ಕೆ ಸಂತೋಷ ವ್ಯಕ್ತ ಪಡಿಸಿದ. ಎರಡು, ಮೂರು ದಿನಗಳ ನಂತರ ಮತ್ತೇ ನಮ್ಮ ನಡುವೆ ನಡೆದ ಉಭಯಕುಶಲೋಪರಿಯಲ್ಲಿ, ತಾನು 1980 ರಲ್ಲಿಯೇ ಭಾರತದಿಂದ ಇಲ್ಲಿಗೆ ಬಂದಿದ್ದು, ಶಿಕ್ಷಣವನ್ನು ಇಲ್ಲಿಯೇ ಪೂರೈಸಿ ಕೆಲಸಕ್ಕೆ ಸೇರಿದ್ದಾಗಿ ಹೇಳಿದ. ತಮಗೆ ನಿವೃತ್ತಿ ವಯಸ್ಸು ನಿಗದಿಯಾಗಿಲ್ಲವೆಂದು, 60 ನೇ ವಯಸ್ಸಿಗೆ ಸ್ವಯಂ ನಿವೃತ್ತಿ ಹೊಂದಿದಲ್ಲಿ ತನಗೆ ಸಾಕಷ್ಟು ಸೌಲಭ್ಯಗಳು ಸಿಗುವದಾಗಿ ಹೇಳಿದನು. ನನ್ನ ತಂಗಿ ಕೂಡ ಮಹಾರಾಷ್ಟ್ರ ರಾಜ್ಯದ ಅಹಮದ್ ನಗರದಲ್ಲಿ ಪೋಸ್ಟ್ ಮಾಸ್ಟರ್ ಹುದ್ದೆ ಹೊಂದಿದ್ದ ವಿಷಯ ತಿಳಿದು ಸಂತೋಷ ಪಟ್ಟು, ತಾವಿಬ್ಬರೂ ಅಂಚೆ ಕುಟುಂಬದ ಸದಸ್ಯರೆಂದು ಅಭಿಮಾನದಿಂದ ಹೇಳಿಕೊಂಡ. ನನ್ನ ಸಮ್ಮತಿಯೊಂದಿಗೆ ನನ್ನ ಜೊತೆ ತನ್ನ ಫೋಟೋ ಕ್ಲಿಕ್ಕಿಸಿಕೊಂಡು ಸಂತೋಷಪಟ್ಟನು.

ಬಿಳಿ ಬಣ್ಣದ ಕಾರಿನಲ್ಲಿ ಬರುವ ಅಂಚೆ ಅಣ್ಣನು ಎಲ್ಲರಿಗೂ ಪತ್ರ ಬಟವಾಡೆ ಮಾಡುವನು!

ಚೀನಾ ಮೂಲದ ಅಂಚೆ ಅಣ್ಣ

ಮಗ ಮತ್ತು ಸೊಸೆ 10.00 ಗಂಟೆಗೆ ಕೆಲಸಕ್ಕೆ ಹೋದ ನಂತರ ನಾವಿಬ್ಬರೂ ಮನೆಯಿಂದ 2-3 ಕಿ.ಮೀ. ದೂರದ ವರೆಗೆ ವಾಯುವಿಹಾರಕ್ಕೆ ಹೋಗುತ್ತಿದ್ದು, ದಿನ ನಿತ್ಯ ಇನ್ನೊಂದು ವಾರ್ಡಿನ ಅಂಚೆಯ ಅಣ್ಣ (ಚೀನಾ ದೇಶದವನು) ನಮ್ಮನ್ನು ನೋಡಿ, ನಗು ಮುಖದಿಂದ ಗುಡ್ ಮಾರ್ನಿಂಗ್ ಹೇಳುತ್ತಾನೆ. ಅವನ ವೇಷ-ಭೂಷಣ, ಹ್ಯಾಟು-ಬೂಟು, ತಂಪಿನ ಕನ್ನಡಕ ಮತ್ತು ಲವಲವಿಕೆಯ ಚಟುವಟಿಕೆ ಎಲ್ಲರಲ್ಲೂ ಸ್ಫೂರ್ತಿ ಉಕ್ಕಿಸುವಂತಿತ್ತು.

ಎತ್ತರದ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡು ವಾಸಿಸುವದು ಅಮೆರಿಕದ ಕೆಲವು ಸ್ಥಿತಿವಂತರ ಜೀವನ ಶೈಲಿಯಾಗಿದೆ. ಇಲ್ಲಿಯ ಅಂಚೆ ಅಣ್ಣ, ಆಯಾ ಮನೆಗಳಿಗೆ ಹೋಗಿ ಪತ್ರಗಳನ್ನು ಹಂಚಲು ಕಷ್ಟ ಪಡಬೇಕಾಗಿಲ್ಲ. ಅಂತಹ ಎತ್ತರ ಪ್ರದೇಶದಲ್ಲಿ ವಾಸಿಸುವ ಜನರು, ಕೆಳಭಾಗದಲ್ಲಿ ರಸ್ತೆಯ ಬದಿಯಲ್ಲಿ ತಮ್ಮದೇ ಅಂಚೆ ಪೆಟ್ಟಿಗೆಗಳನ್ನು ಇಟ್ಟು ಬೀಗ ಹಾಕಿರುತ್ತಾರೆ. ಅಂಚೆ ಅಣ್ಣ ಅಯಾ ಮನೆಗಳ ಪತ್ರಗಳನ್ನು ಅವರವರ ಪೆಟ್ಟಿಗೆಗಳಲ್ಲಿ ಹಾಕಿದಲ್ಲಿ ಅವನ ಕೆಲಸ ಮುಗಿಯಿತು. ಅಂಚೆಯ ಅಣ್ಣನಿಗೆ ತೊಂದರೆ ತಪ್ಪಿಸಲು ಮಾಡಿರುವ ವ್ಯವಸ್ಥೆ, ನಮ್ಮ ಗಮನ ಸೆಳೆಯಿತು.

ನಾವು ಅಮೇರಿಕಾದ ಸಿಯಾಟಲ್ ನಗರಕ್ಕೆ ಹೋದ ಸಂದರ್ಭದಲ್ಲಿ, ಬೆಟ್ಟದ ಮೇಲಿರುವ ಎಮ್.ಟಿ.ರೆನೀಯರ್ ರಾಷ್ಟ್ರೀಯ ಪಾರ್ಕ ನೋಡಲು ಹೋಗಿದ್ದೆವು. ಅಲ್ಲಿ 125 ವರ್ಷ ಪುರಾತನ ಸರಕಾರಿ ಅತಿಥಿ ಗೃಹ ಸುಸ್ಥಿತಿಯಲ್ಲಿ ಕಂಡಿತು. ಹಿಂದಿನ ಕಾಲದಲ್ಲಿ ವೃದ್ಧರು ಸಂತೋಷದಿಂದ ಕಾಲ ಕಳೆಯಲು, ವರ್ಷದ ನಾಲ್ಕಾರು ತಿಂಗಳು, ಈ ಅತಿಥಿ ಗೃಹದ ಕೋಣೆಗಳನ್ನು ಬಾಡಿಗೆಗೆ ಪಡೆದುಕೊಂಡು ವಾಸಿಸುತ್ತಿದ್ದರಂತೆ. ಆಗಿನ ಕಾಲದಲ್ಲಿ ಅವರು ತಮ್ಮ ಮಕ್ಕಳ ಮತ್ತು ಸಂಬಂಧಿಕರ ಜೊತೆ ವ್ಯವಹರಿಸಲು ಅಂಚೆ ಸೇವೆ ಮೇಲೆ ಅವಲಂಬಿತರಾಗಿದ್ದರು. ತಿಂಗಳಿಗೆ 2-3 ಬಾರಿ ಮಾತ್ರ ಅಂಚೆಯ ಸಿಬ್ಬಂದಿ ಬೆಟ್ಟದ ಮೇಲಿರುವ ಅತಿಥಿ ಗೃಹಕ್ಕೆ ಬರುತ್ತಿದ್ದರಂತೆ. ಅಲ್ಲಿಯ ನಿವಾಸಿಗಳು ಪತ್ರಗಳನ್ನು ಬರೆದು ಒಂದು ಪೆಟ್ಟಿಗೆಯಲ್ಲಿ ಹಾಕುತ್ತಿದ್ದು, ಅಂಚೆ ಸಿಬ್ಬಂದಿ ಆ ಪೆಟ್ಟಿಗೆಯಲ್ಲಿದ್ದ ಪತ್ರಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಮತ್ತು ತಾನು ತಂದಿದ್ದ ಪತ್ರಗಳನ್ನು ಅವರವರಿಗೆ ಕೊಡುತ್ತಿದ್ದ. ಅಂತಹ ಪೆಟ್ಟಿಗೆಯೊಂದು, ಅಲ್ಲಿ ಈಗಲೂ ಪ್ರವಾಸಿಗರಿಗೆ ಆಕರ್ಷಣೆಯಾಗಿದೆ.

ಅಮೆರಿಕದಲ್ಲಿ ಅಂಚೆಯ ಅಣ್ಣನಿಗೆ ಕಾರ್ ವ್ಯವಸ್ಥೆ ನೀಡಿರುವುದು ನಿಜಕ್ಕೂ ಉತ್ತಮ; ಜತೆಗೆ, ಅಲ್ಲಿ ಒಂದು ರೀತಿಯಲ್ಲಿ ಅನಿವಾರ್ಯವೂ ಹೌದು ಎನ್ನಬಹುದು. ಏಕೆಂದರೆ, ವರ್ಷದ ಆರು ತಿಂಗಳು ಮಳೆ, ಹಿಮಪಾತ ಜಾಸ್ತಿ ಇರುವಾಗ, ಅಂಚೆಯ ಅಣ್ಣನಿಗೆ ಮತ್ತು ಆತ ಒಯ್ಯುವ ಅಂಚೆಗೆ ರಕ್ಷಣೆ ಒದಗಿಸಲು ಇಂತಹ ಕಾರುಗಳ ವ್ಯವಸ್ಥೆಯಿಂದ ಅನುಕೂಲವಾಗುತ್ತದೆ.

ಕೆಂಗಲ್ ಹನುಮಂತಯ್ಯನವರು ಅಡಿಪಾಯ ಹಾಕಿದ ಈ ಸ್ಮಾರಕವು, ಇಂದು ಭವ್ಯವಾಗಿ ತಲೆ ಎತ್ತಿ, ಕೂಡ್ಲಿಗಿ ಭಾಗದ ಜನರ ಅಭಿಮಾನದ ಸಂಕೇತ ಎನಿಸಿದೆ.

ಸ್ವಾಭಿಮಾನ ಸಾರುವ ಸ್ಮಾರಕ

• ದೀಪಶ್ರೀ ಎಸ್. ಕೂಡ್ಲಿಗಿ

ವಿಜಯನಗರ ಜಿಲ್ಲೆಯ ಕೂಡ್ಲಿಗಿಯ ಬಾಪೂಜಿ ನಗರದಲ್ಲಿರುವ ಹುತಾತ್ಮರ ಸ್ಮಾರಕವು, ನಮ್ಮ ದೇಶಕ್ಕಾಗಿ ತ್ಯಾಗ ಮಾಡಿದ ಮಹನೀಯರನ್ನು ನೆನಪಿಸಿಕೊಳ್ಳುವ ಉತ್ತಮ ಸ್ಮಾರಕ ಎನಿಸಿದೆ. ಹುತಾತ್ಮ ಸ್ಮಾರಕ ಹೊಂದಿರುವ ಹಲವು ಪ್ರದೇಶಗಳಲ್ಲಿ ಕೂಡ್ಲಿಗಿ ತಾಲೂಕು ಒಂದಾಗಿರುವುದು ಈ ಪ್ರದೇಶದ ಜನರ ಹೆಮ್ಮೆಯ ಸಂಗತಿ.

ಇಂತಹ ಪುಣ್ಯ ಸ್ಮಾರಕಕ್ಕೆ ಅಡಿಪಾಯ ಹಾಕಿದ ಕೀರ್ತಿ ದಿವಂಗತ ಕೆಂಗಲ್ ಹನುಮಂತಯ್ಯ ನವರಿಗೆ ಸಲ್ಲುತ್ತದೆ. ಇಲ್ಲಿರುವ ಪವಿತ್ರ ಚಿತಾಭಸ್ಮವನ್ನು ನವದೆಹಲಿಯಲ್ಲಿರುವ ಮಹಾತ್ಮಾ ಗಾಂಧೀಜಿ ಯವರ ಸಮಾಧಿಯಾದ ರಾಜ್ ಘಾಟ್ ನಿಂದ ತರಲಾಗಿದೆ. ಈ ಕೆಲಸದಲ್ಲಿ ಸಹಕರಿಸಿದವರು ಶಿಕ್ಷಕ ಬಿಂದು ಮಾಧವರಾಯರು.

ಬೋರ್ಡ್ ಪ್ರೌಢ ಶಾಲೆಯ ದೈಹಿಕ ಶಿಕ್ಷಕರಾಗಿದ್ದ ಬಿಂದು ಮಾಧವರಾಯರು, ವಿದ್ಯಾರ್ಥಿಗಳ ಜತೆ ದೆಹಲಿಗೆ ತೆರಳಿದ್ದು, ಮಹಾತ್ಮ ಗಾಂಧೀಜಿಯವರ ಸಮಾಧಿ ಸ್ಥಾನಕ್ಕೆ ತೆರಳಿ ಅಲ್ಲಿಂದ ಚಿತಾಭಸ್ಮವನ್ನು ತಂದು ಆರಂಭದಲ್ಲಿ ಬಳ್ಳಾರಿ ಜಿಲ್ಲೆಯ ಮಲ್ಲಸರ್ಜಾ ವ್ಯಾಯಾಮ ಶಾಲೆಯಲ್ಲಿ ಇರಿಸಿ, ಪ್ರವಾಸಿಗರು ಭೇಟಿ ನೀಡಲು ಅವಕಾಶ ಕಲ್ಪಿಸಲಾಗಿತ್ತು. ಈ ಪವಿತ್ರ ಭಸ್ಮವನ್ನು ಬಿಂದು ಮಾಧವರಾಯರು ಕರಂಡದ ಬಟ್ಟಲಿನಲ್ಲಿ ತಂದಿದ್ದರು.

ಅಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ನವರು ಬೆಂಗಳೂರಿನಲ್ಲಿ ವಿಧಾನಸೌಧ ನಿರ್ಮಾಣ ಕಾರ್ಯ ಮಾಡುವಾಗ ಕೂಡ್ಲಿಗಿಯಲ್ಲಿರುವ ಚಿತಾಭಸ್ಮವನ್ನು ನೋಡಿ, ಗೌರವ ಸಲ್ಲಿಸಿದ್ದರು. ನಂತರ ಅವರು ಹುತಾತ್ಮರ ಸ್ಮಾರಕಕ್ಕೆ ಮೊದಲ ಅಮೃತ ಶಿಲೆಯ ಮಂಟಪ (ಹಳೆಯದು) ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡುವ ಮೂಲಕ ಬುನಾದಿ ಹಾಕಿದರು.

ಇಂದು ಈ ರಾಷ್ಟ್ರೀಯ ಹುತಾತ್ಮರ ಸ್ಮಾರಕ ಭವನವನ್ನು ಒಂದು ಕೋಟಿ ರುಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಹೇ ರಾಮ್, ದೇವರೇ ಸತ್ಯವಸ್ತು, ನಿತ್ಯವಸ್ತು, ರಾಷ್ಟ್ರಪಿತ ಹುತಾತ್ಮರಾದ ದಿನ (30.1.1948), ಸ್ವಾತಂತ್ರ್ಯ ಹೋರಾಟ ಆರಂಭ ಅಂತ್ಯದ ದಿನಗಳ (1857-1957) ವಿವರಗಳಲ್ಲಿ ಕೆತ್ತನೆ ಮಾಡಲಾಗಿದ್ದು, ಇಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.

ಕೂಡ್ಲಿಗಿಯ ಹುತಾತ್ಮ ಸ್ಮಾರಕವು ಇಂದು ಹಲವು ಅಭಿಯಾನಗಳಿಗೆ ಸ್ಫೂರ್ತಿ ನೀಡುತ್ತಿರುವುದು ವಿಶೇಷ. ನ್ಯಾಯಯುತ ಮತ್ತು ಅಹಿಂಸಾತ್ಮಕ ಹೋರಾಟಗಳು ಈ ಭಾಗದಿಂದಲೇ ಆರಂಭವಾಗುತ್ತವೆ. ರೈತರ ಬೇಡಿಕೆಗಳು ಈಡೇರಿಸಲು ನಡೆದ ಪ್ರತಿಭಟನೆ ಸೇರಿದಂತೆ ಮೂಲ ಸೌಕರ್ಯಗಳಿಗೆ ಒತ್ತಾಯಿಸಿ ಇಲ್ಲಿ ನಡೆಯುವ ಪ್ರತಿ ಹೋರಾಟಗಳು ಈ ರಾಷ್ಟ್ರೀಯ ಹುತಾತ್ಮರ ಸ್ಮಾರಕಗಳಿಂದಲೇ ಆರಂಭಗೊಳ್ಳುವುದು ವಿಶೇಷ. ಹಲವಾರು ಪ್ರಮುಖ ಕಾರ್ಯಕ್ರಮಗಳನ್ನು ಇಲ್ಲಿ ಆಯೋಜನೆ ಮಾಡಲಾಗುತ್ತದೆ. ಜತೆಗೆ, ಗಾಂಧೀ ಜಯಂತಿಯಂದು ಇಲ್ಲಿ ಕಾರ್ಯಕ್ರಮಗಳು ನಡೆಯುವುದು ವಿಶೇಷ ಎನಿಸಿದೆ.

ಊರಿನ 3,000 ಜನರಿಗೆ ಉದ್ಯೋಗ!

• ಮಲ್ಲಿಕಾರ್ಜುನ ಹೆಗ್ಗಳಗಿ ಮುಧೋಳ

ಸಕ್ಕರೆ ಕಾರ್ಖಾನೆಯೊಂದರಲ್ಲಿ ಹಮಾಲಿ ಕೂಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬ ತನ್ನ ಹುಟ್ಟೂರಿನ 3,000 ಯುವಕರಿಗೆ ಖಾಯಂ ಉದ್ಯೋಗ ಕೊಟ್ಟ ಸಾಹಸದ ಕಥೆ ಇದು. ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕ ಚಾಂದಕವಟೆ ಗ್ರಾಮದ ನಾಗಪ್ಪ ಸಿವೂರ ಅವರು ಸುಮಾರು 30 ವರ್ಷಗಳ ಹಿಂದೆ ತೇರದಾಳ ತಾಲೂಕು ಸಮೀರವಾಡಿಯ ಗೋದಾವರಿ ಸಕ್ಕರೆ ಕಾರ್ಖಾನೆಯಲ್ಲಿ, ಸಕ್ಕರೆ ಮೂಟೆಗಳನ್ನು ಹೊತ್ತು ವಾಹನಗಳಿಗೆ ಹೇರುವ ಹಮಾಲಿ ಕೆಲಸ ಮಾಡುತ್ತಿದ್ದರು. ಮೂಟೆ ಹೊರುವುದೇ ಅವರ ಕಾಯಕ; ಬದುಕು ಸಹ ಸರಳ. ಕಾರ್ಖಾನೆಯ ಪರವಾಗಿ, ಸಾಲಾಗಿ ನಿರ್ಮಿಸಿದ ಗುಡಿಸಲಲ್ಲಿ ಕುಟುಂಬದೊಂದಿಗೆ ವಾಸಿಸುತ್ತಿದ್ದರು. ಇದು ಗುತ್ತಿಗೆ ಕೂಲಿ ಕೆಲಸವಾಗಿತ್ತು. ನೂರಾರು ಕೂಲಿ ಕಾರ್ಮಿಕರ ಜತೆಯಲ್ಲಿ ಅವರೂ ಒಬ್ಬರು ಕೂಲಿ ಕಾರ್ಮಿಕರಾಗಿದ್ದರು.

ಕೊನೆಗೊಂದು ಸುಂದರ ಕನಸು ಕಂಡರು; ಅದೇನೆಂದರೆ ತಾನೇ ಗುತ್ತಿಗೆದಾರನಾಗಬೇಕು ಎಂಬ ಕನಸು! ಇಂತಹದೊಂದು ಹಂಬಲದಿಂದ ಮುಂದುವರಿದು, ಕಾರ್ಮಿಕ ಇಲಾಖೆಯಿಂದ ಲೈಸೆನ್ಸ್ ಪಡೆದು ಗುತ್ತಿಗೆದಾರರ ಲೈಸನ್ಸ್ ಪಡೆದರು; ಗುತ್ತಿಗೆ ಹಿಡಿಯುವ ಸಾಹಸ ಮಾಡತೊಡಗಿದರು.

ಪ್ರೀತಿ ವಿಶ್ವಾಸದಿಂದ ಕಾರ್ಮಿಕರ ತಂಡಗಳನ್ನು ಕಟ್ಟಿದರು. ಅವರು ಈಗ ಕರ್ನಾಟಕದ 17 ಮತ್ತು ಮಹಾರಾಷ್ಟ್ರದ ಎಂಟು ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದನೆಯಾದ ಸಕ್ಕರೆಯನ್ನು ಚೀಲಗಳಲ್ಲಿ ತುಂಬಿ ಪ್ಯಾಕ್ ಮಾಡುವುದು ಮತ್ತು ವಾಹನಗಳಿಗೆ ಹೇರುವ ಕೆಲಸದ ಗುತ್ತಿಗೆ ಪಡೆದಿದ್ದಾರೆ. ಈ ಕೆಲಸ ನಿರ್ವಹಿಸಲು ಪ್ರತಿ ಕಾರ್ಖಾನೆಗೆ ಎರಡು ನೂರು ಕಾರ್ಮಿಕರು ಬೇಕಾಗುತ್ತಾರೆ. ಅವರನ್ನು ಇವರೇ ಒದಗಿಸುತ್ತಾರೆ! ನಾಗಪ್ಪ ತಮ್ಮ ಚಾಂದಕವಟೆ ಗ್ರಾಮದ 3,000ಕ್ಕೂ ಹೆಚ್ಚು ಕೂಲಿಕಾರರಿಗೆ ಉದ್ಯೋಗ ಒದಗಿಸಿದ್ದಾರೆ.

ನಾಗಪ್ಪ ಅವರದು ಸಾಹಸ ಮನೋಭಾವ. ಕಾರ್ಮಿಕರ ಕಷ್ಟ ಸ್ವತಃ ಅನುಭವಿಸಿದವರು. ಅವರಲ್ಲಿ ಸುಮಾರು ನಾಲ್ಕು ಸಾವಿರ ಕಾರ್ಮಿಕರು ದುಡಿಯುತ್ತಿದ್ದಾರೆ. ನಾಗಪ್ಪ ದುಡಿಯುವ ಮನೋಭಾವವನ್ನು ಈಗಲೂ ಉಳಿಸಿಕೊಂಡಿದ್ದಾರೆ. ತಮ್ಮಲ್ಲಿ ಕೆಲಸ ಮಾಡುವ ಹಮಾಲರೊಂದಿಗೆ ತಾವು ಬೆನ್ನ ಮೇಲೆ ಸಕ್ಕರೆಯ ಮೂಟೆ ಹೊತ್ತು ಲಾರಿಗಳಿಗೆ ತುಂಬುತ್ತಾರೆ. ಆದರ್ಶ ಮತ್ತು ಸರಳ ಬದುಕು ಎಂದರೆ ಇದೇ ಅಲ್ಲವೆ!

ಸಂಧಿವಾತದ ಸಮಸ್ಯೆ

• ಡಾ. ಮಹಾಬಲೇಶ್ವರ ಮಮದಾಪುರ

ಸಂಧಿವಾತದ ಬಗ್ಗೆ ಜಾಗೃತಿ ಮೂಡಿಸಲು ಅಕ್ಟೋಬರ್ 12 ರಂದು ವಿಶ್ವ ಸಂಧಿವಾತ ದಿನವನ್ನು ಆಚರಿಸಲಾಗುತ್ತದೆ. ಸಂಧಿವಾತವು ಜಾಗತಿಕವಾಗಿ ಲಕ್ಷಾಂತರ ಜನರನ್ನು ಬಾಧಿಸುವ ಕಾಯಿಲೆಯಾಗಿದೆ. ಸಂಧಿವಾತಶಾಸ್ತ್ರಜ್ಞ ನಾಗಿ, ಸಂಧಿವಾತವು ದೈನಂದಿನ ಜೀವನದಲ್ಲಿ ಹೇಗೆ ಪರಿಣಾಮ ಬೀರುತ್ತದೆ ಮತ್ತು ಅದಕ್ಕೆ ಏನು ಪರಿಹಾರ ಎಂಬುದು ನನ್ನ ಕಾಳಜಿ ಎನಿಸಿದೆ.

ಕೀಲುಗಳಲ್ಲಿ ನೋವುಂಟು ಮಾಡುವ ಸಂಧಿವಾತವನ್ನು ಸೂಕ್ತ ಚಿಕಿತ್ಸೆಯಿಂದ ನಿಯಂತ್ರಿಸಬಹುದು.

ಸಂಧಿವಾತವು ಜಂಟಿ ಉರಿಯೂತವನ್ನು ಉಂಟುಮಾಡುವ 100 ಕ್ಕೂ ಹೆಚ್ಚು ಸ್ಥಿತಿಗಳನ್ನು ಸೂಚಿಸುತ್ತದೆ, ಇದು ನೋವು, ಬಿಗಿತ ಮತ್ತು ಊತಕ್ಕೆ ಕಾರಣವಾಗುತ್ತದೆ. ಕಾರ್ಟಿಲೆಜ್ ಹಾನಿಯಿಂದ ಉಂಟಾಗುವ ಅಸ್ಥಿಸಂಧಿವಾತ, ಮತ್ತು ಸಂಧಿವಾತ, ದೇಹವು ತನ್ನದೇ ಆದ ಕೀಲುಗಳ ಮೇಲೆ ದಾಳಿ ಮಾಡುವ ಸ್ವಯಂ ನಿರೋಧಕ ಅಸ್ವಸ್ಥತೆಯು (ಆಟೊ ಇಮ್ಯೂನ್ ಡಿಸೀಸ್) ಸಾಮಾನ್ಯವಾದ ಕಾಯಿಲೆಗಳಾಗಿವೆ.

ಪ್ರಮುಖ ಲಕ್ಷಣಗಳು

- ನಿರಂತರ ಕೀಲು ನೋವು ಮತ್ತು ಊತ
- 30 ನಿಮಿಷಗಳಿಗಿಂತ ಹೆಚ್ಚು ಕಾಲ ಕೀಲುಗಳಲ್ಲಿ ಬಿಗಿತ
- ಕೀಲುಗಳ ಚಲನೆಯ ವ್ಯಾಪ್ತಿ ಕುಗ್ಗುವಿಕೆ
- ಆಯಾಸ
- ಕಣ್ಣುಗಳಲ್ಲಿ ಶುಷ್ಕತೆ

ಆರಂಭಿಕ ಹಂತದಲ್ಲಿ ರೋಗನಿರ್ಣಯವು ನಿರ್ಣಾಯಕವಾಗಿದೆ; ಆರಂಭಿಕ ಹಂತದಲ್ಲಿ ಚಿಕಿತ್ಸೆಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಇದು ಕೀಲುಗಳ ಹಾನಿಯನ್ನು ತಡೆಯುತ್ತದೆ ಮತ್ತು ಫಲಿತಾಂಶಗಳನ್ನು ಸುಧಾರಿಸುತ್ತದೆ.

ಚಿಕಿತ್ಸೆಗಳು

- ಔಷಧಿಗಳು: ಉರಿಯೂತದ ಔಷಧಗಳು, ರೋಗ-ಮಾರ್ಪಡಿಸುವ ಆಂಟಿರೋಮ್ಯಾಟಿಕ್ ಔಷಧಗಳು ಮತ್ತು ಜೈವಿಕಶಾಸ್ತ್ರವು ರೋಗಲಕ್ಷಣಗಳನ್ನು ನಿಯಂತ್ರಿಸಲು ಮತ್ತು ರೋಗವನ್ನು ನಿಧಾನಗೊಳಿಸಲು ಸಹಾಯ ಮಾಡುತ್ತದೆ.
- ದೈಹಿಕ ಚಿಕಿತ್ಸೆ: ಸೂಕ್ತವಾದ ವ್ಯಾಯಾಮ, ಫಿಸಿಯೋಥೆರಪಿ ಮತ್ತು ಕೀಲುಗಳ ಬಲವನ್ನು ಸುಧಾರಿಸುತ್ತದೆ.



- ಜೀವನಶೈಲಿ ಮಾರ್ಪಾಡುಗಳು: ಆರೋಗ್ಯಕರ ತೂಕ, ನಿಯಮಿತ ವ್ಯಾಯಾಮ ಮತ್ತು ಸಮತೋಲಿತ ಆಹಾರವನ್ನು ಕಾಪಾಡಿಕೊಳ್ಳುವುದು ರೋಗಲಕ್ಷಣಗಳನ್ನು ಗಮನಾರ್ಹವಾಗಿ ಸುಧಾರಿಸುತ್ತದೆ.
- ಶಸ್ತ್ರಚಿಕಿತ್ಸೆ: ತೀವ್ರತರವಾದ ಪ್ರಕರಣಗಳಲ್ಲಿ, ಕೀಲು ಬದಲಾವಣೆಯಂತಹ ಶಸ್ತ್ರಚಿಕಿತ್ಸೆ ಅಗತ್ಯವಾಗಬಹುದು.

ಸಂಧಿವಾತದ ನಿರ್ವಹಣೆ

- ಸಕ್ರಿಯವಾಗಿರಿ: ನಡಿಗೆ ಅಥವಾ ಈಜು ಮುಂತಾದ ಮೃದುವಾದ ವ್ಯಾಯಾಮಗಳು ಕೀಲುಗಳ ನೋವನ್ನು ಕಡಿಮೆ ಮಾಡುತ್ತದೆ.
- ಶಿಕ್ಷಣ: ಉತ್ತಮ ನಿರ್ವಹಣೆಗಾಗಿ ನಿಮ್ಮ ಸ್ಥಿತಿ ಮತ್ತು ಚಿಕಿತ್ಸೆಯ ಆಯ್ಕೆಗಳನ್ನು

ವಿಶ್ವವಾಣಿ
27.09.2024 ಶುಕ್ರವಾರ
vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಕೃಷ್ಣ ಪಕ್ಷ, ದಶಮಿ ತಿಥಿ, ಶಿವ ಯೋಗ, ವಿಷ್ಠಿ ಕರಣ, ಶರದ್ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, 2081 ಪಿಂಗಳ ವಿಕ್ರಮನಾಮ ಸಂವತ್ಸರ

ಮನೆಮದ್ದು

ಪಾಲಕ್ ಮತ್ತು ಬಸಳೆ ಎಲೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದ ಕಬ್ಬಿಣದ ಅಂಶವಿದ್ದು, ಇದು ರಕ್ತಹೀನತೆಯನ್ನು ಕಡಿಮೆಗೊಳಿಸುತ್ತದೆ. ಒಂದು ಕಪ್ ಪಾಲಕ್ ಸೊಪ್ಪಿನಲ್ಲಿ ಮೂವತ್ತು ಗ್ರಾಂನಷ್ಟು ಪ್ರೊಟೀನ್ ಇದೆ. ಈ ಪ್ರೊಟೀನ್ ಸ್ನಾಯುಗಳ ಬೆಳವಣಿಗೆಗೆ ಒಳ್ಳೆಯದು.

ಸೌಂದರ್ಯ ಸೂತ್ರ

ನುಗ್ಗೆಕಾಯಿ ಸೊಪ್ಪು ಝಿಟಿನ್ ಮತ್ತು ಕ್ವೆರ್ಸೆಟಿನ್ ಸೇರಿದಂತೆ ಹಲವು ಆ್ಯಂಟಿ ಆಕ್ಸಿಡೆಂಟ್‌ಗಳಿಂದ ಸಮೃದ್ಧವಾಗಿದೆ. ಇದು ಚರ್ಮವನ್ನು ಫ್ರೀ ರಾಡಿಕಲ್ಸ್ ಹಾನಿಯಿಂದ ರಕ್ಷಿಸುತ್ತದೆ. ನೆರಿಗೆಗಳು ಹಾಗೂ ಸೂಕ್ಷ್ಮ ಗೆರೆಗಳನ್ನು ಕಡಿಮೆ ಮಾಡುವ ಪ್ರಕ್ರಿಯೆಯನ್ನು ನಿಧಾನಗೊಳಿಸಿ ನೀವು ಯಂಗ್ ಆಗಿ ಕಾಣುವಂತೆ ಮಾಡುತ್ತದೆ.

ದಿನ ಭವಿಷ್ಯ

ಮೇಷ: ವಿರಾಮದ ಸಂತೊಷವನ್ನು ಅನುಭವಿಸಲಿದ್ದೀರಿ. ದಿನದ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು.

ವೃಷಭ: ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ, ಯೋಗ; ಆಧ್ಯಾತ್ಮಿಕ ಹಾಗೂ ಭೌತಿಕವಾಗಿ ಲಾಭವೆಂದು ತಿಳಿಯುತ್ತದೆ.

ಮಿಥುನ: ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ಹಣವು ಕೆಲಸಕ್ಕೆ ಬರುತ್ತದೆ, ಖರ್ಚು ಮಾಡುವ ಮುನ್ನ ಯೋಚಿಸಿ.

ಕಟಕ: ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ - ಮನಸ್ಸಿನ ಮೇಲೆ ಒತ್ತಡ ತರುತ್ತವೆ. ಉತ್ಸಾಹ ಹೆಚ್ಚಿಸಲು, ಪ್ರವಾಸಕ್ಕೆ ಹೋಗಬಹುದು

ಸಿಂಹ: ತುಂಬಾ ಪ್ರಯಾಣ ದಣಿವಾಗಿಸುತ್ತದೆ ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ

ಕನ್ಯಾ: ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ಇಂದು ಆನಂದಿಸಬಹುದು.

ತುಲಾ: ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ.

ವೃಶ್ಚಿಕ: ಆರೋಗ್ಯದ ಆರೈಕೆಬೇಕು. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ. ಹಣ ವ್ಯರ್ಥಕ್ಕೆ ಖರ್ಚು ಮಾಡಬೇಡಿ

ಧನು: ಆರೋಗ್ಯವನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸಿ. ಇಂದು ಆನಂದವನ್ನು ಹುಡುಕುತ್ತಾ ಆಧ್ಯಾತ್ಮಿಕ ಗುರುವಿನ ಭೇಟಿ ಮಾಡಬಹುದು

ಮಕರ: ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ಮಕ್ಕಳೂ ಮನೆಯಲ್ಲಿನ ಶಾಂತತೆಯನ್ನು ಕಾಪಾಡುತ್ತಾರೆ.

ಕುಂಭ: ಇಂದು ಚೈತನ್ಯಯುಕ್ತವಾಗಿರುತ್ತೀರಿ - ಸಾಮಾನ್ಯವಾಗಿ ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮುಗಿಸುತ್ತೀರಿ

ಮೀನ: ಮನರಂಜನೆ ಇಡಿ ಕುಟುಂಬವನ್ನು ಒಳಗೊಂಡಿದ್ದಲ್ಲಿ ಅದು ಮೋಜಿನ ವಿಷಯವಾಗಿರುತ್ತದೆ. ನಿಮ್ಮನ್ನು ಶ್ಲಾಘಿಸಬಹುದು.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ಅಂತಾರಾಷ್ಟ್ರೀಯ ಖ್ಯಾತ ಹಾಡುಗಾರ ಲಿಲ್ ವೇನ್ ಅವರ ಹುಟ್ಟುಹಬ್ಬ
- ವಿಶ್ವ ಪ್ರವಾಸೋದ್ಯಮ ದಿನ
- ಖ್ಯಾತ ನಟ ರಾಹುಲ್ ದೇವ್ ಅವರ ಹುಟ್ಟುಹಬ್ಬ

ಚಿತ್ರಸ್ಫೂರ್ತಿ

ಎಲ್ಲ ನಡೆಯೋದು ದೇವರ ಹೆಸರಲ್ಲಿ!

ಚಿತ್ರಕೃಪೆ: ಅರುಣ್ ಕುಮಾರ್ ನಾಲಿಮೇಳ

ನಿಮ್ಮ ಬದುಕು ನಿಮ್ಮದೇ ಕೈಯಲ್ಲಿದೆ...

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಬ್ಬ ವಯಸ್ಸಾದ ವ್ಯಕ್ತಿ, ಸಾಯುವ ಕ್ಷಣದಲಿದ್ದ. ಆತ ಕಣ್ಣು ತೆರೆದು, 'ನನ್ನ ದೊಡ್ಡ ಮಗನೆಲ್ಲಿ?' ಎಂದ. ಆಗ ಅವನ ಪತ್ನಿ, 'ಅವನು ಇಲ್ಲೇ ನಿಮ್ಮ ಪಕ್ಕದಲ್ಲೇ ನಿಂತಿದ್ದಾನೆ' ಎಂದಳು. 'ಎರಡನೆಯವನೆಲ್ಲಿ?' ಎಂದು ಕೇಳಿದ, 'ಆತನೂ ನಿಮ್ಮ ಬಳಿಯಲ್ಲಿಯೇ ಕುಳಿತಿದ್ದಾನೆ' ಎಂದಳು . ಆತನ ಕಣ್ಣು ಮಂಜು ಮಂಜಾಗಿತ್ತು, ಸಂಜೆಯಾಗುತ್ತಾ ಬರುತ್ತಿತ್ತು, ಇನ್ನೇನು ಈಗಲೂ ಆಗಲೂ ಎನ್ನುವಸ್ಥಿತಿಯಲ್ಲಿದ್ದ. ಆದರೂ, ಆತ ಹಾಗೂ ಹೀಗೂ ಕೊಸರಾಡುತ್ತಾ ಏಳಲು ಪ್ರಯತ್ನಿಸುತ್ತ 'ಮೂರನೆಯವನೆಲ್ಲಿ?' ಎಂದ. ಪತ್ನಿ ತನ್ನ ಗಂಡ, ತನ್ನ ಎಲ್ಲ ಮಕ್ಕಳನ್ನೂ ಒಮ್ಮೆ ನೋಡ ಬಯಸುತ್ತಿದ್ದಾನೆ ಎಂದುಕೊಂಡು, 'ನೀವು ಏಳಬೇಡಿ, ಆತನೂ ನಿಮ್ಮ ಎಡ ಪಕ್ಕದಲ್ಲಿಯೇ ಇದ್ದಾನೆ, ಎಲ್ಲರೂ ಇಲ್ಲೇ ಇದ್ದೇವೆ, ಯಾರೂ ಎಲ್ಲೂ ಹೋಗಿಲ್ಲ' ಎಂದಳು.

ಮುದುಕ ತಟ್ಟೆಂದು ಎದ್ದು ಕುಳಿತೇ ಬಿಟ್ಟ, 'ಹಾಗಾದರೆ ಅಂಗಡಿಯಲ್ಲಿ ಯಾರಿದ್ದಾರೆ? ಅಂಗಡಿ ಮುಚ್ಚಿ ಎಲ್ಲರೂ ಇಲ್ಲಿ ಬಂದುಬಿಟ್ಟಿದ್ದೀರಲ್ಲ, ಅಂಗಡಿ ಕಥೆ ಏನು?' ಎಂದು ಕೇಳಿದ.

ಈತ ಈಗಲೂ ಆಗಲೂ ಸಾಯುವ ಸ್ಥಿತಿಯಲ್ಲಿದ್ದಾನೆ, ಆತನ ಬಾಯಲ್ಲಿ, ರಾಮ ಕೃಷ್ಣ ಎಂದೊ, ಅಪ್ಪಾ ಅಮ್ಮಾ ಎಂದೋ ಬರುವುದರ ಬದಲು, ಅವನ ಬಾಯಲ್ಲಿ ತನ್ನ ಅಂಗಡಿಯದೇ ಮಾತು. ಎಲ್ಲರೂ ಇಲ್ಲಿ ಕುಳಿತುಬಿಟ್ಟರೆ, ಅಂಗಡಿಯಲ್ಲಿ ವ್ಯಾಪಾರ ಹೇಗೆ ನೆಡೆಯುವುದು? ಯಾರಿಗೂ ಅದರ ಚಿಂತೆಯೇ ಇಲ್ಲವಲ್ಲ ಎಂಬ ಯೋಚನೆ ಅವನಿಗೆ. ಜೀವಮಾನವಿಡಿ ಅವನ ಮನಸ್ಸಿನಲ್ಲಿ ಅಂಗಡಿ ಬಿಟ್ಟು ಬೇರೆ ವಿಷಯವೇ ಇರಲಿಲ್ಲ, ಸಾಯುವ ಕೊನೆ ಕ್ಷಣದಲ್ಲೂ ಕೂಡಾ ಅವನಿಗೆ ಅದೇ ಚಿಂತೆ. ನಾನು, ನನ್ನದು ಎಂಬುದರ ಮೇಲಿನ ವ್ಯಾಮೋಹ ಅವನನ್ನು ಕೊನೆಘಳಿಗೆಯಲ್ಲೂ ಬಿಡಲೇ ಇಲ್ಲ.

ಹೌದಲ್ಲವೇ! ನಮ್ಮ ಜೀವನದಲ್ಲಿ ಯಾವ ಸಮಯದಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎನ್ನುವುದು ನಮಗೆ ತಿಳಿಯದೆ ಹೋಗುತ್ತದೆ. ದೇಹದಲ್ಲಿ ಕಸುವಿದ್ದಾಗ ದುಡಿಯುವತ್ತ ಗಮನ ಕೊಡುತ್ತೇವೆ, ಹೆಚ್ಚು ಹೆಚ್ಚು ಆಸ್ತಿ ಗಳಿಸಬೇಕು ಮಕ್ಕಳಿಗೆ ಎಲ್ಲ ಅನುಕೂಲ ಮಾಡಿಕೊಡಬೇಕು. ನಾವು ಐಷಾರಾಮಿನಿಂದ ಬದುಕಬೇಕು ಇಷ್ಟು ಕನಸುಗಳಿರುತ್ತವೆ. ಆದರೆ ದುಡಿಯುವುದು ಸರಿ ಅದನ್ನು ಬಳಸುವುದನ್ನು ಕಲಿಯಬೇಕಲ್ಲವೇ? ದುಡಿಮೆಯ ಯಂತ್ರವಾಗಿ ಮಕ್ಕಳಿಗೆ ಸಮಯ ಕೊಡುವುದನ್ನು ಮರೆಯುತ್ತೇವೆ. ನಾವು ಕೂಡ ನಮ್ಮ ಆರೋಗ್ಯದ ಕಾಳಜಿ ಮಾಡದೆ ಹಗಲು ರಾತ್ರಿ ದುಡಿಯುತ್ತಾ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತೇವೆ. ಒಂದಷ್ಟು ವರ್ಷಗಳಾದ ಮೇಲೆ ಸಾಕಷ್ಟು ಹಣವೇನೋ ಇರುತ್ತದೆ. ಆದರೆ ಮಕ್ಕಳು ಬೆಳೆದು ನಮ್ಮ ಪರಿಧಿಯ ಆಚೆ ನಡೆದು ಬಿಟ್ಟಿರುತ್ತಾರೆ. ಬೆಳೆದು ನಿಂತ ಮಕ್ಕಳಿಗೆ ನಮ್ಮ ಅಗತ್ಯ ಅಷ್ಟು ಇರುವುದೇ ಇಲ್ಲ. ಆಗ ಅವರಿಗಾಗಿ ಹಂಬಲಿಸುತ್ತೇವೆ. ಇಲ್ಲ ದುಡಿದ ಹಣವನ್ನೆಲ್ಲ ಐಷಾರಾಮಿಗೆ ಪ್ರಪಂಚ ನೋಡಲು ಬಳಸೋಣವೆಂದರೆ ಅಷ್ಟು ಹೊತ್ತಿಗೆ ಆರೋಗ್ಯ ಕೈ ಕೊಟ್ಟು ಆಸ್ಪತ್ರೆ ವಾಸಕ್ಕೆ ಹಣ ಸುರಿಯುವಂತಾಗುತ್ತದೆ.

ಯಾವುದಕ್ಕೆ ಎಷ್ಟು ಸಮಯ ಕೊಡಬೇಕೋ ಅದನ್ನು ಮೊದಲು ತಿಳಿದುಕೊಳ್ಳಬೇಕು. ದುಡಿಯುವುದು ಸರಿ ಆದರೆ ಅದರ ಜೊತೆ ಜೊತೆಗೆ ಕುಟುಂಬಕ್ಕೆ ಮಕ್ಕಳಿಗೆ ಸ್ವಂತ ನಮಗಾಗಿ ಕೂಡ ಸ್ವಲ್ಪ ಸಮಯವಲ್ಲ ಮೀಸಲಾಗಿಡಬೇಕು. ಇಷ್ಟವಾದ ಸಾಹಿತ್ಯ, ಸಂಗೀತ ಆಸಕ್ತಿಕರ ವಿಷಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ದೇಹದ ಆರೋಗ್ಯಕ್ಕೆ ನಿತ್ಯ ವ್ಯಾಯಾಮ ನಡಿಗೆ ಕುಟುಂಬದವರ ಜೊತೆ ಕಾಲ ಕಳೆಯುವುದು ಬಹಳ ಮುಖ್ಯ. ಇವೆಲ್ಲವನ್ನೂ ಹಿತಮಿತವಾಗಿ ಜೀವನದಲ್ಲಿ ಅಳವಡಿಸಿಕೊಂಡಾಗ ಒಂದು ಸಮತೋಲನವಿರುತ್ತದೆ. ಯಾವುದೋ ಒಂದು ವಿಷಯಕ್ಕೆ ಅತಿಯಾದ ಪ್ರಾಮುಖ್ಯತೆ ಕೊಟ್ಟಾಗ, ಜೀವನದಲ್ಲಿ ಬೇರೆ ಏನನ್ನು ಅನುಭವಿಸಲು ನಮಗೆ ಸಾಧ್ಯವಾಗುವುದಿಲ್ಲ. ಬರಿ ಹಣ ಮಾಡುವುದೂ ಜೀವನವಲ್ಲ.

ಇನ್ನಾದರೂ ಬದುಕಿನ ರೇಸಿನಲ್ಲಿ ಓಟ ಕಡಿಮೆ ಮಾಡಿ ಒಂದಿಷ್ಟು ನೋಟಕ್ಕೂ ಸಮಯ ಮಾಡಿಕೊಳ್ಳಿ. ನಿಮಗೆ ಇಷ್ಟವಾದ ಕೆಲಸಗಳಿಗೆ ನಿಮ್ಮ ಕುಟುಂಬದವರ ಜೊತೆ ಮಾತುಕತೆಗಳಿಗೆ ಬಿಡುವ ಮಾಡಿಕೊಳ್ಳಿ.

ಒಂದೊಳ್ಳೆ ಮಾತು

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಎಂದು ಆಚರಿಸಲಾಗುತ್ತದೆ?

- ಎ. ಡಿಸೆಂಬರ್ 6.
- ಬಿ. ಜನವರಿ 8.
- ಸಿ. ನವೆಂಬರ್ 2.
- ಡಿ. ಡಿಸೆಂಬರ್ 2.

ಉತ್ತರ : ಡಿಸೆಂಬರ್ 2

ಮಾಹಿತಿ

ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನ.
ಇದನ್ನು ಡಿಸೆಂಬರ್ 2 ರಂದು ಆಚರಿಸಲಾಗುತ್ತದೆ ಮತ್ತು ಮುಖ್ಯವಾಗಿ ಭಾರತದಲ್ಲಿನ ಮಕ್ಕಳು ಮತ್ತು ಮಹಿಳೆಯರಲ್ಲಿ ತಾಂತ್ರಿಕ ಕೌಶಲ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸುವ ಗುರಿಯನ್ನು ಇದು ಇಟ್ಟುಕೊಂಡಿದೆ. ಈ ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು ಭಾರತೀಯ ಕಂಪ್ಯೂಟರ್ ಕಂಪನಿಯಾದ ಎನ್.ಐ.ಐ.ಟಿ ಅವರು 2001 ರಲ್ಲಿ ತಮ್ಮ 20 ನೇ ವಾರ್ಷಿಕೋತ್ಸವವನ್ನು ಗುರುತಿಸಲು ಈ ದಿನವನ್ನು ಆಚರಿಸುವ ರೂಢಿಯನ್ನು ತಂದರು. ಮೊದಲ ವಿಶ್ವ ಕಂಪ್ಯೂಟರ್ ಸಾಕ್ಷರತಾ ದಿನವನ್ನು 2ನೇ ಡಿಸೆಂಬರ್ 2001 ರಂದು ಆಚರಿಸಲಾಯಿತು. ಅಂದಿನಿಂದ, ಇದು ವಿಶ್ವಾದ್ಯಂತ ಕಂಪ್ಯೂಟರ್‌ಗಳ ಬಳಕೆಯನ್ನು ಉತ್ತೇಜಿಸುವ ವಾರ್ಷಿಕ ಕಾರ್ಯಕ್ರಮವಾಗಿದೆ.

ಬೇರೆ ಪಕ್ಷಿ ಗೂಡಲ್ಲಿ ಮೊಟ್ಟೆಯಿಟ್ಟು, ಮರಿ ಮಾಡೋ ಪಕ್ಷಿ ಕಮ್ಮಿಯೇ?

● ಚಂದ್ರಶೇಖರ್ ಕುಲಗಾಣ

ಮಕ್ಕಳು ಬೇಕು ಎಂದು ಯಾವ ದಂಪತಿಗಳಿಗೆ ಇಷ್ಟವಿರೋದಿಲ್ಲ ಹೇಳಿ! ಮಕ್ಕಳನ್ನು ಹೆರಬೇಕು, ಬೆಳೆಸಬೇಕು, ವಿದ್ಯೆ ಕಲಿಸಿ ಅವುಗಳನ್ನು ಸಮಾಜದಲ್ಲಿ ಉನ್ನತ ನಾಗರಿಕರನ್ನಾಗಿ ಮಾಡಬೇಕು ಎಂಬುದು ಎಲ್ಲ ಪೋಷಕರ ಮೊದಲ ಆದ್ಯತೆ. ಅದೇ ರೀತಿ ಪಕ್ಷಿಗಳಲ್ಲಿ ಕೂಡ ಗೂಡು ಕಟ್ಟಿ, ಮೊಟ್ಟೆ ಇಟ್ಟು, ಕಾವು ಕೊಟ್ಟು ಮರಿಗಳಿಗೆ ಗುಕ್ಕು ಉಣಿಸಿ ಅವು ಬೆಳೆದ ಮೇಲೆ ಸ್ವತಂತ್ರವಾಗಿ ಹಾರಲು ಕಲಿಸುವುದನ್ನು ಎಲ್ಲಾ ಪಕ್ಷಿಗಳು ಮನುಷ್ಯನ ರೀತಿ ಪಾಲಿಸುತ್ತವೆ ಆದರೆ ಕೆಲ ಜಾತಿಯ ಪಕ್ಷಿಗಳು ಪರಾವಲಂಬಿಗಳಾಗಿ ತಮ್ಮ ಮರಿಗಳನ್ನು ಸಂಪೂರ್ಣವಾಗಿ ಇತರೆ ಪಕ್ಷಿ ಪೋಷಕರಿಗೆ ಒಪ್ಪಿಸಿಬಿಡುತ್ತವೆ, ಇದನ್ನೇ ಬ್ರೂಡ್ ಪ್ಯಾರಾಸಿಟಿಸಂ ಎನ್ನುತ್ತಾರೆ.

ಸುಮಾರು ಮುನ್ನೂರು ಜಾತಿಯ ಹಕ್ಕಿಗಳಲ್ಲಿ ಈ ಪರಾವಲಂಬಿ ಗುಣಗಳನ್ನು ಜೀವಶಾಸ್ತ್ರಜ್ಞರು ಪತ್ತೆ ಹಚ್ಚಿದ್ದಾರೆ. ಕೋಗಿಲೆ (ಕುಕೂ) ಜಾತಿಯ ಪಕ್ಷಿಗಳು, ದಕ್ಷಿಣ ಅಮೇರಿಕದಲ್ಲಿನ ಕಂದು ತಲೆಯ ಕೌ ಬರ್ಡ್ ಹಕ್ಕಿಗಳು ಹಾಗು ಕಪ್ಪು ಬಣ್ಣದ ಬಾತುಕೋಳಿ, ಆಫ್ರಿಕಾದ ಹನಿ ಗೈಡ್ (ಜೇನುಗೂಡಿನ ಮೇಣಗಳೆಂದರೆ ಇವುಗಳಿಗೆ ಇಷ್ಟ ಅದರಿಂದ ಸದಾ ಜೇನು ಗೂಡುಗಳ ಸುತ್ತ ಇವುಗಳ ಹಾರಾಟ) ಇನ್ನೂ ಸುಮಾರು ಪಕ್ಷಿ ಪ್ರಬೇಧಗಳಲ್ಲಿ ಈ ಪರಾವಲಂಬಿತನವು ಕಂಡುಬರುತ್ತದೆ. ಹಕ್ಕಿಗಳ ಈ ಪರಾವಲಂಬಿತನವನ್ನು ಕೋಗಿಲೆ ಜಾತಿಯಲ್ಲಿ ಪಕ್ಷಿತಜ್ಞರು ನಿಖರವಾಗಿ ಸಂಶೋಧಿಸಿದ್ದಾರೆ ಹಾಗು ಕೌ ಬರ್ಡ್, ಹನಿ ಗೈಡ್ ಮುಂತಾದ ಪಕ್ಷಿ ಸಂತತಿಗಳಲ್ಲಿ ತಮ್ಮ ಸಂಶೋಧನೆಗಳನ್ನು ಈಗಲೂ ಸಹ ಮಾಡುತ್ತಲೇ ಇದ್ದಾರೆ.

ಈ ಪ್ರಭೇದದ ಪಕ್ಷಿಗಳು ತಮ್ಮ ಮೊಟ್ಟೆಗಳನ್ನು ಇತರೆ ಹಕ್ಕಿಗಳ ಗೂಡುಗಳಲ್ಲಿ ಸೇರಿಸಿ ತಮ್ಮ ಜವಾಬ್ದಾರಿಯನ್ನು ಮುಗಿಸಿಕೊಂಡುಬಿಡುತ್ತವೆ, ಮೊಟ್ಟೆ ಹಾಗು ಹೊರಬರುವ ಮರಿಗಳ ನಂತರದ ಜವಾಬ್ದಾರಿ ಸಂಪೂರ್ಣವಾಗಿ ಆ ಪೋಷಕ ಪಕ್ಷಿಗಳೇ ಹೊರುತ್ತವೆ. ಗೂಡು ಕಟ್ಟುವುದು ಮರಿಗಳನ್ನು ಪೋಷಿಸುವುದು ಇವ್ಯಾವೂ ಮಾಡದೆ ಈ ಪರಾವಲಂಬಿ ಪಕ್ಷಿಗಳು ತಮ್ಮ ವಂಶವಾಹಿನಿಯನ್ನು ಮುಂದುವರೆಸಿಕೊಂಡು ಬರುತ್ತಿವೆ. ವಿಚಿತ್ರವೆಂಬಂತೆ ಕೆಲ ಪೋಷಕ ಜಾತಿಯ ಪಕ್ಷಿಗಳು ಗೂಡಿನಲ್ಲಿ ಇರುವುದು ತಮ್ಮ ಮೊಟ್ಟೆಯಲ್ಲವೆಂದು ಗೊತ್ತಿದ್ದರೂ ಸಹ ಮಾತೃವಾತ್ಸಲ್ಯದಿಂದ ತಮ್ಮ ಇತರೆ ಮೊಟ್ಟೆಗಳ ಜೊತೆ ಅದಕ್ಕೂ ಕಾವು ಕೊಡುತ್ತವೆ ಆದರೆ ಕೆಲ ಜಾತಿಯ ಪಕ್ಷಿಗಳು ಪರಾವಲಂಬಿ ಮೊಟ್ಟೆಗಳನ್ನು ಗುರುತಿಸಿ ಬೆಳೆಯಲು ಬಿಡದೆ ಗೂಡಿನಿಂದ ಹೊರತಳ್ಳಿಬಿಡುತ್ತವೆ.

ಪರಾವಲಂಬಿ ಪಕ್ಷಿಗಳು ಮೊಟ್ಟೆಯನ್ನು ಬೇರೆ ಹಕ್ಕಿಗಳ ಗೂಡಿನಲ್ಲಿ ಇಡುವುದು ಅಷ್ಟು ಸುಲಭವಲ್ಲ. ಮೊದಲು ಪೋಷಕ ಪಕ್ಷಿಗಳ ಗೂಡನ್ನು ಪತ್ತೆ ಹಚ್ಚಬೇಕು, ಅವುಗಳು ಗೂಡಿನಲ್ಲಿಲ್ಲದ ಸಮಯ ನೋಡಿಕೊಂಡು ಗೂಡು ಹೊಕ್ಕು ತಮ್ಮ ಮೊಟ್ಟೆಗಳನ್ನು ಇಟ್ಟು ಬರಬೇಕು, ಗೂಡಿನಲ್ಲಿದ್ದಾಗ ಪೋಷಕ ಪಕ್ಷಿಗಳು ಬಂದು ಬಿಟ್ಟರೆ ರಣಘೋರ ಯುದ್ಧಕ್ಕೆ ಹಣಿಯಾಗಬೇಕು ಒಂದೇ ಎರಡೇ?

ಗಾತ್ರದಲ್ಲಿ ಹದ್ದಿನಂತೆ ಕಾಣುವ ಕೆಲ ಜಾತಿಯ ಕೋಗಿಲೆಗಳು ಪೋಷಕ ಗೂಡುಗಳಿಗೆ ಆಕ್ರಮಣಕಾರಿಯಾಗಿ ಲಗ್ಗೆ ಇಟ್ಟು ಅವುಗಳನ್ನು ಬೆದರಿಸಿ ಓಡಿಸಿ ಸಲೀಸಾಗಿ ಮೊಟ್ಟೆ ಇಟ್ಟು ಬಂದುಬಿಡುತ್ತವೆ ಆದರೆ ಕೆಲ ಜಾತಿಯ ಪೋಷಕ ಪಕ್ಷಿಗಳು ಪರಾವಲಂಬಿ ಪಕ್ಷಿಗಳನ್ನು ಕನಿಕರದಿಂದ ನೋಡಿ ಅವುಗಳು ಗೂಡಿನ ಸನಿಹ ಬಂದನಂತರ ಕೆಲ ಸಮಯ ತಾವಾಗೇ ಗೂಡನ್ನು ಬಿಟ್ಟು ಮೊಟ್ಟೆ ಇಡಲು ಸಹಾಯ ಮಾಡುತ್ತವೆ. ಆದರೆ ಕೋಗಿಲೆ ಜಾತಿಗಳಲ್ಲಿ ಕೆಲ ಪಕ್ಷಿಗಳು ತಮ್ಮ ಮೊಟ್ಟೆ ಇಟ್ಟ ನಂತರ ಪೋಷಕ ಹಕ್ಕಿಗಳಿಗೆ ಗೊತ್ತಾಗದಿರಲಿ ಎಂದೋ ಏನೋ ಇತರೆ ಮೊಟ್ಟೆಗಳಲ್ಲಿ ಒಂದನ್ನು ಗೂಡಿನಿಂದ ಹೊರತಳ್ಳಿಬಿಡುತ್ತವೆ. ಎಷ್ಟೋ ಬಾರಿ ಪೋಷಕ ಪಕ್ಷಿಗಳ ಮೊಟ್ಟೆಗಳಿಗಿಂತ ಮೊದಲೇ ಈ ಪರಾವಲಂಬಿ ಮೊಟ್ಟೆಗಳು ಒಡೆದು ಮರಿಗಳು ಹೊರಬಂದು ಬಿಡುತ್ತವೆ ಆಗಲು ಸಹ ಪೋಷಕ ಹಕ್ಕಿಗಳಿಗೆ ಅದು ತಮ್ಮದೇ ಮರಿ ಎಂದು ತಿಳಿಯದೆ ಅವುಗಳಿಗೆ ಆಹಾರವನ್ನು ನೀಡುತ್ತವೆ. ಇವೆಲ್ಲ ಪಕ್ಷಿಲೋಕದಲ್ಲಿ ಸೋಜಿಗ.

ಈ ವ್ಯವಸ್ಥೆಯಲ್ಲಿ ಪೋಷಕ ಪಕ್ಷಿಗಳ ಮರಿಗಳಿಗೆ ಅನಾನುಕೂಲವೇ ಹೆಚ್ಚು, ಪರಾವಲಂಬಿ ಮರಿಗಳು ಬೆಳೆದಂತೆಲ್ಲ ಗೂಡಲ್ಲಿ ತಮ್ಮ ಪ್ರಾಬಲ್ಯವನ್ನು ಸಾಧಿಸುತ್ತವೆ, ಎಷ್ಟೋ ಮರಿಗಳು ಪೋಷಕ ಹಕ್ಕಿಗಳ ಮರಿಗಳಿಗಿಂತ ಗಾತ್ರದಲ್ಲಿ ದೊಡ್ಡದಿರುವುದರಿಂದ ಇತರೆ ಮರಿಗಳನ್ನು ಒತ್ತರಿಸಿ ಒತ್ತರಿಸಿ ಗೂಡಿನಿಂದ ಹೊರಗೆ ತಳ್ಳಿಬಿಡುತ್ತವೆ ಇದರಲ್ಲಿ ಹನಿ ಗೈಡ್ ಹಕ್ಕಿಗಳ ಮರಿಗಳು ಇನ್ನೂ ಕ್ರೂರ, ಈ ಮರಿಗಳಿಗೆ ಹುಟ್ಟುವಾಗಲೇ ಚೂಪಾದ ಕೊಕ್ಕು ಇರುವುದರಿಂದ ಇತರೆ ಮರಿಗಳನ್ನು ಅವು ಕಣ್ಣು ಬಿಡುವ ಮೊದಲೇ ಕುಕ್ಕಿ ಕುಕ್ಕಿ ಸಾಯಿಸಿಬಿಡುತ್ತವೆ.

ಪರಾವಲಂಬಿ ಮರಿಗಳು ಸಾಮಾನ್ಯವಾಗಿ ಪೋಷಕ ಮರಿಗಳಿಗಿಂತ ಹೆಚ್ಚು ಆಹಾರ ಬೇಡುವುದರಿಂದ ಪೋಷಕ ಹಕ್ಕಿಗಳು ಇವಕ್ಕೆ ಮೊದಲು ಆಹಾರ ಉಣಿಸುವುದರಿಂದ ಇತರೆ ಮರಿಗಳಲ್ಲಿ ಅಪೌಷ್ಟಿಕತೆ ಉಂಟಾಗಿ ಸಾವನ್ನಪ್ಪುತ್ತವೆ ಆದರೆ ಏಶಿಯನ್ ಜಾತಿಯ ಕೋಗಿಲೆಗಳ ತರಹದ ಕೆಲ ಮರಿಗಳು ತಮ್ಮ ದೊಡ್ಡ ಗಾತ್ರದಿಂದ ಇತರೆ ಮರಿಗಳಿಗೆ ತೊಂದರೆ ಕೊಡದೆ ಅರಿತು ಗೂಡಿನಿಂದ ಹೊರಗೆ ಕೆಲ ಕಾಲ ಇರುತ್ತವೆ ಆಗಲೂ ಸಹ ಪೋಷಕ ಹಕ್ಕಿಗಳು ಅವುಗಳಿಗೆ ನಿರ್ವಂಚನೆಯಿಂದ ಆಹಾರವನ್ನು ಉಣಿಸುವುದು ಪಕ್ಷಿಲೋಕದಲ್ಲಿನ ಸಹಜ ಮಾತೃವಾತ್ಸಲ್ಯವನ್ನು ಹಾಗು ಪರಾವಲಂಬಿ ಪಕ್ಷಿಗಳಲ್ಲಿ ಇಲ್ಲದ ಮಮತೆ ಮಮಕಾರಗಳನ್ನು ಎತ್ತಿ ತೋರಿಸುತ್ತದೆ.

ಪ ದ ಬಂ ಧ



ಎಡದಿಂದ ಬಲಕ್ಕೆ:

2. ತಲೆಯ ಮೇಲೆ ಗುದ್ದು ಎನ್ನುವುದು ತಿರುಗಿ ಬಂದಿದೆ (3)
6. ಈ ಮಾರ್ವಾಡಿನಲ್ಲಿ ಆಂಗ್ಲರ ಕಾನೂನು ಕೂಡ ಇದೆ (5)
7. ಪಣಕ್ಕಿಟ್ಟ ಐಶ್ವರ್ಯ ಅಸ್ತವ್ಯಸ್ತವಾಗಿದೆ (3)
8. ಅಲ್ಲಿ ಇಲ್ಲಿ ಅಲೆದಾಡು (3)
12. ಮತ್ತೊಂದು ಹಸುವಿನೊಂದಿಗೆ ಬಂದಿರುವ ಮನ್ಮಥ (3)
16. ಅತಿಯಾದ ಒತ್ತಾಯ, ಬಲಾತ್ಕಾರ (3)
17. ಒಂದಕ್ಕೊಂದು ಸಂಬಂಧವನ್ನು ಕಲ್ಪಿಸು (5)
18. ಸೌಂದರ್ಯ ಅಥವಾ ಚೆಲುವು, ಛಂದಸ್ಸಿನ ಒಂದು ಬಗ್ಗೆಯೂ ಹೌದು (3)

ಮೇಲಿನಿಂದಕೆಳಕ್ಕೆ:

1. ಎಲ್ಲೆಡೆ ಹರಡುವವನು (4)
2. ವಿಶ್ವವಿದ್ಯಾಲಯದ ಮುಖ್ಯಸ್ಥ (4)
3. ಒಟ್ಟು ಹಣ (4)
4. ಉಲ್ಲಾಸ, ಬೆಡಗು ಎಂದರ್ಥ (3)
5. ಗೆಳೆಯನಿಗೆ ಮತ್ತೊಂದು ಪದ (4)
9. ಭಯಂಕರನಾದ ಶಿವ (2)
10. ನಾಲಗೆ ತಿಳಿಸಿದ ರುಚಿ (2)
11. ಹೆಚ್ಚು ಕಡಿಮೆ ಅಥವಾ ವ್ಯತ್ಯಾಸ (4)
12. ಮನುಷ್ಯ ಜಾತಿ (4)
13. ಹೊಸದಾದ ಬೆಣ್ಣೆ (4)
14. ಅದೃಷ್ಟವಿಲ್ಲದ ದುರ್ದೈವಿ (4)
15. ಮೊಳಕೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಪವನಜ 3. ಆಕಸ್ಮಿಕ 6. ಗದರು 8. ಕಮಲ 10. ಹಂಚಿಕೆ 12. ಹಣವಂತ 13. ಲಟಾಪಟಿ 15. ಕಳಸ 17. ಗೆಳೆಯ 19. ಗರಿಕೆ 21. ಅವನತ 22. ನಾಗಲೋಕ

ಮೇಲಿನಿಂದ ಕೆಳಕ್ಕೆ: 1. ಪಲ್ಲಂಗ 2. ನಜರು 4. ಕನಕ 5. ಇಣಚಿ 7. ದರ್ಪಣ 9. ಲಜಟಿ 10. ಹಂತಕ 11. ಕೆಲಸ 12. ಹಲಗೆ 14. ಪರಾರಿ 16. ಳರವಿ 18. ಯವನ 19. ಗಟ್ಟಿಗ 20. ಕೆಡುಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಕಡಲ ಮೇಲೊಂದು ರೆಸ್ಟೋರೆಂಟ್

ಈ ವಿಶ್ವ ವಿಖ್ಯಾತ ರಾಕ್ ರೆಸ್ಟೋರೆಂಟ್ ಜಾಂಜಿಬಾರ್‌ನ ಮಿಚಾನ್ವಿ ಪಿಂಗ್ವೆ ಕಡಲ ತೀರದಲ್ಲಿದೆ. ಏಳು ಮೀಟರ್ ಎತ್ತರದ ಬಂಡೆಯ ಮೇಲೆ ಇದನ್ನು ಕಟ್ಟಲಾಗಿದೆ. ರಾಕ್ ರೆಸ್ಟೋರೆಂಟ್ ಇರುವುದು ಹಿಂದೂ ಮಹಾ ಸಾಗರದ ಮಧ್ಯದಲ್ಲಿ. ದೊಡ್ಡ ಬಂಡೆಯ ಮೇಲೆ ಇದು ನೆಲೆಗೊಂಡಿರುವುದರಿಂದ ಇದಕ್ಕೆ ಈ ಹೆಸರು. ಇದನ್ನು ಜಾಂಜಿಬಾರ್‌ನ ಸಂಪತ್ತು ಎಂದು ಕರೆಯಲಾಗುತ್ತದೆ. ಈ ರೆಸ್ಟೋರೆಂಟಿನ ಮತ್ತೊಂದು ವಿಶೇಷವೆಂದರೆ, ಕಡಲಿನ ಅಲೆಗಳು ತೀರಾ ಇಳಿಮುಖವಾದಾಗ, ಇದು ಬಂಡೆಯ ಮೇಲೆ ಇದ್ದಂತೆ ಕಂಡು ಬರುತ್ತದೆ. ಅಲೆಗಳು ಹೆಚ್ಚಾದಾಗ, ಕಲ್ಲಿನ ಭಾಗ ನೀರಿನಲ್ಲಿ ಮುಳುಗಿ, ಇಡೀ ರೆಸ್ಟೋರೆಂಟ್ ದ್ವೀಪವಾಗಿ ಕಂಡು ಬರುತ್ತದೆ.

ಪುಸ್ತಕ ಲೋಕ

ಬಾನಂಚಿನ ಆಚೆ

ಲೇಖಕಿ ಶಾಂತಲಾ ಅವರ ಕಥಾ ಸಂಕಲನ ಕೃತಿ ಬಾನಂಚಿನ ಆಚೆ. ಇಲ್ಲಿರುವ ಕತೆಗಳನ್ನು ನಮ್ಮ ದಿನನಿತ್ಯದ ಜೀವನದಲ್ಲಿ ನಡೆಯುವ ವಿಜ್ಞಾನದ ಹಲವು ಕುತೂಹಲಕಾರಿ ಪರಿಕಲ್ಪನೆಗಳನ್ನು ಸೇರಿಸಿ ಹೆಣೆಯಲಾಗಿದೆ. ಪುಸ್ತಕದ ಬೆನ್ನುಡಿಯಲ್ಲಿ ಲೇಖಕರು ಹೇಳುವಂತೆ, ವೈಜ್ಞಾನಿಕ ಕತೆಗಳನ್ನು ಹಲವರು ಕಟ್ಟುಕತೆ, ಭ್ರಮಾಲೋಕದ ವೃತ್ತಾಂತಗಳು ಎಂದು ನಿರ್ಧರಿಸಿರುತ್ತಾರೆ. ಇನ್ನು ಕೆಲವರಿಗೆ ವಿಜ್ಞಾನವನ್ನು ಕಲಿತವರಿಗೆ ಮಾತ್ರ ಈ ಕಥೆಗಳು ಅರ್ಥವಾಗುತ್ತವೆ ಎಂಬ ತಪ್ಪು ಪರಿಕಲ್ಪನೆ ಇದೆ. ಆದರೆ ಅವುಗಳನ್ನು ಬಹಳ ಸಹಜವೆಂದು, ಅದರ ಹಿಂದಿನ ಶ್ರಮ, ಬೆವರು, ತ್ಯಾಗಗಳನ್ನು ಮರೆತೇ ಹೋಗಿದ್ದೇವೆ! ವಿಜ್ಞಾನದ ಸಾಧ್ಯತೆ ಅಗಾಧ. ಪ್ರತಿದಿನವೂ ಹೊಸ ಪರಿಕಲ್ಪನೆ, ಹೊಸ ಆವಿಷ್ಕಾರ ಆಗುತ್ತಲೇ ಇರುತ್ತದೆ. ಅಂತಹ ಕೆಲವು ಕಲ್ಪನೆಗಳ ಬಗ್ಗೆ ಮತ್ತಷ್ಟು ಚಿಂತಿಸಿ, ಇನ್ನಷ್ಟು ಓದಿ, ತಿಳಿದುಕೊಂಡು, ಕತೆಗಳ ರೂಪದಲ್ಲಿ ತಿಳಿಸಲಾಗಿದೆ.



ಟ್ವೀಟ್‌ಮೆಂಟ್

ಅನನ್ಯ ಬಿರ್ಲಾ: ನಿಮ್ಮ ಹಾಗೇ ನೀವು ಇರಿ!

ಪ್ರೀತಂ ಪ್ರೀತ್: ಹೌದು. ಏಕೆಂದರೆ, ಎಲ್ಲರೂ ಅನನ್ಯ ಬಿರ್ಲಾ ಥರ ಇರೋದಕ್ಕೆ ಆಗೋಲ್ಲ!

ವಿಶ್ವವಾಣಿ ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್
27.09.2024
ಬೆಂಗಳೂರು • ಶುಕ್ರವಾರ

ಅಕ್ಟೋಬರ್‌ನಲ್ಲಿ ಸಿನಿಮಾ ಸುಗ್ಗಿ

ಅಕ್ಟೋಬರ್‌ನಲ್ಲಿ ದಸರಾ ಸಂಭ್ರಮ ಮನೆ ಮಾಡಲಿದೆ. ಅಂತೆಯೇ ಚಂದನವನದಲ್ಲಿ ಸಿನಿಮಾ ಸುಗ್ಗಿ ಶುರುವಾಗಲಿದೆ. ಈ ವರ್ಷದ ಆರಂಭದಲ್ಲಿ ತೆರೆಗೆ ಬಂದ ಸಿನಿಮಾಗಳು ಅಷ್ಟಾಗಿ ಸದ್ದು ಮಾಡಲಿಲ್ಲ, ಅಲ್ಲೊಂದು, ಇಲ್ಲೊಂದು ಸಿನಿಮಾ ಬಿಟ್ಟರೆ ಅಂತಹ ಹೇಳಿಕೊಳ್ಳುವ ಪ್ರೇಕ್ಷಕರ ಮನಗೆಲ್ಲುವ ಯಾವ ಸಿನಿಮಾಗಳು ತೆರೆಗೆ ಬರಲಿಲ್ಲ. ಹೈಬಜೆಟಿನ ಸ್ಟಾರ್ ನಟರ ಸಿನಿಮಾಗಳು ತೆರೆಗೆ ಬಾರದೆ ಚಿತ್ರರಂಗ ಕೂಡ ಮಂಕಾಗಿತ್ತು. ಹಾಗಾಗಿಯೇ ರೀ ರಿಲೀಸ್ ಪರ್ವ ಮುಂದುವರಿದಿತ್ತು. ಆದರೆ ಅಕ್ಟೋಬರ್ ನಲ್ಲಿ ಸ್ಯಾಂಡಲ್‌ವುಡ್ ರಂಗೇರಲಿದೆ. ಸ್ಟಾರ್ ನಟರ ಸಾಲು ಸಾಲು ಸಿನಿಮಾಗಳು ತೆರೆಗೆ ಬರಲಿವೆ.

ಭೈರಾದೇವಿ

ರಾಧಿಕಾ ಕುಮಾರಸ್ವಾಮಿ ಬಹುದಿಗಳ ಬಳಿಕ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಅದೂ ಭೈರಾದೇವಿಯಾಗಿ ಎಂಬುದು ವಿಶೇಷ. ಹೌದು, ಹಾರರ್ , ಥ್ರಿಲ್ಲರ್ ಕಥೆಯ ಭೈರಾದೇವಿ ಚಿತ್ರದಲ್ಲಿ ರಾಧಿಕಾ ಕಾಳಿಯ ಪಾತ್ರದಲ್ಲಿ ಕಾಣಿಸಿಕೊಂಡು ಅಬ್ಬರಿಸಿದ್ದಾರೆ. ರಮೇಶ್ ಅರವಿಂದ್ ಪೊಲೀಸ್ ಅಧಿಕಾರಿಯಾಗಿ ಅಭಿನಯಿಸಿದ್ದಾರೆ. ಶ್ರೀಜೈ ನಿರ್ದೇಶನದ ಈ ಚಿತ್ರವನ್ನು ರಾಧಿಕಾ ಕುಮಾರಸ್ವಾಮಿ ಅವರೇ ನಿರ್ಮಿಸಿದ್ದಾರೆ. ಅಕ್ಟೋಬರ್ 3 ರಂದು ನವರಾತ್ರಿಯ ಸಂದರ್ಭದಲ್ಲಿ ಭೈರಾದೇವಿ ರಾಜ್ಯಾದ್ಯಂತ ತೆರೆಗೆ ಬರುತ್ತಿರುವುದು ವಿಶೇಷ.

ಮಾರ್ಟಿನ್

ಧ್ರುವ ಸರ್ಜಾ ಅಭಿನಯದ ಮಾರ್ಟಿನ್ ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ವರ್ಷಗಳಿಂದಲೂ ಕಾದು ಕುಳಿತ್ತಿದ್ದಾರೆ. ಅಂತು ಮಾರ್ಟಿನ್ ರಿಲೀಸ್‌ಗೆ ದಿನಗಣನೆ ಆರಂಭವಾಗಿದೆ. ಅಕ್ಟೋಬರ್ 11 ರಂದು ಮಾರ್ಟಿನ್ ಭರ್ಜರಿಯಾಗಿ ತೆರೆಗೆ ಎಂಟ್ರಿಕೊಡಲಿದ್ದಾನೆ. ಈ ಚಿತ್ರಕ್ಕಾಗಿ ಧ್ರುವ ಸರ್ಜಾ ಮೂರು ವರ್ಷಗಳನ್ನು ಮುಡಿಪಾಗಿಟ್ಟಿದ್ದಾರೆ. ಮಾರ್ಟಿನ್‌ನಲ್ಲಿ ಹೊಸ ಅವತಾರ ತಾಳಿರುವ ಧ್ರುವ ಆ್ಯಕ್ಷನ್ ನಲ್ಲಿ ಅಬ್ಬರಿಸಿದ್ದಾರೆ. ಖ್ಯಾತ ನಟ ಅರ್ಜುನ್ ಸರ್ಜಾ ಮಾರ್ಟಿನ್ ಕಥೆ ಹೆಣೆದಿರುವುದು ವಿಶೇಷ. ಎ.ಪಿ.ಅರ್ಜುನ್ ನಿರ್ದೇಶನದ ಈ ಚಿತ್ರವನ್ನು ಉದಯ್ ಮೆಹ್ತ ನಿರ್ಮಿಸಿದ್ದಾರೆ. ಬರೋಬ್ಬರಿ ನೂರು ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಮಾರ್ಟಿನ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದೆ. ಕನ್ನಡ, ಹಿಂದಿ, ತಮಿಳು, ಜಾಪನೀಸ್ ,ಚೈನೀಸ್ ಸೇರಿಂತೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ಭಾಷೆಗಳಲ್ಲಿ ರಿಲೀಸ್ ಆಗಲಿದೆ.

ಅರ್ಲಿ ಮಾರ್ನಿಂಗ್ ಶೋ ಕ್ರೇಜ್

ಪ್ಯಾನ್ ಇಂಡಿಯಾ ಜಮಾನದಲ್ಲಿ ಅರ್ಲಿ ಮಾರ್ನಿಂಗ್ ಕ್ರೇಜ್ ಕೂಡ ಶುರುವಾಗಿದೆ. ಮಧ್ಯರಾತ್ರಿ ಒಂದು ಗಂಟೆಯಿಂದ ನಾಲ್ಕು, ಐದು ಗಂಟೆಗೆ ಸಿನಿಮಾ ಪ್ರದರ್ಶನ ಆರಂಭಿಸುವ ಪರಿಪಾಠ ಇದಾಗಿದೆ. ಕನ್ನಡದಲ್ಲಿ ಕೆಜಿಎಫ್ ಚಿತ್ರ ಈ ಕ್ರೇಜ್ ಹೆಚ್ಚಿಸಿತು. ಕೆಜಿಎಫ್ 2 ನೂರ ಎಂಬತ್ತಕ್ಕೂ ಹೆಚ್ಚು ಮುಂಜಾನೆಯ ಶೋಗಳಲ್ಲಿ ದರ್ಶನವಾಗಿತ್ತು. ಆ ಬಳಿಕ ವಿಜಯ್ ಅಭಿನಯದ ಲಿಯೊ ಇನ್ನೂರ ಇಪ್ಪತ್ತು ಮಾರ್ನಿಂಗ್ ಶೋ ಏರ್ಪಡಿಸುವ ಮೂಲಕ ಕೆಜಿಎಫ್ ದಾಖಲೆಯನ್ನು ಮುರಿದಿತ್ತು. ಇತ್ತೀಚೆಗೆ ತೆರೆಗೆ ಬಂದ ವಿಜಯ್ ಅಭಿನಯದ ಗೋಟ್ ಇನ್ನೂರ ಎಪ್ಪತ್ತು ಮಾರ್ನಿಂಗ್ ಶೋ ಕಂಡಿತ್ತು. ದೇವರ ಚಿತ್ರ ಕೂಡ ಅದೇ ದಾರಿಯಲ್ಲಿ ಸಾಗಿದ್ದು, ಇನ್ನೂರ ಮೂವತ್ತು ಮಾರ್ನಿಂಗ್ ಪ್ರದರ್ಶನ ಕಂಡಿದೆ. ಈಗಾಗಲೇ ಸಾಕಷ್ಟು ಟಿಕೆಟ್‌ಗಳು ಸೋಲ್ಡ್ ಔಟ್ ಆಗಿವೆ.

ಬಘೀರ

ಹೊಂಬಾಳೆ ಫಿಲಂಸ್‌ನಲ್ಲಿ ನಿರ್ಮಾಣವಾಗಿರುವ ಬಹು ನಿರೀಕ್ಷಿತ ಚಿತ್ರ, ಬಘೀರ ಅಕ್ಟೋಬರ್ 31 ರಂದು ತೆರೆಗೆ ಬರಲಿದೆ. ಈ ಚಿತ್ರಕ್ಕೆ ಪ್ರಶಾಂತ್ ನೀಲ್ ಕಥೆ ಬರೆದಿದ್ದು ಡಾ.ಸೂರಿ ನಿರ್ದೇಶನ ಮಾಡಿದ್ದಾರೆ. ಹಾಗಾಗಿಯೇ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಾಗಿದೆ. ಶ್ರೀಮುರಳಿ ನಾಯಕನಾಗಿ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಅಬ್ಬರಿಸಿದ್ದಾರೆ. ರುಕ್ಮಿಣಿ ವಸಂತ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಯುಐ

ನಟ ಉಪೇಂದ್ರ, ಬಹು ದಿನಗಳ ಬಳಿಕ ನಿರ್ದೇಶನಕ್ಕೆ ಮರಳಿದ್ದು, ಯುಐ ಚಿತ್ರವನ್ನು ನಿರ್ದೇಶಿಸಿದ್ದಾರೆ. ಶೀರ್ಷಿಕೆಯಲ್ಲಿಯೇ ಕುತೂಹಲ ಹುಟ್ಟುಹಾಕಿದ್ದ ಯುಐ ಟೀಸರ್ ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರ ತಲೆಯಲ್ಲಿ ಹುಳು ಬಿಟ್ಟಿತ್ತು. ಹಾಗಾಗಿ ಚಿತ್ರದಲ್ಲಿ ಏನೋ ಹೊಸತನ ಇದೆ ಎಂಬುದು ಅರಿತು ಚಿತ್ರ ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾದು ಕುಳಿತ್ತಿದ್ದರು. ಇದನ್ನು ಅರಿತ ಉಪ್ಪಿ ಅಕ್ಟೋಬರ್‌ನಲ್ಲಿ ಚಿತ್ರವನ್ನು ತೆರೆಗೆ ತರುವುದಾಗಿ ಹೇಳಿದ್ದರು. ಅಂತೆಯೇ ಯುಐ ಅಕ್ಟೋಬರ್‌ನಲ್ಲಿ ರಿಲೀಸ್ ಆಗಲಿದೆ.

ಈ ಸಿನಿಮಾಗಳ ಜತೆಗೆ ಡಾಲಿ ಧನಂನಯ ಅಭಿನಯದ ಜೀಬ್ರಾ ಕೂಡ ಮುಂದಿನ ತಿಂಗಳ ಅಂತ್ಯಕ್ಕೆ ತೆರೆಗೆ ಬರಲಿದೆ. ಸೂಪರ್ ಸ್ಟಾರ್ ರಜನಿಕಾಂತ್ ಅಭಿನಯಿಸಿರುವ ವೆಟ್ಟೈಯಾನ್ ಕೂಡ ಅಕ್ಟೋಬರ್ 10 ರಂದೇ ತೆರೆಗೆ ಬರಲಿದೆ.





ನೈಟ್ ರೋಡ್‌ನಲ್ಲಿ ಥ್ರಿಲ್ಲರ್ ತಿರುವು

ಈ ಹಿಂದೆ ತಾಂಡವ ಚಿತ್ರವನ್ನು ನಿರ್ದೇಶಿಸಿದ್ದ ಗೋಪಾಲ್ ಹಳೇಪಾಳ್ಯ ಈಗ ನೈಟ್ ರೋಡಿನ ಕಥೆ ಹೇಳುತ್ತಿದ್ದಾರೆ. ಗೋಪಾಲ್ ನೈಟ್ ರೋಡ್‌ನಲ್ಲಿ ನಡೆಯುವ ನಿಗೂಢ ಅಪಘಾತಗಳ ಸುತ್ತ ಕಥೆ ಹೆಣೆದು ಅದನ್ನು ತೆರೆಗೆ ತಂದಿದ್ದಾರೆ. ಹಿಂದಿನ ಜನ್ಮದಲ್ಲಿ ಮಾಡಿದ ತಪ್ಪು ಈ ಜನ್ಮದಲ್ಲಿ ಕಾಡುತ್ತದೆ ಎಂಬ ಮಾತಿಗೆ. ಅದೇ ವಿಚಾರವನ್ನು ನೈಟ್ ರೋಡ್ ಚಿತ್ರದಲ್ಲಿ ಹೇಳಲಾಗಿದೆ. ಕರ್ಮದ ವಿಚಾರವನ್ನು ಆಯ್ದುಕೊಂಡು ಈ ಚಿತ್ರದ ಕಥೆ ಹೆಣೆದು ಅದಕ್ಕೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಬೆರೆಸಿ ತೆರೆಗೆ ತಂದಿದ್ದಾರೆ.

ನೈಟ್ ರೋಡ್ ಅಂದಾಕ್ಷಣ ರಸ್ತೆಯಲ್ಲಿ ನಡೆಯುವ ಕಥೆ ಅನ್ನಿಸುತ್ತದೆ. ಅಂದುಕೊಂಡಂತೆ ಅದು ಸತ್ಯವೂ ಹೌದು. ಅದಕ್ಕಿಂತ ಮುಖ್ಯವಾಗಿ ಈ ಕಥೆ ತನಿಖಾಧಿಕಾರಿಯ ಸುತ್ತ ಸಾಗುತ್ತದೆ. ಅದೇನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು ಎನ್ನುತ್ತಾರೆ ನಿರ್ದೇಶಕರು.

ಆ ರಸ್ತೆಯಲ್ಲಿನ ನಿಗೂಢತೆ

ಊರ ಮಧ್ಯದಲ್ಲಿ ಹಾದು ಹೋಗುವ ಹೆದ್ದಾರಿಯಲ್ಲಿ ತಿಂಗಳಿನ ನಿರ್ದಿಷ್ಟ ದಿನದಲ್ಲಿ ಅಪಘಾತಗಳು ಸಂಭವಿಸುತ್ತವೆ. ಇದರಿಂದ ಹಲವು ಜನ ಸಾವನ್ನಪ್ಪಿರುತ್ತಾರೆ. ಅಷ್ಟಕ್ಕೂ ಅದೇ ದಿನ ಅಪಘಾತವಾಗುವುದು ಯಾಕೆ ಎಂಬುದೇ ಸಸ್ಪೆನ್ಸ್. ಹೀಗೆ ಈ ರಸ್ತೆಯಲ್ಲಿ ನಡೆದ ಅವಘಡದಲ್ಲಿ ತನಿಖಾಧಿಕಾರಿಯ ಸಹೋದರ ಕೂಡ ಅಸುನೀಗುತ್ತಾನೆ. ಇದರಿಂದ ಮನನೊಂದ ಪೊಲೀಸ್ ಅಧಿಕಾರಿ ಆಧ್ಯಾತ್ಮದತ್ತ ಜಾರುತ್ತಾನೆ. ಅಷ್ಟಕ್ಕೂ ಆ ರಸ್ತೆಯಲ್ಲಿನ ನಿಗೂಢತೆ ಏನು ಎಂಬುದೇ ಚಿತ್ರದ ಕಥೆ.

ನೈಸ್ ರೋಡ್

ಈ ಹಿಂದೆ ಚಿತ್ರಕ್ಕೆ ನೈಸ್ ರೋಡ್ ಎಂಬ ಶೀರ್ಷಿಕೆ ಇಡಲಾಗಿತ್ತು, ಆದರೆ ಇದಕ್ಕೆ ನೈಸ್ ಸಂಸ್ಥೆಯವರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆ ನೈಟ್ ರೋಡ್ ಎಂಬ ಶೀರ್ಷಿಕೆ ಬದಲಿಸಲಾಗಿದೆ. ಹಾಗಂತ ಈ ಚಿತ್ರದ ಕಥೆಗೂ ನೈಸ್ ರೋಡ್‌ಗೂ ಯಾವುದೇ ಸಂಬಂಧವಿಲ್ಲ. ಸಿನಿಮಾ ನೋಡಿದ ಮೇಲೆ ಇದು ತಿಳಿಯುತ್ತದೆ ಎನ್ನುತ್ತಾರೆ ನಿರ್ದೇಶಕರು.

ಖಾಕಿ ತೊಟ್ಟ ಧರ್ಮ

ನಟ ಧರ್ಮ ಈ ಚಿತ್ರದಲ್ಲಿ ಪೊಲೀಸ್ ತನಿಖಾಧಿಕಾರಿಯಾಗಿ ನಟಿಸಿದ್ದು, ಬಹು ದಿನಗಳ ಬಳಿಕ ಮತ್ತೆ ಖಾಕಿಧಾರಿಯಾಗಿ ತೆರೆಯಲ್ಲಿ ಕಾಣಿಸಿಕೊಂಡಿದ್ದಾರೆ. ಸಿನಿಮಾದ ಕಥೆ ಬರೆಯುವಾಗಲೇ ಧರ್ಮ ಅವರನ್ನು ಗಮನದಲ್ಲಿಟ್ಟುಕೊಂಡೇ ಕಥೆ ಹೆಣೆದೆ ಎನ್ನುತ್ತಾರೆ ನಿರ್ದೇಶಕರು. ಜ್ಯೋತಿ ರೈ ನಾಯಕನ ಪತ್ನಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಗಿರಿಜಾ ಲೋಕೇಶ್, ಗೋವಿಂದೇಗೌಡ, ರವಿಕಿಶೋರ್, ಮಂಜು ಮೈಸೂರ್, ಪ್ರಭು, ರೇಣು ಶಿಕಾರಿ, ಸುರೇಖಾ, ಚಂದ್ರು, ಮೂರ್ತಿ, ಮಂಜು ಮುಂತಾದವರು ತಾರಾಗಣದಲ್ಲಿದ್ದಾರೆ.

> ನೈಟ್ ರೋಡ್‌ನಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಜತೆಗೆ ಕಾಮಿಡಿಯೂ ಬೆರೆತಿದೆ. ಇಡೀ ಕುಟುಂಬ ಸಮೇತ ಕುಳಿತು ನೋಡುವ ಮನರಂಜನಾತ್ಮಕ ಸಿನಿಮಾ ಇದಾಗಿದೆ.

ಕಿರುನಗೆ ಬೀರಿದ ಹರ್ಷಿಣಿ

ಸಿನಿಮಾ ನಿರ್ಮಾಣದ ಕನಸು ಹೊತ್ತ ಲತಾಶ್ರೀ ಹರ್ಷಿಣಿ ಸಿನಿಮಾಸ್ ಎಂಬ ಚಿತ್ರ ನಿರ್ಮಾಣ ಸಂಸ್ಥೆ ಆರಂಭಿಸಿದ್ದಾರೆ. ಈ ನೂತನ ನಿರ್ಮಾಣ ಸಂಸ್ಥೆಯನ್ನು ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ ಅವರು ಉದ್ಘಾಟಿಸಿ, ಶುಭಕೋರಿದರು. ಕನ್ನಡ ಚಿತ್ರರಂಗದಲ್ಲಿ ಸದಭಿರುಚಿಯ ಚಿತ್ರಗಳನ್ನು ನಿರ್ಮಾಣ ಮಾಡುವ ಆಶಯ ಹೊಂದಿರುವ ಹರ್ಷಿಣಿ ಸಿನಿಮಾಸ್ ಸಂಸ್ಥೆಯು ಮೊದಲ ಚಿತ್ರವಾಗಿ ಕಿರುನಗೆ ಚಿತ್ರವನ್ನು ನಿರ್ಮಿಸುತ್ತಿದೆ. ಸತ್ಯಂ ಸೇರಿದಂತೆ ಈಗಾಗಲೇ ನಾಲ್ಕು ಚಿತ್ರಗಳನ್ನು ನಿರ್ದೇಶಿಸಿರುವ ಅಶೋಕ್ ಕಡಬ ಕಿರುನಗೆ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಮಹಿಳಾ ಪ್ರಧಾನ ಈ ಚಿತ್ರಕ್ಕೆ ಲತಾಶ್ರೀ ಅವರೆ ಕಥೆ ಬರೆದಿದ್ದಾರೆ. ಚಿತ್ರಕಥೆ ಅಶೋಕ್ ಕಡಬ ರಚಿಸಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಎ.ಆರ್ ರೆಹಮಾನ್ ತಂಡದ ಸುಕೃತ್ ಕಿರುನಗೆಗೆ ಸಂಗೀತ ನೀಡಲಿದ್ದಾರೆ. ಮಹಿಳಾ ಪ್ರಧಾನ ಚಿತ್ರವಾಗಿರುವುದರಿಂದ ಕನ್ನಡ ಖ್ಯಾತ ನಟಿಯೊಬ್ಬರು ಈ ಚಿತ್ರದಲ್ಲಿ ನಟಿಸಲಿದ್ದಾರೆ. ನಾಯಕಿ ಸೇರಿದಂತೆ ಉಳಿದ ತಾರಾಬಳಗದ ಬಗ್ಗೆ ಸದ್ಯದಲ್ಲೇ ಮಾಹಿತಿ ನೀಡುವುದಾಗಿ ನಿರ್ಮಾಪಕರು ತಿಳಿಸಿದ್ದಾರೆ.

ಒಂದು ಹೆಣ್ಣು ತನ್ನ ಪ್ರೀತಿ, ಇಷ್ಟ, ಸಂತೋಷ ಎಲ್ಲವನ್ನು ತ್ಯಜಿಸಿ ಹೆತ್ತವರ ಸಂತೋಷಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಗರ್ಭಿಣಿ ಹೆಣ್ಣು ಮಗಳ ಕಥೆ ಈ ಚಿತ್ರದಲ್ಲಿದೆ.

ಅಂಡಮಾನ್‌ನಲ್ಲಿ ಚೌಕಿದಾರ

ರಥಾವರ ಚಿತ್ರವನ್ನು ನಿರ್ದೇಶಿಸಿ ಸೈ ಎನಿಸಿಕೊಂಡ ಚಂದ್ರಶೇಖರ್ ಬಂಡಿಯಪ್ಪ ಚೌಕಿದಾರ್ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಪೃಥ್ವಿ ಅಂಬರ್ ನಾಯಕನಾಗಿ ನಟಿಸುತ್ತಿದ್ದು, ಧನ್ಯಾರಾಮ್ ಕುಮಾರ್ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿರಿಯ ನಟ ಸಾಯಿಕುಮಾರ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಂಡಮಾನ್-ನಿಕೋಬಾರ್ ದ್ವೀಪದ ಸುಂದರ ತಾಣದಲ್ಲಿ ಚೌಕಿದಾರ್ ಸಿನಿಮಾದ ಚಿತ್ರೀಕರಣ ನಡೆಸಲಾಗಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ತಯಾರಾಗುತ್ತಿರುವ ಚೌಕಿದಾರ್ ಸಿನಿಮಾವನ್ನು ಅಷ್ಟೇ ಅದ್ದೂರಿಯಾಗಿ ಹಾಗೂ ಸೊಗಸಾಗಿ ನಿರ್ಮಿಸಲಾಗುತ್ತಿದೆ. ದಶಕಗಳ ಹಿಂದೆ ತೆರೆಗೆ ಬಂದ ಶಿವರಾಜ್ ಕುಮಾರ್ ಅಭಿನಯದ ಅಂಡಮಾನ್ ಸಿನಿಮಾದ ಶೂಟಿಂಗ್ ಈ ಜಾಗದಲ್ಲಿಯೇ ನಡೆದಿತ್ತು. ಈಗ ಚೌಕಿದಾರ್ ಅಂಡಮಾನ್ -ನಿಕೋಬರ್ ದ್ವೀಪದಲ್ಲಿ ಹತ್ತು ದಿನಗಳ ಕಾಲ ಶೂಟಿಂಗ್ ನಡೆಸಿದೆ.

ನಾಯಕ ಪೃಥ್ವಿ ಅಂಬಾರ್ ನಾಯಕ ಧನ್ಯಾ ರಾಮ್ ಕುಮಾರ್, ಸಾಯಿಕುಮಾರ್, ನೃತ್ಯ ಸಂಯೋಜಕ ಮುರುಳಿ ಮಾಸ್ಟರ್ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಈ ಹಿಂದಿನ ಚಿತ್ರಗಳಲ್ಲಿ ಲವ್ವರ್ ಬಾಯ್ ಆಗಿ ಕಾಣಿಸಿಕೊಂಡಿದ್ದ ಪೃಥ್ವಿ ಅಂಬರ್ ಈ ಚಿತ್ರದಲ್ಲಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ವಿಭಿನ್ನ ಕಥಾಹಂದರದ ಈ ಚಿತ್ರದಲ್ಲಿ ಹೊಸ ಅವತಾರದಲ್ಲಿ ಕಂಗೊಳಿಸಲಿದ್ದಾರೆ. ಚೌಕಿದಾರ್ ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದಾರೆ. ಸಚಿನ್ ಬಸ್ರೂರು ಸಂಗೀತ ನಿರ್ದೇಶನ, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಾಹಿತ್ಯ ರಚಿಸಿದ್ದಾರೆ. ಚೌಕಿದಾರ್ ಕನ್ನಡ ಸೇರಿದಂತೆ ಪಂಚ ಭಾಷೆಯಲ್ಲಿ ಮೂಡಿಬರಲಿದೆ.

ಹಾಡಿನಲ್ಲಿ ಮೋಡಿ ಮಾಡಿದ ಒನ್ ಅಂಡ್ ಆ ಹಾಫ್

ವಿಭಿನ್ನ ಶೀರ್ಷಿಕೆಯಲ್ಲಿ ಸಿದ್ಧವಾಗಿರುವ ಒನ್ ಅಂಡ್ ಆ ಹಾಫ್ ಚಿತ್ರ, ಹಾಡುಗಳ ಮೂಲಕವೇ ಸದ್ದು ಮಾಡುತ್ತಿದೆ. ಟೈಟಲ್ ಹಾಗೂ ಫಸ್ಟ್ ಲುಕ್ ಮೂಲಕ ನಿರೀಕ್ಷೆ ಹೆಚ್ಚಿಸಿದ್ದ ಸಿನಿಮಾ ಹಾಡುಗಳ ಮೂಲಕ ಆ ನಿರೀಕ್ಷೆಯನ್ನು ದುಪ್ಪಟ್ಟುಗೊಳಿಸಿದೆ. ಈ ಹಾಡಿಗೆ ಎಂ.ಸಿ.ಬಿಜ್ಜು ಹಾಗೂ ಯಶಸ್ ನಾಗ್ ಸಾಹಿತ್ಯ ಬರೆದಿದ್ದು, ಶ್ರೇಯಸ್ ಸೂರಿ, ಅನಂತ್ ಹಾಗೂ ಎಂ.ಸಿ.ಬಿಜ್ಜು ದನಿಯಾಗಿದ್ದಾರೆ. ಕದ್ರಿ ಮಣಿಕಾಂತ್ ಸಂಗೀತ ಸಂಯೋಜಿಸಿರುವ ಹಾಡಿನಲ್ಲಿ ಶ್ರೇಯಸ್ ಭರ್ಜರಿಯಾಗಿ ಕುಣಿದು ಕುಪ್ಪಳಿಸಿದ್ದಾರೆ.

ರಂಗ್ಬಿರಂಗಿ, ಡೆವಿಡ್, ದಿ ವೆಕೆಂಟ್ ಹೌಸ್ ಸಿನಿಮಾಗಳ ಮೂಲಕ ಭರವಸೆ ಮೂಡಿಸಿರುವ ಶ್ರೇಯಶ್ ಸೂರಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ನಾಯಕನಾಗಿಯೂ ನಟಿಸಿದ್ದಾರೆ. ಮಾನ್ವಿತಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಸಾಧು ಕೋಕಿಲಾ, ಅವಿನಾಶ್ ಯೆಳಂದೂರ್, ಸುಚೇಂದ್ರ ಪ್ರಸಾದ್, ಸ್ಪರ್ಶ ರೇಖಾ, ಅನಂತು, ಸುಂದರಶ್ರೀ, ಕಾಮಿಡಿ ಕಿಲಾಡಿ ಖ್ಯಾತಿಯ ಹಿತೇಶ್ ಕುಮಾರ್, ಅಮಾನ್, ನಿಕಿತಾ ದೋರ್ತೋಡಿ, ಲಲಿತಾ ನಾಯಕ್, ರಾಖಿ ಭೂತಪ್ಪ ತಾರಾಬಳಗದಲ್ಲಿದ್ದಾರೆ. ದೇವೇಂದ್ರ ಛಾಯಾಗ್ರಹಣ, ಮುಕೇಶ್ ಜೆ ಸಂಕಲನ, ಮಣಿಕಾಂತ್ ಕದ್ರಿ ಸಂಗೀತ, ಭಜರಂಗಿ ಮೋಹನ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ರೊಮ್ಯಾಂಟಿಕ್ ಕಾಮಿಡಿ ಸ್ಟೋರಿಯ ಚಿತ್ರ ಇದಾಗಿದ್ದು, ಸುಲಕ್ಷ್ಮೀ ಫಿಲಂಸ್ ಬ್ಯಾನರ್ ನಲ್ಲಿ ಆರ್. ಚರಣ್, ಬಿ.ಇಂಪನಾ ಪ್ರಸಾದ್, ಅರ್ಪಿತ್ ನಾರಾಯಣ್, ಸಂತೋಷ್ ನಾಗೇನಹಳ್ಳಿ, ಕದ್ರಿ ಮಣಿಕಂತ್ ನಿರ್ಮಾಣ ಮಾಡುತ್ತಿದ್ದಾರೆ. ಒನ್ ಅಂಡ್ ಹಾಫ್ ಮುಂದಿನ ತಿಂಗಳು ತೆರೆಗೆ ಬರುವ ಸಾಧ್ಯತೆ ಇದೆ.

> ನಾನು ನಟಿಸಿದ ಮೊದಲ ಮೂರು ಚಿತ್ರಗಳು ಶತದಿನ ಆಚರಿಸಿದವು. ಅಂತೆಯೇ ಒನ್ ಅಂಡ್ ಆ ಹಾಫ್ ಕೂಡ ಭರ್ಜರಿ ಯಶಸ್ಸು ಪಡೆಯುತ್ತದೆ ಎಂಬ ನಂಬಿಕೆ ಇದೆ. ಸಿನಿಮಾದಲ್ಲಿ ಮನರಂಜನೆ ಬೆರೆತಿದೆ ಜತೆಗೆ ಒಳ್ಳೆಯ ಕಥೆಯೂ ಇದೆ. ಹಾಗಾಗಿ ಈ ಚಿತ್ರ ಖಂಡಿತಾ ಪ್ರೇಕ್ಷಕರಿಗೆ ಹಿಡಿಸಲಿದೆ.
>
> -ಮಾನ್ವಿತಾ ನಟಿ

> ಒನ್ ಅಂಡ್ ಆ ಹಾಫ್ ಇಡೀ ಚಿತ್ರತಂಡದ ಶ್ರಮದಿಂದ ಅಂದುಕೊಂಡಂತೆ ಮೂಡಿಬಂದಿದೆ. ಸಿನಿಮಾದಲ್ಲಿ ಒಳ್ಳೆಯ ಕಥೆ ಇದೆ. ಮೊದಲ ಹಾಡನ್ನು ಎಲ್ಲರೂ ಮೆಚ್ಚಿ ಕೊಂಡಾಡಿದ್ದಾರೆ. ಅಂತೆಯೇ ಎರಡನೇ ಹಾಡು ಕೂಡ ಇಷ್ಟವಾಗಲಿದೆ ಎಂಬ ನಂಬಿಕೆ ಇದೆ. ಒಳ್ಳೆಯ ಕಂಟೆಂಟ್ ಇರುವ ಸಿನಿಮಾವನ್ನು ನಿರ್ದೇಶಿಸಿರುವ ಸಂತಸ ನನಗಿದೆ.
>
> ಶ್ರೇಯಸ್ ಸೂರಿ ನಟ, ನಿರ್ದೇಶಕ

ಇಂದಿನಿಂದ ಅಮೋಘ ಪ್ರಾರಂಭ

ಕೆ.ಜಿ.ರಸ್ತೆ ಸಂತೋಷ್
ಮಾಗಡಿ ರಸ್ತೆ ವೀರೇಶ್
ರಾಜಾಜಿನಗರ ನವರಂಗ್
ಜೆ.ಪಿ.ನಗರ ಸಿದ್ದಲಿಂಗೇಶ್ವರ
ತಾವರೆಕೆರೆ ಬಾಲಾಜಿ
ಹರಿನಗರ ವಿನಾಯಕ

PVR CINEMAS
ORION
FORUM
VAISHNAVI
REGALIA
MARKETCITY
VEGA CITY
SPIRIT
UPTOWN
GT MALL
AURA
VR
REX
BHARATHIYA CITY
GLOBAL MALL
FALCON CITY

INOX LIVE THE MOVIE
SWAGATH
MANTRI
CENTRAL MALL
GARUDA MALL
LIDO
VALUE MALL
BROOKFIELD
RMZ
GARUDA YALAHANKA
SBR HORIZON

Cinépolis
ETA
RMM
ORION EAST
SHANTINIKETAN
SJR
LULU

GOPALAN CINEMAS
ARCADE
INNOVATION
LEGACY
GRAND
SIGNATURE

ROCKLINE cinemas

INNOVATIVE MULTIPLEX
MUKTA A2 CINEMAS
KINO CINEMAS KADUGODI
CINEPHILE
ತುಮಕೂರು
INOX LIVE THE MOVIE
ತುಮಕೂರು ಗಾಯತ್ರಿ
ತಿಪಟೂರು ತ್ರಿಮೂರ್ತಿ
ಶಿರಾ ಸಪ್ತಗಿರಿ

ಹಾಸನ ಪೃಥ್ವಿ
ಮಂಡ್ಯ ಸಂಜಯ್
ಮಳವಳ್ಳಿ ರಾಜರಾಜೇಶ್ವರ
ಕಡೂರು ವಿಜಯಲಕ್ಷ್ಮೀ
ಹುಳಿಯಾರು ವಿನಾಯಕ
ಹರಿಹರ ಶ್ರೀಕಾಂತ
ಕಡೂರು ವಿಜಯಲಕ್ಷ್ಮೀ
ಶಿಕಾರಿಪುರ ಮಾಲತೇಶ್
ಬೀದರ್ SAPNA MALL
ಹುಬ್ಬಳ್ಳಿ PVR CINEMAS, Cinépolis
ಬೆಳಗಾಂ INOX LIVE THE MOVIE, CARNIVAL KAPEEL

ಕುಮಾರಕೊಪ್ಪಲು ಮಹದೇಶ್ವರ
ಮೈಸೂರು ಪ್ರಭಾ
DRC Cinemas
PVR CINEMAS
FORUM CENTRE MALL
GARUDA MALL
INOX LIVE THE MOVIE
MYSURU VISION CINEMAS
ದಾವಣಗೆರೆ MOVIE TIME CINEMAS
ಶಿವಮೊಗ್ಗ Bharath Cinemas
ಮಂಗಳೂರು Bharath Cinemas, PVR CINEMAS, Cinépolis
ಕುಂದಾಪುರ Bharath Cinemas
ದುರ್ಬೀದ SHETTY'S MULTIPLEX
MIRAJ CINEMAS